₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶನಿವಾರ 03.05.2025 ಸಂಪುಟ: 10 ಸಂಚಿಕೆ: 108 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಚಾರ್‌ಧಾಮ್ ಯಾತ್ರೆಗೆ ಚಾಲನೆ

ಉತ್ತರಾಖಂಡದ ಪವಿತ್ರ ಚಾರ್‌ಧಾಮ್ ಯಾತ್ರೆಯ ಭಾಗವಾಗಿ ಕೇದಾರನಾಥ ಧಾಮದ ಬಾಗಿಲುಗಳನ್ನು ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಭಕ್ತರ ದರ್ಶನಕ್ಕಾಗಿ ಶಾಸ್ತ್ರೋಕ್ತವಾಗಿ ತೆರೆಯಲಾಯಿತು. ಈ ಸಂದರ್ಭದಲ್ಲಿ ಸಾವಿರಾರು ಭಕ್ತರು 'ಹರ್ ಹರ್ ಮಹಾದೇವ' ಜಯಘೋಷ ಕೂಗಿದರು. ದೇಗುಲವನ್ನು ನೇಪಾಳ, ಥಾಯ್ಲೆಂಡ್ ಮತ್ತು ಶ್ರೀಲಂಕಾದಿಂದ ತರಲಾಗಿದ್ದ ಗುಲಾಬಿ, ಮಲ್ಲಿಗೆ ಸೇರಿದಂತೆ 54 ಬಗೆಯ ಕ್ವಿಂಟಾಲ್ ಪ್ರಮಾಣದ ಹೂಗಳಿಂದ ಅಲಂಕರಿಸಲಾಗಿತ್ತು.

ಸೊಂಪಾದ ಪುಟಗಳು

ಹಿಂದೂ ಹಬ್ಬಗಳ ಆರ್ಥಿಕತೆ
ವೀಕೆಂಡ್ ವಿತ್ ಮೋಹನ್ ಮೋಹನ್ ವಿಶ್ವ 6

ಸಂಸ್ಕಾರದಿಂದಲೇ ಸಾಧ್ಯ ಸ್ವಯಂ ಸಾಕ್ಷಾತ್ಕಾರ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಬದುಕು ನಮಗೆ ಯಾವುದೇ ಗ್ಯಾರಂಟಿ, ವಾರಂಟಿಗಳನ್ನು ಕೊಡುವುದಿಲ್ಲ. ಅದು ಕೇವಲ ಅವಕಾಶ ಮತ್ತು ಸಾಧ್ಯತೆಗಳನ್ನಷ್ಟೇ ನೀಡುತ್ತದೆ. ಅವುಗಳನ್ನೇ ಸಾಧನೆ, ಯಶಸ್ಸನ್ನಾಗಿ ಪರಿವರ್ತಿಸಿಕೊಳ್ಳಬೇಕಷ್ಟೆ.

ವಕ್ರತುಂಡೋಕ್ತಿ

ನಿಮ್ಮ ರಹಸ್ಯಗಳು ರಹಸ್ಯವಾಗೇ ಉಳಿಯಬೇಕೆನಿಸಿದರೆ ಅವನ್ನು ಕಿವುಡರ ಮುಂದೆ ಹೇಳಬೇಕು.

ನಿರೀಕ್ಷಣಾ ಜಾಮೀನು: ಹೈಗೆ ಎಚ್‌ಡಿಕೆ ಅರ್ಜಿ

ಬೆಂಗಳೂರು: ಬಳ್ಳಾರಿ ಜಿಲ್ಲೆ ಶ್ರೀಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಭೂಮಿ ಯನ್ನು ಗಣಿ ಗುತ್ತಿಗೆ ನೀಡಿರುವ ಪ್ರಕರಣ ಸಂಬಂಧ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನು ಪ್ರಶ್ನಿಸಿ ಲೋಕಾಯುಕ್ತ ಎಸ್‌ಐಟಿ ಸಲ್ಲಿಸಿರುವ ಅರ್ಜಿ ಅಮಾನತು ಕೋರಿ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ನೇತೃತ್ವದ ಏಕ ಸದಸ್ಯ ಪೀಠವು, ಕೇಂದ್ರ ಸಚಿವ ಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿತು. ಕುಮಾರಸ್ವಾಮಿ ಪರ ವಕೀಲ ಹಷ್ಮತ್ ಪಾಷಾ ವಾದ ಮಂಡಿಸಿದ್ದಾರೆ. ಕಳೆದ ವರ್ಷ ಬೆಂಗಳೂರಿನ ಸಂಜಯ ಗಾಂಧಿ ನಗರ ಠಾಣೆಯಲ್ಲಿ ಸರಕಾರಿ ಅಧಿಕಾರಿಗೆ ಬೆದರಿಕೆ ಹಾಕಿದ ಆರೋಪದ ಮೇಲೆ ದಾಖಲಾಗಿದ್ದ ಪ್ರಕರಣ ಆಧರಿಸಿ ಗಣಿ ಗುತ್ತಿಗೆ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ರದ್ದತಿ ಕೋರಿ ಲೋಕಾಯುಕ್ತ ಎಸ್‌ಐಟಿ ಅರ್ಜಿ ಸಲ್ಲಿಸಿದೆ.

ಸಿ.ಟಿ. ರವಿಗೆ ಹಿನ್ನಡೆ

ಬೆಂಗಳೂರು: ಬೆಳಗಾವಿ ಸುವರ್ಣಸೌಧದಲ್ಲಿ ನಡೆದಿದ್ದ ಅಧಿವೇಶನದ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ವಿರುದ್ಧ ಅಶ್ಲೀಲ ಪದ ಬಳಕೆ ಆರೋಪಕ್ಕೆ ಸಂಬಂಧಿಸಿ ಬಾಗೇವಾಡಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ. ಇದರಿಂದ ಸಿ.ಟಿ.ರವಿ ಅವರಿಗೆ ತೀವ್ರ ಹಿನ್ನಡೆಯಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

14 ವರ್ಷದ ವೈಭವ್ ಆರ್ಭಟಕ್ಕೆ ಐಪಿಎಲ್–ಟಿ20 ಕ್ರಿಕೆಟ್ ದಾಖಲೆಗಳೆಲ್ಲಾ ಧೂಳೀಪಟ! ಸುದ್ದಿ



ಎಸ್ಸೆಸ್ಸೆಲ್ಸಿ: 22 ಟಾಪರ್ಸ್

625 / 625

ಔಟ್‌ಆಫ್ ಔಟ್ ದಾಖಲೆ, 22 ವಿದ್ಯಾರ್ಥಿಗಳಿಗೆ 625 ಪೂರ್ಣಾಂಕ
ಶೇ 11 ಫಲಿತಾಂಶ ಕುಸಿತ, ದ.ಕ ಪ್ರಥಮ, ಕಲಬುರ್ಗಿಗೆ ಕೊನೆ ಸ್ಥಾನ

625 ಅಂಕ ಪಡೆದ ವಿದ್ಯಾರ್ಥಿಗಳು

ಭಾವನಾ, ಬೆಂಗಳೂರು ಗ್ರಾ.

ರಂಜಿತಾ ಎ.ಸಿ., ಬೆಂಗಳೂರು ಗ್ರಾ.

ಜಾನ್ಹವಿ, ಬೆಂಗಳೂರು ದ.

ಮಧುಸೂದನ್ ರಾಜು, ಬೆಂಗಳೂರು ಉ.


ಯುಕ್ತಾ ಎಸ್, ಬೆಂಗಳೂರು ದ

ನಮಿತಾ, ಬೆಂಗಳೂರು ದ.

ಮೊಹ್ಮದ್ ಮ. ಅದಿಲ್, ತುಮಕೂರು

ನಮನಾ ಕೆ., ಶಿವಮೊಗ್ಗ


ನಿತ್ಯಾ ಕುಲಕರ್ಣಿ, ಶಿವಮೊಗ್ಗ

ಸಹಿಷ್ಣು, ಶಿವಮೊಗ್ಗ

ತಾನ್ಯ ಆರ್.ಎನ್, ಮೈಸೂರು

ಧನುಷ್, ಮೈಸೂರು

ನಂದನ್, ಚಿತ್ರದುರ್ಗ

ಮೌಲ್ಯಾ ಡಿ. ರಾಜು, ಚಿತ್ರದುರ್ಗ

ಸ್ವಾತಿ ಕಾಮತ್, ಉಡುಪಿ

ರೂಪಾ ಚ. ಪಾಟೀಲ್, ಬೆಳಗಾವಿ

ಬಿಹಾರದ ವಿದ್ಯಾರ್ಥಿನಿ ಟಾಪರ್

ಶಿರಸಿಯ ಸರ್ಕಾರಿ ಉರ್ದು ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ಶಗುಫ್ತಾ ಅಂಜುಮ್ ಪೂರ್ಣಾಂಕ (625) ಪಡೆದು ವಿಶೇಷ ಸಾಧನೆ ತೋರಿದ್ದಾರೆ. ಬಿಹಾರ ಮೂಲದ ಶಗುಫ್ತಾ ಐದು ವರ್ಷಗಳಿಂದ ಶಿರಸಿಯ ಸರ್ಕಾರಿ ಉರ್ದು ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ, ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಬೆಂಗಳೂರು: ಬಹುನಿರೀಕ್ಷಿತ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದ್ದು, ರಾಜ್ಯಾವಾರು ಫಲಿತಾಂಶದಲ್ಲಿ ಕುಸಿತ ಕಂಡಿದ್ದರೂ, ಇತಿಹಾಸದಲ್ಲಿಯೇ ಮೊದಲ ಬಾರಿಗೆ 22 ವಿದ್ಯಾರ್ಥಿಗಳು 625ಕ್ಕೆ 625 ಅಂಕಗಳಿಸುವ ಮೂಲಕ ದಾಖಲೆ ಸೃಷ್ಟಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆ 1ರ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದರು. ಎಂದಿನಂತೆ ಗ್ರಾಮೀಣ ಭಾಗದ ಹಾಗೂ ವಿದ್ಯಾರ್ಥಿನಿಯರು ಫಲಿತಾಂಶದಲ್ಲಿ ಮೇಲುಗೈ ಸಾಧಿಸಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಮೊದಲೆರಡು ಸ್ಥಾನವನ್ನು ಪಡೆದಿದ್ದರೆ, ವಿಜಯಪುರ, ಕಲಬುರಗಿ ಜಿಲ್ಲೆಯ ಕೊನೆಯ ಎರಡು ಸ್ಥಾನದಲ್ಲಿವೆ. ಈ ಬಾರಿ ಬರೋಬ್ಬರಿ 22 ವಿದ್ಯಾರ್ಥಿಗಳು ಪೂರ್ಣಾಂಕಗಳಿಸಿದ್ದರೆ, 620ರಿಂದ 625 ಅಂಕ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ 970 ದಾಟುತ್ತದೆ. ಈ ವಿಷಯದಲ್ಲಿ ದಾಖಲೆ ಸಾಧಿಸಿದ್ದರೂ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ.10ರಷ್ಟು ಫಲಿತಾಂಶ ಕುಸಿತವಾಗುವ ಮೂಲಕ, ನಿರಂತರವಾಗಿ ಎರಡನೇ ವರ್ಷವೂ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಕುಸಿತಗೊಂಡಿದೆ. → 8

ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ

ಅಂಕ	ವಿದ್ಯಾರ್ಥಿಗಳ ಸಂಖ್ಯೆ
625	22
624	65
623	108
622	189
621	259
620	327

ಮೇ.26ರಿಂದ ಪೂರಕ ಪರೀಕ್ಷೆ

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ-1 ಮೇ 26 ರಿಂದ ಜೂ.2ರ ತನಕ, ಪೂರಕ ಪರೀಕ್ಷೆ-2 ಜೂ.23 ರಿಂದ ಜೂ.30 ರವರೆಗೆ ನಡೆಯಲಿದೆ. ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ 2 ಹಾಗೂ ಪರೀಕ್ಷೆ 3ಯಲ್ಲಿ ನೋಂದಣಿ ಮಾಡಿಕೊಳ್ಳಲು ಯಾವುದೇ ಶುಲ್ಕವನ್ನು ವಿಧಿಸಲಾಗುತ್ತಿಲ್ಲ. ಆದರೆ ಅಂಕವನ್ನು ಉತ್ತಮಗೊಳಿಸಿಕೊಳ್ಳಲು ಮರುಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಶುಲ್ಕ ಪಾವತಿಸಬೇಕಾಗುತ್ತದೆ ಎಂದು ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದ್ದಾರೆ.

ಎಕ್ಸ್‌ಪ್ರೆಸ್‌ವೇಯಲ್ಲಿ ರಫೇಲ್, ಜಾಗ್ವಾರ್ ಸಿಂಹ ಗರ್ಜನೆ

ದೆಹಲಿ: ಪಾಕಿಸ್ತಾನದ ಜೊತೆ ಯುದ್ಧ ಕಾರ್ಮೋಡ ದಟ್ಟೈಸುತ್ತಿದ್ದು, ನೌಕಾಪಡೆಯ ಯುದ್ಧ ಕವಾಯತಿನ ಬೆನ್ನಿಗೇ ಉತ್ತರ ಪ್ರದೇಶದ ಗಂಗಾ ಎಕ್ಸ್‌ಪ್ರೆಸ್‌ವೇಯಲ್ಲಿ ಭಾರತೀಯ ವಾಯುಪಡೆಯ ವಿಮಾನಗಳು ಫ್ಲೈಪಾಸ್ಟ್ ಮತ್ತು ಲ್ಯಾಂಡಿಂಗ್ ಕಸರತ್ತು ನಡೆಸಿವೆ.

ಉತ್ತರ ಪ್ರದೇಶದ ಶಹಜಹಾನ್‌ಪುರ ಜಿಲ್ಲೆಯ ಗಂಗಾ ಎಕ್ಸ್‌ಪ್ರೆಸ್‌ವೇಯಲ್ಲಿ ನಿರ್ಮಿಸಲಾದ 3.5 ಕಿಲೋಮೀಟರ್ ಉದ್ದದ ವಾಯುನೆಲೆಗೆ ಭಾರತೀಯ ವಾಯುಪಡೆ ಶುಕ್ರವಾರ ಚಾಲನೆ ನೀಡಿದೆ. ಈ ರಸ್ತೆಯಲ್ಲಿ ನಡೆದ ಹಾರಾಟ ಕಸರತ್ತಿನಲ್ಲಿ ರಫೇಲ್, ಸುಖೋಯ್-30 ಎಂಕೆಐ, ಮಿರಾಜ್-2000, ಮಿಗ್-29, ಜಾಗ್ವಾರ್, ಸಿ-130ಜೆ ಸೂಪರ್ ಹರ್ಕ್ಯುಲಸ್, ಎಎನ್-32 ಸಾರಿಗೆ ವಿಮಾನ ಮತ್ತು ಎಂಐ-17 ವಿ5 ಹೆಲಿಕಾಪ್ಟರ್‌ಗಳಂತಹ ವಿಮಾನಗಳು ಭಾಗವಹಿಸಿದ್ದವು.

ಗಂಗಾ ಎಕ್ಸ್‌ಪ್ರೆಸ್‌ವೇ ಯುದ್ಧಕಾಲದ ಸನ್ನಿವೇಶಗಳು ಅಥವಾ ರಾಷ್ಟ್ರೀಯ ತುರ್ತು ಪರಿಸ್ಥಿತಿಗಳಲ್ಲಿ ಪರ್ಯಾಯ ರನ್‌ವೇ ಆಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಶಹಜಹಾನ್‌ಪುರ ಜಿಲ್ಲೆಯ ಕತ್ರಾ ಪ್ರದೇಶದಲ್ಲಿರುವ ಈ ವಾಯುನೆಲೆಯು ಮೀರತ್‌ನಿಂದ ಪ್ರಯಾಗ್ ರಾಜ್‌ಗೆ ಸಂಪರ್ಕಿಸುವ 594 ಕಿಲೋಮೀಟರ್ ಉದ್ದದ ಗಂಗಾ ಎಕ್ಸ್‌ಪ್ರೆಸ್‌ವೇಯ ಭಾಗವಾಗಿದೆ. ಚೀನಾ ಗಡಿ ಶಹಜಹಾನ್‌ಪುರ ಜಿಲ್ಲೆಯಿಂದ ಸುಮಾರು 250 ಕಿಲೋಮೀಟರ್ ದೂರದಲ್ಲಿದೆ. ನೇಪಾಳ ಗಡಿ ಸುಮಾರು 150 ಕಿಲೋಮೀಟರ್ ದೂರದಲ್ಲಿದೆ. ಎಲ್ಲಾ ಮದ್ದುಗುಂಡು ಮತ್ತು ಶಸ್ತ್ರಾಸ್ತ್ರ ಕಾರ್ಖಾನೆಗಳು 100 ರಿಂದ 150 ಕಿಲೋಮೀಟರ್ ವ್ಯಾಪ್ತಿಯಲ್ಲಿವೆ.

ಯತ್ನಾಳ್ ಸವಾಲು ಸ್ವೀಕರಿಸಿ ಶಾಸಕ ಸ್ಥಾನಕ್ಕೆ ಸಚಿವ ಶಿವಾನಂದ ಪಾಟೀಲ್ ರಾಜೀನಾಮೆ

ರಾಜೀನಾಮೆಯ ಹೈಡ್ರಾಮ!

ಬೆಂಗಳೂರು: ವಿಜಯಪುರ ಜಿಲ್ಲೆಯ ಸವಾಲು- ಪಾಟಿಸವಾಲು ಇದೀಗ ರಾಜೀನಾಮೆ ಎನ್ನುವ ಹೈಡ್ರಾಮ ವರೆಗೆ ಬಂದು ನಿಂತಿದೆ. ಸಚಿವ ಶಿವಾನಂದ ಪಾಟೀಲ್ ಅವರ ರಾಜೀನಾಮೆಯೊಂದಿಗೆ ಆರಂಭಗೊಂಡ ಹೈಡ್ರಾಮ, ದಿನದಂತ್ಯಕ್ಕೆ 'ರಾಜೀನಾಮೆ ಪತ್ರ ಅಸಿಂಧು' ಎನ್ನುವಲ್ಲಿಗೆ ಮುಕ್ತಾಯಗೊಂಡಿದೆ. ಹೌದು, ಕೆಲ ದಿನಗಳ ಹಿಂದೆ ಸಚಿವ ಪಹಲ್ಗಾಮ್ ಉಗ್ರರ ದಾಳಿಗೆ ಸಂಬಂಧಿಸಿದಂತೆ ಮಾತನಾಡುವಾಗ ಶಾಸಕ ಬಸನಗೌಡ ಪಾಟೀಲ್ ಅವರು ಸಚಿವ ಶಿವಾನಂದ ಪಾಟೀಲ್ ಹಾಗೂ ವಿಜಯಾನಂದ ಕಾಶಪ್ಪನವರ್ ಅವರಿಗೆ ರಾಜೀನಾಮೆ ಸಲ್ಲಿಸಿ, ಚುನಾವಣೆಗೆ ಬರುವಂತೆ ಸವಾಲು ಹಾಕಿದ್ದರು. ಈ 'ಸವಾಲ'ನ್ನು ಸ್ವೀಕರಿಸಿದ ಸಚಿವ ಶಿವಾನಂದ ಪಾಟೀಲ್ ಅವರು, 'ಅನರ್ಹ'ಗೊಳ್ಳುವ ರಾಜೀನಾಮೆ ಪತ್ರವನ್ನು ನೀಡಿದ್ದರು.

ರಾಜೀನಾಮೆ ಸಲ್ಲಿಸಿದ ಬಳಿಕ ಮಾತನಾಡಿದ್ದ ಸಚಿವ ಶಿವಾನಂದ ಪಾಟೀಲ್, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹಾಕಿದ್ದ ಸವಾಲನ್ನು ಸ್ವೀಕಾರ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಯತ್ನಾಳ್ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಅಂಗೀಕಾರವಾದರೆ ಮಾತ್ರ ನನ್ನ ರಾಜೀನಾಮೆಯನ್ನು ಅಂಗೀಕರಿಸುವಂತೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿದ್ದೇನೆ. ಸಭಾಧ್ಯಕ್ಷರು ಯತ್ನಾಳ್ ಅವರನ್ನು ಕರೆದು ವಿಚಾರ ಮಾಡಲಿ ಎಂದರು. ವೈಯಕ್ತಿಕ ಕಾರಣಕ್ಕೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿಗೂ ಹಾಗೂ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಶಿವಾನಂದ ಪಾಟೀಲ್ ರಾಜೀನಾಮೆ ಕುರಿತಂತೆ ಮಾತನಾಡಿ, ನನ್ನನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ನೀಡಿದ್ದಾರೆ. ಆದರೆ ಸಚಿವರು ಸಲ್ಲಿಸಿರುವ ರಾಜೀನಾಮೆ ಪತ್ರ ವಿಧಾನಸಭಾ ನಿಯಮ ಪ್ರಕಾರ ಇಲ್ಲದೇ ಇರುವುದರಿಂದ ಅಂಗಿಕರಿಸಿಲ್ಲ.
- ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಶಾಸಕರು ರಾಜೀನಾಮೆ ಕೊಡುವುದಕ್ಕೆ ರೀತಿ ರಿವಾಜು ಇರುತ್ತೆ ಎಂಬುದು ಇವರಿಗೆ ಗೊತ್ತಿಲ್ಲವೇ. ಇವರು ರಾಜೀನಾಮೆ ಕೊಡುವುದು, ಸಭಾಧ್ಯಕ್ಷರು ತಿರಸ್ಕರಿಸುವ ಬೃಹನ್ನಾಟಕ ಸಂಪನ್ನವಾಯಿತು. ನಿಜಕ್ಕೂ ತಾಕತ್ತಿದ್ದರೆ ಸರಿಯಾದ ರೀತಿಯಲ್ಲಿ ರಾಜೀನಾಮೆ ಕೊಟ್ಟು ಅಸಲಿ ಹೋರಾಟಕ್ಕೆ ಸಜ್ಜಾಗಲಿ. **- ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

ರಾಜೀನಾಮೆ ಪತ್ರ ಅಸಿಂಧು

ಸಚಿವ ಶಿವಾನಂದ ಪಾಟೀಲ್ ಅವರ ರಾಜೀನಾಮೆ ಪತ್ರ ಕ್ರಮಬದ್ಧವಾಗಿಲ್ಲದ ಕಾರಣ ಅಸಿಂಧು ಎಂದು ತಿರಸ್ಕರಿಸಲಾಗಿದೆ. ಯಾವುದೇ ಸದಸ್ಯರು ರಾಜೀನಾಮೆ ಸಲ್ಲಿಸುವಾಗ, ಅದರಲ್ಲಿ ರಾಜೀನಾಮೆಗೆ ಕಾರಣವನ್ನು ನೀಡತಕ್ಕುದಲ್ಲ. ಶಿವಾನಂದ ಪಾಟೀಲರ ಸಲ್ಲಿಸಿರುವ ರಾಜೀನಾಮೆ ಪತ್ರದಲ್ಲಿ ಕಾರಣವನ್ನೂ ನಮೂದಿಸಿರುವ ಕಾರಣ ಈ ಪತ್ರವನ್ನು ಅಸಿಂಧುಗೊಳಿಸಲಾಗಿದೆ.

ಸುಹಾಸ್ ಶೆಟ್ಟಿ ಹತ್ಯೆ ಹಿನ್ನೆಲೆ: ಜಿಲ್ಲೆಯಾದ್ಯಂತ ಬಂದ್, ಅಲ್ಲಲ್ಲಿ ಹಿಂಸೆ, ಸರಕಾರಿ ಬಸ್ಸಿಗೆ ಕಲ್ಲು

ಮಂಗಳೂರು ಪ್ರಕ್ಷುಬ್ಧ

ಪಾರ್ಥಿವ ಶರೀರ ಮೆರವಣಿಗೆ ಸಾವಿರಾರು ಮಂದಿ ಭಾಗಿ ಮೇ 6ರ ತನಕ ನಿಷೇಧಾಜ್ಞೆ

ಮಂಗಳೂರು: ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ಹತ್ಯೆ ಖಂಡಿಸಿ ಶುಕ್ರವಾರ ಜಿಲ್ಲೆಯಲ್ಲಿ ಬಂದ್ ಆಚರಿಸಲಾಗಿದ್ದು ಬಸ್ ಸಂಚಾರ ರದ್ದಾದ ಹಿನ್ನಲೆಯಲ್ಲಿ ದೂರ ಪ್ರಯಾಣಿಕರು ಪರದಾಡಬೇಕಾಯಿತು. ಈ ವೇಳೆ ಜಿಲ್ಲೆಯ ನಾನಾ ಭಾಗಗಳಲ್ಲಿ ಚೂರಿ ಇರಿತಕ್ಕೊಳಗಾಗಿ ಆರು ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮೃತ ಸುಹಾಸ್ ಶೆಟ್ಟಿ ಪಾರ್ಥಿವ ಶರೀರವನ್ನು ಒಯ್ದು ಅಂತ್ಯಕ್ರಿಯೆ ನೆರವೇರಿಸಲಾಯಿತು. ಹಿರಿಯ ಬಿಜೆಪಿ ನಾಯಕರು ನಾಯಕರು ಸೇರಿದಂತೆ ಸಾವಿರಾರು ಜನರು ಮೆರವಣಿಗೆಯಲ್ಲಿ ಭಾಗಿಯಾಗಿದ್ದರು. ಇದೇ ವೇಳೆ ಮುಂಜಾಗ್ರತಾ ಕ್ರಮವಾಗಿ ಮಂಗಳೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತದ ಸೆಕ್ಷನ್ 163 ರ ಅಡಿ ಮೇ ಆರರ ತನಕ ನಿಷೇಧಾಜ್ಞೆ ಹೇರಲಾಗಿದೆ.

ಕೊಲೆಗೀಡಾದ ಸುಹಾಸ್ ಶೆಟ್ಟಿ ಪ್ರಾರ್ಥಿವ ಶರೀರವನ್ನು ಮಂಗಳೂರಿನ ಖಾಸಗಿ ಆಸ್ಪತ್ರೆ ಆವರಣದಿಂದ ಬಿ.ಸಿ. ರೋಡ್ ಮಾರ್ಗವಾಗಿ ಕಾರಿಂಜದ ಅವರ ನಿವಾಸಕ್ಕೆ ಒಯ್ಯಲಾಯಿತು. ಬಂಟ್ವಾಳದ ಬಿ.ಸಿ. ರೋಡ್ ಬಸ್ ನಿಲ್ದಾಣದ ಬಳಿ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಯಿತು. ಈ ವೇಳೆ ಸಾವಿರಾರು ಜನರು ಸೇರಿದ್ದರು. ದಾರಿಯುದ್ದಕ್ಕೂ ಹಿಂದು ಕಾರ್ಯಕರ್ತರು, ನಾಗರಿಕರು ಸುಹಾಸ್‌ನ ಅಂತಿಮ ದರುಶನ ಪಡದು ಗೌರವ ಸಲ್ಲಿಸಿದರು. → 9

ಕೊಲೆಯಾದ ಸುಹಾಸ್ ಶೆಟ್ಟಿ ರೌಡಿಶೀಟರ್ ಆಗಿದ್ದ ಎಂದು ಪೊಲೀಸರು ತಿಳಿಸಿದ್ದು, ಎಡಿಜಿಪಿ ಅವರನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ನಡೆಸಲು ಸೂಚಿಸಿದ್ದೇನೆ. ಮನುಷ್ಯನ ಪ್ರಾಣ ಬಹಳ ಮುಖ್ಯ. ಕೂಡಲೇ ಅಪರಾಧಿಗಳು ಯಾರೇ ಆಗಿದ್ದರೂ ಪತ್ತೆ ಹಚ್ಚಿ ದಸ್ತಗಿರಿ ಮಾಡಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಯಾರು ಕೂಡ ಕೊಲೆ ಆಗಬೇಕು ಎಂದು ಬಯಸುವುದಿಲ್ಲ. ಜವಾಬ್ದಾರಿಯುತ ಸರ್ಕಾರವಾಗಿ ಶಾಂತಿ ಸುವ್ಯವಸ್ಥೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು ನಮ್ಮ ಜವಾಬ್ದಾರಿ. ಈ ಜವಾಬ್ದಾರಿಯಿಂದ ಈಗಾಗಲೇ ಅನೇಕ ಕ್ರಮಗಳನ್ನು ತೆಗೆದು ಕೊಂಡಿದ್ದೇವೆ. ಇಂತಹ ಘಟನೆಗಳಾದಾಗ ಕಾನೂನು ಪ್ರಕಾರ ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಂಡಿದ್ದೇವೆ. **- ಡಾ.ಪರಮೇಶ್ವರ**, ಗೃಹ ಸಚಿವ

ಮೃತ ಸುಹಾಸ್ ಶೆಟ್ಟಿ ಪಾರ್ಥಿವ ಶರೀರವನ್ನು ಒಯ್ದು ಅಂತ್ಯಕ್ರಿಯೆ ನೆರವೇರಿಸಲಾಯಿತು.

ಭುಗಿಲೆದ್ದ ಹಿಂಸಾಚಾರ

ಸುಹಾಸ್ ಹತ್ಯೆ ಬೆನ್ನಿಗೇ ಜಿಲ್ಲೆಯ ಹಲವೆಡೆ ಹಿಂಸಾಚಾರ ಭುಗಿಲೆದ್ದಿದೆ. ನಗರದ ಹೊರವಲಯದ ಕಣ್ಣೂರಿನಲ್ಲಿ ಯುವಕನೊಬ್ಬನಿಗೆ ಶುಕ್ರವಾರ ನಸುಕಿನಲ್ಲಿ ಚೂರಿ ಇರಿತವಾಗಿದೆ. ಗಂಭೀರವಾಗಿ ಗಾಯಗೊಂಡ ಯುವಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಗೊಂಡ ಯುವಕನನ್ನು ಇರ್ಷಾದ್ ಎಂದು ಗುರುತಿಸಲಾಗಿದೆ. ತೊಕ್ಕೊಟ್ಟು ಒಳಪೇಟೆ ಬಳಿ ಯುವಕನ ಮೇಲೆ ತಂಡವೊಂದು ತಲವಾರಿನಿಂದ ದಾಳಿ ನಡೆಸಿದೆ. ಕಲ್ಲಾಪು ಮಾರುಕಟ್ಟೆ ಗೆ ಬರುತ್ತಿದ್ದ ವೇಳೆ ಒಳಪೇಟೆ ಬಳಿ ಅಳೇಕಲ ನಿವಾಸಿ ಫೈಝಲ್ ಎಂಬವರ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಈ ಸಂಬಂಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೀನು ವ್ಯಾಪಾರಿಯೋರ್ವರು ನಗರದ ಕುಂಟಿಕಾನದಲ್ಲಿ ಗ್ರಾಹಕರೊಬ್ಬರನ್ನು ಕಾಯುತ್ತಿದ್ದಾಗ, ಅವರ ಮೇಲೆ ಕಲ್ಲು ಹೊತ್ತು ಹಾಕಿ ಕೊಲೆಗೆ ಯತ್ನಿಸಿರುವ ಘಟನೆ ನಡೆದಿದೆ. ಹಲ್ಲೆಗೊಳಗಾದ ಮೀನು ವ್ಯಾಪಾರಿಯನ್ನು ಉಳ್ಳಾಲದ ಲುಕ್ಮಾನ್ ಎಂದು ಗುರುತಿಸಲಾಗಿದೆ.

ಪೊಲೀಸ್ ಬಂದೋಬಸ್ತ್

ಜಿಲ್ಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಘಟನೆ ಸಂಬಂಧಿಸಿದಂತೆ 22 ಕೆಎಸ್‌ಆರ್‌ಪಿ ತುಕಡಿಗಳು, 1,000 ಪೊಲೀಸ್ ಅಧಿಕಾರಿಗಳು ಮತ್ತು ಐದು ಎಸ್‌ಪಿ ಶ್ರೇಣಿಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸುಹಾಸ್ ಹತ್ಯೆ ಘಟನೆ ಸಂಬಂಧ ಎನ್‌ಐಎ ತನಿಖೆಗೆ ಒತ್ತಾಯಿಸಿ ಸಚಿವೆ ಶೋಭಾ ಕರಂದ್ಲಾಜೆ ಗೃಹ ಸಚಿವ ಅಮಿತ್ ಷಾ ಅವರಿಗೆ ಪತ್ರ ಬರೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಜನ ಗಣತಿ ಜತೆ ಜಾತಿಗಣತಿ

ದಾವಣಗೆರೆ: ಕೇಂದ್ರ ಸರಕಾರ 2016ರಲ್ಲಿ ಅಧಿಕೃತವಾಗಿ ಜನಗಣತಿ ಜತೆಗೆ ಜಾತಿಗಣತಿ ಮಾಡಲು ನಿರ್ಧರಿಸಿರುವ ಕ್ರಮ ಸ್ವಾಗತಾರ್ಹ ಎಂದು ಮಹಾನಗರ ಪಾಲಿಕೆ ಮಾಜಿ ವಿರೋಧಪಕ್ಷದ ನಾಯಕ ಕೆ. ಪ್ರಸನ್ನಕುಮಾರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರಮೋದಿ ಅವರ ಪ್ರಾಮಾಣಿಕ, ಸಾಮಾಜಿಕ ಬದ್ಧತೆಯ ನೇತೃತ್ವದ ಕೇಂದ್ರ ಸರಕಾರ ಈ ಐತಿಹಾಸಿಕ ನಿರ್ಧಾರ ಕೈಗೊಂಡಿರುವುದು ಎಲ್ಲ ವರ್ಗದ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಈ ಹಿಂದೆ ಕೇಂದ್ರದಲ್ಲಿ 6 ಬಾರಿ ಕಾಂಗ್ರೆಸ್ ಅಧಿಕಾರ ನಡೆಸಿದರೂ ಜಾತಿ, ಜನಗಣತಿ ಮಾಡಲಿಲ್ಲ. ಆದರೆ, ಬಿಜೆಪಿ ತನ್ನ ಎರಡನೇ ಅವಧಿಯಲ್ಲೇ ಜಾತಿಗಣತಿಗೆ ಮುಂದಾಗಿದ್ದನ್ನು ಕಾಂಗ್ರೆಸ್ಸಿಗರಿಗೆ ಸಹಿಸಲು ಆಗುತ್ತಿಲ್ಲ ಎಂದು ಹೇಳಿದರು. ಕರ್ನಾಟಕದಲ್ಲಿ ಸಿದ್ದರಾಮಯ್ಯ ಸರಕಾರ ಜಾತಿಗಣತಿಯ ಹೆಸರಲ್ಲಿ ಹತ್ತು ವರ್ಷ ಕಾಲಹರಣ ಮಾಡಿದ್ದು ಮಾತ್ರವಲ್ಲ, ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯ ವರದಿ ಗೊಂದಲದ ಗೂಡಾಗಿದೆ. ಪ್ರವರ್ಗ 1ರಲ್ಲಿದ್ದ ಅತೀ ಹಿಂದುಳಿದ ಜಾತಿಗಳಿಗಿದ್ದ ಆರ್ಥಿಕ ಮಾನದಂಡವನ್ನು ಕಿತ್ತುಹಾಕಿ ಅನ್ಯಾಯ ಮಾಡಲಾಗಿದೆ. ಕಾಂಗ್ರೆಸ್‌ನ ನಾಯಕರು ಬಹಿರಂಗವಾಗಿಯೇ ವಿರೋಧಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಒಬಿಸಿ ಜಿಲ್ಲಾಮೋರ್ಚಾ ಅಧ್ಯಕ್ಷ ಮಹೇಂದ್ರ, ರೈತ ಮುಖಂಡ ಕೊಳೆನಳ್ಳಿ ಸತೀಶ್, ಆರ್. ಶಿವಾನಂದ, ಸುರೇಶ್ ಇದ್ದರು.

ವಿದ್ಯಾರ್ಥಿಗಳಿಗಾಗಿ ಕಾನೂನು ಅರಿವು ನೆರವು

ಹೊಳಲ್ಕೆರೆ: ಯುವಶಕ್ತಿಯೇ ದೇಶದ ಶಕ್ತಿ ಎಂದು ಹೊಳಲ್ಕೆರೆಯ ಸಹಾಯಕ ಸರ್ಕಾರಿ ಅಭಿಯೋಜಕರಾದ ಮಂಜುಳಾರವರು ಸಲಹೆ ನೀಡಿದರು. ನ್ಯಾಯಾಲಯದ ಆವರಣದಲ್ಲಿ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಸಂವಾದ ಯುವ ಸಂಪನ್ಮೂಲ ಕೇಂದ್ರ-ದಾವಣಗೆರೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾಲೇಜು ವಿದ್ಯಾರ್ಥಿಗಳಿಗಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಯುವಸಮೂಹ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಸಂವಿಧಾನ ಇವುಗಳ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ದೇಶವನ್ನು ಕಟ್ಟಬೇಕು ಎಂದು ಅವರು ಹೇಳಿದರು. ಸಂವಾದ ಯುವ ಸಂಪನ್ಮೂಲ ಕೇಂದ್ರದ ಹಿರಿಯ ಕಾರ್ಯಕ್ರಮ ನಿರ್ವಹಣಾಧಿ ಕಾರಿಗಳಾದ ನೇತ್ರಾ, ಸೂರ್ಯರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಯುವ ಮಾರ್ಗದರ್ಶಕ ಮಂಜುನಾಥ್, ವಕೀಲ ಎಸ್.ವಿಜಯ್ ಕಾಲ್ಕೆರೆ, ಚಿತ್ರದುರ್ಗದ ಯುವಜನರು ಮತ್ತು ಕಾಲೇಜು ವಿದ್ಯಾರ್ಥಿಗಳು, ಉಪನ್ಯಾಸಕರು, ಸಿಬಂಧಿ ವರ್ಗ, ಅರಕ್ಷಕ ಸಿಬಂಧಿ, ಪತ್ರಕರ್ತರು, ಸಾರ್ವಜನಿಕರು, ಉಪಸ್ಥಿತರಿದ್ದರು.

ಮಾದಿಗ ಎಂದೇ ನೋಂದಾಯಿಸಿ

ನಾಯಕನಹಟ್ಟಿ: ನಮ್ಮ ಮಾದಿಗ ಸಮುದಾಯದವರು ಯೇಸುಕ್ರಿಸ್ತರನ್ನು ಆರಾಧಿಸುವವರು ನಾವು ಕ್ರೈಸ್ತರು ಎಂದು ಹೆಸರು ನಮೂದಿಸಬೇಡಿ ಎಂದು ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಪ್ರಕಾಶ್‌ಮೂರ್ತಿ ಮನವಿಮಾಡಿಕೊಂಡರು. ಸಮೀಪದ ತಿಮ್ಮಪ್ಪಯ್ಯನಹಳ್ಳಿ ಗ್ರಾಮ ದಲ್ಲಿ ಶುಕ್ರವಾರ ಅಂಬೇಡ್ಕರ್ ಕಾಲೋನಿಗೆ ಅಗಮಿಸಿ ಮಾದಿಗ ಜಾಗೃತಿ ಮೂಡಿಸಿದರು. ನಂತರ ಮಾತನಾಡಿದ ಅವರು, ನ್ಯಾಯಮೂರ್ತಿ ನಾಗ ಮೋಹನ್‌ದಾಸ್ ರವರ ಏಕಸದಸ್ಯ ಸಮಿತಿಯಿಂದ ಒಳಮೀಸಲಾತಿ ಜಾರಿಗಾಗಿ ಪರಿಶಿಷ್ಟ ಜಾತಿಗಳಲ್ಲಿನ ಜಾತಿಗಣತಿಗಾಗಿ ಮನೆ- ಮನೆಗಳಿಗೆ ಭೇಟಿ ನೀಡಿದಾಗ ಮೂಲಜಾತಿ ಮಾದಿಗ ಎಂದು ಬರೆಸುವ ಮೂಲಕ ಸರಿಯಾದ ಮಾಹಿತಿ ನೀಡಬೇಕೆಂದು ಹೇಳಿದರು. ಜಾತಿಗಣತಿ ಸಮೀಕ್ಷೆಗೆ ಅಧಿಕಾರಿಗಳು ಬಂದಾಗ ಕಡ್ಡಾಯವಾಗಿ ಮಾದಿಗ ಎಂದು ನೊಂದಾಯಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಉಪಸ್ಥಿತರಾದ ನೆಲಗೇತನಹಟ್ಟಿ ನಾಗರಾಜ್, ಪತ್ರಕರ್ತ ನಿಂಗರಾಜ್, ಮರಿಪಾಲಯ್ಯ, ಓಬಳೇಶ್, ಅಬ್ಬೇನಹಳ್ಳಿ ನಾಗರಾಜ್, ತಿಮ್ಮಪ್ಪಯ್ಯನಹಳ್ಳಿ ಹನುಮಂತ, ವೈ.ನಾಗರಾಜ್ ಮಾದಿಗ ಸಮುದಾಯದ ಮುಖಂಡರು, ಯುವಕರು, ಗಜ್ಜುಗಾನಹಳ್ಳಿ ಮಲ್ಲೇಶ್, ನನ್ನಿವಾಳ ಮಾಜಿ ಗ್ರಾ.ಪಂ. ಅಧ್ಯಕ್ಷ ಬಸವರಾಜ್, ಎತ್ತಿನಹಟ್ಟಿ ತಿಪ್ಪೇಸ್ವಾಮಿ, ಪಿ.ವಿ.ಓಬಳೇಶ್, ನೆಲಗೇತನಹಟ್ಟಿ ರಮೇಶ್, ಗಜ್ಜುಗಾನಹಳ್ಳಿ ಗ್ರಾಮ ಮುಖಂಡರು ಹಾಗೂ ಮಹಿಳೆಯರು ಇನ್ನಿತರರು ಇದ್ದರು.

ಹಿರಿಯೂರಿನಿಂದ ಇಬ್ಬರು ಟಾಪರ್

ಹಿರಿಯೂರು: ರಾಜ್ಯಕ್ಕೆ ಹಿರಿಯೂರಿನಿಂದ ಇಬ್ಬರು ಟಾಪರ್. ನಗರದ ರಾಷ್ಟ್ರೀಯ ಅಕಾಡೆಮಿ ಶಾಲೆಯ ನಂದನ್ ಹಾಗೂ ಮೌಲ್ಯ ಡಿ ರಾಜು 625 ಕ್ಕೆ 625 ಅಂಕ ಪಡೆದ ರಾಜ್ಯಕ್ಕೆ ಟಾಪಾರ್ ಆಗಿ ಆಯ್ಕೆಯಾಗಿದ್ದಾರೆ ವಿದ್ಯಾರ್ಥಿಗಳಿಗೆ ಪೋಷಕರಿಗೆ, ಶಾಲೆಗೆ ಅಂಭಿನಂದನೆಗಳ ಮಹಾ ಪುರಾವೆ ಸಾರ್ವಜನಿಕರಿಂದ ಹರಿದುಬರುತ್ತಿದೆ.

{ಲಕ್ಷ್ಮೀ ಹೆಬ್ಬಾಳಕರ್} ಸಚಿವೆ

ಭಾರತದಲ್ಲಿ ದೇವರೆಂದರೆ ಭಯ, ಭಕ್ತಿ ಜಾಸ್ತಿ. ಈ ಕಾರಣದಿಂದಲೇ ನಮ್ಮ ದೇಶ ಸುಭದ್ರವಾಗಿದೆ. ನನಗೂ ಕೂಡ ದೇವರೆಂದರೆ ಅಪಾರ ಭಕ್ತಿ. ಎಂದಿಗೂ ಜಾತಿ ರಾಜಕಾರಣ ಮಾಡಿಲ್ಲ. ಎಲ್ಲಾ ಜಾತಿ ಧರ್ಮದವರನ್ನು ಸಮಾನವಾಗಿ ನೋಡುತ್ತಾ ಧರ್ಮದಿಂದ ರಾಜಕಾರಣ ಮಾಡುತ್ತಿದ್ದೇನೆ.

ದಾವಣಗೆರೆ ಜಿಲ್ಲೆಗೆ ದಕ್ಷಿಣ ಪ್ರಥಮ, ಹರಿಹರ ಕೊನೆಯ ಸ್ಥಾನ

ಎಸ್ಸೆಸ್ಸೆಲ್ಸಿ: ಜಿಲ್ಲೆಗೆ 21ನೇ ಸ್ಥಾನ

ಯಶಸ್ವಿನಿ ಕೆ.ಪಿ.
99.86%

ದಾವಣಗೆರೆ: ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಗೊಂಡಿದ್ದು, ಜಿಲ್ಲೆಗೆ ಶೇ.66.09 ಫಲಿತಾಂಶದೊಂದಿಗೆ ರಾಜ್ಯದಲ್ಲಿ 21ನೇ ಸ್ಥಾನ ಗಳಿಸಿದೆ. 19,964 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಈ ಪೈಕಿ 13,195 ವಿದ್ಯಾರ್ಥಿಗಳು ಉತ್ತೀರ್ಣರಾಗಿ, 6769 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ದಾವಣಗೆರೆ ದಕ್ಷಿಣ ಶೇ.70.01 ಪಡೆದು ಪ್ರಥಮ ಸ್ಥಾನ, ಅನುಕ್ರಮವಾಗಿ ಚನ್ನಗಿರಿ ಶೇ.68.27, ಹೊನ್ನಾಳಿ ಶೇ.68.26, ಜಗಳೂರು ಶೇ. 64.67, ದಾವಣಗೆರೆ ಉತ್ತರ ಶೇ.61.69 ಹಾಗೂ ಹರಿಹರ ಶೇ. 60.78 ಗಳಿಸಿವೆ. ಒಟ್ಟು ನಗರ ಭಾಗದ 5,271 (ಶೇ.65.15) ವಿದ್ಯಾರ್ಥಿಗಳು ಹಾಗೂ ಗ್ರಾಮೀಣ ಪ್ರದೇಶದ 7,925 (ಶೇ. 66.71) ಉತ್ತೀರ್ಣರಾಗಿದ್ದಾರೆ.

ಜಿಲ್ಲೆಗೆ ಟಾಪರ್: ನಗರದ ಸಿದ್ದಗಂಗಾ ಶಾಲೆಯ ಯಶಸ್ವಿನಿ ಕೆ.ಪಿ. 625ಕ್ಕೆ 623 ಅಂಕಗಳಿಸಿ ಜಿಲ್ಲೆಗೆ ಟಾಪರ್ ಆಗಿದ್ದಾಳೆ. ಜತೆಗೆ, ತ್ಯಾವಣಗಿ ಪ್ರಕೃತಿ ಕಾನ್ವೆಂಟ್‌ನ ಚೈತನ್ಯ, ಕೆರೆಬಿಳಚಿಯ ಸರಕಾರಿ ಉರ್ದು ಶಾಲೆಯ ಆಯಿಜಾ ಫಾತಿಮಾ, ಸಿದ್ದಗಂಗಾ ಶಾಲೆಯ ಯಶಸ್ವಿನಿ ಎಸ್ ಈಡಿಗರ್, ಸಿದ್ದಗಂಗಾ ಶಾಲೆಯ ಡಿ.ಎಸ್. ಕೀರ್ತಿ ಹಾಗೂ ದಾವಣಗೆರೆಯ ಸೋಮೇಶ್ವರ ಇಂಗ್ಲಿಷ್ ಮಾಧ್ಯಮ ಶಾಲೆಯ ಕೆ.ಎಸ್. ಶಾಲಿನಿ 625ಕ್ಕೆ 622 ಅಂಕಗಳಿಸಿದ್ದಾರೆ. ಉಳಿದಂತೆ, ಸಂತೆಬೆನ್ನೂರು ಚೈತನ್ಯ ಗುರುಕುಲ ಶಾಲೆಯ ಬಿ.ಎಚ್. ಚಂದನಾ, ಕುಕ್ಕುವಾಡ ಕೆಪಿಎಸ್ ಶಾಲೆಯ ಅಮೃತಾ ಟಿ.ಎಂ., ಜಗಳೂರು ಎನ್‌ಎಂಕೆಎಚ್ ಶಾಲೆಯ ತೇಜಸ್ವಿನಿ 625ಕ್ಕೆ 621 ಅಂಕ ಗಳಿಸಿದ್ದಾರೆ.

ಶೇ. ನೂರು ಫಲಿತಾಂಶ ಪಡೆದ ಶಾಲೆಗಳು: ಜಿಲ್ಲೆಯಲ್ಲಿ ಒಟ್ಟು 12 ಶಾಲೆಗಳು ಶೇ.100 ಫಲಿತಾಂಶ ಪಡೆದಿದ್ದು, ಅದರಲ್ಲಿ ಸರಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯಡಿಯ ಶಾಲೆಗಳು 5 ಹಾಗೂ ಅನುದಾನ ರಹಿತ 7 ಶಾಲೆಗಳು ಶೇ. 100 ಫಲಿತಾಂಶ ಪಡೆದಿವೆ.

ಮಾತೃಭಾಷೆಯಲ್ಲಿ 125ಕ್ಕೆ 125 ಅಂಕ: ಮಾತೃಭಾಷೆ ಕನ್ನಡದಲ್ಲಿ 18 ವಿದ್ಯಾರ್ಥಿಗಳು 125ಕ್ಕೆ 125 ಅಂಕ ಪಡೆದಿದ್ದಾರೆ. ಅದರಂತೆ ಉರ್ದುವಿನಲ್ಲಿ 13, ಸಂಸ್ಕೃತದಲ್ಲಿ 5 ವಿದ್ಯಾರ್ಥಿಗಳು 125 ಅಂಕ ಗಳಿಸಿದ್ದಾರೆ ಎಂದು ಪ್ರಭಾರ ಡಿಡಿಪಿಐ ಮಾಹಿತಿ ನೀಡಿದರು.

ಶೂನ್ಯ ಫಲಿತಾಂಶ ಪಡೆದ ಶಾಲೆಗಳು: ದಾವಣಗೆರೆ ನಗರದ ನೇತಾಜಿ ಸುಭಾಷ್ ಚಂದ್ರಬೋಸ್ ಹೈಸ್ಕೂಲ್, ಹೋಯ್ಸಳ ರೆಸಿಡೆನ್ಸಿಯಲ್ ಶಾಲೆ ಹಾಗೂ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಪ್ರೌಢಶಾಲೆ ಶೂನ್ಯ ಫಲಿತಾಂಶ ಪಡೆದಿದ್ದು, ಕಾರಣ ಕೇಳಿ ಡಿಡಿಪಿಐ ಅವರು ನೋಟೀಸ್ ನೀಡುವುದಾಗಿ ತಿಳಿಸಿದ್ದಾರೆ.

ಸಿದ್ಧಗಂಗಾ ಹೈಸ್ಕೂಲ್‌ನ ಯಶಸ್ವಿನಿ ಶಾಲೆಗೆ ಟಾಪರ್

ದಾವಣಗೆರೆ: ನಗರದ ಶ್ರೀಸಿದ್ಧಗಂಗಾ ಕಾಂಪೋಜಿಟ್ ಹೈಸ್ಕೂಲಿನ ಯಶಸ್ವಿನಿ ಕೆ.ಪಿ. 625ಕ್ಕೆ 623 ಅಂಕಗಳಿಸಿ ಜಿಲ್ಲೆಗೆ ಪ್ರಥಮ, ರಾಜ್ಯಕ್ಕೆ 3ನೇ ರ್‍ಯಾಂಕ್‌ಗಳಿಸಿದ್ದಾಳೆ. ಕನ್ನಡ 124, ಇಂಗ್ಲೀಷ್ 100, ಹಿಂದಿ 99, ಗಣಿತ 100, ವಿಜ್ಞಾನ 100, ಸಮಾಜ 100 ಒಟ್ಟು 623 ಅಂಕ ಪಡೆದಿದ್ದಾಳೆ.

ಯಶಸ್ವಿನಿ ಈಡಿಗಾರ್ 622, ಕೀರ್ತಿ ಡಿ.ಎಸ್. 622, ಸುಶ್ಮಿತ ಯು. 620, ಶೀರಕ್ಷ ಶ್ರೀನಿವಾಸ್ 612, ಯುಕ್ತ ಬಿ. 612, ಹರ್ಷಿತ ಹೆಚ್. ವೈ 608, ಶ್ರೀದೇವಿ ಎಲ್.ಆರ್. 607, ಮುರುಳಿ ಜಿಆರ್.606, ನಿಹಾರಿಕಾ ಸಿ.ಯು. 606, ನಿಶ್ಚಲ್ ಕೆ.ಪಿ. 606, ಚನ್ನಬಸಮ್ಮ ಕೆ.ಪಿ.ಎಂ. 605, ಅಜಯ್ ಆರ್. 604, ಕಲ್ಲೇಶ್ ಎಂ. 603, ಪ್ರಜ್ವಲ್ ಕೆ. ಯು. 603, ಅನ್ನಪೂರ್ಣ ಜೆ. ಕೆ. 602, ಬಿಂದು ಕೆ.ಎಸ್. 601, ಪ್ರತೀಕ್ಷಾ ಎ.ವಿ. 601, ಓಂಶುಕ್ಲಾ ಬಿ.ಕೆ. 600, ಪ್ರಜ್ವಲ್ ಆರ್.ಜಿ. 600, ತನುಶ್ರೀ ಕೆಜಿ. 600 ಗಳಿಸಿದ್ದಾರೆ.ಒಟ್ಟು 21ಮಕ್ಕಳು 625ಕ್ಕೆ 600ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. 3 ಮಕ್ಕಳು ಶೇ.90ರಷ್ಟು ಮಾರ್ಕ್ಸ್ ಪಡೆದಿದ್ದಾರೆ. ಡಿಸ್ಟಿಂಕ್ಷನಲ್ಲಿ 119, ಪ್ರಥಮದರ್ಜೆ 144, ದ್ವಿತೀಯದರ್ಜೆಯಲ್ಲಿ 28 ಮಕ್ಕಳು ಉತ್ತೀರ್ಣರಾಗಿದ್ದಾರೆ.ಕನ್ನಡದಲ್ಲಿ 125ಕ್ಕೆ 125 ನಾಲ್ಕು ವಿದ್ಯಾರ್ಥಿಗಳು, ಇಂಗ್ಲಿಷ್‌ನಲ್ಲಿ 8, ಹಿಂದಿಯಲ್ಲಿ 20, ವಿಜ್ಞಾನದಲ್ಲಿ 5, ಗಣಿತ 4, ಸಮಾಜವಿಜ್ಞಾನ 7 ಮಕ್ಕಳು ಒಟ್ಟು48 ಮಕ್ಕಳು100ಕ್ಕೆ 100ಅಂಕ ಗಳಿಸಿದ್ದಾರೆ.

ಜಿಲ್ಲೆಗೆ ಪ್ರಥಮಸ್ಥಾನ ಪಡೆದ ಯಶಸ್ವಿನಿ ಕೆ.ಪಿ. ಜ್ಯೋತಿಕಲಾ, ಪಾಲಾಕ್ಷಪ್ಪ ದಂಪತಿ ಪುತ್ರಿ. ಶಾಲೆಗೆ ಅತ್ಯುತ್ತಮ ಫಲಿತಾಂಶ ಕೊಟ್ಟ ಎಲ್ಲಾ ಮಕ್ಕಳನ್ನುಶಾಲೆ ಮುಖ್ಯಸ್ಥ ಜಸ್ಟಿನ್ ಡಿಸೌಜ, ಮುಖ್ಯಶಿಕ್ಷಕಿ ರೇಖಾರಾಣಿ, ಕಾರ್ಯದರ್ಶಿ ಡಿ.ಎಸ್. ಹೇಮಂತ್, ನಿರ್ದೇಶಕ ಡಾ.ಜಯಂತ್, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಕೀರ್ತಿ
600/622

ಯಶಸ್ವಿನಿ
600/622

ಸುಶ್ಮಿತ
600/620

ಶೀರಕ್ಷ
600/612

ಹರ್ಷಿತ
600/612

ಲೈಂಗಿಕ ದೌರ್ಜನ್ಯ: ಉಪನ್ಯಾಸಕನಿಗೆ ಥಳಿತ

ಚನ್ನಗಿರಿ: ಪಟ್ಟಣದ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕನಾಗಿದ್ದ ಮುರುಳಿಧರ್ ಎಂಬ ಅತಿಥಿ ಶಿಕ್ಷಕ ಅದೇ ಕಾಲೇಜಿನ ವಿದ್ಯಾರ್ಥಿನಿಯರಿಗೆ ಆಶ್ಲೀಲ ಮೆಸೇಜ್, ವಿಡಿಯೋ ಮತ್ತು ಚಿತ್ರಗಳನ್ನು ಕಳಿಸಿ ಲೈಗಿಂಕ ದೌರ್ಜನ್ಯ ಎಸಗುತ್ತಿದ್ದಾನೆ ಎಂದು ಆರೋಪಿಸಿ ಕಾಲೇಜಿನ ವಿದ್ಯಾರ್ಥಿಗಳು ಉಪನ್ಯಾಸಕನಿಗೆ ಥಳಿಸಿದ ಘಟನೆ ಶುಕ್ರವಾರ ನಡೆದಿದೆ.

ಪಟ್ಟಣದ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕ ವಿದ್ಯಾರ್ಥಿನಿಯರಿಗೆ ಲೈಂಗಿಕ ದೌರ್ಜನ್ಯ ನೀಡಿದ್ದಾನೆ ಎಂದು ಆರೋಪಿಸಿ ಕಾಲೇಜಿನ ಮುಂದೆ ಪ್ರತಿಭಟನೆ ನಡೆಸುತ್ತೀರುವ ವಿದ್ಯಾರ್ಥಿಗಳು.

ಈ ಕಾಲೇಜಿನಲ್ಲಿ ಗಣಕಯಂತ್ರ ವಿಷಯದ ಅತಿಥಿ ಉಪನ್ಯಾಸಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಈತ ಅದೇ ಕಾಲೇಜಿನ ವಿಜ್ಞಾನ ವಿಭಾಗದ ಕೆಲ ವಿದ್ಯಾರ್ಥಿನಿಯರಿಗೆ ವಾಟ್ಸಾಪ್ ಮೂಲಕ ಅಶ್ಲೀಲ ವಾಗಿ ಮೆಸೇಜ್, ವಿಡಿಯೋ, ಫೋಟೋಗಳನ್ನು ಕಳಿಸುತ್ತಿದ್ದು ಲೈಂಗಿಕ ಕಿರುಕುಳ ನೀಡುತ್ತಿದ್ದ ಈ ವಿಷಯ ಕಾಲೇಜಿನ ಕೆಲ ವಿದ್ಯಾರ್ಥಿಗಳಿಗೆ ತಿಳಿಯುತ್ತಿದ್ದಂತೆಯೇ ಶುಕ್ರವಾರ ಬೆಳಗ್ಗೆ ಈ ಉಪನ್ಯಾಸಕ ತರಗತಿಯನ್ನು ತೆಗೆದುಕೊಂಡ ಸಂದರ್ಭದಲ್ಲಿ ವಿದ್ಯಾರ್ಥಿಗಳು ಈ ಉಪನ್ಯಾಸಕನಿಗೆ ಥಳಿಸಿ ಕಾಲೇಜಿನ ಆವರಣದಲ್ಲಿ ಪ್ರತಿಭಟನೆಯನ್ನು ನಡೆಸಿದರು.

ಈ ವಿಷಯ ತಿಳಿಯುತ್ತಿದ್ದಂತೆಯೇ ಸರ್ಕಲ್ ಇನ್ಸ್ ಪೆಕ್ಟರ್ ರವೀಶ್ ಸ್ಥಳಕ್ಕೆ ಭೇಟಿನೀಡಿ ವಿದ್ಯಾರ್ಥಿಗಳ ಅಹವಾಲು ಸ್ವೀಕರಿಸಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡರು.

ಈ ಬಗ್ಗೆ ಪ್ರಾಚಾರ್ಯ ಅಮೃತೇಶ್ವರ್ ಇವರನ್ನು ಮಾಧ್ಯಮದವರು ಪ್ರಶ್ನೆಸಿದಾಗ ಮುರುಳಿಧರ್ ಎಂಬ ಅತಿಥಿ ಉಪನ್ಯಾಸಕ ವಾಟ್ಸಾಪ್ ಮೂಲಕ ಅಶ್ಲೀಲ ಮೆಸೇಜ್ ಕಳಿಸುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ಈ ದಿನ ನನಗೆ ದೂರು ನೀಡಿದ್ದು ಅವರನ್ನು ಕರೆಸಿ ವಿಚಾರಣೆ ನಡೆಸುತ್ತಿದ್ದು ನಮ್ಮ ಕಾಲೇಜಿನಲ್ಲಿ ಲೈಗಿಂಕ ದೌರ್ಜನ್ಯ ತಡೆ ಸಮಿತಿ ಇದ್ದು ಅದಕ್ಕೂ ಒಂದು ದೂರು ನೀಡಿ ಕಾನೂನಿನ ಪ್ರಕಾರವಾಗಿ ತಪಿತಸ್ಥರ ವಿರುದ್ದ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಆರೋಪಿ ಮುರುಳಿಧರ್ ನನ್ನು ಪೊಲೀಸರು ವಶಕ್ಕೆ ಪಡೆಯುತ್ತೀರುವುದು.

ಶ್ರೀ ಶಂಕರ ಭಗವತ್ಪಾದರ ಜಯಂತಿ | ಪಲ್ಲಕ್ಕಿ ಉತ್ಸವ

ಶಂಕರಾಚಾರ್ಯರ ಬೋಧನೆ ಅಳವಡಿಸಿಕೊಳ್ಳಿ

ದಾವಣಗೆರೆಯಲ್ಲಿ ಶ್ರೀ ಶಂಕರ ಸೇವಾ ಸಂಘದಿಂದ ಶ್ರೀ ಶಂಕರ ಭಗವತ್ಪಾದರ ಜಯಂತಿಯ ಪಲ್ಲಕ್ಕಿ ಉತ್ಸವ ಜರುಗಿತು.

ದಾವಣಗೆರೆ: ಶ್ರೀ ಶಂಕರಾಚಾರ್ಯರು ಲೌಕಿಕ, ಅಲೌಕಿಕ ಎರಡನ್ನೂ ಬೋಧಿಸಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುಕ್ತಿಯನ್ನು ಪಡೆಯಲು ತಿಳಿಸಿದ್ದಾರೆ. ಶಂಕರಾಚಾರ್ಯರ ಬೋಧನೆಯನ್ನು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಕಲಿಸುವ ಕೆಲಸವಾಗಬೇಕು ಎಂದು ಶ್ರೀ ಶಂಕರ ಸೇವಾ ಸಂಘದ ಉಪಾಧ್ಯಕ್ಷ ಮೋತಿ ಸುಬ್ರಹ್ಮಣ್ಯ ಹೇಳಿದರು.

ನಗರದ ಎಸ್.ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಶುಕ್ರವಾರ ಶ್ರೀ ಶಂಕರ ಸೇವಾ ಸಂಘದಿಂದ ಆಯೋಜಿಸಿದ ಶ್ರೀ ಶಂಕರ ಭಗವತ್ಪಾದರ ಜಯಂತಿಯ ಪಲ್ಲಕ್ಕಿ ಉತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಮೊದಲು ಮಕ್ಕಳಿಗೆ ಭಗವದ್ಗೀತೆ ಕಲಿಸಬೇಕು. ಶಂಕರಾಚಾರ್ಯರ ಪ್ರವಚನಗಳು ಎಲ್ಲರಿಗೂ ಜೀವನ ಹೇಗೆ ನಡೆಸಬೇಕು ಎಂಬುದನ್ನು ತಿಳಿಸುತ್ತವೆ. ನಮ್ಮವರಿಗೆ ಸರಿಯಾದ ಗುರು ಬೇಕಾಗಿದೆ. ಆಗ ಮಾತ್ರ ನಾವು ಸರಿಯಾದ ಮಾರ್ಗದಲ್ಲಿ ನಡೆಯಲು ಪ್ರೇರಣೆಯಾಗುತ್ತದೆ ಎಂದರು.

ಶ್ರೀ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ.ಬಿ.ಟಿ.ಅಚ್ಯುತ್ ಮಾತನಾಡಿ, ನಮ್ಮ ಸಂಘದಿಂದ ಪ್ರತಿ ವರ್ಷ ಶಂಕರ ಜಯಂತಿ ಕಾರ್ಯಕ್ರಮ ಮಾಡಿಕೊಂಡು ಬಂದಿದ್ದೇವೆ. ವೈಶಾಖ ಶುದ್ಧ ಚತುರ್ಥಿಯ ಗುರುವಾರ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಆರಂಭ ಮಾಡಿ ಬೆಳಿಗ್ಗೆ ರುದ್ರಾಭಿಷೇಕ, ಶ್ರೀ ಶಂಕರಾಚಾರ್ಯರಿಗೆ ಮಹಾಪೂಜೆ, ಶ್ರೀ ಚಂದ್ರಮೌಳೇಶ್ವರರಿಗೆ ರುದ್ರಾಭಿಷೇಕ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂದರು.

ಈ ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಶ್ರೀನಿವಾಸ ಜೋಷಿ, ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಡಾ.ಶಶಿಧರ, ನಿರ್ದೇಶಕ ಅನಿಲ್ ಬಾರೆಂಗಳ್, ಬಾಲಕೃಷ್ಣ ವೈದ್ಯ, ರಮೇಶ ಪಾಟೀಲ್, ಎಚ್.ಕೆ. ವೆಂಕಟೇಶ, ರಾಘವೇಂದ್ರ, ಪಟ್ಟಾಭಿರಾಮನ್, ಶ್ರೀಶಂಕರನ್, ಸುಮ ವೆಂಕಟೇಶ, ಕಾಮಾಕ್ಷಿ, ಭಾಗವಹಿಸಿದ್ದರು.

ಅನಾರೋಗ್ಯ ಪೀಡಿತರು ಆತ್ಮಸ್ಥೈರ್ಯ ಕಳೆದುಕೊಳ್ಳಬೇಡಿ

ಹೊಸದುರ್ಗ: ವಿಕಲಚೇತನರು, ಅನಾರೋಗ್ಯ ಪೀಡಿತ ಜನರು ಯಾವುದೇ ಆತ್ಮಸ್ಥೈರ್ಯ ಕಳೆದುಕೊಳ್ಳದೇ ಧೈರ್ಯವಾಗಿ ಬದುಕಲು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಲವು ಸೌಲಭ್ಯ ನೀಡಲಾಗುತ್ತಿದೆ ಎಂದು ಯೋಜನಾಧಿಕಾರಿ ಎಸ್.ಶಿವಣ್ಣ ತಿಳಿಸಿದರು.

ತಾಲೂಕಿನ ಕೆಲ್ಲೋಡು ಗ್ರಾಮದ ಚೈತ್ರರವರು ತನ್ನಪಷ್ಟಕ್ಕೆ ಕೈಕಾಲು ಸ್ವಾಧೀನ ಕಳೆದುಕೊಂಡಿದ್ದು, ನಡೆದಾಡಲು ಕಷ್ಟಪಡುತ್ತಿದ್ದರು.

ಈ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಕಮಾಂಡ್ ವೀಲ್ ಚೇರ್ ಮತ್ತು 10 ಸಾವಿರ ಸಹಾಯಧನವನ್ನು ವಿತರಿಸಿ ಮಾತನಾಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಯಿಂದ ಅನಾರೋಗ್ಯ ಪೀಡಿತ ಜನರಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವಿರೇಂದ್ರ ಹೆಗ್ಗಡೆಯವರು ಉಚಿತವಾಗಿ ವೀಲ್ ಚೇರ್, ಲೆಗ್ ಸ್ಟಿಕ್, ವಾಟರ್ ಬೆಡ್, ಯು ಷೇಪ್ ವಾಕರ್ ನೀಡುತ್ತಿದ್ದು, ಕೇವಲ ಒಂದು ಫೋಟೋ, ಆಧಾರ್ ಕಾರ್ಡ್ ಮನವಿಯನ್ನು ಸಂಸ್ಥೆಯ ಯೋಜನಾ ಕಚೇರಿಗೆ ನೀಡಿದರೆ ಅವರ ಮನೆ ಬಾಗಿಲಿಗೆ ಸೌಲಭ್ಯ ತಂದುಕೊಡುತ್ತೇವೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿಲ್ಪಾ ಮಧುಸೂಧನ್, ಕೈನೋಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಸನ್ನಕುಮಾರ್, ಗುಡಿಗೌಡರು, ಗ್ರಾಮಸ್ಥರು ಹಾಜರಿದ್ದರು.

ವಿರೇಂದ್ರ ಹೆಗ್ಗಡೆಯವರು ಪ್ರಸ್ತುತ ಎಲ್ಲಾ ಜನರಿಗೆ ಸಹಾಯ ಮಾಡುತ್ತಿರುವ ಆಧುನಿಕ ಕರ್ಣ. ಸ್ವಸಹಾಯ ಸಂಘದ ಮೂಲಕ ಬಂದ ಲಾಭವನ್ನು ಮತ್ತೆ ಸಮಾಜಕ್ಕೆ ಕೊಡುಗೆಯಾಗಿ ನೀಡಿ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಸಹಾಯ ಮಾಡುತ್ತಿರುವುದು ನಮೆಲ್ಲರ ಭಾಗ್ಯ.
-ಬೋರೇಶ್,ಹಸಿರು ಸೇನೆ ತಾಲೂಕು ಅಧ್ಯಕ್ಷ, ಸಂಸದ, ಕೊಪ್ಪಳ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಕಮಾಂಡ್ ವೀಲ್ ಚೇರ್ ಮತ್ತು 10 ಸಾವಿರ ಸಹಾಯಧನವನ್ನು ವಿತರಿಸಿದರು.

1500 ಐಎಎಸ್ ಅಧಿಕಾರಿಗಳ ಕೊಟ್ಟ ಇನ್‌ಸೈಟ್ಸ್

ದಾವಣಗೆರೆ: ಕಳೆದ ಒಂದು ದಶಕದಲ್ಲಿ ದೇಶಕ್ಕೆ 1500 ಐಎಎಸ್ ಅಧಿಕಾರಿಗಳನ್ನು ನೀಡಿದ ಹೆಗ್ಗಳಿಕೆ ಇನ್‌ಸೈಟ್ಸ್ ಐಎಎಸ್ ಕೋಚಿಂಗ್ ಸಂಸ್ಥೆಯದ್ದು. ಈ ಸಾಧನೆ ಮಾಡಲು ಕಾರಣೀಕರ್ತರಾಗಿದ್ದು ನನ್ನೂರು ಕಕ್ಕರಗೊಳ್ಳ ಗ್ರಾಮದ ಜನರು, ಶಿಕ್ಷಕರು, ಕುಟುಂಬದವರು ಎಂದು ಇನ್‌ಸೈಟ್ಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್ ಹೇಳಿದರು.

ತಾಲೂಕಿನ ಕಕ್ಕರಗೊಳ್ಳ ಗ್ರಾಮದೇವತೆ ಊರಮ್ಮ ದೇವಿ ದೇವಸ್ಥಾನದ ಉದ್ಘಾಟನೆ, ಆಂಜನೇಯಸ್ವಾಮಿ, ಶ್ರೀ ಅರಕೇರಮ್ಮ ದೇವಸ್ಥಾನದ ಗೋಪುರ ಕಳಸಾರೋಹಣ, ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವಗುರು ಶ್ರೀ ಬಸವೇಶ್ವರರ ಜಯಂತ್ಯುತ್ಸವ ಹಾಗೂ ಸರ್ವ ಶರಣ ಸಮ್ಮೇಳನದಲ್ಲಿ ಮಾತನಾಡಿದರು.

ನಾನು ಬಿಎಸ್ಸಿ ಮುಗಿಸಿ ಐಎಎಸ್ ಅಧಿಕಾರಿಯಾಗಬೇಕು ಎಂದು ಕನಸು ಕಂಡಿದ್ದೆ. ಸ್ವಲ್ಪದರಲ್ಲಿ ತಪ್ಪಿಹೋಯಿತು. ಅದಾದ ನಂತರ ನನಗೆ ಹೊಳೆದದ್ದು ಐಎಎಸ್ ಕೋಚಿಂಗ್ ಸೆಂಟರ್ ಆರಂಭಿಸ ಬೇಕು ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥೆ ಹುಟ್ಟುಹಾಕಿದೆ.

ದಾವಣಗೆರೆ ತಾಲೂಕಿನ ಕಕ್ಕರಗೊಳ್ಳ ಗ್ರಾಮದೇವತೆ ಊರಮ್ಮ ದೇವಿ ದೇವಸ್ಥಾನದ ಉದ್ಘಾಟನೆ ಸಮಾರಂಭದಲ್ಲಿ ವಿನಯ್‌ಕುಮಾರ್ ಅವರನ್ನು ಗೌರವಿಸಲಾಯಿತು.

ಕಳೆದ ಹತ್ತು ವರ್ಷಗಳ ಹಿಂದೆ ಶುರುವಾದ ಸಂಸ್ಥೆಯು ಈಗ ದೇಶದ ಗಮನವನ್ನೇ ಸೆಳೆಯುತ್ತಿದೆ. ಕರ್ನಾಟಕದ ಟಾಪರ್ ರಂಗಮಂಜು ಭಾರತಕ್ಕೆ 24ನೇ ರ್‍ಯಾಂಕ್ ಪಡೆದಿದ್ದು, ಈತ ನನ್ನ ವಿದ್ಯಾರ್ಥಿ. ನನ್ನ ಸಂಸ್ಥೆಯಲ್ಲಿ ಓದಿ ದವರು ಎಂಬುದು ನನಗೆ ಹೆಮ್ಮೆಯ ವಿಚಾ ರ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿ. ಬಿ. ವಿನಯ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಸಾಣೆಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾಗಿನೆಲೆ ಮಹಾಸಂ ಸ್ಥಾನ ಮಠದ ಈಶ್ವರಾನಂದಪುರಿ ಶ್ರೀ, ಡಾ. ಬಸವ ಮಾಚಿದೇವ ಶ್ರೀ, ಶಾಂತಭೀಷ್ಮ ಚೌಡಯ್ಯ ಶ್ರೀ, ಬೆಂಗಳೂರು ವಿ.ವಿ.ಯ ವಿಶ್ರಾಂತ ಕುಲ ಪತಿ ಪ್ರೊ.ಕೆ. ಸಿದ್ದಪ್ಪ, ವಿಶ್ರಾಂತ ಪ್ರಾಚಾರ್ಯ ಎನ್. ಲೋಕೇಶ್ ಒಡೆಯರ್, ಗ್ರಾಮದ ಮುಖಂಡ ಬಸವನಗೌಡ್ರು ಇದ್ದರು.

ಮೇ 5ರಿಂದ ಜಾತಿ ಸಮೀಕ್ಷೆ

ಚಿತ್ರದುರ್ಗ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ರಾಜ್ಯಾದ್ಯಂತ ಮೇ 5 ರಿಂದ 17ರವರೆಗೆ ಪರಿಶಿಷ್ಟ ಜಾತಿ, ಉಪಜಾತಿ ಸಮೀಕ್ಷೆ ನಡೆಯಲಿದೆ.

ಈ ಸಮಯದಲ್ಲಿ ಒಳ ಮೀಸಲಾತಿ ಸಮೀಕ್ಷೆಗೆ ಅಧಿಕಾರಿಗಳು ಊರಿಗೆ ಬಂದಾಗ ಬಂಜಾರ ಎಂದು ನಮೂದಿಸಬೇಕಾಗಿ ಸಮಾಜದ ಭಾಂಧವರಲ್ಲಿ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಜಯದೇವನಾಯ್ಕ್ ಮನವಿ ಮಾಡಿದ್ದಾರೆ.

ಚಿತ್ರದುರ್ಗ ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ವರ್ಗೀಕರಣ ಆಯೋಗ ದ ಅಧ್ಯಕ್ಷ ಗೌರವಾನ್ವಿತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಸರಕಾರಕ್ಕೆ ನೀಡಿರುವ ಮಧ್ಯಂತರ ವರದಿಯನ್ನು ಸುಪ್ರಿಂ ಕೋರ್ಟ್ ನಿರ್ದೇಶನ ನೀಡಿದಂತೆ ದತ್ತಾಂಶ ಸಂಗ್ರಹಿಸಿ, ಅದರ ಆಧಾರದ ಮೇಲೆ ಮೀಸಲಾತಿ ನಡೆಯುತ್ತದೆ. ಕರ್ನಾಟಕ ರಾಜ್ಯಾದ್ಯಂತ ಪ್ರತಿಯೊಂದು ಜಿಲ್ಲೆಯಲ್ಲಿ ಹಾಗೂ ತಾಲೂಕುಗಳಲ್ಲಿ ಹೋಬಳಿ ಕೇಂದ್ರಗಳಲ್ಲಿ ಹಾಗೂ ತಾಂಡಗಳಲ್ಲಿ, ಗ್ರಾಮಗಳಲ್ಲಿ ಒಳಮೀಸಲಾತಿ ವರ್ಗೀಕರಣ ಸಮೀಕ್ಷೆ ನಡೆಯಲಿದ್ದು, ಸಮೀಕ್ಷೆ ತಂಡದ ಅಧಿಕಾರಿಗಳು ಆಯಾ ಊರಿನಲ್ಲಿ ಸಮೀಕ್ಷೆ ಮಾಹಿತಿ ಪಡೆಯಲು ಬರುತ್ತಾರೆ.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಜಯದೇವನಾಯ್ಕ್ ಮಾತನಾಡಿದರು.

ಸಮೀಕ್ಷೆಯಲ್ಲಿ ಉಪಜಾತಿಗಳ ಜನಸಂಖ್ಯೆ, ಕುಟುಂಬಗಳ ಸಂಖ್ಯೆ ಪಡೆದಿರುವ ಶಿಕ್ಷಣ, ವೃತ್ತಿ, ವಾಸಿಸುವ ಪ್ರದೇಶ ಹೊಂದಿರುವ ಸೌಲಭ್ಯಗಳು ಮುಂತಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದ ಮಾಹಿತಿಗಳು, ಸರಕಾರಿ ಉದ್ಯೋಗ, ಖಾಸಗಿ, ಉದ್ಯೋಗ, ಭೂಮಿಯ ಒಡೆತನ, ಆದಾಯ, ಸರಕಾರದಿಂದ ಪಡೆದಿರುವ ಸೌಲಭ್ಯಗಳು, ರಾಜಕೀಯ ಪ್ರಾತಿನಿಧ್ಯದ ಮಾಹಿತಿಯನ್ನು ನಮೂದಿಸಲಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಲಿಂಗಾನಾಯ್ಕ್, ಅರುಣ್ ಕುಮಾರ್, ಪ್ರತಾಪ್ ನಾಯ್ಕ್, ನಾಗರಾಜ್ ನಾಯ್ಕ್, ಆನಂತ ಮೂರ್ತಿ, ನಂಜಾನಾಯ್ಕ್, ರಾಮ ನಾಯ್ಕ್, ಶ್ರೀನಿವಾಸ್ ನಾಯ್ಕ್, ತಿಪ್ಪೇಶ್ ಉಪಸ್ಥಿತರಿದ್ದರು.

ಊರಿನ ನಾಯಕ್, ಕಾರಬಾರಿ, ಡಾವೋ, ಗ್ರಾಮ ಪಂಚಾಯಿತಿ ಸದಸ್ಯರು, ವಿದ್ಯಾರ್ಥಿಗಳು, ಮಹಿಳೆಯರು, ಯುವ ನಾಯಕರು ಎಲ್ಲರೂ ಸೇರಿ ನಾವು ಪರಿಶಿಷ್ಟ ಜಾತಿಯಲ್ಲಿದ್ದೇವೆ. ನಮ್ಮ ಉಪಜಾತಿ ಬಂಜಾರ (ಲಂಬಾಣಿ) ಎಂದು ನಮೂದಿಸಬೇಕು.
-ಜಯದೇವನಾಯ್ಕ್, ತಾಂಡ ಅಧ್ಯಕ್ಷ

ಎಂ.ಪಿ.ಪ್ರಕಾಶ್ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

ಹೊಸದುರ್ಗ: ನಗರದ ನಿಜಲಿಂಗಪ್ಪ ಶಿಕ್ಷಣ ಸಂಸ್ಥೆಯ ಎಂ.ಪಿ.ಪ್ರಕಾಶ್ ಪ್ರೌಢಶಾಲೆಯು ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶಗಳಿಸಿದೆ.

56 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ, 80 ಪ್ರಥಮ ಶ್ರೇಣಿ, 15 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಹಿಂದಿಯಲ್ಲಿ 9 ವಿದ್ಯಾರ್ಥಿಗಳು 100ಕ್ಕೆ ನೂರು, ಕನ್ನಡದಲ್ಲಿ 7 ವಿದ್ಯಾರ್ಥಿಗಳು 100ಕ್ಕೆ ನೂರು, ಸಮಾಜವಿಜ್ಞಾನ ಹಾಗೂ ವಿಜ್ಞಾನದಲ್ಲಿ ತಲಾ 6 ವಿದ್ಯಾರ್ಥಿಗಳು 100ಕ್ಕೆ ನೂರು, ಇಂಗ್ಲಿಷ್ 4 ವಿದ್ಯಾರ್ಥಿಗಳು 100ಕ್ಕೆ ನೂರು, ಗಣಿತ 3 ವಿದ್ಯಾರ್ಥಿಗಳು 100ಕ್ಕೆ ನೂರು ಅಂಕ ಗಳಿಸಿದ್ದಾರೆ.

ಅಮಿತ್.ವಿ ವಿದ್ಯಾರ್ಥಿ 608 ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಅಮೃತ ಡಿ.ಎಸ್ 617, ಚಿನ್ಮಯ್ ಡಿ.ಎಂ ಹಾಗೂ ಲಕ್ಷ್ಮಿ.ಎಸ್ ತಲಾ 616, ಉಲ್ಲಾಸ್ ಎನ್.ಎಸ್ 615 ಅಂಕ ಗಳಿಸುವ ಮೂಲಕ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

ಅಮಿತ್.ವಿ
600/ 608

ಅಮೃತ ಡಿ.ಎಸ್
600/ 617

ಚಿನ್ಮಯ್ ಡಿ.ಎಂ
600/616

ಲಕ್ಷ್ಮಿ ಎಸ್
600/616

ಉಲ್ಲಾಸ್ ಎನ್.ಎಸ್
600/615

ಮಕ್ಕಳ ರಂಗಶಿಬಿರದ ಸಮಾರೋಪ ಸಮಾರಂಭ

ಶಿವಮೊಗ್ಗ: ಶಿವಮೊಗ್ಗ ರಂಗಾಯಣವು 2025ರ ಏಪ್ರಿಲ್ 12 ರಿಂದ ಮೇ4ರವರೆಗೆ ಚಿಣ್ಣರ ಸಿಹಿಮೊಗೆ -2025ರ ಹೆಸರಿನಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ರಂಗಶಿಬಿರದ ಸಮಾರೋಪ ಸಮಾರಂಭವನ್ನು ಮೇ3 ಸಂಜೆ ನಗರದ ಸುವರ್ಣ ಸಂಸ್ಕೃತಿ ಭವನದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಂಗಸಮಾಜದ ಸದಸ್ಯ ಮಹಾಂತೇಶ ಎಂ. ಗಜೇಂದ್ರಗಡ, ಶಿವಮೊಗ್ಗ ಪುರಸಭೆ ಮಾಜಿ ಸದಸ್ಯ ಹೆಚ್.ಸಿ. ಯೋಗೇಶ್, ಕಡೆಕೊಪ್ಪಲ ಪ್ರತಿಷ್ಠಾನದ ಆಡಳಿತ ನಿರ್ದೇಶಕ ಡಾ. ಕೆ. ಮಧುಸೂದನ ಇವರುಗಳು ಆಗಮಿಸಲಿರುವರು. ಮೈಸೂರಿನ ರಂಗ ಸಮಾಜದ ಸದಸ್ಯರು, ನಾಟಕಕಾರರು, ಸಾಹಿತಿಗಳೂ ಆದ ಡಾ. ರಾಜಪ್ಪ ದಳವಾಯಿರವರು ಸಮಾರೋಪ ನುಡಿಗಳನ್ನಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿವಮೊಗ್ಗ ರಂಗಾಯಣದ ನಿರ್ದೇಶಕ ಪ್ರಸನ್ನ ಡಿ.ಸಾಗರರವರು ವಹಿಸಲಿದ್ದಾರೆ. ಶಿವಮೊಗ್ಗ ರಂಗಾಯಣದ ಆಡಳಿತಾಧಿಕಾರಿ ಡಾ. ಶೈಲಜಾ ಎ.ಸಿ. ಹಾಗೂ ಶಿಬಿರದ ನಿರ್ದೇಶಕ ಡಾ. ವೆಂಕಟೇಶ್ವರ ಕೆ. ಇವರುಗಳು ಉಪಸ್ಥಿತರಿರುತ್ತಾರೆ. ಈ ದಿನ ಶಿಬಿರದ ಮಕ್ಕಳಿಂದ ಸಿದ್ದಗೊಂಡ ರಂಗಗೀತೆ, ಕೋಲಾಟ, ಕಂಸಾಳೆ ನೃತ್ಯ, ಮುಖಾಭಿನಯ, ಅಮ್ಮ ತಾಯಿ ಮತು ಉಸಿರ ನಾಟಕಗಳು ಪ್ರದರ್ಶನಗೊಳ್ಳಲಿದೆ.

ಜಿಲ್ಲೆಯ ಮೂವರು 625ಕ್ಕೆ 625 ಅಂಕಗಳೊಂದಿಗೆ ರಾಜ್ಯಕ್ಕೆ ಪ್ರಥಮ

ಶಿವಮೊಗ್ಗ ಜಿಲ್ಲೆಗೆ ನಾಲ್ಕನೇ ಸ್ಥಾನ

ಶಿವಮೊಗ್ಗ: ಕಳೆದ ಮಾರ್ಚ್, ಏಪ್ರಿಲ್‌ನಲ್ಲಿ ನಡೆದ ಎಸ್ ಎಸ್‌ಎಲ್‌ಸಿ ಪರೀಕ್ಷೆ-1ರ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಶಿವಮೊಗ್ಗ ಜಿಲ್ಲೆಗೆ ನಾಲ್ಕನೇ ಸ್ಥಾನ ಲಭ್ಯವಾಗಿದೆ.

ಜಿಲ್ಲೆಯ ಮೂವರು 625ಕ್ಕೆ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಪಡೆದುಕೊಂಡಿದ್ದಾರೆ. ರಾಜ್ಯದ 22 ವಿದ್ಯಾರ್ಥಿಗಳು 625ಕ್ಕೆ 625 ಅಂಕಗಳನ್ನು ಪಡೆದು ಪ್ರಥಮ ರ‍್ಯಾಂಕ್ ಪಡೆದಿದ್ದಾರೆ. ಅದರಲ್ಲಿ ನಗರದ ಪ್ರಿಯದರ್ಶಿನಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ನಮನ, ನಗರದ ರಾಮಕೃಷ್ಣ ಶಾಲೆಯ ನಿತ್ಯಾ ಎಂ. ಕುಲಕರ್ಣಿ ಹಾಗೂ ಆದಿಚುಂಚನಗಿರಿ ಸಂಯುಕ್ತ ಆಂಗ್ಲಮಾಧ್ಯಮ ಪ್ರೌಢಶಾಲೆಯ ಸಹಿಷ್ಣು ಎನ್. ಅವರು ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.

ಆದಿಚುಂಚನಗಿರಿ ಶಾಲೆಯ ಸಂಜನಾ ಎಸ್. 625ಕ್ಕೆ 624 ಅಂಕ ಪಡೆದು 2ನೇ ರ‍್ಯಾಂಕ್ ಪಡೆದಿದ್ದಾರೆ. ಸಾಂದೀಪಿನಿ ಶಾಲೆಯ ಹಿತಾ ಎಂ. 624 ಅಂಕ ಪಡೆದು ದ್ವಿತೀಯ ರ‍್ಯಾಂಕ್ ಪಡೆದಿದ್ದಾರೆ. ಶಿವಮೊಗ್ಗದ ಆಚಾರ್ಯ ಪ್ರೌಢಶಾಲೆಯ ಶಶಾಂಕ್ 624 ಅಂಕ ಪಡೆದು ದ್ವಿತೀಯ ರ‍್ಯಾಂಕ್ ಪಡೆದಿದ್ದಾರೆ. ನಗರದ ಪ್ರಿಯದರ್ಶಿನಿ ಶಾಲೆಗೆ ಶೇ. 100 ರಷ್ಟು ಫಲಿತಾಂಶ ಬಂದಿದೆ. ಶಾಲೆಯ 81 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ರಾಜ್ಯದಲ್ಲಿ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ.

ಸಹಿಷ್ಣು ಎನ್
625/ 625

ನಿತ್ಯಾ ಎಂ. ಕುಲಕರ್ಣಿ
625/ 625

ನಮನ
625/ 625

ಪರೀಕ್ಷೆ-1ರ ಫಲಿತಾಂಶದ ಸುಧಾರಿತ ಅಂಶಗಳು: 2024-25ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ-1 ರ ಫಲಿತಾಂಶವು ಹಿಂದಿನ ಫಲಿತಾಂಶಕ್ಕಿಂತ ಶೇಕಡ 8% ರಷ್ಟು ಸುಧಾರಣೆಯಾಗಿದೆ. ಒಟ್ಟು - 66.14% 2024-25ರ ಪರೀಕ್ಷೆ -1 ರಲ್ಲಿ ಫಲಿತಾಂಶ ಪಡೆದಿದ್ದಂತಹ ಶಾಲಾ ಅಭ್ಯರ್ಥಿಗಳಿಗೆ ಪರೀಕ್ಷೆ-2ಕ್ಕೆ ಶುಲ್ಕವನ್ನು ವಿನಾಯಿತಿ ನೀಡಲಾಗಿರುತ್ತದೆ. ಆದರೆ ಖಾಸಗಿ ಅಭ್ಯರ್ಥಿಗಳು, ಮರುಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು.

ಈ ಬಾರಿಯ ಉತ್ತೀರ್ಣರಾಗಿರುವ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.75ರಷ್ಟು ವಿದ್ಯಾರ್ಥಿಗಳು ಶೇ.60ಕ್ಕಿಂತ ಹೆಚ್ಚಿನ ಅಂಕಗಳೊಂದಿಗೆ ಪ್ರಥಮ ದರ್ಜೆ ಹಾಗೂ ಗಣ್ಯತೆಯೊಂದಿಗೆ ತೇರ್ಗಡೆಯಾಗಿರುತ್ತಾರೆ.

2024-25ನೇ ಸಾಲಿನಲ್ಲಿ 625ಕ್ಕೆ 625 ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ 22. ಕಳೆದ ವರ್ಷ 02 ವಿದ್ಯಾರ್ಥಿಗಳು ಮಾತ್ರ 625ಕ್ಕೆ 625 ಅಂಕಗಳನ್ನು ಪಡೆದಿದ್ದರು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು 2025 ಎಸ್.ಎಸ್.ಎಲ್.ಸಿ. ಪರೀಕ್ಷೆ-1 ರ ಸ್ಕ್ಯಾನ್ ಪ್ರತಿ, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ನಾಳೆ ನೀಟ್ ಪರೀಕ್ಷೆ : ಸಕಲ ಸಿದ್ಧತೆಗೆ ಎಡಿಸಿ ಸೂಚನೆ

ಶಿವಮೊಗ್ಗ: ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯಿಂದ ನ್ಯಾಷನಲ್ ಎಲಿಜಿಬಿಲಿಟಿ ಕಮ್ ಎಂಟ್ರಾನ್ಸ್ ಟೆಸ್ಟ್ (ನೀಟ್ -(ಯುಜಿ)-25) ಪರೀಕ್ಷೆಯನ್ನು ನಗರದಲ್ಲಿ ಮೇ4 ರಂದು ನಡೆಸಲಾಗುತ್ತಿದ್ದು, ಶಾಂತಿಯುತವಾಗಿ ಪರೀಕ್ಷೆ ನಡೆಯಲು ಅಗತ್ಯವಾದ ಸಕಲ ಸಿದ್ದತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಸಿದ್ದಲಿಂಗ ರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನೀಟ್ ಯುಜಿ -25 ಪರೀಕ್ಷೆ ಕುರಿತು ಚರ್ಚಿಸಲು ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿವಮೊಗ್ಗ ನಗರದ ಒಟ್ಟು 12 ಪರೀಕ್ಷಾ ಕೇಂದ್ರಗಳಲ್ಲಿ ಮೇ 4 ರ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆವರೆಗೆ ಪರೀಕ್ಷೆ ನಡೆಯಲಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಪರೀಕ್ಷಾ ಅಕ್ರಮ ತಡೆಯಲು ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷೆಯನ್ನು ಪಾರದರ್ಶಕವಾಗಿ, ಯಾವುದೇ ಅವ್ಯವಹಾರಗಳಿಗೆ ಆಸ್ಪದ ನೀಡದಂತೆ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಮುಂಜಾಗ್ರತಾ ಕ್ರಮವಾಗಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 20 ಮೀ.ಫಾಲಸಯೆವರೆಗೆ ಪರೀಕ್ಷಾ ದಿನದಂದು ಮಧ್ಯಾಹ್ನ 1 ಗಂಟೆಯಿಂದ ಸಂಜೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ರ ಕಲಂ 163 ರನ್ವಯ ಪ್ರತಿಬಂಧಾಜ್ಞೆಯನ್ನು ಜಾರಿಗೊಳಿಸಿ ಆದೇಶಿಸಲಾಗಿದೆ.

ಸಭೆಯಲ್ಲಿ ಎಎಸ್‌ಪಿ ಕಾರ್ಯಪ್ಪ, ಪಾಲಿಕೆ ಆಯುಕ್ತರಾದ ಡಾ.ಕವಿತಾ ಯೋಗಪ್ಪನವರ್, ಡಿಡಿಪಿಯು ಚಂದ್ರಪ್ಪ ಗುಂಡಪಲ್ಲಿ, ಪರೀಕ್ಷಾ ಸಂಯೋಜಕ ಸುಬ್ರಹ್ಮಣ್ಯ ಶರ್ಮ, ಕಾಲೇಜುಗಳ ಪ್ರಾಂಶುಪಾಲರು, ಪರೀಕ್ಷಾ ನಿಯೋಜಿತ ಅಧಿಕಾರಿಗಳು ಪಾಲ್ಗೊಂಡಿದ್ದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿವಮೊಗ್ಗ ಸೀಸನ್-5 ಫೈನಲ್ ಈವೆಂಟ್ ಇಂದಿನಿಂದ

ಶಿವಮೊಗ್ಗ: ಸ್ಟೆಪ್ ಹೋಲ್ಡರ್ಸ್ ಶಿವಮೊಗ್ಗ, ನಿರಂತರ ಟ್ರಸ್ಟ್ ಹಾಗೂ ಡಾ. ಶರತ್ ಮರಿಯಪ್ಪ ಫೌಂಡೇಷನ್ ವತಿಯಿಂದ ಮೇ 3 ಮತ್ತು 4ರಂದು ಸಂಜೆ ನಗರದ ಅಂಬೇಡ್ಕರ್ ಭವನದಲ್ಲಿ ಶಿವಮೊಗ್ಗದಲ್ಲೇ ಪ್ರಥಮ ಬಾರಿಗೆ ವಾಯ್ಸ್ ಆಫ್ ಶಿವಮೊಗ್ಗ ಸೀಸನ್-5 ಫೈನಲ್ ಇವೆಂಟ್ ಮತ್ತು ಶಿವಮೊಗ್ಗದ ದಂಪತಿಗಳಿಗೆ ಸೂಪರ್ ಜೋಡಿಗಳು ಕಾರ್ಯಕ್ರಮ ನಡೆಯಲಿದೆ ಎಂದು ಸ್ಟೆಪ್ ಹೋಲ್ಡರ್ಸ್‌ನ ಅರುಣ್ ರಾಜ್ ಶೆಟ್ಟಿ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಈ ಎರಡೂ ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದೆ. ಮೇ 3ರಂದು ಸಂಜೆ ವಾಯ್ಸ್ ಆಫ್ ಶಿವಮೊಗ್ಗ ಸೀಸನ್ -5 ರ ಸ್ಪರ್ಧೆ ಹಾಗೂ ಸೂಪರ್ ಜೋಡಿಗಳು ಕಾರ್ಯಕ್ರಮ ನಡೆಯಲಿದ್ದು 50 ದಂಪತಿಗಳಿಗೆ ಅವಕಾಶವಿದೆ. ವಿಜೇತರಿಗೆ ಸೂಪರ್ ಜೋಡಿ ಟೈಟಲ್ ಮತ್ತು ಟ್ರೋಫಿ ಹಾಗೂ ಸೀರೆಗಳನ್ನು ನೀಡಲಾಗುವುದು ಎಂದರು. ಮೇ 4ರಂದು ಸ್ಟೆಪ್ ಹೋಲ್ಡರ್ಸ್ ಅನಾವರಣಗೊಳ್ಳಲಿದ್ದು, ಮಕ್ಕಳಿಂದ ಡ್ಯಾನ್ಸ್ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 76762 36690, 96630 40830 ಸಂಪರ್ಕಿಸುವಂತೆ ಕೋರಲಾಗಿದೆ.

ಜನಗಣತಿ ವರದಿ ಬಿಡುಗಡೆಗೆ ಈಶ್ವರಪ್ಪ ಆಗ್ರಹ

ಶಿವಮೊಗ್ಗ: ರಾಜ್ಯ ಸರಕಾರಕ್ಕೆ ತಾಕತ್ ಇದ್ದರೆ ಕೂಡಲೇ ಜಾತಿ ಜನಗಣತಿ ವರದಿ ಬಿಡುಗಡೆ ಮಾಡಬೇಕು ಎಂದು ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಾತಿಗಣತಿಗೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಚರ್ಚೆಯಾಗುತ್ತಿದೆ. ರಾಜಕಾರಣವೇ ಹೆಚ್ಚು ಚರ್ಚೆಯಾಗುತ್ತಿರುವುದರಿಂದ ಅದು ನಿಲ್ಲಬೇಕಾಗಿದೆ. ಇದಕ್ಕಾಗಿಯೇ ಸುಮಾರು 168 ಕೋಟಿ ರು. ಖರ್ಚಾಗಿದೆ. 7 ವರ್ಷಗಳೇ ಹಿಂದೆಯೇ ವರದಿ ಬಿಡುಗಡೆಯಾಗಬೇಕಿತ್ತು. ಇನ್ನೂ ಬಿಡುಗಡೆಯಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿ ಬಿಡುಗಡೆ ಮಾಡಲು ಮೀನಮೇಷ ಎಣಿಸುತ್ತಿದ್ದಾರೆ ಎಂದು ದೂರಿದರು.

ಜಾತಿ ಜನಗಣತಿ ಬಿಡುಗಡೆ ಮಾಡಲು ಕಾಂಗ್ರೆಸ್ ಪಕ್ಷದವರೇ ಕಾಲೆಳೆಯುತ್ತಿದ್ದಾರೆ. ಮತ್ತೊಂದು ಕಡೆ ಲಿಂಗಾಯತ ಮತ್ತು ಒಕ್ಕಲಿಗ ಸಮಾಜದವರು ನಾವು ಅದನ್ನು ನೋಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎನ್ನುತ್ತಿದ್ದಾರೆ. ಮುಖ್ಯಮಂತ್ರಿಗಳಿಗೆ ಇದು ಅರ್ಥವಾಗುತ್ತಿಲ್ಲವೇ? ಅವರು ಉತ್ತರ ಪೌರುಷ ತೋರಿಸುತ್ತಿದ್ದಾರೆ. ಇದಿನ್ನೂ ಕ್ಯಾಬಿನೆಟ್ ಚರ್ಚೆಗೇ ಬಂದಿಲ್ಲ, ಇದಕ್ಕೆ ಮುಕ್ತಿ ಯಾವಾಗ? ಮೊದಲು ಕ್ಯಾಬಿನೆಟ್ ಗೆ ತನ್ನಿ. ಆಮೇಲೆ ಚರ್ಚೆಗೆ ಬಿಡಿ. ಬೇಕಾದರೆ ತಿದ್ದುಪಡಿ ಮಾಡಿಕೊಳ್ಳಬಹುದು. ಇದಕ್ಕೆ ಒಂದು ಡೆಡ್ ಲೈನ್ ಅಗತ್ಯವಿದೆ ಎಂದರು.

ಮುಸಲ್ಮಾನರ ಗೂಂಡಾತನ ಹೆಚ್ಚಾಗಿದೆ: ಮುಸಲ್ಮಾನರ ಗೂಂಡಾಗಿರಿ ಹೆಚ್ಚಾಗತೊಡಗಿದೆ. ಇವರಿಗೆ ರಾಜ್ಯ ಸರಕಾರದ ಸಹಾಯ ಇದ್ದಂತೆ ಕಾಣುತ್ತದೆ. ಕೊಲೆಗಳಿಗೆ ಇಳಿದಿದ್ದಾರೆ. ಬೀದಿ ಬೀದಿಗಳಲ್ಲಿ ಮಚ್ಚು, ತಲವಾರ್, ಪಿಸ್ತೂಲ್ ಬಳಸುತ್ತಿದ್ದಾರೆ. ಮೊನ್ನೆ ಶಿವಮೊಗ್ಗದ ಟಿಪ್ಪುನಗರದಲ್ಲಿ ಇರ್ಫಾನ್ ಎಂಬ ವ್ಯಕ್ತಿ ತನ್ನ ಒರಿಜಿನಲ್ ಗನ್ ನಿಂದ ಗುಂಡು ಹಾರಿಸಿದ್ದಾನೆ. ಈ ಬಗ್ಗೆ ಎಸ್ಪಿಯವರ ಜೊತೆ ಕೂಡ ನಾನು ಮಾತನಾಡುತ್ತೇನೆ. ಅವರು ಆತ ರೌಡಿಶೀಟರ್. ಕ್ರಮ ತೆಗೆದುಕೊಳ್ಳುತ್ತೇನೆ ಎಂದಿದ್ದಾರೆ ಎಂದು ಈಶ್ವರಪ್ಪ ಹೇಳಿದರು.

ಡಿಸಿ ಕಚೇರಿ ಎದುರಿನ ಆಟದ ಮೈದಾನದಲ್ಲಿ ಪ್ರತಿಭಟನೆಗೆ ಅವಕಾಶ ಇಲ್ಲ: ವಕ್ಫ್ ಮಸೂದೆ ವಿರುದ್ಧ ಯಾವ ಪ್ರತಿಭಟನೆಗಳನ್ನು ಮಾಡಬಾರದು ಎಂದು ಹೈಕೋರ್ಟ್ ಹೇಳಿದೆ. ಈ ಮಸೂದೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿರುವುದರಿಂದ ಅದರ ಕಾನೂನುಬದ್ಧತೆಯನ್ನು ಕೋರ್ಟ್ ನಿರ್ಧರಿಸುತ್ತದೆ ಎಂಬುದನ್ನು ಕರ್ನಾಟಕ ಸರಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ನ್ಯಾಯಾಲಯ ಹೇಳಿದ್ದರೂ, ಪ್ರತಿಭಟನೆಗಳಿಗೆ ಸರಕಾರ ಅವಕಾಶ ಕೊಡುತ್ತಿರುವುದು ಸರಿಯಲ್ಲ ಎಂದು ಈಶ್ವರಪ್ಪ ಹೇಳಿದರು. ನ್ಯಾಯಾಲಯದ ಅನುಮತಿಯಂತೆ ಜಿಲ್ಲಾಧಿಕಾರಿ ಕಚೇರಿ ಎದುರು ಇರುವ ಆಟದ ಮೈದಾನದಲ್ಲಿ ಯಾವುದೇ ರೀತಿಯ ಪ್ರತಿಭಟನೆ ಮಾಡಲು ಅವಕಾಶವಿಲ್ಲ. ಜಿಲ್ಲಾಧಿಕಾರಿ ಮತ್ತು ಎಸ್ಪಿ ಇದಕ್ಕೆ ಅವಕಾಶ ಕೊಡಬಾರದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಇ. ವಿಶ್ವಾಸ್, ಜಾಧವ್, ಶ್ರೀಕಾಂತ್, ಬಾಲು, ಗೋವಿಂದರಾಜು, ಶಿವಾಜಿ, ಶಿವು, ರಾಜು, ಮುಂತಾದವರಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಸ್. ಈಶ್ವರಪ್ಪ ಮಾತನಾಡಿದರು.

> ಮಂಗಳೂರಿನಲ್ಲಿ ಹಿಂದೂ ಯುವಕನ ಕೊಲೆಯಾಗಿದೆ. ಅಲ್ಲಿ ಗಲಭೆಗಳಿಗೆ ಲೆಕ್ಕವೇ ಇಲ್ಲ. ಸುಹಾಸ್ ಶೆಟ್ಟಿಯನ್ನು ಮನಸ್ಸಿಗೆ ಬಂದಂತೆ ಕೊಚ್ಚಿ ಹಾಕಿದ್ದಾರೆ. ಅಲ್ಲಿ ಪೊಲೀಸರು ಇಲ್ಲವೇ? ಪೊಲೀಸ್ ಇಲಾಖೆಯ ಭಯವೇ ಇಲ್ಲವೇ? ಇದು ಪೊಲೀಸ್ ವೈಫಲ್ಯವಲ್ಲದೇ ಮತ್ತೇನು? ರಾಜ್ಯ ಸರಕಾರ ನಿದ್ದೆ ಮಾಡುತ್ತಿದೆಯೇ?.
>
> -ಕೆ.ಎಸ್. ಈಶ್ವರಪ್ಪ,
> ರಾಷ್ಟ್ರಭಕ್ತರ ಬಳಗದ ಸಂಚಾಲಕ

ಪರಂಪರೆಯ ಭದ್ರಪಡಿಸಿದ ಶಂಕರಾಚಾರ್ಯರು

ಶಿವಮೊಗ್ಗ: ಶಂಕರಾಚಾರ್ಯರು ಸದಾ ಪ್ರಾತ ಸ್ಮರಣೀಯರು. ದೇಶದ ಉದ್ದಗಲಕ್ಕೂ ಸಂಚರಿಸಿ ತತ್ವಗಳನ್ನು, ಸಂಸ್ಕೃತಿಯನ್ನು ಪಸರಿಸಿ ನಮ್ಮ ಪರಂಪರೆಯ ನೆಲೆಗಟ್ಟನ್ನು ಭದ್ರಪಡಿಸಿದ್ದಾರೆ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ನುಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಕುವೆಂಪು ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಂಕರಾಚಾರ್ಯರ ಮಹತ್ವದ ಕಾರ್ಯದಿಂದಾಗಿ ಧರ್ಮ ಉಳಿದಿದೆ. ದೇಶದ ಉದ್ದಗಲ ಸಂಚರಿಸಿ ಜೀವನಕ್ಕೆ ಅಗತ್ಯವಾದ ತತ್ವಗಳನ್ನು ಉಪದೇಶಿಸಿದ್ದಾರೆ. ಐದು ಕಡೆ ಪೀಠ ಸ್ಥಾಪನೆ ಮಾಡಿರುವ ಇವರು ಶ್ರೇಷ್ಠ ಪರಂಪರೆಯ ರೂವಾರಿ. ಸಾಂಸ್ಕೃತಿಕ ಪರಂಪರೆಯ ನೆಲೆಗಟ್ಟು ಭದ್ರ ಆಗಿರುವುವುದು ಇವರಿಂದ. ನಾವೆಲ್ಲ ಸೇರಿ ಅವರ ಮಹತ್ ಕಾರ್ಯಗಳನ್ನು ಮುಂದೆ ತೆಗೆದುಕೊಂಡು ಹೋಗಬೇಕು. ಅವರ ವಿಚಾರಗಳನ್ನು ಎಲ್ಲರಿಗೂ ತಿಳಿಸಬೇಕು. ಇಂತಹ ಮಹಾ ದಾರ್ಶನಿಕರನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸದೇ ಎಲ್ಲರೂ ಸೇರಿ ಜಯಂತಿ ಆಚರಿಸೋಣ ಎಂದು ಕರೆ ನೀಡಿದರು.

ಶಿವಮೊಗ್ಗದ ಪ್ರವಚನಕಾರ .ಎಸ್. ನಟೇಶ್ ಮಾತನಾಡಿ, ಶಂಕರಾಚಾರ್ಯರು ನಮ್ಮೆಲ್ಲರಿಗೆ ಜಾಗೃತಿಯ ಮಾತುಗಳನ್ನು ನೀಡಿದ್ದಾರೆ. ಅತ್ಯಂತ ಸರಳವಾಗಿ ಜೀವನದ ತತ್ವಗಳನ್ನು, ವಿಚಾರಗಳನ್ನು ತುಂಬಿ ಕಟ್ಟಿಕೊಟ್ಟಿದ್ದಾರೆ. ಕೇವಲ 32 ವರ್ಷಕ್ಕೆ ದೇಹತ್ಯಾಗ ಮಾಡಿದ ಅವರು ಅಷ್ಟು ಚಿಕ್ಕವಯಸ್ಸಿನಲ್ಲೇ ದೇಶಾದ್ಯಂತ ಸಂಚರಿಸಿ ತತ್ವ ಬೋಧನೆ ಮಾಡಿದ್ದು, ಮಾನವ ಕುಲಕ್ಕಾಗಿ ಜೀವನ ತ್ಯಾಗ ಮಾಡಿದ್ದಾರೆ ಎಂದರು.

ವಿಧಾನ ಪರಿಷತ್ ಶಾಸಕಧನಂಜಯ ಸರ್ಜಿ ಮಾತನಾಡಿದರು. ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಕೆ.ಸಿ.ನಟರಾಜ ಭಾಗವತ್, ಶೃಂಗೇರಿ ಶಂಕರಮಠದ ಧರ್ಮಾಧಿಕಾರಿ ಡಾ.ಪಿ.ನಾರಾಯಣ್, ಭಜನಾ ಪರಿಷತ್ ಅಧ್ಯಕ್ಷ ಸಂದೇಶ್ ಉಪಾಧ್ಯ, ಸಮಾಜದ ಮುಖಂಡರು, ಪಾಲ್ಗೊಂಡಿದ್ದರು.

ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ ಶಾಸಕ ಎಸ್.ಎನ್. ಚನ್ನಬಸಪ್ಪ ಉದ್ಘಾಟಿಸಿದರು.

ಸಮಾಚಾರ ಸಣ್ಣದಲ್ಲ

ಸರಕಾರಿ ಶಾಲೆಯ ವಿದ್ಯಾರ್ಥಿನಿ ಸಾಧನೆ



ಬಾಗಲಕೋಟೆ: ಜಿಲ್ಲೆಯ ಬೀಳಗಿ ತಾಲೂಕಿನ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಶಫಾ ನಿಂಬಾಳ್ಕರ್ 625ಕ್ಕೆ 624 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾಳೆ. ಇಂಗ್ಲಿಷ್ ವಿಷಯಕ್ಕೆ 124, ಕನ್ನಡ, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಕ್ಕೆ ತಲಾ 100 ಅಂಕ ಪಡೆದುಕೊಂಡಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಲ್ಲಾ ಪಂಚಾಯತ ಸಿಇಒ ಶಶಿಧರ ಕುರೇರ, ಉಪನಿರ್ದೇಶಕ ಎಚ್.ಜಿ.ಮಿರ್ಜಿ, ಎಸ್ಸೆಸ್ಸೆಲ್ಸಿ ಪರೀಕ್ಷಾ ನೋಡಲ್ ಅಧಿಕಾರಿ ಎಸ್.ಎಸ್.ಹಾಲವರ ಅಭಿನಂದನೆ ಸಲ್ಲಿಸಿದ್ದಾರೆ.

ಸಾಧನೆಗೆ ತಂದೆ ತಾಯಿ ಪ್ರೋತ್ಸಾಹವೇ ಕಾರಣ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರದ ಅಗಲಗುರ್ಕಿಯ ಎಸ್. ಬಿಜಿಎಸ್‌ಶಾಲೆ ವಿದ್ಯಾರ್ಥಿನಿ ಪೂರ್ವಿ 625ಕ್ಕೆ 624 ಪಡೆದುವ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿದ್ದಾಳೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ 625ಕ್ಕೆ 624 ಅಂಕಗಳ ಸಾಧನೆ ನನಗೆ ತೃಪ್ತಿತಂದಿದೆ. ವಿಜ್ಞಾನ ವಿಷಯದಲ್ಲಿ ಒಂದು ಅಂಕ ಕಡಿಮೆ ಬಂದಿದ್ದು ಕೊಂಚ ಬೇಸರ ಬಿಟ್ಟಂತೆ ಉಳಿದೆಲ್ಲಾ ವಿಷಯಗಳಲ್ಲಿ 100ಕ್ಕೆ 100ರ ಸಾಧನೆ ಮಾಡಲಾಗಿದೆ. ನನ್ನ ಸಾಧನೆಗೆ ಗುರುಗಳು, ತಂದೆ ತಾಯಿ ಪ್ರೋತ್ಸಾಹವೇ ಕಾರಣ.ಸಮಯವನ್ನು ವ್ಯರ್ಥ ಮಾಡದೆ ಓದಿದ ಪರಿಣಾಮ ಉತ್ತಮ ಫಲಿತಾಂಶ ಬಂದಿದೆ.ವಿಜ್ಞಾನದಲ್ಲಿ ಮರುಮೌಲ್ಯಮಾಪನಕ್ಕೆ ಹಾಕುತ್ತಿದ್ದೇನೆ.ನನಗೆ ಇದರಲ್ಲಿ ಕೂಡ 100 ಕ್ಕೆ 100 ಅಂಕ ಬರುವ ವಿಶ್ವಾಸವಿದೆ ಎಂದು ತಿಳಿಸಿದ್ದಾಳೆ.

ಸಾಧನೆ ಮಾಡುವ ಹಂಬಲವೇ ಪ್ರೇರಣೆ

ಚಿಕ್ಕಬಳ್ಳಾಪುರ: ಅಗಲಗುರ್ಕಿಯ ಬಿಜಿಎಸ್ ಶಾಲೆಯ ತೇಜಸ್ವಿನಿ.ಕೆ.ಆರ್. ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಗಳಿಸಿದ್ದಾಳೆ. ಬೆಳಗಿನಿಂದ ಶಾಲೆಯಲ್ಲಿ ಓದಿದ್ದನ್ನು ಬಿಟ್ಟು ಮನೆಗೆ ಬಂದ ಮೇಲೆ, ಮನೆಯಲ್ಲಿ ಕೂಡ ರಾತ್ರಿ 12ರ ತನಕ ಓದುತ್ತಿದ್ದೆ.ಏನಾದರೂ ಸಾಧನೆ ಮಾಡಬೇಕು ಎಂಬ ಹಂಬಲವೇ ನನ್ನ 624 ಅಂಕಗಳ ಸಾಧನೆಗೆ ಕಾರಣವಾಗಿದೆ.ಗುರುಗಳ ಪ್ರೋತ್ಸಾಹ ತುಂಬಾನೇ ಇದೆ.ಅಪ್ಪ ಅಮ್ಮ ಸ್ನೇಹಿತರ ಸಹಕಾರ ಬೆಂಬಲವನ್ನು ಸ್ಮರಿಸುತ್ತೇನೆ.ಕಷ್ಟಪಟ್ಟರೆ ಪ್ರತಿಫಲ ಇದೆ ಎಂಬ ಮಾತು ಸತ್ಯ ಎಂದು ಪ್ರತಿಕ್ರಿಯಿಸಿದ್ದಾಳೆ.

ಶಿಕ್ಷಕರ ಮಾರ್ಗದರ್ಶನ ನನ್ನ ಸಾಧನೆಗೆ ಕಾರಣ

ಚಿಕ್ಕಬಳ್ಳಾಪುರ: ಅಗಲಗುರ್ಕಿಯ ಬಿಜಿಎಸ್ ಶಾಲೆಯ ವಿದ್ಯಾರ್ಥಿ ಭುವನ್ ಗಣೇಶ್ 625ಕ್ಕೆ 624 ಅಂಕ ಪಡೆದಿದ್ದಾನೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಚೆನ್ನಾಗಿ ಬಂದಿದೆ. ನಮ್ಮ ಬಿಜಿಎಸ್ ಶಾಲೆಯ ಶಿಕ್ಷಕರ ಮಾರ್ಗದರ್ಶನ ತುಂಬಾ ಚೆನ್ನಾಗಿದೆ.ಅರ್ಧ ವರ್ಷ ಜ್ಞಾನ ದೃಷ್ಟಿಯಿಂದ ಓದಿಸಿದರೆ, ಉಳಿದರ್ಧ ವರ್ಷ ಪರೀಕ್ಷೆಯ ದೃಷ್ಟಿಯಿಂದ ಓದಿಸಿದ್ದಾರೆ.10 ವರ್ಷದ ಪ್ರಶ್ನೆಪತ್ರಿಕೆ ನಮಗೆ ಅರ್ಥ ಮಾಡಿಸಿದ್ದಾರೆ. ಪರಿಣಾಮ 624 ಅಂಕಗಳಿಸಲು ಆಗಿದೆ. ವಿಜ್ಞಾನದಲ್ಲಿ ಒಂದು ಅಂಕ ಕಡಿಮೆ ಬಂದಿದ್ದು ಬೇಸರ ತಂದಿದೆ ಎಂದು ಹೇಳಿದ್ದಾನೆ.

ರೈತನ ಮಗಳು ರಾಜ್ಯಕ್ಕೆ ಟಾಪರ್

ಮಧುಗಿರಿ: ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಪಟ್ಟಣದ ಚಿರೆಕ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಯಶ್ವಿತಾ ರೆಡ್ಡಿ ಕೆ.ವಿ. 625 ಕ್ಕೆ 625 ಅಂಕಗಳಿಸಿ ರಾಜ್ಯಕ್ಕೆ ಟಾಪರ್ ಆಗಿದ್ದಾರೆ. ರೈತ ದಂಪತಿಗಳಾದ ಬಾಬುರೆಡ್ಡಿ ಹಾಗೂ ಸಂಧ್ಯಾರೆಡ್ಡಿ ಅವರ ಮಗಳಾದ ಯಶ್ವಿತಾ ವೈದ್ಯಳಾಗಬೇಕೆಂಬ ಬಯಕೆ ವ್ಯಕ್ತಪಡಿಸಿದ್ದಾಳೆ. ಪೋಷಕರು ಹಾಗೂ ಶಿಕ್ಷಕರ ಮಾರ್ಗದರ್ಶನದಲ್ಲಿ ಉತ್ತಮ ಸಾಧನೆ ಮಾಡಲು ಅನುಕೂಲವಾಯಿತು. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ದೇಶ ಸೇವೆ ಮಾಡಬೇಕೆಂಬ ಆಸೆಯಿದೆ ಎಂದು ಹೇಳಿದ್ದಾರೆ.

{ಯು.ಟಿ.ಖಾದರ್} ಸಭಾಧ್ಯಕ್ಷ

ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಕ್ಕೆ ಸಂತಸವಾಗಿದೆ. ಇದಕ್ಕಾಗಿ ಶ್ರಮಿಸಿದ ಹತ್ತನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ, ಶಿಕ್ಷಕ-ಶಿಕ್ಷಕಿಯರಿಗೆ, ಪೋಷಕರಿಗೆ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುವೆ.

ದಕ ಜಿಲ್ಲೆಯ 7 ವಿದ್ಯಾರ್ಥಿಗಳಿಗೆ 625ಕ್ಕೆ ತಲಾ 624 ಅಂಕ

ರಾಜ್ಯಕ್ಕೆ ಪ್ರಥಮ ದ.ಕ.ಜಿಲ್ಲೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಏಳು ಮಂದಿ ವಿದ್ಯಾರ್ಥಿಗಳು ಎಸೆಸೆಲ್ಸಿಯಲ್ಲಿ ಪರೀಕ್ಷೆಯಲ್ಲಿ ತಲಾ 624 ಅಂಕಗಳನ್ನು ಗಳಿಸಿದ್ದು, ರಾಜ್ಯದಲ್ಲಿ ದ್ವಿತೀಯ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಸುಳ್ಯ ಜೂನಿಯರ್ ಕಾಲೇಜಿನ ಸ್ರುಜನಾದಿತ್ಯ ಶೀಲಾ ಕೆ., ಮಂಗಳೂರು ಡೊಂಗರಕೇರಿ ಕೆನರಾ ಹೈಸ್ಕೂಲ್‌ನ ಶ್ರೀಲಕ್ಷ್ಮಿ ಬಿ. ಪೈ, ಪುತ್ತೂರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಚಿನ್ಮಯಿ ಎಲ್., ಸುಳ್ಯದ ಭಗವಾನ್ ಸತ್ಯಸಾಯಿ ಎಚ್‌ಎಸ್‌ಶಾಲೆಯ ಕುನಾಲ್ ರವಿತೇಜ್, ಪುತ್ತೂರು ಕಾಣಿಯೂರಿನ ಪ್ರಗತಿ ಹೈಸ್ಕೂಲ್‌ನ ಹಂಸಿಕಾ, ಸುಳ್ಯ ಬ್ಲೆಸ್ಡ್ ಕುರಿಯಾಕೋಸ್ ಹೈಸ್ಕೂಲ್‌ನ ಕೆ.ಜಿ. ಚಿರಸ್ವಿ, ಮೂಡಬಿದ್ರೆಯ ಎಕ್ಸಲೆಂಟ್ ಆಂಗ್ಲ ಮಾಧ್ಯಮ ಹೈಸ್ಕೂಲ್‌ನ ಸಾನ್ನಿಧ್ಯ ರಾವ್ ತಲಾ 624 ಅಂಕಗಳನ್ನು ಗಳಿಸಿದ್ದಾರೆ.

148 ಶಾಲೆಗಳಿಗೆ ಪ್ರತಿ ಶತ ಫಲಿತಾಂಶ:

ಎಸೆಸೆಲ್ಸಿ ಪರೀಕ್ಷೆಯಲ್ಲಿ ದ.ಕ. ಜಿಲ್ಲೆಯ ಒಟ್ಟು 148 ಶಾಲೆಗಳು ಶೇ. 100 ಫಲಿತಾಂಶ ದಾಖಲಿಸಿವೆ. ಬಂಟ್ವಾಳ ಮತ್ತು ಮಂಗಳೂರು ದಕ್ಷಿಣದ ತಲಾ 22 ಶಾಲೆಗಳು, ಬೆಳ್ತಂಗಡಿ, ಮಂಗಳೂರು ಉತ್ತರದ ತಲಾ 27 ಶಾಲೆಗಳು, ಮೂಡಬಿದಿರೆಯ 8, ಪುತ್ತೂರಿನ 29, ಸುಳ್ಯದ 13 ಶಾಲೆಗಳು ಶೇ. 100 ಫಲಿತಾಂಶ ದಾಖಲಿಸಿವೆ.

ಸರಕಾರಿ ಶಾಲೆಗಳಿಗೆ ಸಂಬಂಧಿಸಿ ದ.ಕ. ಜಿಲ್ಲೆಯಲ್ಲಿ ಶೇ 87.56 ಫಲಿತಾಂಶ ದಾಖಲಾಗಿದೆ. ಸರಕಾರಿ ಶಾಲೆಗಳಿಂದ ಪರೀಕ್ಷೆ ಬರೆದ ಒಟ್ಟು 8507 ವಿದ್ಯಾರ್ಥಿಗಳಲ್ಲಿ 7449 ವಿದ್ಯಾರ್ಥಿಗಳು ಉತ್ತೀರ್ಣರಾ ಗಿದ್ದಾರೆ. ಬಂಟ್ವಾಳದಲ್ಲಿ ಶೇ. 84.27, ಬೆಳ್ತಂಗಡಿಯಲ್ಲಿ ಶೇ. 92.67, ಮಂಗಳೂರು ಉತ್ತರದಲ್ಲಿ ಶೇ. 86.23, ಮಂಗಳೂರು ದಕ್ಷಿಣದಲ್ಲಿ ಶೇ. 82.06, ಮೂಡಬಿದ್ರೆಯಲ್ಲಿ ಶೇ. 87.46, ಪುತ್ತೂರಿನಲ್ಲಿ ಶೇ. 90.87 ಹಾಗೂ ಸುಳ್ಯದ ಸರಕಾರಿ ಶಾಲೆಗಳಲ್ಲಿ ಶೇ. 87.45 ಫಲಿತಾಂಶ ದಾಖಲಾಗಿದೆ.

ಕಾರ್ಕಳ ತಾಲೂಕಿನ ಜ್ಞಾನಸುಧಾ ಪಿಯು ಕಾಲೇಜಿನ ಸ್ವಸ್ತಿ ಕಾಮತ್ ಅವರು ಅವಿಭಜಿತ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ರಾಜ್ಯಕ್ಕೆ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಮತ್ತೆ ಅಗ್ರ ಸ್ಥಾನ

ಮಂಗಳೂರು: ಎಸೆಸೆಲ್ಸಿ ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಶೇ. 91.12 ಫಲಿತಾಂಶದೊಂದಿಗೆ ಮತ್ತೆ ಅಗ್ರ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಕಳೆದ ವರ್ಷದ ಫಲಿತಾಂಶದಲ್ಲಿ 2ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ ಮೊದಲ ಸ್ಥಾನಕ್ಕೇರಿದೆ. ಕಳೆದ ವರ್ಷ ಹೊರತುಪಡಿಸಿ ಹಿಂದಿನ ಕೆಲ ವರ್ಷಗಳಲ್ಲಿ ಎಸೆಸೆಲ್ಸಿ ಪರೀಕ್ಷೆಯಲ್ಲಿ ಹಿಂದುಳಿದಿದ್ದ ದ.ಕ. ಜಿಲ್ಲೆ ಕಳೆದ ವರ್ಷದಿಂದ ಮತ್ತೆ ಚೇತರಿಸಿಕೊಂಡು, ಈ ವರ್ಷ ಮತ್ತೆ ಟಾಪ್ 1 ಸ್ಥಾನವನ್ನು ಪಡೆಯುವಲ್ಲಿ ಸಫಲವಾಗಿದೆ.

ಅನುದಾನಿತ ಶಾಲೆಗಳಿಗೆ ಸಂಬಂಧಿಸಿ ಜಿಲ್ಲೆಯಲ್ಲಿ ಶೇ. 89.76 ಫಲಿತಾಂಶ ದಾಖಲಾಗಿದೆ. ಅನುದಾನ ರಹಿತ ಶಾಲೆಗಳಿಂದ ಒಟ್ಟು 7360 ವಿದ್ಯಾರ್ಥಿಗಳು ಎಸೆಸೆಲ್ಸಿ ಪರೀಕ್ಷೆ ಬರೆದಿದ್ದರೆ, 6849 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಬಂಟ್ವಾಳದಲ್ಲಿ ಶೇ. 85.02, ಬೆಳ್ತಂಗಡಿ ಶೇ. 88.17, ಮಂಗಳೂರು ಉತ್ತರ ಶೇ. 90.78, ಮಂಗಳೂರು ದಕ್ಷಿಣ ಶೇ. 90.05, ಮೂಡಬಿದ್ರೆಯಲ್ಲಿ ಶೇ. 87.07, ಪುತ್ತೂರಿನಲ್ಲಿ ಶೇ. 93.29, ಸುಳ್ಯದಲ್ಲಿ ಶೇ. 91.91 ಫಲಿತಾಂಶ ದಾಖಲಾಗಿದೆ.

ಅನುದಾನರಹಿತ ಶಾಲೆಗಳಲ್ಲಿ ಜಿಲ್ಲೆಯಲ್ಲಿ ಶೇ. 94.59 ಫಲಿತಾಂಶ ದಾಖಲಾಗಿದ್ದು, ಪರೀಕ್ಷೆ ಬರೆದ 11659 ವಿದ್ಯಾರ್ಥಿಗಳಲ್ಲಿ 11028 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಬಂಟ್ವಾಳ ಶೇ. 92.21, ಬೆಳ್ತಂಗಡಿ 95.76, ಮಂಗಳೂರು ಉತ್ತರದಲ್ಲಿ ಶೇ. 94.23, ಮಂಗಳೂರು ದಕ್ಷಿಣದಲ್ಲಿ ಶೇ. 92.07, ಮೂಡಬಿದ್ರೆಯಲ್ಲಿ 97.55, ಪುತ್ತೂರಿನಲ್ಲಿ ಶೇ. 96.89, ಸುಳ್ಯದಲ್ಲಿ 98.59 ಫಲಿತಾಂಶ ದಾಖಲಾಗಿವೆ.

ಮುಸ್ತಾರ್ ಆದೀಲ್ ಟಾಪರ್

ಚೇತನ ವಿದ್ಯಾಮಂದಿರ ಸಂಸ್ಥೆಯ ಎಸ್. ಸುಬ್ಬರಾಯ, ಕೆ.ವಿ. ಸುಬ್ಬರಾವ್, ಮುಖ್ಯ ಶಿಕ್ಷಕ ಶ್ರೀನಿವಾಸ ಮೂರ್ತಿ ಅಭಿನಂದಿಸಿದರು.

ತುಮಕೂರು: ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ತುಮಕೂರು ಶೈಕ್ಷಣಿಕ ಜಿಲ್ಲೆಯ ನಗರದ ಸರ್ವೋದಯ ಶಿಕ್ಷಣ ಸಂಸ್ಥೆಯ ಚೇತನ ವಿದ್ಯಾಮಂದಿರದ ವಿದ್ಯಾರ್ಥಿ ಮೊಹಮದ್ ಮುಸ್ತಾರ್ ಆದೀಲ್ 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಟಾಪರ್ ಆಗಿದ್ದಾರೆ.

ಈ ಬಗ್ಗೆ ಪತ್ರಿಕೆ ಜತೆ ಮಾತನಾಡಿ, ಟಾಪರ್ ಬಂದಿರುವುದು ಖುಷಿ ತಂದಿದೆ. ಗಣಿತ, ವಿಜ್ಞಾನ ವಿಷಯಗಳು ನನಗೆ ತುಂಬಾ ಇಷ್ಟವಾದವು.. ಆದರೆ ನನಗೆ ಸಮಾಜ ವಿಜ್ಞಾನ ಕಷ್ಟವಾಗುತ್ತಿತ್ತು. ಉಪನ್ಯಾಸಕರು ಕಥೆ ರೂಪದಲ್ಲಿ ಹೇಳಿಕೊಡುತ್ತಿದ್ದರು. ಪಠ್ಯ ಪುಸ್ತಕಕ್ಕೆ ಮಾತ್ರ ಸೀಮಿತವಾಗದೆ ಇತರ ಚಟುವಟಿಕೆಯನ್ನು ಮಾಡುತ್ತಿದ್ದೆ. ಶಿಕ್ಷಕರು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಮೊದಲ ದಿನದಿಂದಲೂ ಪ್ರತಿ ದಿನ 2 ಗಂಟೆ ಓದಿದರೆ ಸಾಕು. ಅರ್ಥ ಮಾಡಿಕೊಂಡು ಓದಬೇಕು. ಮನೆಯಲ್ಲಿ ಓದಿಗೆ ಪ್ರೋತ್ಸಾಹ ನೀಡುತ್ತಿದ್ದರು. ನನಗೆ ವೈದ್ಯನಾಗಬೇಕೆಂಬ ಆಸೆಯಿದೆ ಎಂದು ವಿದ್ಯಾರ್ಥಿ ಮೊಹಮದ್ ಮುಸ್ತಾರ್ ಆದೀಲ್ ತನ್ನ ಬಯಕೆ ವ್ಯಕ್ತಪಡಿಸಿದರು.

ಪೋಷಕರ ಪ್ರತಿಕ್ರಿಯೆ :

ಸದಾಶಿವನಗರದಲ್ಲಿ ವಾಸವಿದ್ದೇವೆ. ನಾನು ಖತಾರ್ ನಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ತದ ನಂತರ ವಾಲೆಂಟರಿ ರಿಟೈನ್‌ಮೆಂಟ್ ತೆಗೆದುಕೊಂಡೆ. ಮಗನಿಗೆ ಪ್ರತಿನ ದಿನ ಓದಿಕೊಳ್ಳುವಂತೆ, ಆಯಾ ವಿಷಯಗಳನ್ನು ಮನನ ಮಾಡಿಸುತ್ತಿದ್ದೆ. ಶಿಕ್ಷಕರು ಅಲ್ಲದೇ ನಾನು ಸಹ ಫಾಲೋಅಪ್ ಮಾಡುತ್ತಿದ್ದೆ ಇದರಿಂದಾಗಿ ಮಗ ಟಾಪರ್ ಬಂದಿದ್ದಾನೆ. ನಮಗೆ ಸಂತೋಷವಾಗಿದ್ದು, ಆತ ವೈದ್ಯನಾಗಬೇಕೆಂಬ ಆಸೆಗೆ ನಮ್ಮ ಬೆಂಬಲ ಸದಾ ಇರುತ್ತದೆ ಎಂದು ವಿದ್ಯಾರ್ಥಿ ತಂದೆ ಮೊಹಮದ್ ಮನ್ಸೂರ್ ಆದೀಲ್ ಹಾಗೂ ತಾಯಿ ಹಫ್ರೋಜ್ ಜಹಾನ್ ತಿಳಿಸಿದರು.

ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕೆ.ವಿ. ಸುಬ್ಬರಾವ್ ಮಾತನಾಡಿ, ಸರ್ವೋದಯ ಶಿಕ್ಷಣ ಸಂಸ್ಥೆಯ ಚೇತನ ವಿದ್ಯಾಮಂದಿರದ ವಿದ್ಯಾರ್ಥಿಗೆ ಮೊದಲ ರ್‍ಯಾಂಕ್ ಬಂದಿರುವುದು ತುಂಬಾ ಸಂತೋಷ ತಂದಿದೆ. ಇದುವರೆಗೂ 2 ಮತ್ತು 3ನೇ ಸ್ಥಾನ ಬರುತ್ತಿತ್ತು. ಇದೇ ಮೊದಲ ಬಾರಿಗೆ ಪ್ರಥಮ ಸ್ಥಾನ ಪಡೆದಿದೆ. ಇದಕ್ಕೆ ಕಾರಣಕರ್ತರಾದ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದರ ಜತೆಗೆ ಇನ್ನೂ 4 ರ್‍ಯಾಂಕ್ ಬಂದಿರುವುದು ತುಂಬಾ ಸಂತೋಷ ತಂದಿದೆ ಎಂದು ಹೇಳಿದರು.

ಇದೇ ವೇಳೆ ವಿದ್ಯಾರ್ಥಿ ಮೊಹಮದ್ ಮುಸ್ತಾರ್ ಆದೀಲ್ ನನ್ನು ಚೇತನ ವಿದ್ಯಾಮಂದಿರ ಸಂಸ್ಥೆಯ ಎಸ್. ಸುಬ್ಬರಾಯ, ಕೆ.ವಿ. ಸುಬ್ಬರಾವ್, ಮುಖ್ಯ ಶಿಕ್ಷಕ ಶ್ರೀನಿವಾಸ ಮೂರ್ತಿ ಅಭಿನಂದಿಸಿದರು.

ಹೆಸರಿಗಷ್ಟೇ ವಿದ್ಯಾಕಾಶಿ, 21ನೇ ಸ್ಥಾನಕ್ಕಿಳಿದ ದಾವಣಗೆರೆ

ಗಣೇಶ್ ಕಮ್ಮಾಪುರ, ದಾವಣಗೆರೆ

ಮಧ್ಯಕರ್ನಾಟಕ, ವಿದ್ಯಾಕಾಶಿ, ವಿದ್ಯಾನಗರಿ ಎಂದೆಲ್ಲಾ ಬಿರುದಾಂಕಿತ ದಾವಣಗೆರೆ ಜಿಲ್ಲೆ ಶೈಕ್ಷಣಿಕವಾಗಿ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಇಳಿಕೆಯ ಪರ್ವ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗಿದೆ.

> ಜಿಲ್ಲೆಗೆ ಉತ್ತಮ ಫಲಿತಾಂಶ ತರುವ ನಿಟ್ಟಿನಲ್ಲಿ ಎಲ್ಲ ರೀತಿಯ ಪ್ರಯತ್ನ ಮಾಡಲಾಗಿದೆ. ಆದರೂ, ಕೆಲ ಶಾಲೆಗಳಲ್ಲಿ ಶಿಕ್ಷಕರ ಕೊರತೆ, ವಿದ್ಯಾರ್ಥಿಗಳಲ್ಲಿ ಕಲಿಕಾ ನಿರಾಸಕ್ತಿ ಕಾರಣ ನಿರೀಕ್ಷಿತ ಫಲಿತಾಂಶ ಪಡೆಯಲು ಆಗಿಲ್ಲ.
> -ಜಿ.ಎಸ್. ರಾಜಶೇಖರಪ್ಪ, ಪ್ರಭಾರಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ.

ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆ ಫಲಿತಾಂಶ ವೃದ್ಧಿಗಾಗಿ ಹತ್ತುಹಲವು ವಿಶೇಷ ಕಾರ್ಯಕ್ರಮ, ವಿಶೇಷ ಮಾರ್ಗದರ್ಶಿ ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಜಿಲ್ಲಾವಾರು ದಾವಣಗೆರೆ ಜಿಲ್ಲೆ ಕಳಪೆ ಸಾಧನೆ ತೋರಿಸಿದೆ.

2024-25ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಜಿಲ್ಲೆಯಲ್ಲಿ 19,964 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಈ ಪೈಕಿ 13,195 ವಿದ್ಯಾರ್ಥಿಗಳು ಉತ್ತೀರ್ಣರಾಗಿ, ಬರೋಬ್ಬರಿ 6760 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

2020ರಲ್ಲಿ ಶೇ. 80, 2021ರಲ್ಲಿ ಶೇ.100, 2022ರಲ್ಲಿ ಶೇ.93 ಫಲಿತಾಂಶ ಬಂದಿದ್ದು, 2023ರಲ್ಲಿ ಶೇ.92.55ರಷ್ಟು ಫಲಿತಾಂಶದೊಂದಿಗೆ 15ನೇ ಸ್ಥಾನದಲ್ಲಿದ್ದ ದಾವಣಗೆರೆ ಜಿಲ್ಲೆ ನಂತರ 2014ರಲ್ಲಿ ಶೇ.74.28ರಷ್ಟು ಫಲಿತಾಂಶದೊಂದಿಗೆ 23ನೇ ಸ್ಥಾನಕ್ಕೆ ಕುಸಿಯಿತು. ಈ ವರ್ಷ (2025) 2 ಸ್ಥಾನ ಏರಿಕೆ ಕಂಡು ಶೇ.66.09 ಫಲಿತಾಂಶದೊಂದಿಗೆ 21ನೇ ಸ್ಥಾನದಲ್ಲಿದೆ. ಆದರೆ, ನಿರೀಕ್ಷಿತ ಫಲಿತಾಂಶ ಕಂಡಿಲ್ಲ.

ಔಟ್ ಆಫ್ ಔಟ್ ಯಾರೂ ಇಲ್ಲ

ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ರಾಜ್ಯದಲ್ಲಿ ಬರೋಬ್ಬರಿ 22 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿ ಮೊದಲ ಸ್ಥಾನಕ್ಕೆ ಭರ್ಜರಿ ಪೈಪೋಟಿ ನಡೆಸಿದ್ದು, 22 ಸ್ಥಾನದಲ್ಲಿ ಜಿಲ್ಲೆಯ ಯಾವೊಬ್ಬ ವಿದ್ಯಾರ್ಥಿಯೂ ಇಲ್ಲ. ಜತೆಗೆ ಜಿಲ್ಲೆಯಲ್ಲಿ ಮೂರು ಶಾಲೆಗಳು ಶೂನ್ಯ ಸಂಪಾದನೆ ಮಾಡಿವೆ.

ಸುಧಾರಣೆ ಕ್ರಮ:

ಜಿಲ್ಲೆಯಲ್ಲಿ ಈ ವರ್ಷ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗಾಗಿ ಶಾಲಾ ಶಿಕ್ಷಣ ಇಲಾಖೆ ಹತ್ತುಹಲವು ಯೋಜನೆ ರೂಪಿಸಿತ್ತು. ಶಿಕ್ಷಣದಲ್ಲಿ ಹಿಂದುಳಿದ ಬಾಲಕ, ಬಾಲಕಿಯರ ಗುಂಪು ರಚಿಸಿ ಪ್ರತ್ಯೇಕ ಬೋಧನಾ ವ್ಯವಸ್ಥೆ, ಶಾಲಾವಾರು ಪರೀಕ್ಷೆಗಳನ್ನು ನಡೆಸಿ ನಿರಂತರ ಮೌಲ್ಯಮಾಪನ, ಪ್ರತಿದಿನ ಬೆಳಗ್ಗೆ, ಸಂಜೆ ವಿಶೇಷ ತರಗತಿ, ವ್ಯಕ್ತಿತ್ವ ವಿಕಸನ ಶಿಬಿರ, ಕಲಿಕೆಯಲ್ಲಿ ಹಿಂದುಳಿದವರು ಜಾಣರ ಜತೆ ಗುಂಪು ಅಧ್ಯಯನ, ಸಂವಾದ, ಪ್ರೇರಣಾ ತರಗತಿ, ಸಂಪನ್ಮೂಲ ವ್ಯಕ್ತಿಗಳಿಂದ ವಿಷಯವಾರು ಭೋದನೆ ಸಹ ನೀಡಲಾಗಿತ್ತು.

ಜತೆಗೆ, ಪ್ರತಿ ಶಿಕ್ಷಕರಿಗೆ ಐದರಿಂದ 10 ವಿದ್ಯಾರ್ಥಿಗಳ ಹೊಣೆ ನೀಡಿ, ಪ್ರತಿದಿನ ಬೆಳಗ್ಗೆ 4ರಿಂದ 5ರ ಸಮಯದಲ್ಲಿ ವಿದ್ಯಾರ್ಥಿಗಳ ಪಾಲಕರಿಗೆ ಶಿಕ್ಷಕರು ದೂರವಾಣಿ ಕರೆ ಮಾಡಿ ವಿದ್ಯಾರ್ಥಿಗಳನ್ನು ಎಚ್ಚರಿಸಿ ವ್ಯಾಸಂಗ ಮಾಡುವ ಕಾರ್ಯ ಸಹ ಮಾಡಲಾಗಿತ್ತು. ಅಲ್ಲದೆ, ವಿನಾಕಾರಣ ಶಾಲೆ ತಪ್ಪಿಸುವ ಮಕ್ಕಳ ಮನೆಗೆ ಶಿಕ್ಷಕರು ಭೇಟಿ ನೀಡಿ ಶಾಲೆಗೆ ಕರೆತರುವ ಕಾರ್ಯ ಸಹ ಮಾಡಲಾಗಿತ್ತು. ಹೀಗೆ ಹತ್ತಾರೂ ಯೋಜನೆ ರೂಪಿಸಿದ್ದರೂ ಫಲಿತಾಂಶ ಮಾತ್ರ ವೃದ್ಧಿಯಾಗಿಲ್ಲ.

ಶಿರಸಿ ಶೈಕ್ಷಣಿಕ ಜಿಲ್ಲೆಗೆ 7ನೇ ಸ್ಥಾನ
ಉತ್ತರ ಕನ್ನಡ ಜಿಲ್ಲೆಗೆ 3ನೇ ಸ್ಥಾನ

ರಾಜ್ಯಕ್ಕೆ ಪ್ರಥಮಳಾಗಿ ಹೊರ ಹೊಮ್ಮಿದ ಬಿಹಾರದ ಹುಡುಗಿ

ಶಿರಸಿ: ಶುಕ್ರವಾರ ರಾಜ್ಯಾದ್ಯಂತ ಎಸ್ ಎಸ್‌ಎಲ್‌ಸಿ ಪರೀಕ್ಷೆ ಫಲಿತಾಮಶ ಪ್ರಕಟವಾಗಿದ್ದು, ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸರಕಾರಿ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿ ಶಗುಫ್ತಾ ಅಂಜುಮ್ ಪೂರ್ಣಅಂಕದೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಅದೇ ತೀತಿಯಲ್ಲಿ ಶಿರಸಿ ನಗರದ ಶ್ರೀ ಮಾರಿಕಾಂಬಾ ಪ್ರೌಢಶಾಲೆಯ ವಿದ್ಯಾರ್ಥಿ ತನುಶ್ರೀ ಜೋಶಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿದ್ದಾಳೆ.

ನಾನು ಕಲಿಯುವುದಕ್ಕೆ ಶಾಲೆಯ ಶಿಕ್ಷಕರು ತುಂಬಾ ಸಹಕಾರ ನೀಡಿದ್ದಾರೆ. ನಾನು ಬಿಹಾರದವಳು ನನಗೆ ಕನ್ನಡ ಬರುತ್ತಿರಲಿಲ್ಲ. ಆದರೆ ಇಲ್ಲಿ ನಾನು 9 ನೇ ತರಗತಿಗೆ ಬಂದು ಸೇರಿದವಳು. ಇಲ್ಲಿನ ಶಿಕ್ಷಣ ಉತ್ತಮವಾಗಿದ್ದುದರಿಂದ ಈ ಸಾಧನೆ ಸಾಧ್ಯವಾಯಿತು ಎಂದು ಶಗುಫ್ತಾ ವಿಶ್ವವಾಣಿಗೆ ತಿಳಿಸಿದ್ದಾಳೆ.

ರಾಜ್ಯಕ್ಕೆ ಎರಡನೇ ಸ್ಥಾನ ಪಡೆದ ತನುಶ್ರೀ ಜೋಶಿ ಮಾತನಾಡಿ, ನಾನು ಯಾವುದೇ ಟ್ಯೂಷನ್‌ಗೆ ಹೋಗಿಲ್ಲ. ಇಲ್ಲಿನ ಶಿಕ್ಷಣದ ಗುಣಮಟ್ಟ ಉತ್ತಮವಾಗಿದ್ದು ಕಲಿಕೆಗೆ ಬೇಕಾಗುವ ಎಲ್ಲ ಸೌಲಭ್ಯಗಳೂ ಈ ಶಾಲೆಯಲ್ಲಿ ಇವೆ. ಆದ್ದರಿಂದ ನಾನು ಈ ಸಾಧನೆ ಮಾಡಲು ಸಾಧ್ಯವಾಯಿತಿ ಎಂದಿದ್ದಾರೆ.

ಮಾರಿಕಾಂಬಾ ಪ್ರೌಢಶಾಲೆಯ ಪ್ರಭಾರೆ ಮುಖ್ಯೋಪಾಧ್ಯಾಯ ರಾಜೇಶ ನಾಯ್ಕ ಮಾತನಾಡಿ, ಈ ವರ್ಷದ ಈ ಫಲಿತಾಂಶ ನಮಗೆ ಸಂತಸ ತಂದಿದೆ. ಟಾಪ್ 10 ನಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು 14 ಜನರಿದ್ದು, ಇದೆಲ್ಲ ಸಾಧನೆಗೆ ನಮ್ಮ ಶಿಕ್ಷಕ ವರ್ಗವೇ ಕಾರಣ ಎಂದರು. ಸರಕಾರಿ ಉರ್ದು ಶಾಲೆಯ ಮುಖ್ಯೋಪಾಧ್ಯಯ ಆನಂದ ಕೊರವರ ಮಾತನಾಡಿ, ನಮ್ಮ ಶಾಲೆಯಲ್ಲಿ ಉತ್ತಮ ಸಾಧನೆಯನ್ನು ಮಕ್ಕಳು ತೋರಿದ್ದು, ಶಗುಫ್ತಾ ಅಂಜುಮ್ ರಾಜ್ಯಕ್ಕೆ ಪ್ರಥಮ ಸ್ಥಾನ ಬಂದಿದ್ದು, ನಮಗೆ ಹೆಮ್ಮೆ ತಂದಿದೆ. ಶಗುಪ್ತಾ ಅವರು ಮೂಲತಃ ಬಿಹಾರದವಳು, ಕನ್ನಡದಲ್ಲಿ ನೂರಕ್ಕೆ ನೂರು ಅಂಕವನ್ನು ಕನ್ನಡದಲ್ಲಿ ಪಡೆದಿದ್ದು ಹೆಮ್ಮೆಯ ವಿಷಯ ಎಂದರು.

ಇಬ್ಬರು ಟಾಪರ್ಸ್, ಸಿಎಂ ತವರಲ್ಲಿ ಕುಸಿತ

ಮೈಸೂರು: ಮೈಸೂರು ಜಿಲ್ಲೆಯ ಇಬ್ಬರು ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.ಈ ಫಲಿತಾಂಶ ತುಸು ಸಮಾಧಾನ ಎನ್ನಬಹುದಾದರೂ, 2023-24ರಲ್ಲಿ 7ನೇ ಸ್ಥಾನದಲ್ಲಿದ್ದ ಮೈಸೂರು ಜಿಲ್ಲೆ ಈ ವರ್ಷ 15 ಸ್ಥಾನಕ್ಕೆ ಕುಸಿದಿದೆ.

2022-23ರಲ್ಲಿ 19ನೇ ಸ್ಥಾನಕ್ಕೆ ಕುಸಿತ ಕಂಡಿದ್ದ ಮೈಸೂರು ಜಿಲ್ಲೆ ಹೋದ ವರ್ಷ 7ನೇ ಸ್ಥಾನಕ್ಕೆ ಜಿಗಿದು ಸುಧಾರಣೆ ಕಂಡಿತ್ತು. ಆದರೆ, ಈಗ ಮತ್ತೆ ಕುಸಿದಿದ್ದು, 15ನೇ ಸ್ಥಾನ ಪಡೆದುಕೊಂಡಿದೆ. ಈ ಮೂಲಕ ಮುಖ್ಯಮಂತ್ರಿಗಳ ತವರು ಜಿಲ್ಲೆ ಕಳೆದ ಬಾರಿಗಿಂತ ಕಳಪೆ ಸಾಧನೆ ಮಾಡಿದೆ.

ಈ ಬಾರಿ 35,557 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇವರಲ್ಲಿ 24117 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಮೂಲಕ ಜಿಲ್ಲೆ ಶೇ.67.83ರಷ್ಟು ಫಲಿತಾಂಶ ಪಡೆದು, ಇಡೀ ರಾಜ್ಯಕ್ಕೆ 15ನೇ ಸ್ಥಾನ ಪಡೆದುಕೊಂಡಿದೆ. ಜತೆಗೆ ಈ ಬಾರಿ ಜಿಲ್ಲೆಯ ಒಂದು ಶಾಲೆ ಶೂನ್ಯ ಫಲಿತಾಂಶ ಪಡೆದುಕೊಂಡಿದ್ದರೆ, 26 ಶಾಲೆಗಳು ಶೇ.100ರಷ್ಟು ಫಲಿತಾಂಶ ಪಡೆದುಕೊಂಡು ಉತ್ತಮ ಸಾಧನೆ ಮಾಡಿವೆ.

ಹೆಣ್ಣು ಮಕ್ಕಳೇ ಸ್ಟ್ರಾಂಗು:

ಒಟ್ಟು 35,557 ವಿದ್ಯಾರ್ಥಿಗಳಲ್ಲಿ 17557 ಗಂಡು ಮಕ್ಕಳು ಪರೀಕ್ಷೆ ಬರೆದಿದ್ದು, ಇವರಲ್ಲಿ 10174 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಹಾಗೆಯೇ 18000 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದು, ಇವರಲ್ಲಿ 13943 ಮಕ್ಕಳು ಉತ್ತೀರ್ಣರಾಗುವ ಮೂಲಕ ಈ ಬಾರಿಯೂ ಹೆಣ್ಣು ಮಕ್ಕಳೇ ಮೇಲುಗೈ ಸಾಧಿಸಿದ್ದಾರೆ.

620ಕ್ಕಿಂತ ಅಧಿಕ 43 ಮಂದಿ:

ಜಿಲ್ಲೆಯ 43 ಮಂದಿ 620ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ನಗರದ ಮರಿಮಲ್ಲಪ್ಪ ಪ್ರೌಢಶಾಲೆಯ ಧನುಷ್ ಮತ್ತು ಭಾರತೀಯ ವಿದ್ಯಾ ಭವನದ ತಾನ್ಯಾ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗಯೇ ಜಿಲ್ಲೆಯ ನಾಲ್ಕು ಮಂದಿ 624, ಐದು ಮಂದಿ 623, ಹನ್ನೊಂದು ಮಂದಿ 622, 9 ಮಂದಿ 621 ಹಾಗೂ 12 ಮಂದಿ ವಿದ್ಯಾರ್ಥಿಗಳು 620 ಅಂಕ ಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ.

ಮಡಿಕೇರಿ ಜಿಲ್ಲೆ ರಾಜ್ಯಕ್ಕೆ 5ನೇ ಸ್ಥಾನ

ಮಡಿಕೇರಿ: 10 ನೇ ತರಗತಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಕೊಡಗು ಜಿಲ್ಲೆ ಶೇ.82.21 ಫಲಿತಾಂಶದೊಂದಿಗೆ ರಾಜ್ಯಕ್ಕೆ 5ನೇ ಸ್ಥಾನ ಪಡೆದುಕೊಂಡಿದೆ. ಜಿಲ್ಲಾ ವ್ಯಾಪ್ತಿಯ 171 ಪ್ರೌಢಶಾಲೆಗಳಿಂದ ಪರೀಕ್ಷೆಗೆ ಹಾಜರಾಗಿದ್ದ 6673 ವಿದ್ಯಾರ್ಥಿಗಳಲ್ಲಿ 5486 ಮಂದಿ ಉತ್ತೀರ್ಣರಾಗಿದ್ದಾರೆ.

ಎಂದಿನಂತೆ ಈ ಬಾರಿಯೂ ಬಾಲಕಿಯರು ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆಯಲ್ಲಿ 2723 ಬಾಲಕಿಯರು ಉತ್ತೀರ್ಣರಾಗಿದ್ದರೆ, 2420 ಬಾಲಕರು ತೇರ್ಗಡೆಯಾಗಿದ್ದಾರೆ. ಗ್ರಾಮೀಣ ಭಾಗದ 4172 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.80.72 ಫಲಿತಾಂಶ ಬಂದಿದ್ದರೆ, ನಗರಪ್ರದೇಶದ 970 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.85.61 ಫಲಿತಾಂಶ ಬಂದಿರುವುದಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ರಂಗಧಾಮಯ್ಯ ತಿಳಿಸಿದ್ದಾರೆ.

ಸೋಮವಾರಪೇಟೆ ವಿಶ್ವ ಮಾನವ ಕುವೆಂಪು ಶಾಲೆಯ ಪಂಚಮಿ 621 ಅಂಕಗಳ ಪಡೆದು ಜಿಲ್ಲೆಗೆ ಪ್ರಥಮರಾಗಿ ಅಜ್ಜ ಅಜ್ಜಿ ಸಿಹಿ ತಿನ್ನಿಸುತ್ತಿರುವುದು.

ಜಿಲ್ಲೆಯ 26 ಶಾಲೆಗಳು ಪ್ರತಿಶತ ಶೇ.100 ಫಲಿತಾಂಶವನ್ನು ಪಡೆದುಕೊಂಡಿವೆ. ಇದರಲ್ಲಿ 11 ಸರ್ಕಾರಿ ಶಾಲೆಗಳು, 15 ಅನುದಾನ ರಹಿತ ಶಾಲೆಗಳಾಗಿವೆ. ಜಿಲ್ಲೆಗೆ ಪ್ರಥಮ-ವಿರಾಜಪೇಟೆ ಕಾವೇರಿ ಪ್ರೌಢಶಾಲೆ ಟಿ.ಎಂ.ಆಶ್ರಯ್ ಅಕ್ಕಮ್ಮ ಹಾಗೂ ಸೋಮವಾರಪೇಟೆಯ ವಿಶ್ವ ಮಾನವ ಕುವೆಂಪು ಶಾಲೆಯ ಪಂಚಮಿ ಅವರು 621 ಅಂಕಗಳನ್ನು ಪಡೆದು ಜಿಲ್ಲೆಗೆ ಪ್ರಥಮರಾಗಿದ್ದಾರೆ.620 ಅಂಕಗಳಿಂದಿಗೆ ದ್ವಿತೀಯ ಸ್ಥಾನ ಪಡೆದವರು-ವಿರಾಜಪೇಟೆ ತಾಲ್ಲೂಕಿನ ಕಳತ್‌ಮಾಡು ಲಯನ್ಸ್ ಪ್ರೌಢಶಾಲೆಯ ತೇಜಸ್ ಭೀಮಯ್ಯ, ಮೂರ್ನಾಡು ಜ್ಞಾನಜ್ಯೋತಿ ಪ್ರೌಢಶಾಲೆಯ ಮೊಹಮದ್ ಸಾಹಿಲ್, ಕೂಡುಮಂಗಳೂರಿನ ಕೆ.ಎಂ. ಯೂನಿಕ್ ಅಕಾಡೆಮಿಯ ಸಮೃದ್ಧಿ ಆಚಾರ್ 620 ಅಂಕಗಳನ್ನು ಪಡೆದು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದು ಉನ್ನತ ಸಾಧನೆ ಮಾಡಿದ್ದಾರೆ.

ರಾಜ್ಯಕ್ಕೆ ಎರಡನೇ ರ್‍ಯಾಂಕ್ ನಾಗಶ್ರೀ

ಬಾಗೇಪಲ್ಲಿ: ಪಟ್ಟಣದ ಪ್ರತಿಷ್ಠಿತ ಯಂಗ್ ಇಂಡಿಯಾ ಶಾಲೆಯ ವಿದ್ಯಾರ್ಥಿನಿ ಎಸ್. ನಾಗಶ್ರೀ 625 ಅಂಕಗಳಿಗೆ 624 ಅಂಕ ಪಡೆದು ರಾಜ್ಯಮಟ್ಟದಲ್ಲಿ 2ನೇ ರ್‍ಯಾಂಕ್ ಪಡೆದಿದ್ದಾರೆ. ಗಣಿತ ವಿಷಯದಲ್ಲಿ ಒಂದು ಅಂಕ ಹೊರತು ಪಡಿಸಿ,ಉಳಿದೆಲ್ಲ ವಿಷಯಗಳಲ್ಲಿ ಗರಿಷ್ಠ ಅಂಕಗಳನ್ನು ಪಡೆದಿದ್ದಾರೆ.

ಈ ಶಾಲೆಯಲ್ಲಿ ಒಟ್ಟು 7 ಮಂದಿ ವಿದ್ಯಾರ್ಥಿಗಳು ರಾಜ್ಯ ಮಟ್ಟದ ರ್‍ಯಾಂಕ್ ಪಡೆದಿದ್ದಾರೆ. ನಿಶಾಂತ್ ಸಾಯಿ 623, ತಸ್ಕಿನ್ 621, ಸಾನಿಯಾ ಮತ್ತು ತನುಶ್ರೀ 618,ಅಕ್ಷಿತ ಮತ್ತು ಸುಹೃತ್ ಎಸ್ ಶಾಸ್ತ್ರಿ 618 , ಪ್ರಶಾಂತ್ 615, ಮಣಿದೀಪ್ ಮತ್ತು ಪ್ರಶಂಸ 614 ಅಂಕಗಳನ್ನು ಪಡೆದು ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ.

ಶಾಸಕರಿಂದ ಸನ್ಮಾನ:

ಶಾಸಕ ಎಸ್.ಎನ್ ಸುಬ್ಬಾರೆಡ್ಡಿ, ತಹಸೀಲ್ದಾರ್ ಮನಿಷಾ ಮಹೇಶ್ ಎಸ್ ಪತ್ರಿ,ಬಿಇಒ ವೆಂಕಟೇಶಪ್ಪ ಮತ್ತಿತರ ಗಣ್ಯರು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಸನ್ಮಾನಿಸಿದ್ದಾರೆ.

ನಮ್ಮ ಸಂಸ್ಥೆಯಲ್ಲಿ ಬೋಧನಾ ಸಿಬ್ಬಂದಿ,ವಿದ್ಯಾರ್ಥಿಗಳ ಪೋಷಕರ ಸಹಕಾರ ಹಾಗೂ ಪ್ರೇರಣೆಯಿಂದ ಅತ್ಯುತ್ತಮ ಫಲಿತಾಂಶ ಬಂದಿದೆ ಎಂದು ಯಂಗ್ ಇಂಡಿಯಾ ಶಾಲೆ ಮುಖ್ಯಸ್ಥ ಡಿ.ಶಿವಣ್ಣ ತಿಳಿಸಿದ್ದಾರೆ.

ಫೇಲಾದ ಮಗನೇ, ಮರಳಿ ಯತ್ನವ ಮಾಡು!

ಬಾಗಲಕೋಟೆ: ಎಸ್ಸೆಸ್ಸೆಲ್ಸಿಯಲ್ಲಿ 6 ವಿಷಯಗಳಲ್ಲಿ ಫೇಲ್ ಆದ ಮಗನಿಗೆ ಕೇಕ್ ತಿನ್ನಿಸಿ ಪೋಷಕರು ಧೈರ್ಯ ಹೇಳಿದ ಘಟನೆ ನಗರದಲ್ಲಿ ನಡೆದಿದೆ.

ನವನಗರದ ನಿವಾಸಿಯಾಗಿರುವ ಅಭಿಷೇಕ ಚೊಳಚಗುಡ್ಡ ಆರು ವಿಷಯಗಳಲ್ಲಿ ಫೇಲ್ ಆಗಿದ್ದರಿಂದ ದುಖಃದಲ್ಲಿದ್ದ ಆತನಿಗೆ ಕುಟುಂಬದ ಸದಸ್ಯರು ಕೇಕ್ ಕಟ್ ಮಾಡಿ, ಪರಸ್ಪರ ತಿನ್ನಿಸಿ ಧೈರ್ಯ ಹೇಳಿದ್ದಾರೆ.

ಇಲ್ಲಿನ ಬಿವಿವಿ ಸಂಘ ಬಸವೇಶ್ವರ ಇಂಗ್ಲಿಷ್ ಮಿಡಿಯಂನಲ್ಲಿ ಓದುತ್ತಿದ್ದ ಅಭಿಷೇಕ 625 ಕ್ಕೆ 200 ಅಂಕ ಪಡೆದು ಶೇ.32 ಅಂಕ ಪಡೆದು ಬೇಜಾರಲ್ಲಿದ್ದ. ತಂದೆ ಯಲ್ಲಪ್ಪ ಅವರು, ಫೇಲ್ ಆದ ಮಗನಿಗೆ ಸಿಹಿ ತಿನ್ನಿಸಿ ಮುತ್ತು ಕೊಟ್ಟು, ಪರೀಕ್ಷೆ ಒಂದೇ ಜೀವನವಲ್ಲ ಮತ್ತೆ ಪ್ರಯತ್ನ ಮಾಡು ಎಂದು ಹೆಗಲ ಮೇಲೆ ಕೈ ಇಟ್ಟು ಧೈರ್ಯ ತುಂಬಿದ್ದಾರೆ. ಹದಿನೈದು ತಿಂಗಳ ಮಗುವಾಗಿದ್ದಾಗ ಎರಡು ಪಾದ ಸುಟ್ಟು ನೆನಪಿನ ಶಕ್ತಿ ಕಳೆದುಕೊಂಡಿರುವ ಅಭಿಷೇಕ.

ಇದೇ ಹಿನ್ನೆಲೆ ಉತ್ತರ ನೆನಪಿಟ್ಟುಕೊಂಡು ಬರೆಯಲು ವಿಫಲವಾದ ಅಭಿಷೇಕ.

ಫೇಲ್ ಆಗಿದ್ದರಿಂದ ಬಹಳ ಬೇಜಾರಾಗಿತ್ತು.

ನಮ್ಮ ತಂದೆ ತಾಯಿ ಎಲ್ಲರೂ ಧೈರ್ಯ ಹೇಳಿದರು. ಫೇಲ್ ಆದರೂ ಧೈರ್ಯ ಹೇಳಿ ಕೇಕ್ ತಿನ್ನಿಸಿ ಸಂಭ್ರಮಿಸಿದ್ದಾರೆ. ಮತ್ತೆ ಪ್ರಯತ್ನ ಮಾಡಿ ಪಾಸ್ ಆಗ್ತೀನಿ. ಪರೀಕ್ಷೆಯಲ್ಲಿ ಫೇಲ್ ಆದರೂ ಜೀವನದಲ್ಲಿ ಸಾಧಿಸಿ ತೋರಿಸ್ತೀನಿ ಎಂದು ಅಭಿಷೇಕ ಮಾಧ್ಯಮದವರ ಎದುರು ಹೇಳಿದ್ದಾನೆ.

ಸಮಾಚಾರ ಸಣ್ಣದಲ್ಲ

ಮೇ 26ರಿಂದ ಪೂರಕ ಪರೀಕ್ಷೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ-1 ಮೇ 26 ರಿಂದ ಜೂ.2ರ ತನಕ, ಪೂರಕ ಪರೀಕ್ಷೆ-2 ಜೂ.23 ರಿಂದ ಜೂ.30 ರವರೆಗೆ ನಡೆಯಲಿದೆ. ಉತ್ತರ ಪತ್ರಿಕೆ ಸ್ಕ್ಯಾನ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಮೇ 2ರಿಂದ 7ರ ನಡುವೆ ಅರ್ಜಿ ಸಲ್ಲಿಸಬಹುದು. ಪೂರಕ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಮೇ 3ರಿಂದ 10 ರೊಳಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಉತ್ತರ ಪತ್ರಿಕೆಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಆನ್‌ಲೈನ್‌ನಲ್ಲಿ ಮೇ 4 ರಿಂದ 11 ರವರೆಗೆ ಅರ್ಜಿ ಸಲ್ಲಿಸಬಹುದು. ಈ ಬಾರಿ ಪೂರಕ ಪರೀಕ್ಷೆಯ ಪ್ರಕ್ರಿಯೆಗಳಿಗೆ ಕರ್ನಾಟಕ ಒನ್ ಮೊಬೈಲ್ ಆ್ಯಪ್ ರೂಪಿಸಲಾಗಿದ್ದು, ವಿದ್ಯಾರ್ಥಿಗಳು ಈ ಆ್ಯಪ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಶೇ.95ರ ಸಾಧನೆ

ಬೆಂಗಳೂರು: ಶುಕ್ರವಾರ ಪ್ರಕಟಗೊಂಡಿರುವ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಪಾವನಿ ರಾಮ್ ಅವರು ಶೇ.95ರಷ್ಟು ಅಂಕ ಗಳಿಸಿದ್ದಾರೆ. ಬೆಂಗ ಳೂರಿನ ಮಹಾಲಕ್ಷ್ಮೀ ಲೇಔಟ್‌ನ ಲಿಟಲ್ ಲಿಲ್ಲೀಸ್ ಸ್ಕೂಲ್‌ನಲ್ಲಿ ವ್ಯಾಸಾಂಗ ಮಾಡುತ್ತಿದ್ದ ಪಾವನಿ ರಾಮ್ ಅವರು 595 ಅಂಕಗಳಿಸಿದ್ದರು. ಪಾವನಿ ಅವರ ಈ ಸಾಧ ನೆಗೆ, ಪೋಷಕರು ಹಾಗೂ ಶಾಲಾ ಆಡಳಿತ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದೆ.

ಶೇ.68ರ ಸಾಧನೆ

ಬೆಂಗಳೂರು: ಶುಕ್ರವಾರ ಪ್ರಕಟಗೊಂಡ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಭರತ್ ಎಚ್.ಆರ್. ಶೇ.68ರ ಸಾಧನೆ ಮಾಡಿದ್ದಾರೆ. ವಿಶ್ವವಾಣಿ ಕಚೇರಿಯಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿರುವ ರಾಜಣ್ಣ ಅವರ ಪುತ್ರ ಭರತ್. ಎಚ್. ಆರ್ ಮಂಡ್ಯದ ಸಪ್ತಗಿರಿ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದು, ಬಡತನದ ನಡುವೆಯೂ ಶೇ.67.68 ರಷ್ಟು ಅಂಕ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮೀಣ ಭಾಗದ ಭರತ್ ಯಾವುದೇ ಟ್ಯೂಷನ್ ವಿಶೇಷ ತರಗತಿಯಿಲ್ಲದೆ, ಶಾಲೆಯಲ್ಲಿನ ಪಾಠ ಪ್ರವಚನಗಳನ್ನು ಏಕಾಗ್ರತೆಯಿಂದ ಆಲಿಸಿ ಮನೆಯಲ್ಲಿ ಸ್ವಂತ ಅಭ್ಯಸಿಸಿದ್ದಾನೆ. ಇನ್ನು ಮುಂದೆ ಉತ್ತಮ ಶಿಕ್ಷಣ ಪಡೆದು ಒಳ್ಳೆ ಕೆಲಸಕ್ಕೆ ಸೇರಿ ತಂದೆ ತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳುವ ಹಂಬಲ ವ್ಯಕ್ತ ಪಡಿಸಿದ್ದಾನೆ.

ದಾಖಲೆಯ ಫಲಿತಾಂಶಕ್ಕೆ ಇಲಾಖೆಯ ಅಧಿಕಾರಿಗಳ ಪರಿಶ್ರಮ ಕಾರಣ: ಸಚಿವ ಮಧು ಬಂಗಾರಪ್ಪ

ಕೃಪಾಂಕವಿಲ್ಲದಿದ್ದರೂ ಉತ್ತಮ ರಿಸಲ್ಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಸ್‌ಎಸ್‌ಎಲ್‌ಸಿ 2024-25 ನೇ ಸಾಲಿನ ದಾಖಲೆಯ ಫಲಿತಾಂಶಕ್ಕೆ ಇಲಾಖೆಯ ಅಧಿಕಾರಿಗಳ ಪರಿಶ್ರಮ ಕಾರಣ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ಕೃಪಾಂಕ ನೀಡಿದ್ದರಿಂದ ಫಲಿತಾಂಶ ಹೆಚ್ಚಳವಾಗಿತ್ತು. ಆದರೆ ಕೃಪಾಂಕವಿಲ್ಲದೇ ಶೇ.53ರಷ್ಟು ವಿದ್ಯಾರ್ಥಿಗಳು ಮಾತ್ರ ಪಾಸಾಗಿದ್ದರು. ಆದರೆ ಈ ಬಾರಿ ವಿದ್ಯಾರ್ಥಿಗಳ ಓದಿಗೆ ಪೂರಕವಾಗುವಂತೆ ಕಾರ್ಯಕ್ರಮ ಕೈಗೊಳ್ಳಲು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆವು. ಅದರಂತೆ ಅಧಿಕಾರಿಗಳು ರಾಜ್ಯದ ಪ್ರತಿ ಶಾಲೆಗಳ ಮೇಲೆ ಗಮನ ಹರಿಸಿ, ಓದಿನಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಓದಿನ ಮಟ್ಟ ಹೆಚ್ಚಿಸಲು ವಿಶೇಶ ತರಗತಿ, ಗಣಕ ಗಣಿತ ಈ ರೀತಿ ಕಾರ್ಯಕ್ರಮ ರೂಪಿಸಿದ್ದರು. ಇದು ವಿದ್ಯಾರ್ಥಿಗಳ ಓದಿಗೆ ಅನುಕೂಲವಾಗುವುದರ ಜತೆಗೆ ಪರೀಕ್ಷೆಯ ಬಗ್ಗೆ ಇದ್ದ ಆತಂಕ ದೂರ ಮಾಡಿದೆ. ಕಳೆದ ಬಾರಿ ಇಬ್ಬರು ವಿದ್ಯಾರ್ಥಿಗಳು ಪೂರ್ಣಾಂಕ ಗಳಿಸಿದ್ದರು, ಈ ಬಾರಿ ರೂಪಿಸಿರುವ ಹಲವು ಕಾರ್ಯಕ್ರಮಗಳಿಂದ ರಾಜ್ಯದಲ್ಲಿ ಒಟ್ಟು 22 ವಿದ್ಯಾರ್ಥಿಗಳು ಪೂರ್ಣಾಂಕ ಗಳಿಸಿದ್ದಾರೆ.

ಮಾ. 21 ರಿಂದ ಏ.4 ರವರೆಗೆ ನಡೆದಿದ್ದ ಪರೀಕ್ಷೆಯಲ್ಲಿ 8,42,173 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇದರಲ್ಲಿ 5,24,984 ವಿದ್ಯಾರ್ಥಿಗಳು ಪಾಸ್ ಆಗಿದ್ದು, ಶೇ.66.14 ರಷ್ಟು ಫಲಿತಾಂಶ ಬಂದಿದೆ. ಈ ಬಾರಿಯೂ ಕೂಡ ವೆಬ್‌ಕಾಸ್ಟಿಂಗ್‌ನಲ್ಲಿ ಪರೀಕ್ಷೆ ನಡೆಸಲಾಗಿತ್ತು. ಆದರೆ ಯಾವುದೇ ಕೃಪಾಂಕಗಳನ್ನು ನೀಡಿಲ್ಲ. ಪ್ರಸ್ತುತ ವರ್ಷ ಉತ್ತೀರ್ಣವಾಗಿರುವ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.75 ರಷ್ಟು ವಿದ್ಯಾರ್ಥಿಗಳು ಶೇ.60 ಕ್ಕಿಂತ ಹೆಚ್ಚಿನ ಅಂಕಗಳೊಂದಿಗೆ ಪ್ರಥಮ ಹಾಗು ಉನ್ನತ ದರ್ಜೆಗಳೊಂದಿಗೆ ತೇರ್ಗಡೆಯಾಗಿದ್ದಾರೆ ಎಂದು ತಿಳಿಸಿದರು.

ಪಾರದರ್ಶಕ ಪರೀಕ್ಷೆ: ಕಳೆದ ಬಾರಿ ಪರೀಕ್ಷೆಗಳಲ್ಲಿ ವೆಬ್‌ಕ್ಯಾಮ್ ಅಳವಡಿಸಿದ್ದರಿಂದ ವಿದ್ಯಾರ್ಥಿಗಳ ಫಲಿತಾಂಶ ಕುಸಿಯಬಾರದೆಂಬ ಕಾರಣಕ್ಕೆ ಕೃಪಾಂಕ ನೀಡಲಾಗಿತ್ತು. ಆದರೆ ಅದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಆದ್ದರಿಂದ ಈ ಬಾರಿ ಯಾವುದೇ ರೀತಿಯ ಕೃಪಾಂಕ ನೀಡಬಾರದು ಮತ್ತು ಪಾರದರ್ಶಕ ಪರೀಕ್ಷೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದರು. ಅವರ ಆದೇಶದಂತೆ ಈ ಬಾರಿ ವಿದ್ಯಾರ್ಥಿಗಳ ಪರಿಶ್ರಮದಿಂದ ಪರೀಕ್ಷೆ ಎದುರಿಸಲು ತಯಾರಿ ಮಾಡಿದ್ದೆವು ಎಂದು ಸಚಿವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಎಸ್‌ಎಸ್‌ಎಲ್‌ಸಿ ಫಲಿತಾಂಶ ಬಿಡುಗಡೆಗೊಳಿಸಿದರು.

ಇನ್ನೂ ಎರಡು ಅವಕಾಶ

ಪರೀಕ್ಷೆ-1 ರಲ್ಲಿ ಉತ್ತೀರ್ಣವಾಗಲು ಸಾಧ್ಯವಾಗದ ವಿದ್ಯಾರ್ಥಿಗಳು ಬೇಸರವಾಗುವ ಅವಶ್ಯಕತೆಯಿಲ್ಲ. ಮಂಡಳಿಯು ಈಗಾಗಲೇ ಪರೀಕ್ಷೆ- 2,3 ಹೊಸ ಮಾದರಿ ಪರಿಚಯಿಸಿರುವುದರಿಂದ ಪಾಸಾಗಲು ಇನ್ನೂ ಎರಡು ಅವಕಾಶಗಳಿವೆ. ಗ್ರಾಮೀಣ ಭಾಗದಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು, ಪೂರಕ ಪರೀಕ್ಷೆಯ ಪ್ರವೇಶಕ್ಕೆ ಯಾವುದೇ ಶುಲ್ಕ ವಿಧಿಸದಿರುವುದಕ್ಕೆ ಮಂಡಳಿ ನಿರ್ಧರಿಸಿದೆ. ಯಾವ ವಿದ್ಯಾರ್ಥಿಗಳು ಮೊದಲ ಪರೀಕ್ಷೆಯಲ್ಲಿ ಪಾಸಾಗಲು ಸಾಧ್ಯವಾಗಿಲ್ಲ ಅವರು ಕುಗ್ಗದೆ ಮತ್ತೊಮ್ಮೆ ಉತ್ತಮ ರೀತಿಯಲ್ಲಿ ತಯಾರಿ ನಡೆಸಿ ಪರೀಕ್ಷೆ 2 ಮತ್ತು 3 ಬರೆಯಬಹುದಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸರಕಾರಿ ಶಾಲೆಗಳು ಯಾವುದೇ ಖಾಸಗಿ ಶಾಲೆಗಳಿಗೆ ಕಮ್ಮಿ ಇಲ್ಲ ವೆಂಬುದು ಈ ಬಾರಿಯ ಫಲಿತಾಂಶ ನೋಡಿದರೆ ತಿಳಿಯುತ್ತದೆ. ಅದಕ್ಕೆ ಪೂರಕವಾಗಿ ನಮ್ಮ ಸರಕಾರ ಸರಕಾರಿ ಶಾಲೆಗಳ ಮೇಲೆ ಹೆಚ್ಚಿನ ಗಮನ ಹರಿಸಿ ಶಿಕ್ಷಕರ ನೇಮಕಾತಿ ಕಟ್ಟಡಗಳ ದುರಸ್ಥಿ ಮುಂತಾದ ಕಾರ್ಯಗಳನ್ನು ಕೈಗೊಂಡಿದೆ. ಮುಂದೆಯು ಕೂಡ ಇನ್ನು ಹೆಚ್ಚಿನ ಕೆಲಸ ಮಾಡುವ ಗುರಿ ಹೊಂದಿದೆ, ನಾನು ಎಲ್ಲಾ ಪೋಷಕರಲ್ಲೂ ಮನವಿ ಮಾಡುವುದೇನೆಂದರೆ ಸರಕಾರಿ ಶಾಲೆಗಳಿಗೆ ನಿಮ್ಮ ಮಕ್ಕಳನ್ನು ಸೇರಿಸಿ. ಅಲ್ಲಿ ಉತ್ತಮ ಭೋದಕ ಸಿಬ್ಬಂದಿ, ಉಚಿತ ಪುಸ್ತಕ, ಶೂ, ಯೂನಿಫಾರ್ಮ್ ಎಲ್ಲಾ ನೀಡಲಾಗುತ್ತದೆ.

– ಮಧು ಬಂಗಾರಪ್ಪ, ಶಿಕ್ಷಣ ಸಚಿವ

ಎಸ್‌ಎಸ್‌ಎಲ್‌ಸಿಯಲ್ಲಿ ಪೂರ್ಣಾಂಕ ಪಡೆದ ಯುಕ್ತಿ, ಜಾನ್ವಿ ವಿದ್ಯಾರ್ಥಿನಿಯರಿಗೆ ಪೋಷಕರು ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಔಟ್ ಆಫ್ ಔಟ್ ಪಡೆದದ್ದು ತುಂಬಾ ಸತೋಷವಾಗಿದೆ. ಈ ಯಶಸ್ಸಿಗೆ ನನ್ನ ತಂದೆ ತಾಯಿಯ ಬೆಂಬಲ ಹಾಗೂ ನಮ್ಮ ಶಾಲೆಯ ಶಿಕ್ಷಕರ ನಿರಂತರ ಮಾರ್ಗದರ್ಶನ ಕಾರಣ. ನಮ್ಮ ಶಾಲೆಯ ಪ್ರಾಂಶುಪಾಲರು ಪ್ರತಿ ವಿದ್ಯಾರ್ಥಿಗೆ ಖುದ್ದು ಪರೀಕ್ಷಾ ತಯಾರಿ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರು. ಅವರೆಲ್ಲರ ಮಾರ್ಗದರ್ಶನ ಪಡೆದು ನಾನು ನಿರಂತರ ಅಭ್ಯಾಸ ಮಾಡುತ್ತಿದ್ದೆ. ಶಾಲೆಯಲ್ಲಿ ಮಾಡುತ್ತಿದ್ದ ಪಾಠಗಳನ್ನು ಮತ್ತೆ ಮನೆಯಲ್ಲಿ ಓದುತ್ತಿದ್ದೆ, ಅದರ ಹೊರತಾಗಿ ಯಾವುದೇ ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ನಾನು ಓದುತ್ತಿರುವ ಶಾಲೆಯಲ್ಲಿಯೇ ನನ್ನ ತಾಯಿ ಶಿಕ್ಷಕರಾದ್ದರಿಂದ, ಅವರು ಸಹ ಓದಿನಲ್ಲಿ ನನಗೆ ಸಹಾಯ ಮಾಡುತ್ತಿದ್ದರು. ಇವರೆಲ್ಲರ ಸಹಕಾರದಿಂದ ನಾನು ರಾಜ್ಯಕ್ಕೆ ಪ್ರಥಮ ಸ್ಥಾನ ಬಂದಿರುವೆ.

– ನಮಿತಾ, ಮಾತಾ ಆಂಗ್ಲ ಶಾಲೆ ವಿದ್ಯಾರ್ಥಿನಿ

ಮಾಧ್ಯಮವಾರು ಫಲಿತಾಂಶ

ಮಾಧ್ಯಮ	ಹಾಜರಾದವರು	ಉತ್ತೀರ್ಣ	ಶೇ.ಫಲಿತಾಂಶ
ಕನ್ನಡ	4,27,379	2,46,230	57.61
ಆಂಗ್ಲ	3,35,974	2,63,333	78.38
ಉರ್ದು	18,146	8,431	46.46
ಮರಾಠಿ	9,090	4,906	53.97
ತೆಲುಗು	114	85	74.56
ತಮಿಳು	66	25	37.88
ಹಿಂದಿ	121	65	53.72

ಲಿಂಗವಾರು ಫಲಿತಾಂಶ

ಅಭ್ಯರ್ಥಿ	ಹಾಜರಾದವರು	ಉತ್ತೀರ್ಣ	ಶೇ. ಫಲಿತಾಂಶ
ಬಾಲಕ	3,90,311	2,26,637	58.07
ಬಾಲಕಿ	4,00,579	2,96,438	74.00

ನಗರ ಮತ್ತು ಗ್ರಾಮೀಣವಾರು ಫಲಿತಾಂಶ

ಅಭ್ಯರ್ಥಿ ವಿಧ	ಹಾಜರಾದವರು	ಉತ್ತೀರ್ಣ	ಶೇ. ಫಲಿತಾಂಶ
ನಗರ	3,35,446	2,24,900	67.05
ಗ್ರಾಮೀಣ	4,55,444	2,98,175	65.47

ಶಾಲಾವಾರು ಫಲಿತಾಂಶ

ಶಾಲೆಯ ವಿಧ	ಒಟ್ಟು ಶಾಲೆಗಳು	ಹಾಜರಾದವರು	ಉತ್ತೀರ್ಣ	ಶೇ. ಫಲಿತಾಂಶ
ಸರಕಾರಿ	5,936	3,21,841	2,01,790	62.7
ಅನುದಾನಿತ	3,583	2,00,214	1,18,066	58.97
ಅನುದಾನ ರಹಿತ	6,364	2,68,835	2,03,219	75.59
ಒಟ್ಟು	15,883	7,90,890	5,23,075	66.14

ಅಭ್ಯರ್ಥಿ	ಹಾಜರಾದವರು	ಉತ್ತೀರ್ಣ	ಶೇ. ಫಲಿತಾಂಶ
ಫ್ರೆಶರ್ಸ್	7,90,890	5,23,075	66.14
ಖಾಸಗಿ ಅಭ್ಯರ್ಥಿಗಳು	13,154	1,072	8.15
ಪುನರಾವರ್ತಿತ ಶಾಲಾ ಅಭ್ಯರ್ಥಿಗಳು	33,952	628	1.85
ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು	4,177	209	5.00

ಶ್ರೇಣಿವಾರು ಫಲಿತಾಂಶ

ಶ್ರೇಣಿ	ವಿದ್ಯಾರ್ಥಿ ಸಂಖ್ಯೆ	ಶೇ.ಫಲಿತಾಂಶ
ಎ+ (ಶೇ.90-100)	55,066	10.53
ಎ (ಶೇ.80-89)	96,536	18.46
ಬಿ+ (ಶೇ.70-79)	1,14,852	21.96
ಬಿ (ಶೇ.60-69)	1,26,541	24.19
ಸಿ+ (ಶೇ.50-59)	1,09,762	20.98
ಸಿ (ಶೇ.35-49)	20,318	3.88

ಶೇ.100 ರಷ್ಟು ಮತ್ತು ಶೂನ್ಯ ಫಲಿತಾಂಶ ಪಡೆದ ಶಾಲೆಗಳು

ಶಾಲೆ	ಶೇ.100ರ ಫಲಿತಾಂಶ	ಶೂನ್ಯ ಫಲಿತಾಂಶ
ಸರಕಾರಿ	329	06
ಅನುದಾನಿತ	53	30
ಅನುದಾನ ರಹಿತ	539	108
ಒಟ್ಟು	921	144

ಪೂರ್ಣಾಂಕ ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆ

ವಿಷಯ	ಗರಿಷ್ಠ ಅಂಕ	ವಿದ್ಯಾರ್ಥಿಗಳ ಸಂಖ್ಯೆ
ಪ್ರಥಮ ಭಾಷೆ	125	9,573
ದ್ವಿತೀಯ ಭಾಷೆ	100	7,057
ತೃತೀಯ ಭಾಷೆ	100	17,909
ಗಣಿತ	100	3,262
ವಿಜ್ಞಾನ	100	2,451
ಸಮಾಜ ಶಾಸ್ತ್ರ	100	7,974

ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆ

ಗಳಿಸಿದ ಅಂಕಗಳು	ವಿದ್ಯಾರ್ಥಿಗಳ ಸಂಖ್ಯೆ
625	22
624	65
623	108
622	189
621	259
620	327

ಶಿಕ್ಷಕರು ಹೇಳಿದಂತೆ ಓದುತ್ತಿದ್ದೆ

ಮೈಸೂರು: ರಾಜ್ಯದ 22 ವಿದ್ಯಾರ್ಥಿಗಳು 625ಕ್ಕೆ 625 ಅಂಕಗಳನ್ನು ಪಡೆದಿದ್ದಾರೆ. ಆ 22 ವಿದ್ಯಾರ್ಥಿಗಳ ಪೈಕಿ ಮೈಸೂರಿನ ಧನುಷ್ ಕೂಡ ಒಬ್ಬ. ಧನುಷ್ ಮೈಸೂರು ನಗರದ ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿಯಾಗಿದ್ದು, 625ಕ್ಕೆ 625 ಅಂಕ ಬಂದಿರುವುದು ತುಂಬಾ ಖುಷಿ ಇದೆ ಎಂದು ಎಂದು ಸಂತೋಷ ವ್ಯಕ್ತಪಡಿಸಿದ್ದಾನೆ.

ನನ್ನ ಎಲ್ಲಾ ಶಿಕ್ಷಕರು, ಮರಿಮಲ್ಲಪ್ಪ ಶಾಲೆಯ ಸಿಬ್ಬಂದಿ ವರ್ಗ ಎಲ್ಲವನ್ನೂ ಹೇಳಿಕೊಟ್ಟು ಸಮಯಕ್ಕೆ ಸರಿಯಾಗಿ ಪರೀಕ್ಷೆಗಳನ್ನು ಮಾಡಿ, ಗೈಡ್ ಮಾಡಿದ್ದಾರೆ. ನನ್ನ ಹೆತ್ತವರು, ಹಾಗೂ ನನ್ನ ಅಕ್ಕ ಎಲ್ಲರೂ ನನಗೆ ಸಹಾಯ ಮಾಡಿದ್ದಾರೆ. ಹಾಗಾಗಿ ಇಷ್ಟು ಅಂಕಗಳನ್ನು ಗಳಿಸಲು ಸಾಧ್ಯವಾಯಿತು ಎಂದು ತಿಳಿಸಿದ್ದಾನೆ. ನಾನೇನು ಜಾಸ್ತಿ ಓದುತ್ತಿರಲಿಲ್ಲ. ಮಧ್ಯವಾರ್ಷಿಕ ಪರೀಕ್ಷೆ ಬಳಿಕ ಪ್ರತಿದಿನ ಎರಡು ಗಂಟೆಗಳ ಕಾಲ ಓದುತ್ತಿದ್ದೆ. ಆಮೇಲೆ ಪೂರ್ವಭಾವಿ ಪರೀಕ್ಷೆಗಳು ಪ್ರಾರಂಭವಾದಾಗ ಎಲ್ಲಾ ವಿಷಯಗಳಿಗೂ ಟೈಮ್ ಟೇಬಲ್ ಮಾಡಿಕೊಂಡು ಅದರ ಪ್ರಕಾರ ಸ್ವಲ್ಪ ಹೆಚ್ಚು ಓದುತ್ತಿದ್ದೆ. ಯಾವುದೇ ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ಪ್ರತಿನಿತ್ಯ ಶಿಕ್ಷಕರು ಹೇಳಿದ ಹಾಗೆ ಓದುತ್ತಿದ್ದೆ ಎಂದು ತಿಳಿಸಿದ್ದಾರೆ.

ಅಪ್ಪ ಎಂಜಿನಿಯರ್ ಆಗಿದ್ದವರು. ಈಗ ರಾಮರಾಜ್ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಮ್ಮ ಗೃಹಿಣಿ. ಅಕ್ಕ ಇದೇ ಶಾಲೆಯಲ್ಲಿ ಓದಿ, 623 ಅಂಕ ಗಳಿಸಿದ್ದಳು. ಸದ್ಯ ಬಿಇ ಓದುತ್ತಿದ್ದಾಳೆ. ಮನೆಯಲ್ಲಿ ನಾನು ಹೆಚ್ಚು ಓದುತ್ತಿರಲಿಲ್ಲ, ಶಾಲೆಯಲ್ಲೇ ಜಾಸ್ತಿ ಓದುತ್ತಿದ್ದದ್ದು. ಶಿಕ್ಷಕರು ಮಾಡುತ್ತಿದ್ದ ಪರೀಕ್ಷೆಗಳು, ಪೂರ್ವಭಾವಿ ಪರೀಕ್ಷೆಗಳನ್ನು, ಸ್ಪರ್ಧೆಗಳನ್ನು ಮಾಡುತ್ತಿದ್ದರು. ಹಾಗಾಗಿ ಇಷ್ಟು ಅಂಕ ಬಂದಿವೆ ಎಂದು ಶಿಕ್ಷಕರ ಸಹಾಯದ ಬಗ್ಗೆ ಧನುಷ್ ನೆನಪಿಸಿಕೊಂಡಿದ್ದಾನೆ.

ಜಿಲ್ಲೆಗಳ ಶೇಕಡವಾರು ಉತ್ತೀರ್ಣ ಫಲಿತಾಂಶ



ಶಿವಮೊಗ್ಗದ 3 ವಿದ್ಯಾರ್ಥಿಗಳಿಗೆ 625ಕ್ಕೆ 625 ಅಂಕ

ಶಿವಮೊಗ್ಗ: ಎಸ್‌ಎಸ್‌ಎಲ್‌ಸಿ ಫಲಿತಾಂಶ ದಲ್ಲಿ ಜಿಲ್ಲೆಯ ಮೂವರು ವಿದ್ಯಾರ್ಥಿಗಳು 625 ಕ್ಕೆ 625 ಅಂಕಗಳನ್ನು ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಶಿವಮೊಗ್ಗದ ರಾಮಕೃಷ್ಣ ವಿದ್ಯಾನಿಕೇತನ ಶಾಲೆಯ ನಿತ್ಯಾ ಕುಲಕರ್ಣಿ, ಪ್ರಿಯದರ್ಶಿನಿ ಶಾಲೆಯ ನಮನ ಹಾಗೂ ಆದಿಚುಂಚನಗಿರಿ ಶಾಲೆಯ ಸಹಿಷ್ಣು ಅವರು 625 ಅಂಕಗಳನ್ನು ಪಡೆದುಕೊಂಡಿದ್ದಾರೆ. ತಮ್ಮ ಮಕ್ಕಳ ಸಾಧನೆಯನ್ನು ನೋಡಿ ಪೋಷಕರು ಹಾಗೂ ಶಿಕ್ಷಕರು ಸಂತಸ ಪಟ್ಟಿದ್ದಾರೆ.

ಶಿವಮೊಗ್ಗದ ರಾಮಕೃಷ್ಣ ವಿದ್ಯಾನಿಕೇ ತನದ 10ನೇ ತರಗತಿಯ ವಿದ್ಯಾರ್ಥಿನಿ ನಿತ್ಯಾ ಎಂ. ಕುಲಕರ್ಣಿ ಅವರು 625ಕ್ಕೆ 625 ಅಂಕಗಳನ್ನು ಪಡೆದುಕೊಂಡಿದ್ದಾರೆ. ನಿತ್ಯಾ ಅವರು ಫಲಿತಾಂಶವನ್ನು ನೋಡಿ ತಮ್ಮ ಸಂತಸವನ್ನು ಹಂಚಿಕೊಳ್ಳಲು ಶಾಲೆಗೆ ಆಗಮಿಸಿದರು. ಈ ವೇಳೆ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ನಿತ್ಯಾರಿಗೆ ಸಿಹಿ ತಿನ್ನಿಸಿ ಶುಭಕೋರಿದರು. ಈ ವೇಳೆ ನಿತ್ಯಾ ಅವರು ತಮ್ಮ ಶಾಲೆಯ ಶಿಕ್ಷಕರ ಕಾಲಿಗೆ ಬಿದ್ದು ನಮಸ್ಕಾರ ಮಾಡಿ, ಆಶೀರ್ವಾದ ಪಡೆದುಕೊಂಡರು. ಮಗಳ ಶಿಕ್ಷಣಕ್ಕಾಗಿಯೇ ಕಲಬುರಗಿಯಿಂದ ಶಿವಮೊಗ್ಗಕ್ಕೆ ಆಗಮಿಸಿದ ಕುಲಕರ್ಣಿ ಕುಟುಂಬದಲ್ಲಿ ಸಂಭ್ರಮ ಮನೆ ಮಾಡಿದೆ.

ವಿದ್ಯಾರ್ಥಿನಿ ನಿತ್ಯಾ ಎಂ. ಕುಲಕರ್ಣಿ ಅವರಿಗೆ ಸಿಹಿ ತಿನ್ನಿಸಿದ ಪೋಷಕರು .

ವೈದ್ಯೆಯಾಗುವ ಕನಸು

ವಿದ್ಯಾರ್ಥಿನಿ ನಿತ್ಯಾ ಎಂ ಕುಲಕರ್ಣಿ ಮಾತನಾಡಿ, ನಮ್ಮ ಶಾಲೆಯಲ್ಲಿ ಉತ್ತಮವಾಗಿ ಪಾಠ ಮಾಡುತ್ತಿದ್ದರು. ಏನೇ ಅನುಮಾನಗಳಿದ್ದರೂ ಸಹ ತಿಳಿಸಿ ಹೇಳುತ್ತಿದ್ದರು. ನನ್ನ ಇಂದಿನ ರಿಸಲ್ಟ್‌ಗೆ ಶಾಲೆಯ ಎಲ್ಲಾ ಶಿಕ್ಷಕರೇ ಕಾರಣ. ಚೆನ್ನಾಗಿ ಓದಲು ನನಗೆ ಪ್ರೋತ್ಸಾಹ ನೀಡುತ್ತಿದ್ದರು. ಮನೆಯಲ್ಲೂ ಸಹ ಉತ್ತಮವಾದ ವಾತಾವರಣ ಇತ್ತು. 10 ಗಂಟೆ 12 ಗಂಟೆ ಓದುವುದರ ಬದಲು ಓದುವುದನ್ನೇ ಚೆನ್ನಾಗಿ ಓದಿದರೆ ಉತ್ತಮವಾಗಿ ಫಲಿತಾಂಶ ಪಡೆಯಬಹುದು. ಮುಂದೆ ವೈದ್ಯಳಾಗಬೇಕೆಂಬ ಕನಸನ್ನು ಹೊಂದಿದ್ದೇನೆ' ಎಂದು ತಿಳಿಸಿದರು.

ಎಸ್ಸೆಸ್ಸೆಲ್ಸಿ : 22 ಟಾಪರ್ಸ್

← ಮೊದಲಪುಟದಿಂದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಕಳೆದ ವರ್ಷಕ್ಕಿಂತ ಈ ವರ್ಷ ಫಲಿತಾಂಶ ಹೆಚ್ಚಾಗಿದೆ ಎಂದು ಹೇಳಿದ್ದರೂ ತಾಂತ್ರಿಕವಾಗಿ ಈ ವರ್ಷದ ಫಲಿತಾಂಶ ಕುಸಿತವಾಗಿದೆ. ಸಚಿವರ ಪ್ರಕಾರ, ಕಳೆದ ಬಾರಿ ಶೇ.20ರಷ್ಟು ವಿದ್ಯಾರ್ಥಿಗಳು ಕೃಪಾಂಕ ನೀಡಿದ್ದರಿಂದ ಪಾಸಾಗಿದ್ದರು. ಈ ಬಾರಿ ಯಾವುದೇ ಕೃಪಾಂಕ ನೀಡದಿದ್ದರೂ, ಶೇ.62.34ರಷ್ಟು ವಿದ್ಯಾರ್ಥಿಗಳು ಪಾಸಾಗಿ ದ್ದಾರೆ. ಆದ್ದರಿಂದ ಕಳೆದ ವರ್ಷಕ್ಕಿಂತ ಈ ಬಾರಿಯ ಫಲಿತಾಂಶ 'ಉತ್ತಮ'ವಾಗಿದೆ ಎನ್ನುವುದು ಸಚಿವರ ವಾದವಾಗಿದೆ. ಆದರೆ 2023-24ನೇ ಸಾಲಿನಲ್ಲಿ ಶೇ.73.40 ಫಲಿತಾಂಶ ಬಂದಿದ್ದರೆ, ಈ ಬಾರಿ 62.34ರಷ್ಟು ಫಲಿತಾಂಶ ಬಂದಿದೆ.

ದ್ವಿತೀಯ ಪಿಯುಸಿ ಮಾದರಿಯಲ್ಲಿಯೇ ಎಸ್‌ಎಸ್‌ಎಲ್‌ಸಿ ಫಲಿತಾಂಶವೂ ಕುಸಿತವಾಗಿರುವುದನ್ನು ಸಮರ್ಥಿಸಿ ಕೊಂಡಿರುವ ಸಚಿವ ಮಧು ಬಂಗಾರಪ್ಪ ಅವರು, ಈ ಹಿಂದಿನ ವರ್ಷ ಕೃಪಾಂಕ ನೀಡಿದ್ದರಿಂದ ಫಲಿತಾಂಶ ಹೆಚ್ಚಾಗಿತ್ತು. ಈ ಬಾರಿ ಕೃಪಾಂಕ ನೀಡುವುದು ಬೇಡ ಎನ್ನುವ ಸ್ಪಷ್ಟ ತೀರ್ಮಾನಕ್ಕೆ ಬರಲಾಗಿತ್ತು. ಇದರೊಂದಿಗೆ ರಾಜ್ಯಾದ್ಯಂತ ವೆಬ್‌ಕ್ಯಾಸ್ಟಿಂಗ್ ಮೂಲಕ ಪಾರದರ್ಶಕ ಪರೀಕ್ಷೆ ನಡೆಸಲಾಗಿದೆ. ಈ ಎಲ್ಲ ಕಾರಣಗಳಿಗೆ ಫಲಿತಾಂಶದಲ್ಲಿ ಕುಸಿತ ಕಂಡಿದೆ. ಆದರೆ ಶ್ರಮಪಟ್ಟ ವಿದ್ಯಾರ್ಥಿಗಳಿಗೆ ಪ್ರತಿಫಲ ಸಿಕ್ಕಿದೆ ಎಂದು ಸಮರ್ಥಿಸಿಕೊಂಡರು.

ಕೃಪಾಂಕ ನೀಡದಿರುವುದೇ ಕುಸಿತಕ್ಕೆ ಕಾರಣ

ಕಳೆದ ವರ್ಷ ಫಲಿತಾಂಶ ಕುಸಿತವಾಗದಿರಲಿ ಎನ್ನುವ ಕಾರಣಕ್ಕೆ ಶೇ.20ರಷ್ಟು ಕೃಪಾಂಕ ನೀಡಲಾಗಿತ್ತು. ಇದರೊಂದಿಗೆ ಉತ್ತೀರ್ಣದ ಕನಿಷ್ಠ ಅಂಕವನ್ನು ಶೇ.35 ರಿಂದ 25ಕ್ಕೆ ಇಳಿಸಿತ್ತು. ಇಷ್ಟಾದರೂ ಫಲಿತಾಂಶ ಇಳಿಕೆಯಾಗಿತ್ತು. ಆದರೆ ಈ ಪ್ರಮಾಣದಲ್ಲಿ ಕೃಪಾಂಕ ನೀಡಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಶಿಕ್ಷಣ ತಜ್ಞರು ವಿರೋಧಿಸಿದ್ದರು. ಆದ್ದರಿಂದ ಈ ಬಾರಿ ಕೃಪಾಂಕ ನೀಡದಿರಲು ಸರಕಾರ ತೀರ್ಮಾನಿಸಿತ್ತು.

ಪಾನ್‌ಶಾಪ್ ದಂಪತಿ ಮಗಳು ಪ್ರಥಮ

ಬೆಂಗಳೂರು: ಬೀಡಾ ಅಂಗಡಿ(ಪಾನ್‌ಶಾಪ್) ನಡೆಸುತ್ತಿರುವ ದಂಪತಿ ಮಗಳು ಧನಲಕ್ಷ್ಮಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಮೂಲತಃ ಹಾಸನದವರಾದ ಮೋಹನ್, ವೀಣಾ ದಂಪತಿ ನಗರದಲ್ಲಿ ಪಾನ್‌ಶಾಪ್‌ನಲ್ಲಿ ನಡೆಸುತ್ತಿದ್ದಾರೆ. ಇವರ ಪುತ್ರಿ ಧನಲಕ್ಷ್ಮಿ ಕೆಂಪೇಗೌಡ ನಗರದ ಸೆಂಟ್ ಯಶ್ ಪಬ್ಲಿಕ್ ಶಾಲೆ ವಿದ್ಯಾರ್ಥಿನಿಯಾಗಿದ್ದು, 625 ಕ್ಕೆ 625 ಪೂರ್ಣಾಂಕ ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ತನ್ನ ಯಶಸ್ಸಿನ ಕುರಿತು ವಿಶ್ವವಾಣಿಯೊಂದಿಗೆ ಸಂತಸ ಹಂಚಿಕೊಂಡ ಧನಲಕ್ಷ್ಮಿ, ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದು ತುಂಬಾ ಸಂತೋಷವಾಗಿದೆ. ನಾನು ಎಸ್‌ಎಸ್‌ಎಲ್‌ಸಿಗೆ ಬಂದ ಮೊದಲ ದಿನವೇ ಅಂತಿಮ ಪರೀಕ್ಷೆಯಲ್ಲಿ ಔಟ್ ಆಫ್ ಔಟ್ ತಗೋಬೇಕು ಅಂತ ಆಸೆ ಇತ್ತು, ಅದರಂತೆಯೇ ಓದಿ ಪೂರ್ಣಾಂಕ ಪಡೆದೆ. ಈ ಯಶಸ್ಸು ಪಡೆಯಲು ತಂದೆ ತಾಯಿಯರ ಹಾಗೂ ಶಾಲೆಯ ಶಿಕ್ಷಕರು ಮತ್ತು ಆಡಳಿತ ಮಂಡಳಿಯ ಸಹಕಾರದಿಂದ ಸಾಧ್ಯವಾಯಿತು. ನಮ್ಮ ಶಾಲೆಯಲ್ಲಿ ಬೆಳಗ್ಗೆ 8 ರಿಂದ ಸಂಜೆ 6 ರ ವರೆಗೆ ನಿರಂತವಾಗಿ ಅಧ್ಯಯನ ಮಾಡಿಸುತ್ತಿದ್ದರು. ನಿರಂತರ ಓದು, ಸ್ವತಂತ್ರವಾಗಿ ಅಭ್ಯಾಸ ಮಾಡುತ್ತಿದ್ದೆ. ಇತರ ಯಾವುದೇ ಇತರ ಭೋದನಾ ಕೇಂದ್ರದಲ್ಲಿ ಕಲಿತಿಲ್ಲ. ದಿನದಲ್ಲಿ ಸತತ 8 ಗಂಟೆಗಳಿಗೂ ಹೆಚ್ಚಿನ ನಿರಂತರ ಓದು ವುದು ಮತ್ತು ತರಗತಿಗಳಲ್ಲಿ ನಡೆಯುವ ಪಾಠ ಪ್ರವಚನಗಳನ್ನು ಗಮನವಿಟ್ಟು ಕೇಳಿ ಅದನ್ನು ಅಭ್ಯಯಿಸುತ್ತಿದ್ದೆ . ಮುಖ್ಯವಾಗಿ ಕಳೆದ ಮೂರು ನಾಲ್ಕು ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಓದಿದ್ದು ನನಗೆ ಸಹಾಯವಾಯಿತು. ನಮ್ಮ ತಂದೆ ತಾಯಿ ಯ ಆಸೆಯಂತೆ ನಿರಂತರ ಓದು ಮುಂದುವರೆಸಿ ಸಿಎ ಆಗಬೇಕೆಂದಿದ್ದೇನೆ ಎಂದು ತಿಳಿಸಿದ್ದಾರೆ.

SESHADRIPURAM INSTITUTIONS
ADMISSIONS OPEN for 1st PUC : 2025-26
SESHADRIPURAM INDEPENDENT PRE-UNIVERSITY COLLEGE
27, Nagappa Street, Seshadripuram, Bengaluru-560 020.
Prof. R. V. Manjunath, Principal, Tel: 22955358. website: spucmain.ac.in
COMMERCE: MSBA / MEBA / SEBA / CEBA | SCIENCE: PCMB / PCME / PCMCs
SESHADRIPURAM COMPOSITE PRE-UNIVERSITY COLLEGE
40, Girls' School Street, Seshadripuram, Bengaluru-560 020.
Prof G. K. Manjunath, Principal, Tel: 22955365. website: scpucblr.ac.in
COMMERCE: MSBA / MEBA / SEBA / CEBA | SCIENCE: PCMB / PCME / PCMCs
SESHADRIPURAM PRE-UNIVERSITY COLLEGE
Yelahanka New Town, Bengaluru-560 064.
Prof. T. Doddegowda, Principal, Tel: 22955372. website: www.scpuc.ac.in
COMMERCE: MSBA / MEBA / SEBA / CEBA | SCIENCE: PCMB / PCMCs
SESHADRIPURAM INDEPENDENT PRE-UNIVERSITY COLLEGE
18, 2nd Main, Kengeri Satellite Town, Bengaluru-560 060,
Dr. Manjunath R. Principal, Tel: 22955377. website: www.spuc.ac.in
COMMERCE: MEBA / SEBA / CEBA | SCIENCE: PCMB / PCME / PCMCs
SESHADRIPURAM EVENING PRE-UNIVERSITY COLLEGE
27, Nagappa Street, Seshadripuram, Bengaluru-560 020.
Prof. R. Mahalakshmi, Principal, Tel: 22955359. website: www.sepuc.ac.in
COMMERCE: HEBA / CEBA
N. R. Pandith Aradhya, President
Dr. Wooday P. Krishna, Honorary General Secretary

ವಿಶ್ವವಾಣಿ

ಸಂಪಾದಕೀಯ

ಅಭಿಮಾನವೋ ಅತಿರೇಕವೋ?

ಚಿತ್ರಮಂದಿರಗಳಲ್ಲಿ ಸೂಪರ್‌ಸ್ಟಾರ್‌ಗಳ ಚಲನಚಿತ್ರ ಬಿಡುಗಡೆಯಾದಾಗ, ಕೌಂಟರ್‌ನಲ್ಲಿ ಕೆಲವೇ ಕ್ಷಣದಲ್ಲಿ (!) ಟಿಕೆಟ್ಟುಗಳೆಲ್ಲ ಮಾರಾಟವಾಗಿ, ಕಾಳಸಂತೆಕೋರರ ಕೈಯಲ್ಲಿ ಅವು ನಲಿದಾಡುವ ದೃಶ್ಯವನ್ನು ಬಹುತೇಕ ಕಂಡಿರುತ್ತೇವೆ. ತಮ್ಮ ಸಿನಿಮಾದ ಟಿಕೆಟ್ಟುಗಳು ಹೀಗೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ ಎಂಬುದು ಸಂಬಂಧಪಟ್ಟವರಿಗೆ ಜಂಭದ ಬಾಬತ್ತಾಗಿ ಪರಿಣಮಿಸಬಹುದು. ಒಂದಿಷ್ಟು ಅಭಿಮಾನಿಗಳು 'ಬ್ಲ್ಯಾಕ್‌ನಲ್ಲಿ ಟಿಕೆಟ್ ಖರೀದಿಸಿ ಚಿತ್ರವನ್ನು ವೀಕ್ಷಿಸಿದೆ' ಎಂದು ಹೇಳಿಕೊಳ್ಳುವುದೂ ಉಂಟು. ಇವೆಲ್ಲ ಒಂದು ಮಿತಿಯಲ್ಲಿದ್ದರೆ ಪರವಾಗಿಲ್ಲ. ಅದು ಅತಿರೇಕವಾದರೆ ಅಸಹನೀಯ. ಶನಿವಾರದ ಐಪಿಎಲ್ ಪಂದ್ಯದ ಟಿಕೆಟ್ ಮಾರಾಟದ ಪರಿಯನ್ನು ಕಂಡಾಗ ಇಂಥದೊಂದು ಸಂದರ್ಭದ ನೆನಪಾಗುತ್ತದೆ. ಕಾರಣ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವಿನ ಪಂದ್ಯದ ಒಂದಷ್ಟು ಟಿಕೆಟ್ಟುಗಳು ಕಾಳಸಂತೆಯಲ್ಲಿ ದಾಖಲೆ ಬೆಲೆಗೆ ಮಾರಾಟವಾಗಿವೆಯಂತೆ. 50 ಸಾವಿರ ಮುಖಬೆಲೆಯ 'ವಿಐಪಿ' ವರ್ಗದ ಟಿಕೆಟ್ಟು ಒಂದೂವರೆ ಲಕ್ಷ ರುಪಾಯಿಗೆ ಮಾರಾಟವಾಗಿರುವುದು ಈ ಅತಿರೇಕಕ್ಕೊಂದು ನಿದರ್ಶನ. ಇದು ಮಿಕ್ಕ ವರ್ಗಕ್ಕೂ ಅನ್ವಯವಾಗುವ ಮಾತು. ಊಟ-ಉಪಾಹಾರದ ಸೇವನೆಯಿಂದ ಅಥವಾ ಮನರಂಜನೆಯಿಂದ ಸಿಗುವ ಸಮಾಧಾನ/ಸುಖದ ವಿಷಯ ಬಂದಾಗ ದುಡ್ಡಿನ ಮುಖ ನೋಡಬಾರದು ಎಂಬುದೇನೋ ಒಂದು ಹಂತದವರೆಗೆ ಒಪ್ಪುವ ಮಾತೇ; ಆದರೆ ಕೆಲವೇ ಗಂಟೆಗಳ ಮನರಂಜನೆಗೆ ಹೀಗೆ ಸಾವಿರಗಟ್ಟಲೆ, ಲಕ್ಷಗಟ್ಟಲೆ ಪ್ರಮಾಣದಲ್ಲಿ ದುಡ್ಡನ್ನು ಪೋಲುಮಾಡುವುದಿದೆಯಲ್ಲಾ, ಅದು ಅಷ್ಟೊಂದು ಸ್ವೀಕಾರಾರ್ಹವಲ್ಲವೇನೋ. 'ನಮ್ಮ ದುಡ್ಡು, ನಮ್ಮ ಮೋಜು, ಅದನ್ನು ಕೇಳಲು ನೀವ್ಯಾರು?' ಎನ್ನುವವರಿಗೆ ಇಲ್ಲಿ ಉತ್ತರವಿಲ್ಲ. ಆದರೆ ಪರಿಶ್ರಮದ ದುಡಿಮೆಯ ಹಣವನ್ನು ಹೀಗೆ ವೃಥಾ ಹುಡಿಗಟ್ಟುವುದು ಮತ್ತು ಅದು ಯಾರದೋ ಮಡಿಲಿಗೆ ಸೇರುವುದು- ಇವೆಲ್ಲಾ ಯಾವ ಪುರುಷಾರ್ಥಕ್ಕಾಗಿ? ಎಂಬುದಿಲ್ಲಿ ಪ್ರಶ್ನೆ. ಆದರೆ ಇದಕ್ಕೆ ಉತ್ತರಿಸುವವರಾರು?!

ಸೊಂಪಾದಕೀಯ

ಇದು ಮಂಕೀ ಬಾತ್

ಜನ್ಮದಿನ ಅನ್ನೋದು ಎಲ್ಲರಿಗೂ ಅತ್ಯಂತ ಖುಷಿಯ ವಿಷಯ. 'ಏಜ್ ಈಸ್ ಜಸ್ಟ್ ಎ ನಂಬರ್' ಅಂತ ಎಲ್ಲರೂ ತಮ್ಮ ಹುಟ್ಟುಹಬ್ಬವನ್ನು ಖುಷಿಯಿಂದ ಆಚರಿಸಿಕೊಳ್ಳುತ್ತಾರೆ. ಅಯ್ಯೋ, ಹುಟ್ಟು ಹಬ್ಬದಲ್ಲಿ ಏನ್ ವಿಶೇಷ ಇದೆ. ಒಂದು ವರ್ಷ ಜಾಸ್ತಿ ಆಯ್ತು ಅಷ್ಟೇ ಅಂತ ಮೂಗು ಮುರಿಯುವವರು ಕೂಡಾ ಹ್ಯಾಪಿ ಬರ್ತ್ ಡೇ ಅಂದ್ರೆ ಒಳಗೊಳಗೇ ಖುಷಿಪಡ್ತಾರೆ. ಆದರೆ ಇದು ಮನುಷ್ಯರ ವಿಷಯ. ಈಗ ಮನುಷ್ಯರೆಲ್ಲರೂ ಸೇರಿಕೊಂಡು ಕೋತಿಯೊಂದರ ಜನ್ಮದಿನ ಆಚರಣೆ ಮಾಡುವ ವಿಷಯ ಹಾವೇರಿಯಿಂದ ಬಂದಿದೆ. ಇಲ್ಲೊಂದು ಇಂಟರೆಸ್ಟಿಂಗ್ ಕಥೆ ಇದೆ. ನಾಲ್ಕು ವರ್ಷಗಳ ಹಿಂದೆ

ಕೋತಿ ಮರಿಯೊಂದು ರಾಣೆಬೆನ್ನೂರಿನ ಕಾಕೋಳ ಗ್ರಾಮದ ಕುಟುಂಬ ವೊಂದಕ್ಕೆ ಸಿಕ್ಕಿದೆ. ಅದು ಏಪ್ರಿಲ್ 29ರಂದು. ಹಾಗಾಗಿ ಈ ಕುಟುಂಬ ಪ್ರತಿ ವರ್ಷ ಈ ಕೋತಿಮರಿಯ ಬರ್ತ್ ಡೇಯನ್ನು ಏಪ್ರಿಲ್ 29ರಂದು ಸಂಭ್ರಮದಿಂದ ಆಚರಿಸುತ್ತದಂತೆ. ಈ ಕಾರಣಕ್ಕೆ ಇದನ್ನು 'ಮಂಕೀ ಬಾತ್' ಅನ್ನಬಹುದು. ಈ ಕೋತಿ ಮರಿಗೆ ಈ ಕುಟುಂಬದವರು ತಮ್ಮ ಮಕ್ಕಳಿಗೆ ತರುವಂತೆ ಹುಟ್ಟುಹಬ್ಬಕ್ಕೆ ಹೊಸಬಟ್ಟೆಯನ್ನು ಕೂಡಾ ತಂದಿದ್ದಾರೆ. ಕೋತಿಗೆ ಹಾಕಿಸಿ ಸಂಭ್ರಮ ಪಟ್ಟಿದ್ದಾರೆ. ಇದಕ್ಕೆಲ್ಲ ಕಾರಣ ಅಂದ್ರೆ, ಈ ಕೋತಿ ಮರಿ ಮನೆಗೆ ಬಂದಮೇಲೆ ಅವರ ಕುಟುಂಬದವರ ಅದೃಷ್ಟ ಖುಲಾಯಿಸಿದೆ ಯಂತೆ. ಜತೆಗೆ ಈ ಕೋತಿ ಮನೆ ಮತ್ತು ಜಮೀನಿನ ಫಸಲನ್ನು ಕಾಯುತ್ತಂತೆ. ಹಾಗಾಗಿ ಮನೆಯವರಿಗೆ ಕೋತಿ ಮರಿ ಮೇಲೆ ಇನ್ನಿಲ್ಲದ ಪ್ರೀತಿ. ಹೀಗೆ ಕೋತಿ ಮರಿಗೂ ಬರ್ತ್ ಡೇ ಅಂತ ಆಗಿರೋ ವಿಷಯ ಕೇಳಿದ ಮೇಲೆ 'ಎವ್ವೆರಿ ಡಾಗ್ ಹ್ಯಾಸ್ ಇಟ್ಸ್ ಡೇ' ಎನ್ನುವಂತೆ 'ದಿಸ್ ಮಂಕೀ ಹ್ಯಾಸ್ ಇಟ್ಸ್ ಬರ್ತ್ ಡೇ' ಎನ್ನಬಹುದು. ಒಟ್ಟಿನಲ್ಲಿ ಈ ವರ್ಷ ಕೂಡಾ ಏಪ್ರಿಲ್ 29ಕ್ಕೆ ಕೇಕ್ ಕತ್ತರಿಸಿ ಬರ್ತ್ ಡೇ ಆಚರಿಸಿಕೊಂಡಿದ್ದಾನೆ ಈ ಕಪಿರಾಯ. ಇಲ್ಲಿ ಇನ್ನೊಂದು ವಿಶೇಷ ಅಂದ್ರೆ, ಈ ಕೋತಿ ಮರಿಗೆ ಹನುಮಂತ ಗೌಡ ಅಂತ ಹೆಸರಿಡಲಾಗಿದೆ. ಆ ಮೂಲಕ ಕೋತಿ ಮರಿ ಕೂಡಾ ಜಾತಿ ಬಳಗಕ್ಕೆ ಸೇರಿಕೊಂಡಿದೆ. ಆದರೆ ಮುಂದೆ ನಡೆಯಲಿರುವ ಜಾತಿಗಣತಿ ವೇಳೆಯಲ್ಲಿ ಈ ಕೋತಿ ಮರಿಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರಾ ಅನ್ನೋ ಪ್ರಶ್ನೆಗೆ ಮಾತ್ರ ಉತ್ತರ ಗೊತ್ತಿಲ್ಲ.

ಸಂಪಾದಕರ ಸದ್ಯಶೋಧನೆ

ಹಾಂಕೋ ಅಂದರೇನು?

'ನೀವು ಜಪಾನಿಗೆ ಹೋದಾಗ ಹಾಂಕೋ ಬಗ್ಗೆ ಕೇಳಿದ್ದೀರಾ?' ಎಂದು ಸ್ನೇಹಿತರೊಬ್ಬರು ಕೇಳಿದರು. ನಾನು ಆ ಬಗ್ಗೆ ಕೇಳಿದ್ದೆ. ಆದರೆ ನನಗೆ ಅದರ ಬಗ್ಗೆ ಹೆಚ್ಚಿನ ವಿವರಗಳು ಗೊತ್ತಿರಲಿಲ್ಲ. ಜಪಾನಿನಲ್ಲಿ ಎಂಟು ವರ್ಷಗಳಿಂದ ಇರುವ ಸ್ನೇಹಿತರೊಬ್ಬರು ಹಾಂಕೋ ಬಗ್ಗೆ ಸಾಕಷ್ಟು ಮಾಹಿತಿ ನೀಡಿದರು. ಜಪಾನಿನ ವಿಶಿಷ್ಟ ಸಂಸ್ಕೃತಿಗಳಲ್ಲಿ ಹಾಂಕೋ ಅಥವಾ ಇನ್ಕಾನ್ ಎಂಬುದು ಸಹ ಒಂದು. ಇದು ಜಪಾನಿನ ಶ್ರದ್ಧೆ, ಭದ್ರತೆ ಮತ್ತು ನ್ಯಾಯದ ಮೌಲ್ಯಗಳ ಪ್ರತೀಕ. 'ಹಾಂಕೋ' ಎನ್ನುವುದು ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯ ಅಧಿಕೃತ ಮುದ್ರೆ. ಜಪಾನಿನ ಅನೇಕ ಕಾನೂನು ಪ್ರಕ್ರಿಯೆಗಳಲ್ಲೂ ಇದಕ್ಕೆ ಅತೀವ ಪ್ರಾಮುಖ್ಯ. ಇದನ್ನು ಸಾಮಾನ್ಯವಾಗಿ ಮರದಿಂದ, ಆನೆಯ ದಂತದಿಂದ, ಕಲ್ಲಿನಿಂದ ಅಥವಾ ಪ್ಲಾಸ್ಟಿಕ್‌ನಿಂದ ತಯಾರಿಸುತ್ತಾರೆ. ಈ ಮುದ್ರೆಯನ್ನು ಶ್ರೇಣಿಯಂತೆ ವಿವಿಧ ರೀತಿಯಲ್ಲಿ ಉಪಯೋಗಿಸಲಾಗುತ್ತದೆ. ಇದನ್ನು ಭಾರತೀಯ ಅಥವಾ ಪಾಶ್ಚಾತ್ಯ ದೇಶಗಳ ಸಹಿಗೆ ಸಮಾನವಾಗಿ ಪರಿಗಣಿಸಬಹುದು. ಹಾಂಕೋ ಪದ್ಧತಿ ಚೀನಾದಿಂದ ಜಪಾನಿಗೆ ಸುಮಾರು ಎಂಟನೇ ಶತಮಾನದಲ್ಲಿ ಬಂದಿತು. ಪ್ರಾಚೀನ ಕಾಲದಲ್ಲಿ ಇದನ್ನು ಸಾಮಂತರು ಅಥವಾ ಅರಸರು ಮಾತ್ರ ಬಳಸುತ್ತಿದ್ದರು. ಕಾಲಕ್ರಮೇಣ ಸಾಮಾನ್ಯ ಜನತೆಗೂ ಈ ಪದ್ಧತಿ ಪ್ರವೇಶವಾಯಿತು. ಈಗ ಜಪಾನಿನ ಪ್ರತಿಯೊಬ್ಬ ವ್ಯಕ್ತಿಗೆ ತನ್ನದೇ ಆದ ಹಾಂಕೋ ಇರುತ್ತದೆ. ಅದನ್ನು ಬ್ಯಾಂಕ್ ಖಾತೆ ತೆರೆಯಲು, ಮನೆ ಖರೀದಿಸಲು, ಉದ್ಯೋಗ ಒಪ್ಪಂದಗಳಿಗೆ ಬಳಸುತ್ತಾರೆ. ಹಾಂಕೋದಲ್ಲಿ ಬಹು ಪ್ರಕಾರಗಳಿವೆ. ಅವುಗಳ ಬಳಕೆಯ ಉದ್ದೇಶದಿಂದ ಅವನ್ನು ವಿಭಜನೆ ಮಾಡಲಾಗುತ್ತದೆ. ಉದಾಹರಣೆಗೆ, ಜಿತ್ಸು-ಇನ್. ಇದು ಅಧಿಕೃತವಾಗಿ ನೋಂದಾಯಿತ ಮುದ್ರೆ. ನೋಟರಿ ಕಚೇರಿಯಲ್ಲಿ ಇದನ್ನು ನೋಂದಾಯಿಸಿ ಅಧಿಕೃತವಾಗಿ ಬಳಸಲಾಗುತ್ತದೆ. ಮನೆ ಖರೀದಿ, ಆಸ್ತಿ ಹಸ್ತಾಂತರ, ದೊಡ್ಡ ವ್ಯವಹಾರಗಳಲ್ಲಿ ಈ ಮುದ್ರೆ ಬೇಕೇ ಬೇಕು. ಎರಡನೆಯದು, ಗಿನ್-ಕೋ-ಇನ್. ಇದು ಬ್ಯಾಂಕ್ ವ್ಯವಹಾರ ಗಳಿಗಾಗಿ ಬಳಸುವ ಹಾಂಕೋ. ಬ್ಯಾಂಕ್ ಖಾತೆ ತೆರೆಯುವಾಗ ಈ ಮುದ್ರೆ ಬೇಕಾಗುತ್ತದೆ. ಇದು ಸಾಮಾನ್ಯವಾಗಿ ಚಿಕ್ಕದಾಗಿ, ಒಬ್ಬ ವ್ಯಕ್ತಿಯ ಹೆಸರು ಮಾತ್ರ ಹೊಂದಿರುತ್ತದೆ. ಮೂರನೆಯದು, ಮಿಟೋಮ್-ಇನ್. ಈ ಮುದ್ರೆ ಸಾಮಾನ್ಯ ಹಾಗೂ ದೈನಂದಿನ ಬಳಕೆಗೆ ಬಳಸುವ ಮುದ್ರೆ. ಕೆಲಸದ ಸ್ಥಳದಲ್ಲಿ ಡಾಕ್ಯುಮೆಂಟ್‌ಗೆ ಒಪ್ಪಿಗೆಯ ಸೂಚನೆ ನೀಡಲು ಉಪಯೋಗಿಸಲಾಗುತ್ತದೆ. ನಾಲ್ಕನೆಯದು, ಶಾ-ಇನ್. ಇದು ಕಂಪನಿಗಳು ಉಪಯೋಗಿಸುವ ಹಾಂಕೋ. ಇದು ಕಂಪನಿಯ ಅಧಿಕೃತ ಮುದ್ರೆ. ಒಪ್ಪಂದಗಳು, ಲೆಕ್ಕಪತ್ರ ಗಳು, ಅಧಿಕೃತ ಪತ್ರಗಳಲ್ಲಿ ಇದನ್ನು ಬಳಸಲಾಗುತ್ತದೆ. ಹಾಂಕೋ ತಯಾರಿಸು ವುದು ಒಂದು ಕಲೆ. ಇದು ತಜ್ಞರ ಕೈಯಿಂದ ಅಥವಾ ಯಂತ್ರದ ಮೂಲಕ ತಯಾರಿಸಲ್ಪಡುತ್ತದೆ. ಕೆಲವರು ತಮ್ಮ ಹೆಸರನ್ನು ಕಾನ್ಜಿ ಅಕ್ಷರಗಳಲ್ಲಿ ಹಾಕಿಸು ತ್ತಾರೆ. ಕಾನ್ಜಿ ಅಕ್ಷರಗಳ ವಿಭಿನ್ನ ವಿನ್ಯಾಸದಿಂದ ಹಾಂಕೋ ವಿಭಿನ್ನವಾಗಿ ಕಾಣಿಸು ತ್ತವೆ. ಜಿತ್ಸು-ಇನ್ ಹಾಂಕೋ ನೋಂದಾಯಿಸುವಾಗ ಸ್ಥಳೀಯ ಮುನಿಸಿಪಲ್ ಕಚೇರಿಯಲ್ಲಿ ನೋಂದಣಿ ಮಾಡಬೇಕು. ಈ ನೋಂದಣಿಗೆ ಒಂದು ಪ್ರಮಾಣಪತ್ರ ನೀಡಲಾಗುತ್ತದೆ. ಇದನ್ನು ಮುಂದಿನ ಅಧಿಕೃತ ವ್ಯವಹಾರ ಗಳಲ್ಲಿ ಸಲ್ಲಿಸಬೇಕು. ಬ್ಯಾಂಕ್ ಖಾತೆ ತೆರೆಯುವಾಗ, ರಿಯಲ್ ಎಸ್ಟೇಟ್ ಖರೀದಿ ಅಥವಾ ಬಾಡಿಗೆ ಒಪ್ಪಂದ ಸಂದರ್ಭದಲ್ಲಿ, ಉದ್ಯೋಗ ಒಪ್ಪಂದ ಅಥವಾ ರಾಜೀನಾಮೆ ಪತ್ರ ಸಲ್ಲಿಸುವಾಗ, ವಿವಾಹ ನೋಂದಣಿ, ಕಾನೂನು ದಾಖಲೆಗಳಿಗೆ ಸಹಿ ಮಾಡುವಾಗ ಹಾಂಕೋ ಬಳಸಬೇಕಾಗುತ್ತದೆ. ಜಪಾನಿ ನಲ್ಲಿ ಸಹಿಗೆ ಹೋಲಿಸಿದರೆ ಹಾಂಕೋ ಹೆಚ್ಚು ವಿಶ್ವಾಸಾರ್ಹತೆ ಹೊಂದಿದೆ. ಮುದ್ರೆ ಹಾಕಿದರೆ ಅರ್ಥಪೂರ್ಣ ಒಪ್ಪಿಗೆ ಎಂದು ಪರಿಗಣಿಸುತ್ತಾರೆ. ಹಾಂಕೋ ಕಳೆದುಹೋದರೆ ಅಥವಾ ತಪ್ಪಾಗಿ ಬಳಸಿದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಹೀಗಾಗಿ ಹಲವರು ತಮ್ಮ ಹಾಂಕೋಗಳನ್ನು ಲಾಕರ್‌ನಲ್ಲಿ ಸುರಕ್ಷಿತವಾಗಿ ಇಡುತ್ತಾರೆ. ತಾಂತ್ರಿಕ ಪ್ರಗತಿಯಲ್ಲಿ ಡಿಜಿಟಲ್ ಸಹಿಗಳು ಹಾಗೂ ಬಯೋಮೆಟ್ರಿಕ್ ದೃಢೀಕರಣಗಳು ಬಂದಿದ್ದರೂ, ಹಾಂಕೋ ಇನ್ನೂ ಹಲವಾರು ಸ್ಥಳಗಳಲ್ಲಿ ಬಳಕೆಯಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಹಾಂಕೋ ಅವಶ್ಯಕತೆ ಬೇಕೇ? ಎಂಬ ಚರ್ಚೆಗಳು ಹೆಚ್ಚಾಗಿವೆ. ಡಿಜಿಟಲ್ ಸಹಿಗಳು ಹೆಚ್ಚು ಸುರಕ್ಷಿತವೆಂದು ಕೆಲವರು ವಾದಿಸುತ್ತಿದ್ದಾರೆ. ಆದರೆ ಸಂಸ್ಕೃತಿಯ ಪ್ರಾಮುಖ್ಯ ಹಾಗೂ ಮಾನವೀಯ ಸಂಬಂಧಗಳನ್ನು ನೆನಪಿಸಲು ಹಲವರು ಹಾಂಕೋ ಪದ್ಧತಿಯ ಉಳಿವಿಗೆ ಒತ್ತಾಯಿಸುತ್ತಾರೆ.

ಹಿಂದೂ ಹಬ್ಬಗಳ ಆರ್ಥಿಕತೆ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

ಹಿಂದೂ ಹಬ್ಬಗಳೆಂದರೆ ಭಾರತದಲ್ಲಿ ಎಲ್ಲಿಲ್ಲದ ಸಂಭ್ರಮ. ಅನೇಕ ತಲೆಮಾರುಗಳಿಂದ ನಡೆಸಿಕೊಂಡು ಬಂದಿರುವ ಹಬ್ಬಗಳನ್ನು ಮುಂದಿನ ತಲೆಮಾರಿಗೂ ಹಸ್ತಾಂತರಿಸುವ ಜವಾಬ್ದಾರಿ ಪ್ರತಿಯೊಬ್ಬ ಹಿಂದೂವಿನ ಮೇಲಿದೆ. ಹಿಂದೂ ಧರ್ಮದ ಆಚರಣೆಗಳನ್ನು ಮೂಢನಂಬಿಕೆ ಎಂದು ಹೇಳಿ ನೂತನ ತಲೆಮಾರಿನ ಯುವಜನತೆಯನ್ನು ದಾರಿ ತಪ್ಪಿಸುವ ಕೆಲಸವನ್ನು ಎಡಚರರು ನಿರಂತರವಾಗಿ ಮಾಡುತ್ತಲೇ ಬಂದಿದ್ದಾರೆ. ನಮ್ಮ ಮುತ್ತಾತ, ತಾತ, ಅಪ್ಪ ಹೇಳಿಕೊಟ್ಟ ಹಬ್ಬದ ಆಚರಣೆಗಳನ್ನು ಮುಂದಿನ ತಲೆಮಾರಿಗೆ ಹೇಳಿಕೊಡಬೇಕಾಗಿದೆ. ಹಿಂದೂಗಳ ಮನಸ್ಥಿತಿ ಹೇಗಿರುತ್ತದೆಯೆಂದರೆ, ಮನೆಯಲ್ಲಿ ಕಷ್ಟವಿದ್ದರೂ ಹಬ್ಬಗಳು ಬಂದಾಗ ಕನಿಷ್ಠ ಪಕ್ಷ ಒಂದು ಸಣ್ಣ ಸಿಹಿ ತಿಂಡಿಯನ್ನಾದರೂ ಮಾಡಿ ದೇವರ ಪೂಜೆ ಮಾಡುತ್ತಾರೆ. ಕಷ್ಟವಾದರೆ, ಯುಗಾದಿ ಹಬ್ಬಕ್ಕೆ ಒಂದು ಕೆ.ಜಿ.ಬೇಳೆ ಬಳಸಿ ಒಬ್ಬಟ್ಟು ಮಾಡುವ ಜಾಗದಲ್ಲಿ, ಕಾಲು ಕೆ.ಜಿ. ಬೇಳೆ ಬಳಸಿ ಒಬ್ಬಟ್ಟು ಮಾಡಬಹುದಷ್ಟೆ. ಆದರೆ ಹಬ್ಬ ಮಾಡುವುದನ್ನು ಮರೆಯುವುದಿಲ್ಲ. ಆಧುನಿಕ ಸಮಾಜದಲ್ಲಿ ಸಮಯದ ಕಾರಣವೊಡ್ಡಿ ಮನೆಯಲ್ಲಿ ಸಿಹಿ ತಿನಿಸು ಮಾಡುವುದನ್ನೇ ನಿಲ್ಲಿಸಿರುವ ವರ್ಗ ಒಂದೆಡೆಯಾದರೆ, ವಾರಾಂತ್ಯದಲ್ಲಿ ದೊಡ್ಡ ದೊಡ್ಡ ಪಾರ್ಟಿ ಮಾಡಲು ಆರಾಮಾಗಿ ಸಮಯ ಹೊಂದಿಸಿಕೊಳ್ಳುವ ವರ್ಗ ಮತ್ತೊಂದೆಡೆ.

ಭಾರತದ ಆರ್ಥಿಕತೆಯಲ್ಲಿ ಹಿಂದೂ ಹಬ್ಬಗಳು ದೊಡ್ಡ ಮಟ್ಟದ ಕೊಡುಗೆಯನ್ನು ನೀಡುತ್ತವೆ. ಯುಗಾದಿ, ದಸರಾ, ದೀಪಾವಳಿ, ನವರಾತ್ರಿ ಹಬ್ಬಗಳು ಬಂತೆಂದರೆ ಸಾಕು ಸಾಲು ಸಾಲಾಗಿ ನೂತನ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತವೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ನೂತನ ವಸ್ತುಗಳನ್ನು ಮಾರುಕಟ್ಟೆಗೆ ತರಲು ಹಿಂದೂ ಹಬ್ಬಗಳನ್ನು ಬಳಸಿಕೊಳ್ಳುತ್ತವೆ. ರಿಯಲ್ ಎಸ್ಟೇಟ್ ಕಂಪನಿಗಳು ತಮ್ಮ ನೂತನ ಯೋಜನೆಗಳನ್ನು ಹಿಂದೂ ಹಬ್ಬಗಳಂದು ಮಾರ್ಕೆಟ್ ಮಾಡುತ್ತವೆ. ನೂರಾರು ಕಂಪನಿಗಳು ಜಿದ್ದಿಗೆ ಬಿದ್ದು ತಮ್ಮ ವಸ್ತುಗಳ ಮೇಲೆ ಸಾಲು ಸಾಲು ರಿಯಾಯಿತಿ ನೀಡುತ್ತವೆ. ಗ್ರಾಹಕರನ್ನು ಸೆಳೆಯಲು ವಿನೂತನ ಮಾರ್ಕೆಟಿಂಗ್ ತಂತ್ರಗಾರಿಕೆಯನ್ನು ಹಿಂದೂ ಹಬ್ಬದಂದು ಬಳಸಿಕೊಳ್ಳುತ್ತವೆ. 'Confederation of Indian Industries' ನೀಡಿರುವ ವರದಿಯ ಪ್ರಕಾರ ಭಾರತದ ಜಿಡಿಪಿಯ ವಾರ್ಷಿಕ ಅಭಿವೃದ್ಧಿ ದರದ ಶೇ.1.5ರಿಂದ 2ರಷ್ಟು ಹಿಂದೂ ಹಬ್ಬಗಳ ಕೊಡುಗೆಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ವಾರ್ಷಿಕ ಆರ್ಥಿಕ ನೀತಿಯನ್ನು ಸಾಮಾನ್ಯವಾಗಿ ಹಬ್ಬಗಳ ಸಂದರ್ಭದಲ್ಲಿ ಘೋಷಣೆ ಮಾಡುತ್ತದೆ. ಹಿಂದೂ ಹಬ್ಬಗಳ ಸಂದರ್ಭದಲ್ಲಿ ಅನೇಕ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳ ಮಾರಾಟವು ಉಳಿದ ಸಂದರ್ಭಗಳಿಗಿಂತಲೂ ಹೆಚ್ಚಾಗಿರುತ್ತದೆ.

ಹಿಂದೂ ಹಬ್ಬಗಳು ವರ್ಷಕ್ಕೆ ಸುಮಾರು 80 ಲಕ್ಷದಿಂದ ಒಂದು ಕೋಟಿಯವರೆಗೂ ನೇರ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಮಾಡುತ್ತವೆಯೆಂದು ವರದಿಗಳು ಹೇಳುತ್ತವೆ. ಹಿಂದೂ ಹಬ್ಬಗಳ ಸಂದರ್ಭದಲ್ಲಿ ಉತ್ಪಾದನಾ ವಲಯ, ಚಿಲ್ಲರೆ ವ್ಯಾಪಾರ ಮತ್ತು ಸಾರಿಗೆ ವಲಯದಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಈಗಿನ ಕಾಲದಲ್ಲಿ ವ್ಯವಹಾರವೆಂದರೆ ಇ-ಕಾಮರ್ಸ್ ಕಂಪನಿಗಳದ್ದೇ ಕಾರುಬಾರು. ಫ್ಲಿಪ್ ಕಾರ್ಟ್ ಮತ್ತು ಅಮೆಜಾನ್ ಕಂಪನಿಗಳು ಹಿಂದೂ ಹಬ್ಬಗಳಂದು ವಾರಗಟ್ಟಲೆ ರಿಯಾಯಿತಿ ದರದಲ್ಲಿ ಸಾವಿರಾರು ಕೋಟಿ ವ್ಯವಹಾರ ನಡೆಸುತ್ತವೆ. 'ಅಮೆಜಾನ್ ಗ್ರೇಟ್ ಇಂಡಿಯನ್ ಫೆಸ್ಟಿವಲ್ ಸೇಲ್', 'ಫ್ಲಿಪ್ ಕಾರ್ಟ್ ಬಿಗ್ ಬಿಲಿಯನ್ ಡೇ' ಪ್ರತಿ ವರ್ಷವೂ ನಡೆಯುತ್ತವೆ. 2024ರ ದಸರಾ ಹಬ್ಬದ ಸಂದರ್ಭದಲ್ಲಿ ಇ-ಕಾಮರ್ಸ್ ಮೂಲಕ ಸುಮಾರು 11 ಬಿಲಿಯನ್ ಅಮೆರಿಕನ್ ಡಾಲರ್ (94,000 ಕೋಟಿ ರೂಪಾಯಿ) ವ್ಯವಹಾರ ನಡೆದಿದೆ. ಹಿಂದೂ ಹಬ್ಬಗಳ ಆರ್ಥಿಕತೆಯ ಪ್ರಮುಖ ಪಾಲುದಾರರು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು. ಅನೇಕ ಸಣ್ಣ ಕೈಗಾರಿಕೆಗಳು ಹಿಂದೂ ಹಬ್ಬಗಳ ಸಂದರ್ಭದಲ್ಲಿ ಹಗಲು ರಾತ್ರಿಯೆನ್ನದೆ ಕೆಲಸ ಮಾಡುತ್ತವೆ. ಇದರಿಂದ ದೇಶದಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಹಬ್ಬಗಳ ಆಚರಣೆ ಹಿಂದೂಗಳದ್ದು, ಆದರೆ ಆರ್ಥಿಕವಾಗಿ ಇತರ ಧರ್ಮದವರೂ ಹಬ್ಬದ ಫಲಾನುಭವಿಗಳಾಗಿದ್ದಾರೆ. ಹಿಂದೂ ಹಬ್ಬಗಳಂದು ಇತರ ಧರ್ಮದವರೂ ವ್ಯಾಪಾರ ನಡೆಸುತ್ತಾರೆ ಮತ್ತು ಅನೇಕ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ.

ಗಣೇಶ ಚತುರ್ಥಿ ಹಿಂದೂಗಳಿಗೆ ದೊಡ್ಡ ಹಬ್ಬ. ಈ ಹಬ್ಬದ ಸಂದರ್ಭದಲ್ಲಿ, ಒಂದೇ ವಾರದಲ್ಲಿ 20,000 ಕೋಟಿ ರುಪಾಯಿಗೂ ಅಧಿಕ ಆರ್ಥಿಕ ವಹಿವಾಟು ನಡೆಯುತ್ತದೆ. ಮುಂಬೈ, ತೆಲಂಗಾಣ ಮತ್ತು ಹೈದರಾಬಾದ್ ಸುತ್ತಮುತ್ತಲ ಪ್ರದೇಶಗಳಿಂದ 5000 ಕೋಟಿ ರುಪಾಯಿಗೂ ಅಧಿಕ ಆರ್ಥಿಕ ಚಟುವಟಿಕೆಗಳು ನಡೆಯುತ್ತವೆ. ಗಣೇಶ ಚತುರ್ಥಿಯು ಸುಮಾರು 20,000 ಕುಟುಂಬಗಳಿಗೆ ಉದ್ಯೋಗ ನೀಡುತ್ತದೆ. ಅಹ್ಮದಾಬಾದಿನಲ್ಲಿ 2000ಕ್ಕೂ ಅಧಿಕ, ಪುಣೆಯಲ್ಲಿ 4000 ಮತ್ತು ಮುಂಬೈ ಮಹಾನಗರಿಯಲ್ಲಿ 15000ಕ್ಕೂ ಅಧಿಕ ಗಣೇಶ ಪೆಂಡಾಲುಗಳಿವೆ. ಮುಂಬೈನ ಗಣೇಶ ಚತುರ್ಥಿ ಮೆರವಣಿಗೆಯಲ್ಲಿ ಬಾಲಿವುಡ್ ನಟ-ನಟಿಯರು ಭಾಗವಹಿಸುತ್ತಾರೆ. 2024ರಲ್ಲಿ ಮುಂಬೈನ ಮಾತುಂಗ ಪ್ರದೇಶದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶನ ಪೆಂಡಾಲಿಗೆ 316 ಕೋಟಿ ರುಪಾಯಿಯ ವಿಮೆ ತೆಗೆದುಕೊಳ್ಳಲಾಗಿತ್ತು. 'ಪೆನ್' ಸಿಟಿ ಮತ್ತು 'ಅಮ್ರಾಪುರ್' ಮಹಾರಾಷ್ಟ್ರದಲ್ಲಿ ಗಣೇಶ ಮೂರ್ತಿ ತಯಾರಿಸುವ ಪ್ರಸಿದ್ಧ ಸ್ಥಳಗಳು. ಅಮ್ರಾಪುರ್ ಹಳ್ಳಿಯಲ್ಲಿ ಗಣೇಶ ಚತುರ್ಥಿ ಸಂದರ್ಭದಲ್ಲಿ 200 ಕೋಟಿಗೂ ಅಧಿಕ ವ್ಯವಹಾರ ನಡೆಯುತ್ತದೆ. ಮಹಾರಾಷ್ಟ್ರದಲ್ಲಿ ಗಣೇಶ ಮೂರ್ತಿ ತಯಾರಿಕೆಗೆ ಬೇಕಿರುವ 'ಪ್ಲಾಸ್ಟರ್ ಆಫ್ ಪ್ಯಾರಿಸ್' ರಾಜಸ್ಥಾನದಿಂದ ಬರುತ್ತದೆ. ಗಣೇಶನನ್ನು ಪ್ಯಾಕ್ ಮಾಡಲು ಬೇಕಿರುವ ಒಣಹುಲ್ಲನ್ನು ಕರ್ನಾಟಕದಿಂದ ತರಿಸಿಕೊಳ್ಳಲಾಗುತ್ತದೆ. ಗಣೇಶ ಚತುರ್ಥಿಯಂದು ದೇಶದ ವಿವಿಧ ನಗರಗಳಲ್ಲಿ ಸಾವಿರಾರು ಕೋಟಿ ವ್ಯವಹಾರ ನಡೆಯುತ್ತದೆ. ಮಾವಿನ ಸೊಪ್ಪು, ಹಣ್ಣು, ಹೂವು, ಬಟ್ಟೆ ಮತ್ತು ಚಿನ್ನದ ಅಂಗಡಿಗಳಲ್ಲಿ ಹಬ್ಬದ ವಾತಾವರಣವನ್ನು ಒಂದು ವಾರದ ಹಿಂದಿನಿಂದಲೇ ಕಾಣಬಹುದು.

ಸಣ್ಣಹಬ್ಬ 'ರಕ್ಷಾಬಂಧನ'ದ ಸಮಯದಲ್ಲಿ ಗುಜರಾತ್ ರಾಜ್ಯವೊಂದರಲ್ಲೇ 400 ಕೋಟಿಗೂ ಅಧಿಕ ಆರ್ಥಿಕ ವ್ಯವಹಾರ ನಡೆಯುತ್ತದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ 50 ಕೋಟಿಗೂ ಅಧಿಕ ರಾಖಿ ಮಾರಾಟವಾಗುತ್ತದೆ. ರಕ್ಷಾಬಂಧನದ ಸಂದರ್ಭದಲ್ಲಿ ದೇಶದಾದ್ಯಂತ 10,000 ಕೋಟಿ ರುಪಾಯಿಗೂ ಅಧಿಕ ಆರ್ಥಿಕ ವ್ಯವಹಾರವು ಸಿಹಿತಿನಿಸುಗಳ ಮಾರಾಟದಿಂದ ಆಗುತ್ತದೆ. 2020ಕ್ಕಿಂತಲೂ ಮೊದಲು, ಚೀನಾದಲ್ಲಿ ಉತ್ಪಾದನೆಯಾದ ರಾಖಿಗಳು ದೇಶದಲ್ಲಿ ಮಾರಾಟವಾಗುತ್ತಿದ್ದವು. ಗಲ್ವಾನ್ ಕಣಿವೆಯಲ್ಲಿ ಚೀನಿಯರು ನಡೆಸಿದ ಹಲ್ಲೆಯ ನಂತರ ಭಾರತದಲ್ಲಿ 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ರಾಖಿಗಳ ಉತ್ಪಾದನೆ ಹೆಚ್ಚಾಗಿದ್ದು, ಭಾರತದೊಳಗೆ ಈ ರಾಖಿಗಳು ಮಾರುಕಟ್ಟೆಯನ್ನು ಆವರಿಸಿಕೊಂಡಿವೆ. ಪಶ್ಚಿಮ ಬಂಗಾಳದಲ್ಲಿ ನಡೆಯುವ ದುರ್ಗಾ ಪೂಜಾ ಹಬ್ಬದ ಸಮಯದಲ್ಲಿ 50,000 ಕೋಟಿ ರುಪಾಯಿಯಷ್ಟು ಆರ್ಥಿಕ ಚಟುವಟಿಕೆಗಳು ನಡೆಯುತ್ತದೆಂದು ಅಂದಾಜಿಸಲಾಗಿದೆ. ಹತ್ತು ದಿನ ನಡೆಯುವ ಈ ಹಬ್ಬವು 30,000ಕ್ಕೂ ಅಧಿಕ ಕುಟುಂಬಗಳಿಗೆ ಉದ್ಯೋಗ ನೀಡುತ್ತದೆ. ಅಂತಾರಾಷ್ಟ್ರೀಯ ಕಂಪನಿಗಳು ತಮ್ಮ ನೂತನ ಉತ್ಪನ್ನಗಳನ್ನು ಮಾರ್ಕೆಟ್ ಮಾಡಲು ದುರ್ಗಾಪೂಜೆ ಸಮಯವನ್ನು ಹೆಚ್ಚಾಗಿ ಬಳಸಿಕೊಳ್ಳುತ್ತವೆ. ಫ್ರಾನ್ಸ್ ಮತ್ತು ಅಮೆರಿಕ ದೇಶಗಳ ಕಂಪನಿಗಳು ದುರ್ಗಾಪೂಜೆಯಂದು ನಡೆಯುವ ಮೆರವಣಿಗೆಯಲ್ಲಿ ದೊಡ್ಡಮಟ್ಟದ ಜಾಹೀರಾತುಗಳನ್ನು ನೀಡಿ ತಮ್ಮ ಉತ್ಪನ್ನಗಳನ್ನು ಮಾರ್ಕೆಟಿಂಗ್ ಮಾಡುತ್ತವೆ. ದುರ್ಗಾಪೂಜೆಯಂದು ಕೋಲ್ಕತ್ತಾದಲ್ಲಿ ಸೀರೆಗಳು, ಪೂಜಾ ಸಾಮಗ್ರಿಗಳು, ಅರಿಸಿನ, ಕುಂಕುಮದ ವ್ಯವಹಾರ ಜೋರಾಗಿ ನಡೆಯುತ್ತದೆ. ಜನವರಿ 2024ರ ಉತ್ತರಾಯಣ ಸಮಯದಲ್ಲಿ ಗುಜರಾತಿನಲ್ಲಿ ನಡೆದ ಗಾಳಿಪಟ ಉತ್ಸವದಲ್ಲಿ ಅಂದಾಜು 500 ಕೋಟಿ ರುಪಾಯಿಯಷ್ಟು ಆರ್ಥಿಕ ಚಟುವಟಿಕೆ ನಡೆದಿತ್ತು. 6000ಕ್ಕೂ ಅಧಿಕ ಕುಟುಂಬಗಳಿಗೆ ಈ ಸಣ್ಣ ಹಬ್ಬದಿಂದ ಉದ್ಯೋಗ ಸಿಕ್ಕಿದೆಯೆಂದರೆ ಹಿಂದೂಗಳ ಹಬ್ಬದ ಮಹತ್ವ ಎಷ್ಟೆಂದು ಅರ್ಥ ಮಾಡಿಕೊಳ್ಳಬೇಕು. ಗಾಳಿಪಟ ಹಾರಿಸುವ ಹಿಂದೂ ಹಬ್ಬದಲ್ಲಿ ಅನ್ಯ ಧರ್ಮದವರೂ ಗಾಳಿಪಟ ಮಾರಿ ತಮ್ಮ ಜೀವನ ನಡೆಸುತ್ತಾರೆ.

ದೇವರನ್ನೇ ನಂಬದ ಕಮ್ಯುನಿಸ್ಟರ ಆಳ್ವಿಕೆ ಇರುವ ಕೇರಳ ರಾಜ್ಯದಲ್ಲಿ ಹಿಂದೂ ಹಬ್ಬಗಳಿಂದಾಗಿ ದೊಡ್ಡ ಮಟ್ಟದ ಆರ್ಥಿಕ ಚಟುವಟಿಕೆಗಳು ನಡೆಯುತ್ತವೆ. 2024ರ ಓಣಂ ಹಬ್ಬದಂದು ನಾಲ್ಕು ದಿನದಲ್ಲಿ 80 ಲಕ್ಷ ಕೆ.ಜಿ.ಯಷ್ಟು ಹಾಲಿನ ಮಾರಾಟವಾಗಿತ್ತು. ಓಣಂ ಹಬ್ಬದಂದು ಕೇರಳ ಸರಕಾರಕ್ಕೆ ಲಾಟರಿ ಟಿಕೆಟ್ ಮಾರಾಟದಿಂದ ಒಂದು ದಿನದಲ್ಲಿ 300 ಕೋಟಿ ರುಪಾಯಿಗೂ ಅಧಿಕ ಲಾಭವಾಗಿದೆ. 2024ರಲ್ಲಿ ಮದ್ಯ ಮಾರಾಟದಿಂದ ಕೇರಳ ಸರಕಾರಕ್ಕೆ 550 ಕೋಟಿ ಆದಾಯ ಬಂದಿತ್ತು. ಹಿಂದೂ ದೇವರುಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿ, ಹಿಂದೂಗಳ ಆಚರಣೆಗಳನ್ನು ಮೂಢನಂಬಿಕೆಯೆಂದು ಹೇಳುವ ದೇವರ ನಾಡಿನಲ್ಲಿ ಹಿಂದೂ ಹಬ್ಬಗಳಂದು ಸಾವಿರಾರು ಕೋಟಿ ರುಪಾಯಿಯ ಆರ್ಥಿಕ ಚಟುವಟಿಕೆಗಳು ನಡೆಯುತ್ತವೆ. ಹಿಂದೂಗಳ ಮತ್ತೊಂದು ದೊಡ್ಡ ಹಬ್ಬ ದೀಪಾವಳಿ ಬಂತೆಂದರೆ ಸಾಕು, ದೇಶದ ಮೂಲೆ ಮೂಲೆಗಳಲ್ಲಿ ಎಲ್ಲ ವರ್ಗದವರಿಗೂ ಮೂರು ದಿವಸದ ಸಂಭ್ರಮ. ಅನೇಕ ಕಂಪನಿಗಳು ಈ ಹಬ್ಬದ ವೇಳೆ ತಮ್ಮ ವರ್ಷದ ಲಾಭದಲ್ಲಿನ ಪಾಲನ್ನು ಕೆಲಸಗಾರರಿಗೆ ಬೋನಸ್ ರೂಪದಲ್ಲಿ ನೀಡುತ್ತವೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರು ದೀಪಾವಳಿ ಹಬ್ಬಕ್ಕಾಗಿ ಕಾಯುತ್ತಿರುತ್ತಾರೆ. ವರ್ಷದ ಬೋನಸ್ ನೆಚ್ಚಿಕೊಂಡು ಹೊಸ ವಸ್ತುಗಳನ್ನು ಮನೆಗೆ ಖರೀದಿಸುವ ಬಗ್ಗೆ ಯೋಜಿಸಿರುತ್ತಾರೆ. ದೀಪಾವಳಿಯಂದು ಎಲ್ಲಾ ತರಹದ ವಸ್ತುಗಳ ಮಾರಾಟದಲ್ಲೂ ಏರಿಕೆಯಾಗುತ್ತದೆ. ಮುಂಬೈ ಷೇರು ಮಾರುಕಟ್ಟೆಯಲ್ಲಿನ ವ್ಯವಹಾರವೂ ಹೆಚ್ಚಿರುತ್ತದೆ. 2023ರ ದೀಪಾವಳಿ ಹಬ್ಬದ ಸಂದರ್ಭದಲ್ಲಿ 3,75,000 ಕೋಟಿ ರುಪಾಯಿಯ ಆರ್ಥಿಕ ಚಟುವಟಿಕೆಗಳು ದೇಶದಾದ್ಯಂತ ನಡೆದಿವೆ. ಈ ಅವಧಿಯಲ್ಲಿ ಸಿಹಿತಿಂಡಿಗಳು, ಹೊಸ ಬಟ್ಟೆಗಳು, ಚಿನ್ನದ ಆಭರಣಗಳು, ಗೃಹೋಪಯೋಗಿ ವಸ್ತುಗಳು, ಇಲೆಕ್ಟ್ರಾನಿಕ್ ವಸ್ತುಗಳು, ಪೂಜಾ ಸಾಮಗ್ರಿಗಳು, ಉಡುಗೊರೆಗಳು, ಮಕ್ಕಳ ಆಟಿಕೆಗಳು, ವಾಹನಗಳ ಮಾರಾಟದಲ್ಲಿ ಗಣನೀಯವಾಗಿ ಏರಿಕೆಯಾಗುತ್ತದೆ. ದೊಡ್ಡ ದೊಡ್ಡ ಕಂಪನಿಗಳ ವರ್ಷದ ವಹಿವಾಟಿನಲ್ಲಿ ಹಿಂದೂ ಹಬ್ಬಗಳ ಸಮಯದಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ವಸ್ತುಗಳ ಮಾರಾಟವಾಗುತ್ತದೆ. ದೀಪಾವಳಿ ಹಬ್ಬದ ಸಮಯದಲ್ಲಿ 2021ರಲ್ಲಿ 58,600 ಕೋಟಿ ರೂಪಾಯಿ ಮೌಲ್ಯದ ಸಿಹಿತಿಂಡಿಗಳ ಮಾರಾಟವಾಗಿದೆ. ಮತ್ತೊಂದೆಡೆ ಪ್ರತಿವರ್ಷ ಹಳ್ಳಿಗಳಲ್ಲಿ ನಡೆಯುವ ಊರಹಬ್ಬಗಳ ಆರ್ಥಿಕತೆಯನ್ನು ಅಂದಾಜಿಸುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ಹಳೇ ಮೈಸೂರು ಭಾಗದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಾವಿರಾರು ಹಳ್ಳಿಗಳಲ್ಲಿ ಊರಹಬ್ಬ ಆಚರಿಸಲಾಗುತ್ತದೆ. ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಹಿಂದೂ ಹಬ್ಬಗಳ ಪಾಲು ದೊಡ್ಡದಿದೆ. ಹಿಂದೂ ಹಬ್ಬಗಳನ್ನು ನಂಬಿ ಜೀವನ ನಡೆಸುವ ಅನ್ಯಧರ್ಮಗಳ ಲಕ್ಷಾಂತರ ಕುಟುಂಬಗಳಿವೆ. ಹಿಂದೂ ಹಬ್ಬಗಳು ಭಾರತದ ಆರ್ಥಿಕ ಬೆಳವಣಿಗೆಯ ಬೆನ್ನೆಲುಬೆಂದರೆ ತಪ್ಪಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಿಜ್ಞಾಸೆಯ ವಿಷಯವೇ!

'ಪೋಸ್ಟರ್ ವಾರ್ ನಿಲ್ಲಲಿ' ಶೀರ್ಷಿಕೆಯ ಸಂಪಾದಕೀಯ (ಮೇ.2) ಜಿಜ್ಞಾಸೆಯ ವಿಷಯವೇ. ರಾಜಕಾರಣದಲ್ಲಿ ಅಧಿಕಾರ ಮುಖ್ಯ, ಅದಕ್ಕೆ ಸೇತುವೆಯಾಗಿ ನಿಲ್ಲುವುದೇ ರಾಜಕೀಯ ಪಕ್ಷಗಳು. ಪ್ರಬಲ ಎನಿಸಿಕೊಂಡ ರಾಜಕೀಯ ಪಕ್ಷದಲ್ಲೂ ಒಬ್ಬ ದುರ್ಬಲ ನಾಯಕ ಇರುವುದು ಸಹಜವೇ; ಅದೇ ರೀತಿಯಲ್ಲಿ ದುರ್ಬಲ ಪಕ್ಷದಲ್ಲೂ ಪ್ರಬಲ ನಾಯಕರನ್ನು ಕಾಣಲು ಸಾಧ್ಯವಿದೆ. ಇಲ್ಲೆಲ್ಲ ಕೆಲಸ ಮಾಡುವುದು 'ಪ್ರಬಲ'ರನ್ನು 'ದುರ್ಬಲ'ವಾಗಿಸುವ ವಿಧಾನದ ಹುಡುಕಾಟ. ಕೆಲವರು ನೇರವಾಗಿಯೇ ತಮ್ಮ ಇಚ್ಛೆಯನ್ನು ಪೂರೈಸಿಕೊಂಡರೆ, ಇನ್ನು ಕೆಲವರು ಏನೇನೋ ಮಾರ್ಗವನ್ನು ಹುಡುಕುತ್ತಿರುತ್ತಾರೆ. ಸದ್ಯ, ಭಾರತದ ಮಟ್ಟಿಗೆ ಎರಡು ಪ್ರಬಲ ರಾಜಕೀಯ ಪಕ್ಷಗಳು ತಮ್ಮ ಮೇಲುಗೈ ತೋರಿಸಲು ಸದಾ ಚಡಪಡಿಸುತ್ತಿವೆ. ಕಾಂಗ್ರೆಸ್ ಪಕ್ಷವು ತನ್ನ ಹಿರಿತನದ ಪ್ರದರ್ಶನ ಮಾಡುತ್ತಿದ್ದರೆ, ಬಿಜೆಪಿ ತನ್ನ ಕಾರ್ಯವೈಖರಿಯಿಂದ ಹಿರಿತನ ಸಾಬೀತುಪಡಿಸುವ ಯತ್ನದಲ್ಲಿದೆ. ಮತ್ತೊಬ್ಬರನ್ನು ಒಪ್ಪಿಕೊಳ್ಳುವ ಮನಸ್ಸು ಇಲ್ಲದಿದ್ದರೆ ಈ ರೀತಿಯ 'ಪೋಸ್ಟರ್ ವಾರ್' ಶುರುವಾಗುತ್ತದೆ. ಎದುರುಬದುರು ನಿಂತು ಹೋರಾಡಲು ಸಾಧ್ಯವಾಗದಿದ್ದಾಗ ಹಿಂಬದಿಯಿಂದಲೋ, ಇಲ್ಲವೇ ಸಲ್ಲದ ಆರೋಪದಿಂದಲೋ ಹೀಗೆ ಪ್ರಬಲರ ಮನೋಬಲವನ್ನು ಕುಗ್ಗಿಸಲು ಯತ್ನಿಸುತ್ತಾರೆ. ಈಗ ಆಗಿರುವುದು ಅದೇ! (ಈ ರೀತಿಯ ಪೋಸ್ಟರ್ ವಾರ್ ಇದೇ ಮೊದಲಲ್ಲ; ಈ ಹಿಂದೆ ಕಾಂಗ್ರೆಸ್-ಬಿಜೆಪಿ ನಡುವಿನ ಪರ್ಸೆಂಟೇಜ್ ಆರೋಪದ ತಿಕ್ಕಾಟದಲ್ಲಿ ಏನೇನೆಲ್ಲ ಪೋಸ್ಟರ್ ಪ್ರದರ್ಶನವಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು).



ಪಹಲ್ಗಾಮ್‌ನಲ್ಲಿನ ಪೈಶಾಚಿಕ ಕೃತ್ಯವನ್ನು ದೇಶಕ್ಕೆ ದೇಶವೇ ಖಂಡಿಸುತ್ತಿರುವಾಗ ಕಾಂಗ್ರೆಸ್‌ನವರು 'ಮೋದಿ ಗಾಯಬ್' ಎಂಬ ಪೋಸ್ಟರ್ ಬಿತ್ತರಿಸಿದ್ದು ಕೀಳುಮಟ್ಟದ ಮನಸ್ಥಿತಿಯಲ್ಲವೇ? ಮೋದಿಯವರು ಎಲ್ಲೂ ಓಡಿ ಹೋಗಿಲ್ಲ. ಸರ್ವಪಕ್ಷಗಳ ಸಭೆಯಲ್ಲಿ ಅವರು ಪಾಲ್ಗೊಳ್ಳಲಿಲ್ಲ ಎಂಬುದನ್ನೇ ನೆಪ ಮಾಡಿಕೊಂಡು ಈ ರೀತಿ 'ವಾರ್' ನಡೆಸಿದ್ದು ತರವೇ? ಅಷ್ಟಕ್ಕೂ ಅಂದಿನ ಸಭೆಗೆ ಮುಖ್ಯವಾಗಿ ಬೇಕಿದ್ದ ಗೃಹ-ರಕ್ಷಣೆ-ವಿದೇಶಾಂಗ ಖಾತೆ ಸಚಿವರುಗಳು ಮತ್ತಿತರ ಅಧಿಕಾರಿಗಳು ಹಾಜರಿದ್ದರಲ್ಲವೇ? ಇಂಥ ತುರ್ತುಪರಿಸ್ಥಿತಿಯಲ್ಲಿ ಎಲ್ಲವನ್ನೂ ಒಬ್ಬನೇ ಮಾಡುವುದು ಅಸಾಧ್ಯ. ಕಾಂಗ್ರೆಸ್‌ನವರು ಇದನ್ನೇ ಹೀಗೆ ಅಪಹಾಸ್ಯ ಮಾಡಿ ನಮ್ಮ ಶತ್ರುರಾಷ್ಟ್ರಕ್ಕೆ ಆಹಾರ ಮಾಡಿಕೊಟ್ಟು ಬಿಟ್ಟರಲ್ಲಾ? ಇದೆಂಥಾ ದುರ್ದೈವ! ಈ ಪೋಸ್ಟರ್ ಅನ್ನು ನೋಡಿ ಪಾಕಿಸ್ತಾನದ ರಾಜಕಾರಣಿಯೊಬ್ಬರು 'ನಾಟಿ ಕಾಂಗ್ರೆಸ್' ಎಂದುಬಿಟ್ಟರು. ಇದನ್ನು ಕಾಂಗ್ರೆಸ್‌ನ ತುಂಟತನ ಎನ್ನಬೇಕೋ ಬೇಜವಾಬ್ದಾರಿಯುತ ವರ್ತನೆ ಎನ್ನಬೇಕೋ? ಇದಕ್ಕೆ ಪ್ರತಿಯಾಗಿ ಬಿಡುಗಡೆಯಾದ ಪೋಸ್ಟರ್‌ನಲ್ಲಿ ರಾಹುಲ್ ಗಾಂಧಿಯವರನ್ನು ಹೋಲುವ ವ್ಯಕ್ತಿಯು ಬೆನ್ನ ಹಿಂದೆ ಚಾಕುವನ್ನು ಇಟ್ಟುಕೊಂಡಿರುವಂತೆ ಬಿಂಬಿತವಾಗಿದೆ. ದೇಶದೊಳಗಿನ ಸಂಘರ್ಷ, ಮೂದಲಿಕೆ ಇತ್ಯಾದಿಗಳು ದೇಶದೊಳಗೇ ಇರಬೇಕೇ ಹೊರತು, ವಿಶ್ವವ್ಯಾಪಿ ಆಗಬಾರದಲ್ಲವೇ?

-ಶಂಕರನಾರಾಯಣ ಭಟ್, ಮಾಡಗೇರಿ

ಮಗ ಎಲ್ಲಾ ಬಿಟ್ಟ, ಭಂಗಿ ನೆಟ್ಟ ಎಂಬಂತೆ ಆಗಬಾರದಲ್ಲವೇ?!

ಪದಸಾಗರ

ನವೀನ್ ಸಾಗರ್

vveditoped@gmail.com

ನಮ್ಮ.. ಅಂದ್ರೆ ಕನ್ನಡ ಸಿನಿಮಾ ನಟ-ನಟಿಯರು ತಂತ್ರಜ್ಞರು ಈಗ ತುಂಬ ಬ್ಯುಸಿ. ಅವ್ರಿಗೆ ಕೈ ತುಂಬ ಕೆಲಸ. ದಿನ ಬೆಳಗಾದ್ರೆ ಪಾಪ ಕ್ರಿಕೆಟ್ ನೆಟ್ಸ್‌ಗೆ ಹೋಗಬೇಕು, ಕ್ರಿಕೆಟ್‌ಗೋಸ್ಕರ ಫಿಟ್ನೆಸ್ ವರ್ಕೌಟ್ ಮಾಡಬೇಕು. ಇದರ ಮಧ್ಯ ಬ್ಯಾಡ್ಮಿಂಟನ್ ಬೇರೆ ಪ್ರಾಕ್ಟಿಸ್ ಮಾಡಬೇಕು. ತಿಂಗಳಿಗೊಂದು ಟೂರ್ನಮೆಂಟ್, ಪ್ರೀಮಿಯರ್ ಲೀಗ್ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಅಬ್ಬಾ ನಮ್ಮ ಪ್ರೊಫೆಷನಲ್ ಕ್ರಿಕೆಟರ್ಸ್ ಕೂಡ ಇವರಷ್ಟು ಆಟದಲ್ಲಿ ಮುಳುಗಿಲ್ಲ. ತಾವು ಸಿನಿಮಾದವರು ಅನ್ನೋದೂ ಬಹುಶಃ ಇಷ್ಟೊತ್ತಿಗೆ ಅವರಿಗೆಲ್ಲ ಮರೆತು ಹೋಗಿರಬಹುದು. ಹಿಂದೆಲ್ಲ ಒಬ್ಬ ನಟ ಇನ್ನೊಬ್ಬ ನಟನನ್ನು ಭೇಟಿ ಮಾಡಿದರೆ, ಯಾವ ಸಿನಿಮಾ ಮಾಡ್ತಿದೀಯ ಅಂತ ಕೇಳ್ಕೋತಾ ಇದ್ದವ್ರು, ಈಗ ಯಾವ ಲೀಗ್ ಆಡ್ತಾ ಇದೀಯ? ಅಂತ ಕ್ರಿಕೆಟ್ ಬಗ್ಗೆ ಮಾತಾಡಿಕೊಳ್ಳೋಷ್ಟು ಕ್ರಿಕೆಟಿನ ದಾಸರಾಗಿಹೋಗಿದ್ದಾರೆ.

ಸೀರಿಯಸ್ಲೀ.. ಕನ್ನಡ ಚಿತ್ರರಂಗದ ಮಂದಿಗೆ ಇದ್ಯಾವ ವ್ಯಸನ ಅಂಟಿಕೊಂಡುಬಿಡ್ತು?

ಯಾಕಪ್ಪಾ.. ಸಿನಿಮಾದವರು ಕ್ರಿಕೆಟ್ ಆಡಬಾರದಾ ಅಂತ ನೀವು ಕೇಳಬಹುದು. ಆಡ್ಲಿ, ಅಪರೂಪಕ್ಕೊಮ್ಮೆ ಆಡಿದ್ರೆ ಚೆಂದ. ವರ್ಷಕ್ಕೊಮ್ಮೆ ಕ್ರಿಕೆಟ್ ಅಥವಾ ಇನ್ಯಾವುದೋ ಆಟದ ನೆಪದಲ್ಲಿ ಇಂಡಸ್ಟ್ರಿ ಒಟ್ಟುಗೂಡಿದರೆ ಅದು ಸ್ವಾಗತಾರ್ಹವೇ. ಸಿನಿಮಾದವರಿಗೆ ಕ್ರಿಕೆಟ್ಟೂ ಬರತ್ತೆ ಅಂದ್ರೆ ಅದು ಖುಷಿಪಡೋ ವಿಷಯಾನೇ. ಆದರೆ ಕ್ರಿಕೆಟನ್ನೇ ಫುಲ್ ಟೈಮ್ ಮಾಡಿಕೊಂಡುಬಿಡೋದಂದ್ರೆ? ಓಕೆ ಇವರು ಇಲ್ಲಿ ಕ್ರಿಕೆಟ್ ಆಡಿ ರಾಜ್ಯ ತಂಡಕ್ಕೋ, ರಾಷ್ಟ್ರೀಯ ತಂಡಕ್ಕೋ ಹೋಗ್ತಾರಾ? ಪ್ರೊಫೆಷನಲ್ ಕ್ರಿಕೆಟಿಗರಾಗ್ತಾರಾ? ಇಲ್ಲ. ಯಾವ ಪುರುಷಾರ್ಥಕ್ಕಾಗಿ ನಮ್ಮ ಸಿನಿಮಾ ಇಂಡಸ್ಟ್ರಿ ಕ್ರಿಕೆಟನ್ನು ಇಷ್ಟು ಸೀರಿಯಸ್ಸಾಗಿ ತಗೊಂಡಿದೆ?

ದಶಕಗಳ ಹಿಂದೆ ಹಿರಿಯನಟ ವಿಷ್ಣುವರ್ಧನ್ ಸ್ನೇಹ ಸೌಹಾರ್ದಕ್ಕಾಗಿ 'ಸ್ನೇಹಲೋಕ' ಅಂತ ಒಂದು ಕ್ರಿಕೆಟ್ ತಂಡ ಕಟ್ಟಿದ್ರು. ಭಾನುವಾರ ಅಂದ್ರೆ ಅದು ಸಿನಿಮಾಲೋಕಕ್ಕೆ ರಜಾದಿನ. ಆ ರಜಾದಿನದಂದು ಕ್ರಿಕೆಟ್ ಹೆಸರಲ್ಲಿ ಎಲ್ಲರೂ ಸೇರೋದು ಸ್ನೇಹಲೋಕದ ಉದ್ದೇಶವಾಗಿತ್ತು. ಒಂದೊಳ್ಳೆಯ ಕಾನ್ಸೆಪ್ಟ್ ಅದು. ಅದು ಗುಂಪುಗಾರಿಕೆಗಾಗಿ ಹುಟ್ಟಿಕೊಂಡದ್ದಲ್ಲ. ಬಹಳ ಸೌಹಾರ್ದಯುತ ಹಾಗೂ ಎಲ್ಲರಿಗೂ ಮುಕ್ತದ್ವಾರವಿದ್ದ ಸ್ನೇಹಲೋಕ ಅದು. ಅಲ್ಲಿ ಕ್ರಿಕೆಟ್ ಪ್ರೈಮರಿ ಆಗಿರಲಿಲ್ಲ. ಆ ನಂತರದಲ್ಲಿ 'ರಾಜ್ ಕಪ್' ಅಂತ ಪ್ರಾರಂಭ ಆಯ್ತು. ಇಡೀ ಇಂಡಸ್ಟ್ರಿಯನ್ನು ಒಗ್ಗೂಡಿಸೋ ಪರಿಕಲ್ಪನೆಯಲ್ಲಿ ಹುಟ್ಟಿದ ರಾಜ್ ಕಪ್ ಪ್ರಾರಂಭದಲ್ಲಿ ಸಫಲವೂ ಆಯ್ತು. ಆದರೆ ಬರ್ತಾ ಬರ್ತಾ ಅಲ್ಲಿ ಕ್ರಿಕೆಟ್ ಕೊಂಚ ಸೀರಿಯಸ್ ಆಯ್ತು. ಸ್ನೇಹಕ್ಕಾಗಿ ಶುರುವಾದ ಕ್ರಿಕೆಟ್‌ನಲ್ಲಿ ಜಿದ್ದು, ಚಿಕ್ಕ ಗುಂಪುಗಾರಿಕೆ, ಸಣ್ಣತನ ಎಲ್ಲವೂ ಹೊರಬರತೊಡಗಿತು. ಗೆಲ್ಲೋದೊಂದೇ ಮೂಲ ಉದ್ದೇಶ ಎಂಬಂತಾಗಿ, ಸ್ನೇಹ-ಸೌಹಾರ್ದ ಮರೆಯಾಗತೊಡಗಿತು. ಕಹಿಘಟನೆಯೂ ನಡೆದು ಹೋಯ್ತು. ಅಲ್ಲಿಂದ ಮುಂದೆ ಶುರುವಾದದ್ದು ಸಿಸಿಎಲ್ ಎಂಬ ಸೆಲೆಬ್ರಿಟಿ ಕ್ರಿಕೆಟ್ ಲೀಗ್. ನಟ ಸುದೀಪ್ ಪರಿಕಲ್ಪನೆಯಲ್ಲಿ ಮೂಡಿದ ಈ ಲೀಗ್ ಇತರ ಭಾಷೆಗಳ ಸಿನಿಮಾ ಇಂಡಸ್ಟ್ರಿಯನ್ನೂ ಎಳೆದುಕೊಂಡಿತು. ಐಪಿಎಲ್‌ನಂತೆ ಈ ಕ್ರಿಕೆಟನ್ನು ರೂಪಿಸಲಾಯ್ತು. ಇಲ್ಲಿಂದ ಕನ್ನಡ ಸಿನಿಮಾರಂಗಕ್ಕೆ ಹತ್ತಿದ್ದು ಕ್ರಿಕೆಟ್ ರೋಗ. ಇವತ್ತು ಟೆಲಿವಿಷನ್ ಪ್ರೀಮಿಯರ್ ಲೀಗ್, ರಾಜ್ ಕಪ್, ಸಿಸಿಎಲ್, ಕೆಸಿಟಿ, ಕ್ವೀನ್ಸ್ ಪ್ರೀಮಿಯರ್ ಲೀಗ್, ಪಟ್ಟಿ ಮಾಡ್ತಾ ಹೋದ್ರೆ ಇನ್ನಷ್ಟು ಸೇರ್ಪಡೆಯಾಗುತ್ತೆ. ತಿಂಗಳಿಡೀ ವರ್ಷವಿಡೀ ಸಿನಿಮಾದವ್ರು ಕ್ರಿಕೆಟಲ್ಲೇ ಬ್ಯುಸಿ. ಯಾವ ನಟನಿಗೆ ಫೋನ್ ಮಾಡಿದ್ರೂ ಶ್ರೀಲಂಕಾ, ಶಾರ್ಜಾ, ದುಬೈ, ಬ್ಯಾಂಕಾಕ್ ಅಂತ ಉತ್ತರ ಬರುತ್ತೆ. ಶೂಟಿಂಗಾ ಅಂತ ಕೇಳಿದ್ರೆ, ಅಲ್ಲ ಕ್ರಿಕೆಟ್ ಅಂತಾರೆ. ಇವರ ಜತೆಗೆ ನಟಿಯರ ದಂಡೂ ಹೋಗಿರುತ್ತೆ. ಆಡೋಕಲ್ಲ, ಚಿಯರ್ ಗರ್ಲ್ಸ್ ಥರ ನಲಿಯೋಕೆ, ನುಲಿಯೋಕೆ. ವರ್ಷದಲ್ಲಿ ಆರರಿಂದ ಏಳು ಟೂರ್ನಮೆಂಟ್, ಆರೇಳು ದೇಶ ಅಂದ್ರೆ ಅಲ್ಲೇ ವರ್ಷ ಕಳೆದೋಯ್ತು. ಇನ್ನು ಸಿನಿಮಾ ಮಾಡೋಕೆ ಟೈಮೆಲ್ಲಿದೆ?

ಯಾಕೆ ಸಿನಿಮಾಮಂದಿ ಕ್ರಿಕೆಟ್‌ನಲ್ಲಿ ಕಳೆದುಹೋಗಿದ್ದಾರೆ? ಸುದೀಪ್ ಥರದ ನಟರಿಗೆ ವರ್ಷಕ್ಕೊಂದು ಮೂರು ವರ್ಷಕ್ಕೊಂದು ಸಿನಿಮಾ ಮಾಡಿದರೂ ನಡೆಯುತ್ತೆ. ಅಥವಾ ಇನ್ನು ಸಿನಿಮಾನೇ ಮಾಡದೇ ಕ್ರಿಕೆಟ್ ಆಡ್ಕೊಂಡ್ ಇದ್ರೂ ನಡೆಯುತ್ತೆ. ಆದರೆ ಹೊಸ ನಟ-ನಟಿಯರಿಗೆ? ಮೊದಲು ಸಿನಿಮಾದವರಿಗೆ ಮಾತ್ರ ಎಂಟ್ರಿ ಅಂತ ಇದ್ದ ಈ ಕ್ರಿಕೆಟ್‌ನಲ್ಲಿ, ಚೆನ್ನಾಗಿ ಕ್ರಿಕೆಟ್ ಆಡುವವರನ್ನು ಕರೆತರಲು ಒಂದೆರಡು ಸಿನಿಮಾಗಳಲ್ಲಿ ಮುಖ ತೋರಿಸುವ ಶಾಸ್ತ್ರ ಮಾಡಿಸಲಾಯ್ತು. ಅಂದ್ರೆ ಹಿಂಬಾಗಿಲ ಎಂಟ್ರಿ. ಹೆಸರಿಗೆ ಮಾತ್ರ ಸಿನಿಮಾನಟರು. ಆದರೆ ಅಸಲಿಗೆ ಕ್ರಿಕೆಟಿಗರು. ಇದರ ಮಧ್ಯೆ, ಹೇಗಾದ್ರೂ ಕ್ರಿಕೆಟಿಗೆ ಸೇರಿಕೊಂಡ್ರೆ, ಸುದೀಪ್ ಮತ್ತಿತರರ ಜತೆ ಗುರುತಿಸಿಕೊಳ್ಳೋದ್ರಿಂದ ಸಿನಿಮಾದಲ್ಲಿ ಅವಕಾಶ ಸಿಗಬಹುದು ಎಂಬ ಆಸೆಗೂ ಒಂದಷ್ಟು ನಟರು ಕ್ರಿಕೆಟಿನ ಕಡೆ ಹೊರಳುವಂತಾಯ್ತು. ಕ್ರಿಕೆಟ್ ಕಡೆ ಹೋಗಿದ್ದರಿಂದ ಅಲ್ಲೊಬ್ಬ ಇಲ್ಲೊಬ್ಬರಿಗೆ ಸಿನಿಮಾದಲ್ಲಿ ಅವಕಾಶ ಸಿಕ್ಕಿದ್ದೇನೋ ಹೌದು. ಆದರೆ ಅದರಿಂದ ಸಿನಿಮಾಗಾಗಲೀ, ಅವರಿಗಾಗಲೀ ಯಾವ ಲಾಭವೂ ಆಗಲಿಲ್ಲ. ಈಗ ಸಿನಿಮಾ ಹಂಬಲಕ್ಕಿಂತ ಯಾವುದಾದರೂ ಕ್ರಿಕೆಟ್ ಟೀಮಲ್ಲಿ ಜಾಗ ಸಿಕ್ಕರೆ ಸಾಕು ಎಂದು ಹಪಹಪಿಸ್ತಾ ಇದ್ದಾರೆ ಯುವನಟರು. ಕ್ರಿಕೆಟ್ ಮೂಲಕ ಎಲ್ಲ ಲಕ್ಸುರಿ ಸಿಕ್ತಾ ಇರುವಾಗ ಸಿನಿಮಾ ಯಾಕೆ ಬೇಕು?

ಇಲ್ಲಿ ಯಾರ್‍ಯಾರೋ ನಟರಾಗ್ತಿದ್ದಾರೆ, ಯಾರ್‍ಯಾರೋ ನಿರ್ದೇಶಕರಾಗ್ತಿದ್ದಾರೆ. ಸಿನಿಮಾ ಪೋಷಿಸಬೇಕಿರೋವ್ರು ಕ್ರಿಕೆಟ್‌ನಲ್ಲಿ ಮುಳುಗಿಹೋಗಿದ್ದಾರೆ. ಕೆಟ್ಟ ಸಿನಿಮಾಗಳ ಸಂಖ್ಯೆ ಏರ್ತಾ ಇದೆ. ಕ್ವಾಲಿಟಿ ಸಿನಿಮಾಗಳ ಸಂಖ್ಯೆ ಇಳೀತಾ ಇದೆ. ಚಿತ್ರರಂಗದ ದೊಡ್ಡ ಭಾಗವೊಂದು ಹಣ ಉಳ್ಳವರನ್ನು ಬಳಸಿಕೊಂಡು ಕ್ರಿಕೆಟ್ ಹೆಸರಲ್ಲಿ ಮೋಜು-ಮಸ್ತಿ ನಡೆಸ್ತಾ ಇದೆ. ಇವರಿಗೆ ಸಿನಿಮಾದಲ್ಲಿ ಗೆಲ್ಲುವ ಭರವಸೆ, ನಂಬಿಕೆ ಇಲ್ಲ, ಹಾಕಿದ ಹಣ ವಾಪಸ್ ಬರೋ ಖಾತರಿ ಇಲ್ಲ, ಒಳ್ಳೆಯ ಸಿನಿಮಾ ಮಾಡುವ ಆಸಕ್ತಿಯೂ ಇಲ್ಲ, ಇಡೀ ಚಿತ್ರರಂಗ ಮತ್ತು ಕಿರುತೆರೆ, ಮಾಧ್ಯಮಮಂದಿಯನ್ನೂ ಒಳಗೂಡಿಸಿಕೊಂಡು ಕ್ರಿಕೆಟ್-ಬ್ಯಾಡ್ಮಿಂಟನ್ ಇತ್ಯಾದಿಗಳ ಹೆಸರಲ್ಲಿ ಸಿನಿಮಾರಂಗವನ್ನು ಮುಗಿಸಿಹಾಕುತ್ತಿದೆ. ಇವರು ಕ್ರಿಕೆಟ್ ಆಡಿ ಏನಾಗಬೇಕಿದೆ. ಯಾವ ದಾಖಲೆಗೆ ಬರುತ್ತೆ ಇವರು ಆಡುವ ಕ್ರಿಕೆಟ್? ಇತ್ತ ಸಿನಿಮಾದಿಂದ ಪೂರ್ತಿಯಾಗಿ ಹೊರಗಾದರೂ ಹೋಗ್ತಾರಾ? ಇಲ್ಲ, ಇವ್ರಿಗೆ ಸಿನಿಮಾದವರು ಅನ್ನೋ ಹಣೆಪಟ್ಟಿ ಬೇಕು. ಸಿನಿಮಾದವರ ಜತೆ ಕ್ರಿಕೆಟ್ ಮೂಲಕ ಗುರುತಿಸಿಕೊಳ್ಳೋ ಹಣ ಉಳ್ಳ ಮಂದಿಗೆ, ಮೋಜು ಮಾಡೋಕೆ ನಟಿಯರು ಸಿಕ್ತಾರೆ. ಇದರ ನಡುವೆ ಯಾರೋ ಬ್ರೈನ್ ವಾಷ್ ಮಾಡಿ ಸಿನಿಮಾಗೂ ಕಾಸು ಹಾಕಿಸ್ತಾರೆ. ಕ್ರಿಕೆಟ್ ಮೋಜು-ಮಸ್ತಿಯ ನಡುವೆ ಹುಟ್ಟಿಕೊಳ್ಳೋ ಈ ಒಡಂಬಡಿಕೆಯಿಂದ ಒಳ್ಳೇ ಸಿನಿಮಾ ಬರುತ್ತಾ? ಖಂಡಿತ ಇಲ್ಲ.

ಸಿನಿಮಾರಂಗ ಸಂಪೂರ್ಣವಾದ ಶ್ರದ್ಧೆ ಮತ್ತು ಶ್ರಮ ಬೇಡುತ್ತೆ. ರಿಷಭ್ ಶೆಟ್ಟಿ, ರಕ್ಷಿತ್, ರಾಜ್ ಶೆಟ್ಟಿ, ಯಶ್ ಮುಂತಾದ ನಟರು ಸಿನಿಮಾ ಬಿಟ್ಟು ಬೇರೆ ಯೋಚಿಸುತ್ತಿಲ್ಲ. ಕನ್ನಡ ಸಿನಿಮಾಗೆ ಬೇಕಿರೋದು ಇಂಥ ಡೆಡಿಕೇಶನ್. ಸೋಲು-ಗೆಲುವು ಸರ್ವೇಸಾಮಾನ್ಯ. ಆದರೆ ಸಿನಿಮಾವನ್ನು ಪಾರ್ಟ್ ಟೈಮ್ ಜಾಬ್ ಮಾಡಿಕೊಂಡವರಿಂದ ಒಳ್ಳೇ ಸಿನಿಮಾ ನಿರೀಕ್ಷಿಸೋಕಾದ್ರೂ ಸಾಧ್ಯವಾ? ನಿಜಕ್ಕೂ ಇವರಿಗೆ ಕ್ರಿಕೆಟ್ ಅಥವಾ ಇನ್ನಿತರ ಆಟಗಳ ಬಗ್ಗೆ ಒಲವಿದ್ದರೆ, ಕನ್ನಡದಲ್ಲಿ ಅತ್ಯುತ್ತಮ ಸ್ಪೋರ್ಟ್ಸ್ ಸಿನಿಮಾಗಳನ್ನು ತಯಾರಿಸುವ ನಿಟ್ಟಿನಲ್ಲಿ ಸ್ಕ್ರಿಪ್ಟ್ ಮಾಡಲಿ, ಕ್ರೀಡಾಪಟುಗಳ ಅದ್ಭುತ ಬಯೋಪಿಕ್ ತಯಾರಾಗಲಿ. ನಟರಾಗಿ ತಮ್ಮ ಕ್ರೀಡಾ ಒಲವನ್ನು ತೆರೆ ಮೇಲೆ ತೋರಿಸಲಿ. ಅದಿಲ್ಲವಾದಲ್ಲಿ ಸಿನಿಮಾದಿಂದ ಹೊರಗೆ ಹೋಗಿ ಕ್ರಿಕೆಟನ್ನೇ ಪೂರ್ತಿಯಾಗಿ ಸ್ವೀಕರಿಸಲಿ.

ಕನ್ನಡದಲ್ಲಿ ಕ್ರಿಕೆಟ್ ಬಗ್ಗೆ ಅಥವಾ ಯಾವುದಾದರೂ ಕ್ರೀಡೆ ಬಗ್ಗೆ ಅದ್ಭುತವಾದ ಸಿನಿಮಾ ಬಂದಿದೆಯಾ ಅಂತ ಇತಿಹಾಸ ಕೆದಕಿದರೆ ಉಹೂಂ.. ಎದೆ ತಟ್ಟಿ ಹೇಳೋಕೆ ಒಂದು ಸಿನಿಮಾ ಕೂಡ ಸಿಗೋದಿಲ್ಲ. 'ನವತಾರೆ' ಅಂತೊಂದು ಸಿನಿಮಾ ಬಂದಿತ್ತು. ಕುಮಾರ್ ಬಂಗಾರಪ್ಪ ಮತ್ತು ನಂಜುಂಡೇಗೌಡರ ಕಾಂಬಿನೇಶನ್ನಲ್ಲಿ. ಕ್ರಿಕೆಟ್ ಬಗ್ಗೆ ಆ ಕಾಲಕ್ಕೆ ಬಂದ ಡೀಸೆಂಟ್ ಸಿನಿಮಾ ಅದು. ಕುಮಾರ್ ಬಂಗಾರಪ್ಪ ಅಂದಿನ ದಿನಗಳಲ್ಲಿ ಸಾಕಷ್ಟು ಭಿನ್ನ ಸಿನಿಮಾಗಳನ್ನು ಮಾಡುವ ತುಡಿತ ಹೊಂದಿದ್ದರು. ಅದರ ಫಲವಾಗಿ ನವತಾರೆ ಸಿನಿಮಾ ಬಂದಿತ್ತು. ಕ್ರಿಕೆಟಿಗರಾದ ಜಿ.ಆರ್.ವಿಶ್ವನಾಥ್, ಕಿರ್ಮಾನಿ ಅದರಲ್ಲಿ ನಟಿಸಿದ್ದರು. ಆ ನಂತರ ಒಂದೇ ಒಂದು ಕ್ರೀಡಾಸಿನಿಮಾ ಬರಲಿಲ್ಲ. 'ಚೈತ್ರದ ಚಂದ್ರಮ'ದಂಥ ಕಳಪೆ ಸಿನಿಮಾಗಳನ್ನು ಕ್ರಿಕೆಟ್ ಬಗೆಗಿನ ಸಿನಿಮಾ ಅನ್ನೋದೇ ತಪ್ಪು. ಪೈಲ್ವಾನ್, ಮೌರ್ಯ, ಯುವರಾಜ ಇವೆಲ್ಲವೂ ಕುಸ್ತಿ, ಕಿಕ್ ಬಾಕ್ಸಿಂಗ್ ಇತ್ಯಾದಿ ಆಟಗಳನ್ನು ಒಳಗೊಂಡಿದ್ರೂ ಕ್ರೀಡಾಸಿನಿಮಾ ಅನ್ನುವಂತಿರಲಿಲ್ಲ. ಕಬಡ್ಡಿ ಅಂತೊಂದು ಸಿನಿಮಾ, ಗುರುಶಿಷ್ಯರು ಎಂಬ ಕೊಕ್ಕೋ ಆಟದ ಸಿನಿಮಾ ಹೊರತುಪಡಿಸಿದರೆ ಕನ್ನಡದಲ್ಲಿ ಕ್ರೀಡಾ ಸಿನಿಮಾಗಳು ಇಲ್ವೇ ಇಲ್ಲ ಅನ್ನಬಹುದು.

ಹಿಂದಿ, ತಮಿಳು ಚಿತ್ರರಂಗದಲ್ಲಿ ಅದೆಷ್ಟು ಕ್ರೀಡಾಸಿನಿಮಾಗಳು ಬಂದವು. ಕಮರ್ಷಿಯಲ್ ದೃಷ್ಟಿಯಲ್ಲೂ ಗೆಲ್ಲುವಂತೆ ಕ್ರೀಡಾಪಟುಗಳ ಬಯೋಪಿಕ್ ಸಿನಿಮಾಗಳನ್ನು ನಿರ್ಮಿಸಲಾಯ್ತು. ಹೆಮ್ಮೆಯ ಬಾಕ್ಸರ್ ಮೇರಿ ಕೋಮ್ ಆತ್ಮಕತೆ ಸಿನಿಮಾ ಆಯ್ತು. ಫರಾನ್ ಅಖ್ತರ್ ನಟನೆಯ 'ಭಾಗ್ ಮಿಲ್ಕಾ ಭಾಗ್', 'ಎಂಎಸ್ ಧೋನಿ ಅನ್‌ಟೋಲ್ಡ್ ಸ್ಟೋರಿ', ಎಂಬತ್ಮೂರರ ವಿಶ್ವಕಪ್ ಗೆಲುವಿನ ಕಹಾನಿ, ಮುತ್ತಯ್ಯ ಮುರಳೀಧರನ್‌ನ ಬಯೋಗ್ರಫಿ '800', ಫೋಗಟ್ ಸೋದರಿಯರ 'ದಂಗಲ್', ಕಬೀರ್ ಖಾನ್‌ನ 'ಚಕ್ ದೇ ಇಂಡಿಯಾ', 'ಗೋಲ್ಡ್', 'ಸೈನಾ', 'ಅಜರ್' ಎಷ್ಟು ಸಿನಿಮಾಗಳು ಬೇಕು? ಕ್ರಿಕೆಟ್ ಜತೆಗೆ ಸ್ವಾತಂತ್ರ್ಯ ಹೋರಾಟವನ್ನು ಬೆಸೆದ 'ಲಗಾನ್'ನಂಥ ಕ್ಲಾಸಿಕ್ ಸಿನಿಮಾ ಬರಲಿಲ್ವಾ? ಮ್ಯಾಚ್ ಫಿಕ್ಸಿಂಗ್, ಬೆಟ್ಟಿಂಗ್ ಮಾಫಿಯಾ ಸುತ್ತ ಹೆಣೆದ 'ಜನ್ನತ್' ಎಂಬ ಸಿನಿಮಾ ಮರೆಯಲಾದೀತಾ? 'ಝುಂಡ್', 'ಚಂದೂ ಚಾಂಪಿಯನ್', 'ಘೂಮರ್' ಎಂಥೆಂಥ ಕ್ರೀಡಾಂಶದ ಸಿನಿಮಾಗಳು.

ಕನ್ನಡದವರಿಗೆ ಏನಾಗಿದೆ? ಇವರಿಗೆ ಕಥೆಗಳಿಗೆ ಬರವಾ? ಕನ್ನಡದ ಕ್ರೀಡಾಪಟುಗಳ ಬಯೋಪಿಕ್ ಮಾಡೋ ಆಲೋಚನೆ ಬರೋದಿಲ್ವಾ? ಇಲ್ಲಿನ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್ ಇವರ ಕ್ರೀಡಾಬದುಕನ್ನು ಸಿನಿಮಾ ಮಾಡೋಕೆ ಬಾಲಿವುಡ್‌ನವರೇ ಬರಬೇಕಾ? ನಮಗ್ಯಾಕೆ ಹಿತ್ತಲ ಗಿಡ ಮದ್ದಾಗಿ ಕಾಣಿಸೋದಿಲ್ಲ? ಸುನಿಲ್ ಜೋಷಿ, ವಿಜಯ್ ಭಾರದ್ವಾಜ್, ಡೇವಿಡ್ ಜಾನ್ಸನ್ ಇವರೆಲ್ಲರೂ ಇಂಟರೆಸ್ಟಿಂಗ್ ಬದುಕು ಹೊಂದಿರೋ ಕ್ರಿಕೆಟಿಗರೇ. ಇವರ ಜೀವನಗಾಥೆ ಯಾಕೆ ಸಿನಿಮಾ ಆಗುತ್ತಿಲ್ಲ? ಕೈ ಕಳೆದುಕೊಂಡ ಹೆಣ್ಣುಗಳೊಬ್ಬಳು ಕ್ರಿಕೆಟಿನಲ್ಲಿ ಯಶಸ್ವಿಯಾಗುವ 'ಘೂಮರ್' ಎಂಬ ಸಿನಿಮಾ ಗೆಲ್ಲಿಸುವ, ಹೊಗಳಿ ಚಪ್ಪರಿಸುವ ನಾವು, ಪೋಲಿಯೋ ಕೈನಲ್ಲೇ ಬೌಲ್ ಮಾಡಿ ಯಶಸ್ವಿಯಾದ ನಮ್ಮದೇ ನೆಲದ ಬಿ.ಎಸ್.ಚಂದ್ರಶೇಖರ್ ಎಂಬ ಸ್ಪಿನ್ ಮಾಂತ್ರಿಕನ ಕಥೆಯನ್ನ್ಯಾಕೆ ಸಿನಿಮಾ ಮಾಡೋ ಬಗ್ಗೆ ಯೋಚಿಸೋದಿಲ್ಲ? ಕರ್ನಾಟಕದ ಬ್ಯಾಡ್ಮಿಂಟನ್ ದಂತಕತೆ ಪ್ರಕಾಶ್ ಪಡುಕೋಣೆಯ ಬಯೋಪಿಕ್ ಮಾಡಲು ನಮಗೆ ಮನಸು ಬರೋದಿಲ್ಲವೇಕೆ? ಕ್ರಿಕೆಟ್ ಅಥವಾ ಕ್ರೀಡಾ ಪ್ರೀತಿಯನ್ನು ಇಂಥ ಟ್ರಿಬ್ಯೂಟ್ ಮೂಲಕ ತೋರಲು ಸಾಧ್ಯವಿಲ್ಲವೇ? ಕನ್ನಡ ಸಿನಿಮಾಮಂದಿ ಮನಸು ಮಾಡಿದರೆ ಕ್ರೀಡೆಯನ್ನು ಒಳಗೊಂಡ ಅತ್ಯುತ್ತಮ ಸ್ಕ್ರಿಪ್ಟ್ ರಚಿಸೋದಕ್ಕೆ ಆಗೋದಿಲ್ವಾ? ಮಾತೆತ್ತಿದ್ರೆ ಇಲ್ಲಿನ ಅಂಡರ್‌ವರ್ಲ್ಡ್ ಕ್ರಿಮಿಗಳ, ಕೆಟ್ಟ ವ್ಯಕ್ತಿತ್ವಗಳ ಅತಿರಂಜಿತ ಬಯೋಪಿಕ್‌ಗಳಿಗೆ ಕೈಹಾಕುವ ಸ್ಯಾಂಡಲ್‌ವುಡ್‌ಗೆ, ಉತ್ತಮ ವ್ಯಕ್ತಿತ್ವಗಳ ಬಯೋಪಿಕ್ ಮಾಡೋ ತಾಕತ್ತಿಲ್ಲವಾ? ಪ್ಯಾನ್ ಇಂಡಿಯಾ ವ್ಯಾಪ್ತಿಯನ್ನು ಕನ್ನಡದ ಮಾನ ಹರಾಜು ಹಾಕುವಂಥ ಕೆಟ್ಟ ಸಿನಿಮಾ ಮಾಡೋಕೆ ಬಳಸೋ ಬದ್ಲು ದೇಶ ತಿರುಗಿ ನೋಡುವಂಥ ಅದ್ಭುತ ಸಿನಿಮಾಗಳನ್ನು ಮಾಡೋಕೆ ಬಳಸಲು ಸಾಧ್ಯವಿಲ್ವಾ? ಖಂಡಿತ ಇದೆ. ಆದರೆ ಆ ಇಚ್ಛಾಶಕ್ತಿಯೇ ಇಲ್ಲ. ಆ ಆಲೋಚನೆಗಳೇ ಇಲ್ಲ. ಪರಭಾಷೆಯಲ್ಲಿ ಬಂದ ಚಿತ್ರಗಳನ್ನು ರೀಮೇಕ್ ಮಾಡಿಯಾರು ಅಷ್ಟೆ. ಪರಭಾಷೆಯಲ್ಲಿ ಜೆರ್ಸಿ, ಧೋನಿ, ಲಬ್ಬರ್ ಪಂಡು, ಚೆನ್ನೈ 28 ಹೀಗೆ ಕ್ರಿಕೆಟ್ ಅನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಎಂಥೆಂಥ ಕಥಾವಸ್ತು ಸಿನಿಮಾ ಆಗಿದೆ. ನಮ್ಮವರಿಗೇಕೆ ಸಾಧ್ಯ ಇಲ್ಲ?

ಮೊದಲು ಈ ಕ್ರಿಕೆಟ್ ಶೋಕಿಯನ್ನು ಬದಿಗಿಟ್ಟು ಶ್ರದ್ಧೆಯಿಂದ ಸಿನಿಮಾಗೆ ತೊಡಗಿಸಿಕೊಳ್ಳಬೇಕು. ಅತ್ಯುತ್ತಮ ಸ್ಕ್ರಿಪ್ಟ್‌ಗಳಿಗೆ ಕಿವಿಯಾಗಬೇಕು. ಅದ್ಭುತ ಕಥೆಗಳನ್ನು ಆಯ್ಕೆ ಮಾಡಿಕೊಂಡು, ಸಿನಿಮಾ ಮಾಡಲು ಮುಂದಾಗಬೇಕು. ಕ್ರಿಕೆಟ್ಟಿಗೆ ಹಾಕ್ತಾ ಇರೋ ಶ್ರದ್ಧೆಯ ಹತ್ತು ಪರ್ಸೆಂಟ್ ಶ್ರದ್ಧೆಯನ್ನು ಸಿನಿಮಾಗೆ ಹಾಕಿದರೂ ಕನ್ನಡದಲ್ಲಿ ಅತ್ಯದ್ಭುತ ಸಿನಿಮಾಗಳನ್ನು ಕೊಡಬಹುದು. ರಿಯಾಲಿಟಿ ಶೋಗಳಿಗೆ ಜಡ್ಜ್ ಆಗೋದು, ಕ್ರಿಕೆಟ್ ಆಡೋದು ಇಂಥವುಗಳಲ್ಲೇ ಹೆಚ್ಚು ಸುಖ-ಸೇಫ್ಟಿ ಕಾಣ್ತಾ ಇರೋ ಈ ಮಂದಿ ಸಿನಿಮಾವನ್ನು ರಿಸ್ಕ್ ಥರ ನೋಡ್ತಿದಾರೆ. ಹಾಗೊಂದು ವೇಳೆ ಸಿನಿಮಾ ಮಾಡಿದರೂ ಅದನ್ನು ಶ್ರದ್ಧೆಯಿಂದ ಮಾಡ್ತಾ ಇಲ್ಲ, ತಮ್ಮ ಲಾಭಕ್ಕಾಗಿ ಮಾತ್ರ ಸಿನಿಮಾ ಮಾಡ್ತಿದ್ದಾರೆ. ಕನ್ನಡ ಚಿತ್ರರಂಗ ನಿಜಕ್ಕೂ 'ಐಸಿಯು'ದಲ್ಲಿದೆ. ಕಳೆದ ನಾಲ್ಕು ತಿಂಗಳಲ್ಲಿ ಸಕ್ಸಸ್ ರೇಟ್ ಒಂದು ಪರ್ಸೆಂಟ್ ಕೂಡ ಇಲ್ಲ, ಒಳ್ಳೇ ಸಿನಿಮಾಗಳು ಬರುತ್ತಿಲ್ಲ, ಸ್ಯಾಂಡಲ್‌ವುಡ್ ಈಗ ಪ್ರೇಕ್ಷಕನ ನಂಬಿಕೆಯನ್ನು ಕಳೆದುಕೊಂಡಿದೆ. ನಡುವೆ ಬರೋ ಬೆಟರ್ ಸಿನಿಮಾಗಳೂ ಇದರಿಂದಾಗಿ ನಷ್ಟ ಅನುಭವಿಸುತ್ತಿವೆ. ಕ್ರಿಕೆಟ್ ಹುಚ್ಚು ಮತ್ತು ಕೆಲವು ಭ್ರಮೆಗಳಿಂದ ಹೊರಬಂದು ಇಡೀ ಚಿತ್ರರಂಗ ಒಟ್ಟಾಗಿ ಒಳ್ಳೇ ಸಿನಿಮಾ ಮಾಡೋದಕ್ಕೆ ಶ್ರಮ ಹಾಕದಿದ್ದರೆ, ಇಂಡಸ್ಟ್ರಿಗೆ ಉಳಿಗಾಲವಿಲ್ಲ.

ಭಟ್ಟರ್ ಸ್ಕಾಚ್

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಅಂದು ಮೂರು ಅಡಿ ಅಗೆದು ಗಿಡ ನೆಟ್ಟಿದ್ದರೆ, ಇಂದು ಸಾವಿರ ಅಡಿ ಬೋರ್‌ವೆಲ್ ಹಾಕುವ ಅಗತ್ಯ ಬರುತ್ತಿರಲಿಲ್ಲ ಅಲ್ಲವೇ?
– **ಬೋರ್‌ವೆಲ್ ಕಂಪನಿಯವರೂ ಬದುಕಬೇಡವೇ?!**

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ನೀವು ಗುಂಡು ಹಾಕುವುದಿಲ್ಲ ಅಂತ ಅಂದುಕೊಳ್ಳಲೇ?
– **ಅಂದುಕೊಳ್ಳುವುದಿದ್ದರೆ, ಕಿರುಬೆರಳಲ್ಲೂ ಮುಟ್ಟುವುದಿಲ್ಲ ಅಂತಾನೂ ಅಂದುಕೊಳ್ಳಬಹುದು!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಪಹಲ್ಗಾಮ್ ಶೂಟ್ ಔಟ್‌ನಲ್ಲಿ ಧರ್ಮವನ್ನು ಕೇಳಿಲ್ಲ ಅಂತ ಕಾಂಗ್ರೆಸ್ ನಾಯಕರು ಹೇಳಿದ್ದಾರಲ್ಲ?
– **ಶೂಟಿಂಗ್ ಪ್ರಾಕ್ಟೀಸ್ ಅಷ್ಟೇ ಅಂತ ಸದ್ಯ ಹೇಳಲಿಲ್ಲವಲ್ಲ?!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ವಿಪರೀತ ಸೆಕೆ, ಎಲ್ಲಾದರೂ ಹೋಗೋಣ ಅಂತ ನನ್ನಾಕೆ ಹೇಳ್ತಾಳಲ್ಲ?
– **ಕಾಶ್ಮೀರಕ್ಕೆ ಹೋಗೋಣವಾ ಅಂತ ಕೇಳಿ ನೋಡಬೇಕಿತ್ತು!**

- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
ಭಟ್ರೇ, ಪಾಕ್ ಜತೆ ಯುದ್ಧ ಬೇಡ ಅಂತ ಸಿದ್ದರಾಮಯ್ಯನವರು ಹೇಳಿದ್ರಂತೆ?
– **ಕಾಂಗ್ರೆಸ್ ಜತೆಗೆ ಯುದ್ಧ ಮಾಡಿ ಗೆಲ್ಲಿ ಅಂತ ಮೋದಿಯವರಿಗೆ ಹೇಳಿದ್ದಾರಂತೆ!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಯೋಗಿ ದುರ್ಲಭಜೀ ಫೋಟೋವನ್ನು ಪತ್ರಿಕೆಯಲ್ಲೇಕೆ ಪ್ರಕಟಿಸುವುದಿಲ್ಲ?
– **ಅವರ ಫೋಟೋ ದುರ್ಲಭ ವಾಯಿತು ಅಂತೀಯಾ?!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಸಚಿವ ಸಂತೋಷ ಲಾಡ್ ಟ್ರಬಲ್ ಶೂಟರ್ ಅಂತೇ?
– **ಶಾರ್ಪ್ ಶೂಟರ್ ಆಗಿದ್ದಿದ್ದರೆ ಕಾಶ್ಮೀರಕ್ಕೆ ಕಳಿಸಿಕೊಟ್ಟದ್ದಕ್ಕೆ ಒಂದು ಅರ್ಥ ಇರ್ತಿತ್ತು!**

- **ರಾಕೇಶ ಶೆಟ್ಟಿ, ಮಂಗಳೂರು**
ಭಟ್ರೇ, ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಯನ್ನು ನಿಜಗುಣಾನಂದ ಸ್ವಾಮೀಜಿಗೇಕೆ ಕೊಡಬಾರದು?
– **ಮೊದಲು ಆ ಸ್ವಾಮೀಜಿ ಕಿರುಚುವುದನ್ನು ನಿಲ್ಲಿಸಲಿ, ನಂತರ ಯೋಚಿಸೋಣ!**

- **ಎಂ.ಕೆ.ಪ್ರಭು, ಚಿತ್ರದುರ್ಗ**
ಭಟ್ರೇ, ಕಾಶ್ಮೀರದಲ್ಲಿ ಹತ್ಯೆ ವಿಷಯ ಗೊತ್ತಾದ ತಕ್ಷಣ ಮೋದಿ ಸ್ವದೇಶಕ್ಕೆ ವಾಪಸ್ ಆದರು, ನೀವು ಮಾತ್ರ ರಷ್ಯಾದಲ್ಲೇ ಇದ್ದಿದ್ದೇಕೆ?
– **ಹತ್ಯೆ ನಂತರ ಏನೇನೋ ಮಾಡುವುದಕ್ಕಿಂತ, ಹತ್ಯೆಯೇ ಆಗದಂತೆ ಮಾಡೋದು ಮುಖ್ಯ!**

ಸಂಸ್ಕಾರದಿಂದಲೇ ಸಾಧ್ಯ ಸ್ವಯಂ ಸಾಕ್ಷಾತ್ಕಾರ

ಸಂಸ್ಕಾರದ ಪರಿಣಾಮದಿಂದ ಮಾನವನು ತನ್ನ ದುರ್ಗುಣಗಳನ್ನು ಕಳೆದುಕೊಂಡು, ಉತ್ತಮ ಗುಣಗಳನ್ನು ಪಡೆದು, ಪರಿಪೂರ್ಣ ಮಾನವೀಯತೆಯನ್ನು ಮೈಗೂಡಿಸಿಕೊಂಡು, ಇನ್ನೂ ಮುಂದೆ ಸಾಗಿ ದೈವತ್ವಕ್ಕೆ ಏರುತ್ತಾನೆ. ಷೋಡಶ ಸಂಸ್ಕಾರಗಳು ಮಾನವನ ಜೀವನದಲ್ಲಿ ಬರಬಹುದಾದ ಏರುಪೇರುಗಳನ್ನು ನಿವಾರಿಸಿ, ಮಾನವೀಯ ಮೌಲ್ಯಗಳನ್ನು ಕಾಪಾಡಿ, ಮನುಷ್ಯತ್ವದಿಂದ ದೈವತ್ವದ ಕಡೆಗೆ ಕರೆದೊಯ್ಯುವ ಸಾಧನಗಳಾಗಿವೆ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಆಯುರ್ವೇದ ಶಾಸ್ತ್ರದಲ್ಲಿ 'ಷೋಡಶ ಸಂಸ್ಕಾರ'ಗಳ ಬಗ್ಗೆ ವಿಸ್ತಾರವಾದ ವಿವರಣೆಯನ್ನು ಕಾಣಬಹುದು. ಆಯುರ್ವೇದವು ಕೇವಲ ಒಂದು ವೈದ್ಯಕೀಯ ಪದ್ಧತಿಯಷ್ಟೇ ಅಲ್ಲದೆ ಒಂದು ಜೀವನ ವಿಜ್ಞಾನವೂ ಆಗಿರುವುದರಿಂದ, ಒಬ್ಬ ವ್ಯಕ್ತಿಯ ಆರೋಗ್ಯ ಸುಧಾರಣೆಯಿಂದ ಹಿಡಿದು ಅವನ ಜೀವನದ ಪರಮೋದ್ದೇಶವನ್ನು ತಲುಪುವ ತನಕವೂ ಆಯುರ್ವೇದದ ಜ್ಞಾನ ಅತ್ಯಗತ್ಯ. ಹಾಗಾಗಿ ಒಬ್ಬ ವ್ಯಕ್ತಿಯ ಪರಿಪೂರ್ಣ ವಿಕಸನಕ್ಕೆ ಅಗತ್ಯವಿರುವ ಈ ಸಂಸ್ಕಾರಗಳ ಉಲ್ಲೇಖವನ್ನು ನಾವು ಆಯುರ್ವೇದದಲ್ಲಿ ಕಾಣಬಹುದು. ಹಾಗಾದರೆ ಏನಿದು ಸಂಸ್ಕಾರ? ಷೋಡಶ ಸಂಸ್ಕಾರಗಳಾವುವು? ಇದರ ಬಗ್ಗೆ ಇಂದಿನ ಲೇಖನದಲ್ಲಿ ನೋಡೋಣ...

'ಸಂಸ್ಕಾರ'ವೆಂದರೆ ಶುದ್ಧ ಮಾಡುವಿಕೆ, ಪರಿಷ್ಕರಿಸುವಿಕೆ, ಸುಧಾರಿಸುವಿಕೆ, ಯೋಗ್ಯತೆಯನ್ನು ಉಂಟುಮಾಡುವಿಕೆ ಇತ್ಯಾದಿ ಅನೇಕ ಅರ್ಥಗಳಿವೆ. ಆಯುರ್ವೇದದಲ್ಲಿ 'ಸಂಸ್ಕಾರೋ ಹಿ ಗುಣಾಂತರಾಧಾನಮುಚ್ಯತೆ' ಎಂದು ವಿವರಿಸುತ್ತಾರೆ. ಅಂದರೆ ಮಾನವನಲ್ಲಿ ಹುಟ್ಟಿನಿಂದಲೇ ಇರಬಹುದಾದ ದೋಷಗಳನ್ನು ತೆಗೆದುಹಾಕಿ, ಕೊರತೆ ಇದ್ದರೆ ಅದನ್ನು ಪೂರ್ತಿ ಮಾಡಿ, ಇನ್ನಿತರ ಅವಶ್ಯಕತೆ ಇರುವ ಗುಣಗಳನ್ನು ತುಂಬಿ, ಒಳ್ಳೆಯ ಗುಣಗಳನ್ನು ಅತಿಶಯವಾಗಿ ಬೆಳೆಸುವುದೇ 'ಸಂಸ್ಕಾರ'. ಇದನ್ನೇ ದೋಷಾಪನಯನ, ಗುಣಾಧಾನ ಮತ್ತು ಹೀನಾಂಗಪೂರಣ ಎಂದು ಕರೆಯುತ್ತಾರೆ. ಈ ಉದ್ದೇಶಗಳಿಗಾಗಿಯೇ ಆಚರಿಸಲ್ಪಡುವ ವಿಧಿಪೂರ್ವಕ ಪ್ರಕ್ರಿಯೆಗಳನ್ನು ಸಂಸ್ಕಾರವೆಂದು ಕರೆಯುತ್ತಾರೆ.

ಸಂಸ್ಕಾರದ ಪರಿಣಾಮದಿಂದ ಮಾನವನು ತನ್ನ ದುರ್ಗುಣಗಳನ್ನು ಕಳೆದುಕೊಂಡು, ಉತ್ತಮ ಗುಣಗಳನ್ನು ಪಡೆದು, ಪರಿಪೂರ್ಣ ಮಾನವೀಯತೆಯನ್ನು ಮೈಗೂಡಿಸಿಕೊಂಡು, ಇನ್ನೂ ಮುಂದೆ ಸಾಗಿ ದೈವತ್ವಕ್ಕೆ ಏರುತ್ತಾನೆ. ಅದುವೇ ಈ ಸಂಸ್ಕಾರಗಳ ಉದ್ದೇಶ. ಆಯುರ್ವೇದದಲ್ಲಿ ಷೋಡಶ ಸಂಸ್ಕಾರಗಳು ಅಂದರೆ 16 ಸಂಸ್ಕಾರಗಳನ್ನು ವಿವರಿಸಿದ್ದಾರೆ.

- ಗರ್ಭಾವಸ್ಥೆಯ ಸಂಸ್ಕಾರಗಳು: 1. ಗರ್ಭಾಧಾನ 2. ಪುಂಸವನ 3. ಸೀಮಂತ.
- ಶೈಶವಾವಸ್ಥೆಯ ಸಂಸ್ಕಾರಗಳು: 4. ಜಾತಕರ್ಮ 5. ನಾಮಕರಣ 6. ನಿಷ್ಕ್ರಮಣ
- ಬಾಲ್ಯಾವಸ್ಥೆಯ ಸಂಸ್ಕಾರಗಳು: 7. ಅನ್ನಪ್ರಾಶನ 8. ಚೂಡಾಕರ್ಮ 9. ಕರ್ಣವೇಧ
- ಕೌಮಾರಾವಸ್ಥೆಯ ಸಂಸ್ಕಾರಗಳು: 10. ಅಕ್ಷರಾಭ್ಯಾಸ 11. ಉಪನಯನ 12. ವೇದಾರಂಭ
- ಯೌವನಾವಸ್ಥೆಯ ಸಂಸ್ಕಾರಗಳು: 13. ಸಮಾವರ್ತನ 14. ವಿವಾಹ
- ವೃದ್ಧಾವಸ್ಥೆಯ ಸಂಸ್ಕಾರಗಳು: 15. ವಾನಪ್ರಸ್ಥ 16. ಸಂನ್ಯಾಸ

1. ಗರ್ಭಾಧಾನ

ಗರ್ಭಾಧಾನ ಎಂದರೆ ಗರ್ಭಧಾರಣೆ. ಗರ್ಭಾಧಾನವು ಗರ್ಭ ಮತ್ತು ಆಧಾನಗಳ ಸಮಸ್ತ ಪದ. ಸರಳವಾಗಿ ಹೇಳಬೇಕಾದರೆ, ಗರ್ಭವನ್ನು ತುಂಬಿಸುವಿಕೆ/ಗರ್ಭವನ್ನು ಧರಿಸುವುದು ಎಂಬ ಅರ್ಥವನ್ನು ಈ ಪದವು ನೀಡುತ್ತದೆ. ಸೂಕ್ತವಾದ ಕಾಲದಲ್ಲಿ, ವಿವಾಹಿತ ದಂಪತಿಯು, ಶರೀರ ಮನಸ್ಸುಗಳನ್ನು ಶುದ್ಧಗೊಳಿಸಿ ಜೊತೆಗೂಡಿ ವಂಶೋದ್ಧಾರಕ್ಕಾಗಿ ಬೇಕಾದ ಸಂತಾನೋತ್ಪತ್ತಿಯನ್ನು ಮಾಡುವುದು, ತನ್ಮೂಲಕ ಪಿತೃ ಋಣವನ್ನು ತೀರಿಸಲು ಸಂಕಲ್ಪ ಮಾಡುವ ಸಂಸ್ಕಾರವೇ ಗರ್ಭಾಧಾನ. ಈ ಒಂದು ಸಂಸ್ಕಾರಕ್ಕೆ ದಂಪತಿಗಳ ಶಾರೀರಿಕ ಮತ್ತು ಮಾನಸಿಕ ದೃಢತೆ ಗಣನೆಗೆ ಬರುತ್ತದೆ. ಆಯುರ್ವೇದದ ಪ್ರಕಾರ ಗರ್ಭಾಧಾನದ ಕನಿಷ್ಠ ವಯಸ್ಸು, ಸ್ತ್ರೀಗೆ 16 ವರ್ಷ ಮತ್ತು ಪುರುಷನಿಗೆ 25 ವರ್ಷ ಆಗಿರಬೇಕು. ಇದು ನಿಯಮ.

2. ಪುಂಸವನ

ಗರ್ಭದ ಸ್ಪಷ್ಟ ಜ್ಞಾನವಾದ ನಂತರ ಎರಡು ಅಥವಾ ಮೂರನೇ ತಿಂಗಳಲ್ಲಿ ಮಾಡುವ ಒಂದು ಸಂಸ್ಕಾರ ಪುಂಸವನ. 'ಪುಮಾನ್ ಸೂಯತೇ ಯಸ್ಮಾತ್ ಇತಿ ಪುಂಸವನಮ್' ಅಂದರೆ ವೀರ್ಯವಂತನಾದ, ಬಲವಂತನಾದ ಸಂತತಿಯು ಯಾವ ಸಂಸ್ಕಾರದಿಂದ ಉಂಟಾಗುತ್ತದೆಯೋ ಅದೇ ಪುಂಸವನ ಸಂಸ್ಕಾರ. ಸಾಮಾನ್ಯವಾಗಿ, ಗಂಡು ಮಗುವನ್ನು ಪಡೆಯುವುದಕ್ಕೆ ಈ ಸಂಸ್ಕಾರವನ್ನು ಮಾಡಬೇಕು ಎಂಬ ಭಾವನೆ ಬಹಳ ಜನರಿಗೆ ಇದೆ. ಆದರೆ ಈ ಸಂಸ್ಕಾರವು ಗರ್ಭದ ಲಿಂಗ ನಿರ್ಣಯವನ್ನು ಮಾಡುವುದಕ್ಕಿಂತಲೂ ಮಿಗಿಲಾಗಿ ಉತ್ತಮವಾದ ಪ್ರಜೆಯನ್ನು, ಬಲಿಷ್ಠವಾದ ಪ್ರಜೆಯನ್ನು ಯಾವುದೇ ವಿಘ್ನಗಳಿಲ್ಲದೆ ಪಡೆಯುವುದಕ್ಕೆ ಮಾಡುವುದು. ಅದು ಗಂಡಾಗಿರಲಿ ಅಥವಾ ಹೆಣ್ಣಾಗಿರಲಿ.

3. ಸೀಮಂತೋನ್ನಯನ

ತಲೆಯ ಮೇಲಿರುವ ಪಂಚ ಸಂಧಿಗೆ 'ಸೀಮಂತ' ಎಂದು ಹೆಸರು. ಅದರ ಉನ್ನಯನ ಅಂದರೆ ವೃದ್ಧೀಕಣೆ/ರಕ್ಷಣೆಯು ಈ ಸಂಸ್ಕಾರದ ಪ್ರಧಾನ ಉದ್ದೇಶ. ಸಾಮಾನ್ಯವಾಗಿ ಗರ್ಭಾಧಾನದ ನಾಲ್ಕು, ಆರು ಮತ್ತು ಎಂಟನೇ ಮಾಸಗಳಲ್ಲಿ, ಶುಭ ನಕ್ಷತ್ರ, ಶುಭಯೋಗ, ಶುಭ ದಿನದಂದು ಸೀಮಂತೋನ್ನಯನ ಸಂಸ್ಕಾರವನ್ನು ಮಾಡಬಹುದು. ಈ ಸಂಸ್ಕಾರದಲ್ಲಿ ಹಂದಿಯ ಮುಳ್ಳು/ದರ್ಭೆ/ಅತ್ತಿಮರದ ಕೊನೆ- ಇವುಗಳನ್ನು ಗರ್ಭಿಣಿಯ ಮುಂದಲೆಗೆ ಮುಟ್ಟಿಸಿ ಹಿಂದಲೆಯವರೆಗೆ ಎಳೆಯುವ ವಿಧಿಯು ಗರ್ಭದಲ್ಲಿನ ಶಿಶುವಿಗೆ ಸುಖಕರ ಮತ್ತು ಪ್ರಸವಕ್ಕೂ ಸಹಾಯಕರ.

4. ಜಾತಕರ್ಮ

ಶಿಶುವಿನ ಜನನವಾದ ಕೂಡಲೇ ಮಾಡುವ ಸಂಸ್ಕಾರವನ್ನು ಜಾತಕರ್ಮವೆಂದು ಹೇಳುತ್ತಾರೆ. ಸಾಂಪ್ರದಾಯಿಕ ಜಾತಕರ್ಮದ ಆಚರಣೆಯ ಸಮಯದಲ್ಲಿ, ತಂದೆಯು ಮಗುವಿನ ತುಟಿಗಳನ್ನು ಜೇನುತುಪ್ಪ ಮತ್ತು ತುಪ್ಪದಿಂದ ಸಂಸ್ಕರಿಸಿದ ಮೇಧ್ಯ ದ್ರವ್ಯಗಳಿಂದ ಸ್ಪರ್ಶಿಸುವ ಮೂಲಕ ಮಗುವನ್ನು ಸ್ವಾಗತಿಸುತ್ತಾರೆ. ಜತೆಗೆ, ವೈದಿಕ ಮಂತ್ರಗಳನ್ನು ಪಠಿಸಲಾಗುತ್ತದೆ. ಇದರ ಮುಖ್ಯ ಉದ್ದೇಶ ಮೇಧಾಜನನ. ತಾಯಿಯ ಗರ್ಭದಲ್ಲಿ ಮಗುವಿನ ದೇಹ ರಚನೆ ಪೂರ್ಣಗೊಂಡ ನಂತರ, ಮಗುವಿನ ಮನಸ್ಸು ಮತ್ತು ಬುದ್ಧಿಶಕ್ತಿಯನ್ನು ಉತ್ತೇಜಿಸುವುದರ ಜತೆಗೆ ಈ ಸಂಸ್ಕಾರವು ಮಗುವಿಗೆ ದೀರ್ಘಾಯುಷ್ಯವನ್ನು ಬಯಸುತ್ತದೆ.

5. ನಾಮಕರಣ

ನಾಮಕರಣವು ಮಗುವಿಗೆ ಹೆಸರಿಡುವ ಸಂಸ್ಕಾರ ಎಂದರ್ಥ. ಈ ಸಂಸ್ಕಾರವನ್ನು ಸಾಮಾನ್ಯವಾಗಿ ಜನನದ ನಂತರದ 11ನೇ ಅಥವಾ 12ನೇ ದಿನದಂದು ಮಾಡಲಾಗುತ್ತದೆ, ಮತ್ತು ಕೆಲವೊಮ್ಮೆ ಜನನದ 10ನೇ ದಿನದ ನಂತರದ ಮೊದಲ ಅಮಾವಾಸ್ಯೆ ಅಥವಾ ಹುಣ್ಣಿಮೆಯ ದಿನದಂದು ಮಾಡಲಾಗುತ್ತದೆ. ಈ ಸಂಸ್ಕಾರದ ದಿನದಂದು, ಶಿಶುವಿಗೆ ಸ್ನಾನ ಮಾಡಿಸಿ, ಹೊಸ ಬಟ್ಟೆಗಳನ್ನು ಉಡಿಸಲಾಗುತ್ತದೆ. ಪೋಷಕರು ಆಯ್ಕೆ ಮಾಡಿದ ಔಪಚಾರಿಕ ಹೆಸರನ್ನು ಘೋಷಿಸಲಾಗುತ್ತದೆ. ನಾಮಕರಣ ಆಚರಣೆಯು ಮಗುವನ್ನು ಪವಿತ್ರಗೊಳಿಸಿ ಅದರ ಸಾಮಾಜಿಕ ಸಂಬಂಧವನ್ನು ಗುರುತಿಸುತ್ತದೆ.

6. ನಿಷ್ಕ್ರಮಣ

ನಿಷ್ಕ್ರಮಣ ಎಂದರೆ 'ಹೊರಗೆ ಹೋಗುವುದು, ಹೊರಬರುವುದು' ಎಂದರ್ಥ. ಇದು ಪೋಷಕರು ಮಗುವನ್ನು ಮನೆಯಿಂದ ಹೊರಗೆ ಕರೆದೊಯ್ಯುವ ಮತ್ತು ಮಗುವು ಔಪಚಾರಿಕವಾಗಿ ಮೊದಲ ಬಾರಿಗೆ ಹೊರಜಗತ್ತನ್ನು ಪ್ರವೇಶಿಸುವ ವಿಧಿ. ಇದನ್ನು ಸಾಮಾನ್ಯವಾಗಿ ಜನನದ ನಂತರದ ನಾಲ್ಕನೇ ತಿಂಗಳಲ್ಲಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ, ಸೂರ್ಯೋದಯ ಅಥವಾ ಸೂರ್ಯಾಸ್ತದ ಸಮಯದಲ್ಲಿ ಶಿಶುವಿಗೆ ಸೂರ್ಯ ಅಥವಾ ಚಂದ್ರನ ದರ್ಶನ ಮಾಡಿಸಲಾಗುತ್ತದೆ.. ಪರ್ಯಾಯವಾಗಿ, ಕೆಲವು ಕುಟುಂಬಿಕರು ಮಗುವನ್ನು ಮೊದಲ ಬಾರಿಗೆ ದೇವಸ್ಥಾನಕ್ಕೆ ಕರೆದೊಯ್ಯುತ್ತಾರೆ.

7. ಅನ್ನಪ್ರಾಶನ

ಅನ್ನಪ್ರಾಶನ ಎಂದರೆ ಆಹಾರ ಉಣಿಸುವುದು ಎಂದರ್ಥ. ಮಗುವಿಗೆ ಮೊದಲ ಬಾರಿಗೆ ಘನ ಆಹಾರವನ್ನು ತಿನ್ನಿಸುವುದು ಈ ಸಂಸ್ಕಾರದ ಉದ್ದೇಶ. ಆಯುರ್ವೇದದಲ್ಲಿ, ಅನ್ನಪ್ರಾಶನ ಅಥವಾ ಘನ ಆಹಾರಗಳ ಪರಿಚಯವು ಒಂದು ಮಹತ್ವದ ಸಂಸ್ಕಾರ. ಇದು ಒಂದು ಆಚರಣೆ ಅಥವಾ ಸಮಾರಂಭವಾಗಿದ್ದು, ಇದನ್ನು ಸಾಮಾನ್ಯವಾಗಿ ಆರು ತಿಂಗಳ ವಯಸ್ಸಿನಲ್ಲಿ ಮಾಡಲಾಗುತ್ತದೆ. ಮಗುವಿಗೆ ಎದೆ ಹಾಲಿನಿಂದ ನಿಧಾನವಾಗಿ ಪೂರಕ ಆಹಾರದ ಸೇವನೆಯ ಯೋಗ್ಯತೆ ದಕ್ಕಿರುವುದನ್ನು ಗುರುತಿಸಲಾಗುತ್ತದೆ. ಇದು ಮಗುವಿನ ಪೋಷಣೆ ಮತ್ತು ಬೆಳವಣಿಗೆಯಲ್ಲಿ ಒಂದು ಮಹತ್ತರವಾದ ಹೆಜ್ಜೆ. ಹಿರಿಯರ ಆಶೀರ್ವಾದದೊಂದಿಗೆ ಮಗುವಿಗೆ ಅನ್ನದ ಪಾಯಸ/ಮಣ್ಣಿಯನ್ನು ಉಣಿಸಲಾಗುತ್ತದೆ.

8. ಚೂಡಾಕರ್ಮ

ಚೂಡಾಕರ್ಮವು ಹುಟ್ಟಿನಿಂದಲೇ ಇದ್ದ ಕೂದಲನ್ನು ತೆಗೆಯುವ ಸಾಂಕೇತಿಕ ಕ್ರಿಯೆಯಾಗಿದ್ದು, ಇದು ಹಿಂದಿನಜನ್ಮದ ಕರ್ಮ ಅಥವಾ ನಕಾರಾತ್ಮಕ ಗುಣಲಕ್ಷಣಗಳೊಂದಿಗೆ ಸಂಬಂಧಿಸಿದೆ ಎಂದು ನಂಬಲಾಗಿದೆ. ಕೂದಲನ್ನು ಕ್ಷೌರ ಮಾಡುವುದು ಪೂರ್ವಕರ್ಮಗಳನ್ನು ಶುದ್ಧೀಕರಿಸಿ ಮಗುವಿಗೆ ಹೊಸ ಹಾದಿಯನ್ನು ಪ್ರಾರಂಭಿಸಲು ಅನುವು ಮಾಡಿಕೊಡುತ್ತದೆ. ಈ ಸಮಾರಂಭವನ್ನು ಸಾಮಾನ್ಯವಾಗಿ ಮಗುವಿನ ಜೀವನದ ಮೊದಲ ಅಥವಾ ಮೂರನೇ ವರ್ಷದಲ್ಲಿ ನಡೆಸಲಾಗುತ್ತದೆ.



9. ಕರ್ಣವ್ಯಧನ

ಮಗುವಿಗೆ ಶಾಸ್ತ್ರೋಕ್ತವಾಗಿ ಕಿವಿಗಳನ್ನು ಚುಚ್ಚಿ ಆಭರಣವನ್ನು ತೊಡಿಸುವ ಸಂಸ್ಕಾರಕ್ಕೆ ಕರ್ಣವ್ಯಧನ ಎಂದು ಕರೆಯುತ್ತಾರೆ. ಕರ್ಣವ್ಯಧನವನ್ನು ಎರಡು ಮುಖ್ಯ ಉದ್ದೇಶಗಳಿಗಾಗಿ ನಿರ್ವಹಿಸಲಾಗುತ್ತದೆ. ಅವುಗಳೆಂದರೆ- ರಕ್ಷಣಾನಿಮಿತ್ತ- ರೋಗಗಳಿಂದ ಸಂರಕ್ಷಣೆಗಾಗಿ ಮತ್ತು ಭೂಷಣಾನಿಮಿತ್ತ- ಆಭರಣಗಳ ಅಲಂಕಾರಕ್ಕಾಗಿ. ಈ ಸಂಸ್ಕಾರವನ್ನು ಕುಶಲರಾದ ವೈದ್ಯರು ಮತ್ತು ಶಸ್ತ್ರ ವೈದ್ಯರು ಮಾತ್ರ ನಿರ್ವಹಿಸತಕ್ಕದ್ದು. ಅನುಭವಿ ಹಾಗೂ ಗುರು ವೈದ್ಯರು ಧರ್ಮಾರ್ಥಕಾಮಗಳನ್ನು ಗಳಿಸಲು ಮಗುವಿಗೆ ಕರ್ಣವ್ಯಧನವನ್ನು ಮಾಡಲು ತಿಳಿಸಿರುತ್ತಾರೆ. ಜನನದ ನಂತರದ ಮೊದಲ ನಾಲ್ಕು ವಾರಗಳಲ್ಲಿ ಆಚರಣೆ ಮಾಡಲು ಕೆಲವರು ತಿಳಿಸಿದರೆ, ಇತರರು ಮೊದಲ ವರ್ಷದೊಳಗೆ ಮಾಡಲು ಸೂಚಿಸುತ್ತಾರೆ.

10. ವಿದ್ಯಾರಂಭ

ಮಗು ಹುಟ್ಟಿದ ಐದನೇ ವರ್ಷದಲ್ಲಿ ವಿದ್ಯಾರಂಭ/ಅಕ್ಷರಾಭ್ಯಾಸ ಮಾಡಿಸಬೇಕು. ಶುಭಮುಹೂರ್ತದಲ್ಲಿ ಅಕ್ಷರಾಭ್ಯಾಸ ಮಾಡಿಸಬೇಕು. ವಿದ್ಯೆಯು ಜೀವನದ ಬೆಳಕು. ವಿದ್ಯೆ ಎಂದರೆ ತಿಳಿಯುವುದು ಎಂದರ್ಥ. ಅಂದರೆ ಜೀವನದ ಎಲ್ಲಾ ಮಜಲುಗಳನ್ನು ತಿಳಿದು ಸಮಾಜಮುಖಿಯಾದ ಉನ್ನತ ಬದುಕನ್ನು ರೂಢಿಸಿಕೊಳ್ಳಲು ಈ ವಿದ್ಯೆಯೇ ಆಧಾರ. ಆದ್ದರಿಂದ ಈ ಸಂಸ್ಕಾರವನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸತಕ್ಕದ್ದು. ಇದನ್ನು ಸಾಮಾನ್ಯವಾಗಿ ಐದು ವರ್ಷದ ನಂತರವೇ ಮಾಡಬೇಕು. ಕಾರಣ, ಮಗುವಿನ ಭೌತಿಕ ಶಕ್ತಿ ಬೆಳೆಯಲು ಕನಿಷ್ಠ ಐದು ವರ್ಷ ಪೂರ್ಣವಾಗಬೇಕಾಗುತ್ತದೆ.

11. ಉಪನಯನ

ಈ ಸಂಸ್ಕಾರವು ಅತ್ಯಂತ ಮಹತ್ವಪೂರ್ಣವಾದುದು. 'ಉಪ' ಎಂದರೆ ಗುರುವಿನ ಸಮೀಪ, 'ನಯನ' ಎಂದರೆ ಕೊಂಡೊಯ್ಯುವುದು. ಗುರುವಿನಿಂದ ಉಪದೇಶವನ್ನು ಪಡೆಯುವುದಕ್ಕಾಗಿ ಗುರುವಿನ ಬಳಿ ಸೇರುವುದೇ ಉಪನಯನದ ಉದ್ದೇಶ. ಒಬ್ಬ ವ್ಯಕ್ತಿಯನ್ನು ಅರಿವು ಅಥವಾ ಜ್ಞಾನದ ಹತ್ತಿರ ಕರೆದುಕೊಂಡು ಹೋಗುವ ಒಂದು ವಿಧಾನ ಈ ಉಪನಯನ. ಒಬ್ಬ ವ್ಯಕ್ತಿಯು ವೇದ ಜ್ಞಾನವುಳ್ಳವನಾಗಬೇಕಾದರೆ ಅದಕ್ಕೆ ಪೂರ್ವ ಸಿದ್ಧತೆಗಳು ಅತ್ಯವಶ್ಯಕ. ಆದ್ದರಿಂದ ಜ್ಞಾನಾರ್ಜನೆಯನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿಗೂ ಉಪನಯನದ ಅವಶ್ಯಕತೆ ಇದೆ. ಉಪನಯನದ ಸಂಸ್ಕಾರದಿಂದ ಪುನರ್ಜನ್ಮವೇ ದೊರೆತಂತಾಗುತ್ತದೆ. ಸಾಮಾನ್ಯವಾಗಿ, ಜನನದಿಂದ ಅಥವಾ ಯಾವ ದಿನ ಗರ್ಭ ನಿಂತಿದೆಯೋ ಅಲ್ಲಿಂದ ಎಂಟನೇ ವರ್ಷದಲ್ಲಿ ಉಪನಯನ ಮಾಡತಕ್ಕದ್ದು.

12. ವೇದಾರಂಭ

ಈ ಸಂಸ್ಕಾರದಲ್ಲಿ ಉಪನಯನ ಹೊಂದಿದ ವ್ಯಕ್ತಿಯು ಮುಂದೆ ವಿದ್ಯಾರ್ಥಿ ಜೀವನಕ್ಕೆ ಪದಾರ್ಪಣೆ ಮಾಡುತ್ತಾನೆ. ವೇದಾರಂಭ ಎಂದರೆ ವಿದ್ಯೆಯನ್ನು ಕಲಿಯಲು ಪ್ರಾರಂಭಿಸುವ ಸಂಸ್ಕಾರ. ಬ್ರಾಹ್ಮಣತ್ವವನ್ನು ಮನುಷ್ಯನ ಸ್ವಭಾವ ಮತ್ತು ಮಾಡುವ ಕೆಲಸಗಳಿಂದ ವಿಭಾಗಿಸಲಾಗುತ್ತದೆ. ಹುಟ್ಟಿನಿಂದ ಶೂದ್ರನಾದರೆ ಸಂಸ್ಕಾರದಿಂದ ಬ್ರಾಹ್ಮಣನಾಗುತ್ತಾನೆ. ಹೀಗಿರುವಾಗ ಸಂಸ್ಕಾರಭರಿತರಾದ ಎಲ್ಲರಿಗೂ ವೇದ ಅಂದರೆ ಜ್ಞಾನವನ್ನು ಪಡೆಯುವ ಹಕ್ಕಿರುವುದರಿಂದ, ವೇದ ಆರಂಭವೆಂಬ ಸಂಸ್ಕಾರವು ಸರ್ವರಿಗೂ ಮಾನ್ಯವೆನಿಸುತ್ತದೆ.

13. ಸಮಾವರ್ತನ

ಸಮಾವರ್ತನವೆಂದರೆ ಒಬ್ಬ ವಿದ್ಯಾರ್ಥಿಯ ವಿದ್ಯಾಭ್ಯಾಸವು ಮುಗಿದು ಗುರುಕುಲದಿಂದ ಮನೆಗೆ ತೆರಳುವ ಸಂದರ್ಭ. ಇದು ಜೀವನದ ನಾಲ್ಕು ಆಶ್ರಮಗಳಲ್ಲಿ ಒಂದಾದ ಬ್ರಹ್ಮಚರ್ಯೆಯನ್ನು ಮುಗಿಸಿ ಮುಂದಿನ ಗ್ರಹಸ್ಥಾಶ್ರಮಕ್ಕೆ ಕಾಲಿಡುವ ಸಂದರ್ಭದಲ್ಲಿ ಮಾಡುವ ಸಂಸ್ಕಾರ. ಈ ಒಂದು ಸಂಸ್ಕಾರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ವಿದ್ಯಾರ್ಥಿಯು ತನ್ನ ಗುರುವಿಗೆ ಗುರುದಕ್ಷಿಣೆಯನ್ನು ಸಮರ್ಪಿಸಿ ಸಂಪೂರ್ಣವಾಗಿ ಗುರುವಿನ ಆಶೀರ್ವಾದವನ್ನು ಪಡೆಯುವ ಮುಖ್ಯ ಉದ್ದೇಶವನ್ನು ಕಾಣಬಹುದು.

14. ವಿವಾಹ

ವಿವಾಹ ಕರ್ಮವು ಗ್ರಹಸ್ಥಾಶ್ರಮದ ಪ್ರಾರಂಭವನ್ನು ಸೂಚಿಸುವ ಒಂದು ಮಹತ್ತರವಾದ ಸಂಸ್ಕಾರ. ಸಾಮಾನ್ಯವಾಗಿ ಗೋತ್ರಗುಣಗಳನ್ನು ಪರಿಶೀಲಿಸಿ, ದಾಂಪತ್ಯ ಜೀವನವನ್ನು ಶಾಸ್ತ್ರೋಕ್ತವಾಗಿ ಸ್ವೀಕರಿಸಿ, ಒಳ್ಳೆಯ ಪ್ರಜೆಯನ್ನು ಪಡೆದು, ಪಿತೃಋಣವನ್ನು ತೀರಿಸಲು ಅವಶ್ಯಕತೆ ಇರುವ ಸಂಸ್ಕಾರವಿದು. ಆದರೆ ಇಂದು ಈ ಸಂಸ್ಕಾರವು ಕೇವಲ ಸಾಂಪ್ರದಾಯಿಕವಾಗಿ ಉಳಿದಿದೆಯೇ ಹೊರತು ಇದನ್ನು ನಿಜವಾಗಿ ಅರಿತು ಮೈಗೂಡಿಸಿಕೊಳ್ಳುವವರ ಸಂಖ್ಯೆ ಬಹಳ ವಿರಳವಾಗಿರುವುದು

15. ವಾನಪ್ರಸ್ಥ

ವಾನಪ್ರಸ್ಥ ಅಂದರೆ ಕಾಡಿಗೆ ತೆರಳುವುದು ಎಂದರ್ಥ. ಬದುಕಿನ ಚತುರ್ವಿಧ ಆಶ್ರಮಗಳಲ್ಲಿ ಇದು ಮೂರನೆಯದು. ಸಾಮಾನ್ಯವಾಗಿ 25 ವರ್ಷಗಳವರೆಗೆ ಬ್ರಹ್ಮಚರ್ಯವೂ, ತದನಂತರ ಗ್ರಹಸ್ಥವು ಐವತ್ತು ವರ್ಷಗಳವರೆಗೆ. ವಾನಪ್ರಸ್ಥಾಶ್ರಮವನ್ನು ಯಾವಾಗ ಆಚರಿಸಬೇಕೆಂದು ಈ ರೀತಿ ತಿಳಿಸಲಾಗಿದೆ- ಗೃಹಸ್ಥನು ಮೈಕೈ ಸುಕ್ಕುಬಿದ್ದು, ಕೂದಲು ನೆರೆತು, ಮಗನಿಗೆ ಮಗು ಜನಿಸಿದಾಗ, ಅರಣ್ಯವನ್ನು ಗಮಿಸಬಹುದು. ಸಾಂಸಾರಿಕ ಭೋಗಾಸಕ್ತನಾಗಿದ್ದ ವ್ಯಕ್ತಿಯು ವನವಾಸ'ದಲ್ಲಿ ಭೋಗವನ್ನು ತೊರೆದು, ಯೋಗ ಮಾರ್ಗದಲ್ಲಿ ಮುನ್ನಡೆಯಲು ಸಹಕಾರ ಮಾಡುವ ಸಂಸ್ಕಾರವೇ ಈ ವಾನಪ್ರಸ್ಥ. ಈ ಸಂಸ್ಕಾರವು ಬದುಕಿನಲ್ಲಿ ಮೋಕ್ಷ ಸಾಧನೆಯತ್ತ ತನ್ನನ್ನು ಕೊಂಡೊಯ್ಯುವ ಹಾದಿಯನ್ನು ತೋರಿಸುತ್ತದೆ.

16. ಸನ್ಯಾಸ

ಈ ಸಂಸ್ಕಾರದಲ್ಲಿ ವ್ಯಕ್ತಿಯು ವಾನಪ್ರಸ್ಥವು ಮುಗಿದ ನಂತರ ಆಯುಷ್ಯವು ಅಳಿದುಳಿದು ಮೋಹಾದಿಗಳು ಉಳಿದಿದ್ದರೆ ಅವುಗಳನ್ನು ತೊರೆದು, ಸರ್ವಸಂಗ ಪರಿತ್ಯಾಗಿಯಾಗಿ ಸದಾ ಬ್ರಹ್ಮ ಧ್ಯಾನಾಸಕ್ತನಾಗುತ್ತಾನೆ. ಇದುವೇ ಸನ್ಯಾಸ. ಸನ್ಯಾಸ ಸಂಸ್ಕಾರವನ್ನು ಹಲವು ಪ್ರಕಾರಗಳಲ್ಲಿ ಮಾಡುವುದನ್ನು ನಾವು ಕಾಣಬಹುದು. ವಿಧಿ ನಿಯಮಗಳು ಏನೇ ಆದರೂ, ಯಾವ ವಯಸ್ಸಿನಲ್ಲಿ, ಜೀವನದ ಯಾವ ಘಟ್ಟದಲ್ಲಿ ಸನ್ಯಾಸವನ್ನು ಸ್ವೀಕರಿಸಿದರೂ ಅದರ ಉದ್ದೇಶ ಒಂದೇ- ಸಂಪೂರ್ಣವಾಗಿ ಆಶಾರಹಿತನಾಗಿ, ಮೋಹಗಳನ್ನು ತ್ಯಜಿಸಿ, ಕೇವಲ ಬ್ರಹ್ಮಜ್ಞಾನದಲ್ಲಿ ತಲ್ಲೀನನಾಗಿ ತನ್ಮೂಲಕ ತನ್ನನ್ನು ಕಳೆದುಕೊಳ್ಳುವುದು- ಅದುವೇ ನಿಜವಾದ ಸನ್ಯಾಸ.

ಸ್ನೇಹಿತರೆ, ಒಟ್ಟಾರೆ ಮೇಲೆ ತಿಳಿಸಿದ ಷೋಡಶ ಸಂಸ್ಕಾರಗಳೆಲ್ಲವೂ ಮಾನವನ ಜೀವನದಲ್ಲಿ ಬರಬಹುದಾದ ಏರುಪೇರುಗಳನ್ನು ನಿವಾರಿಸಿ, ಮಾನವೀಯ ಮೌಲ್ಯಗಳನ್ನು ಕಾಪಾಡಿ, ಮನುಷ್ಯತ್ವದಿಂದ ದೈವತ್ವದ ಕಡೆಗೆ ಕರೆದೊಯ್ಯುವ ಸಾಧನಗಳಾಗಿವೆ. ಸಂಸ್ಕಾರಗಳನ್ನು ಆಚರಿಸುವ ವ್ಯಕ್ತಿಯು ಆರೋಗ್ಯ, ಆಯುಷ್ಯ ಮತ್ತು ಐಶ್ವರ್ಯವನ್ನು ಗಳಿಸುವುದರ ಜತೆಗೆ, ಮಾನಸಿಕ ನೆಮ್ಮದಿಯನ್ನು ಪಡೆಯುತ್ತಾನೆ. ವೈಯಕ್ತಿಕವಾಗಿ ಇದು ಮಾನವನ ಪರಿವರ್ತನೆಯನ್ನು ಮಾಡುವುದರ ಜತೆಗೆ ಪ್ರಕೃತಿಯ ಮೇಲೂ ಉತ್ತಮ ಪರಿಣಾಮವನ್ನು ಬೀರುತ್ತದೆ. ಸಮಾಜದಲ್ಲಿ ಭಾವೈಕ್ಯತೆಯನ್ನು ಇದು ಉಂಟುಮಾಡಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುತ್ತದೆ. ವೈಯಕ್ತಿಕ ವಿಕಸನ, ಸಾಮಾಜಿಕ ವಿಕಸನ ತನ್ಮೂಲಕ ರಾಷ್ಟ್ರದ ವಿಕಸನವನ್ನು ಮಾಡುವ ಈ ಸಂಸ್ಕಾರಗಳಿಂದಲೇ ಸ್ವಯಂ ಸಾಕ್ಷಾತ್ಕಾರ ಸಾಧ್ಯ!

ಜೇಬಿನಲ್ಲಿಟ್ಟುಕೊಂಡ ವಿಧೇಯಕಗಳು ಮತ್ತು ಕತ್ತರಿ ಪ್ರಯೋಗ

ರಾಜಕಾರಣಿಗಳು ಮತ್ತು ನ್ಯಾಯಾಂಗದ ನಡುವಿನ ಜಟಾಪಟಿ ಇಂದು ನಿನ್ನೆಯದಲ್ಲ. ಇಂದಿರಾ ಗಾಂಧಿ ವರ್ಸಸ್ ರಾಜ್‌ನಾರಾಯಣ್ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟು ಇಂದಿರಾ ಗಾಂಧಿಯವರ ಚುನಾವಣೆಯ ಗೆಲುವನ್ನೇ ಅಸಿಂಧು ಎಂಬ ನಿರ್ಣಯ ನೀಡಿತ್ತು. ನಂತರ ಹೇರಲಾದ ತುರ್ತುಪರಿಸ್ಥಿತಿಯ ಸಮಯದಲ್ಲಿ ಅನೇಕ ಸಂಸದರ ಅನುಪಸ್ಥಿತಿಯಲ್ಲಿ ವಿವಾದಾತ್ಮಕ 39ನೇ ಸಂವಿಧಾನ ತಿದ್ದುಪಡಿಯ ಮೂಲಕ 329-B ವಿಧಿಗೆ 4 ನೇ ಉಪವಿಧಿಯನ್ನು ಸೇರಿಸಲಾಯಿತು.

ಕಾನೂನ್ ಸೆನ್ಸ್

ತಿಮ್ಮಣ್ಣ ಭಾಗ್ವತ್
vveditoped@gmail.com

ದೇಶದ ಸರ್ವೋಚ್ಚ ಅಧಿಕಾರಿಗಳಾದ ರಾಷ್ಟ್ರಪತಿಗಳಿಗೇ ಕಾಲಮಿತಿ ನಿಗದಿ ಮಾಡಿ ಆದೇಶ ನೀಡುವ ಮೂಲಕ ಸರ್ವೋಚ್ಚ ನ್ಯಾಯಾಲಯವು ತನ್ನ ಅಧಿಕಾರದ ಎಲ್ಲೆಯನ್ನು ಮೀರಿದೆ ಮತ್ತು ನ್ಯಾಯಾಧೀಶರುಗಳು ಪರಮೋಚ್ಚವಾದ ಸಂಸತ್ತಿನ ಅಧಿಕಾರವನ್ನೂ ಮೀರಿ ವರ್ತಿಸತೊಡಗಿದ್ದಾರೆ'' ಎಂದು ರಾಜ್ಯಸಭೆಯ ಅಧ್ಯಕ್ಷರೂ ಆಗಿರುವ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿಗಳು ಇತ್ತೀಚೆಗೆ ಕೆಲವು ಸಂದರ್ಭಗಳಲ್ಲಿ ಹೇಳಿದ್ದಾರೆ. ''ಶಾಸಕಾಂಗ, ಕಾರ್ಯಾಂಗಗಳ ವ್ಯವಹಾರಗಳಲ್ಲಿ ಪದೇ ಪದೆ ಮೂಗು ತೂರಿಸುತ್ತಿರುವ ಸುಪ್ರೀಂ ಕೋರ್ಟು, ನ್ಯಾಯಾಧೀಶರೊಬ್ಬರ ಮನೆಯಲ್ಲಿ ದೊರಕಿದ ನಗದಿನ ವಿಷಯದಲ್ಲಿ ಯಾಕೆ ಅಷ್ಟೇ ಸಕ್ರಿಯವಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲ? ಆ ವಿಷಯದಲ್ಲಿ ಯಾಕೆ ವಿಳಂಬ'' ಎಂದು ಅವರು ನೇರವಾಗಿ ಪ್ರಶ್ನಿಸಿದ್ದಾರೆ. ಬಿಜೆಪಿಯ ಕೆಲವು ಶಾಸಕರುಗಳು ನ್ಯಾಯಾಲಯಗಳೇ ಕಾನೂನು ಮಾಡುವುದಾದರೆ ಸಂಸತ್ತನ್ನೇ ಮುಚ್ಚಬೇಕಾಗಬಹುದು ಎಂದು ನೇರ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ನ್ಯಾಯಾಧೀಶರ ಆಯ್ಕೆಗೆ ಇರುವ ಕೊಲೀಜಿಯಂ ವ್ಯವಸ್ಥೆ, ವಕ್ಫ್ ಕಾಯಿದೆಯ 2013ರ ತಿದ್ದುಪಡಿಯ ವಿಷಯದಲ್ಲಿ ವಿಚಾರಣೆಯನ್ನು ನಿರಾಕರಿಸಿದ ಸುಪ್ರೀಂ ಕೋರ್ಟ್, 2025ರ ತಿದ್ದುಪಡಿಯ ವಿಷಯದಲ್ಲಿ ತೋರುತ್ತಿದೆಯೆನ್ನಲಾದ ಆಸಕ್ತಿ- ಈ ಎಲ್ಲ ವಿಷಯಗಳ ಚರ್ಚೆ ಮುನ್ನೆಲೆಗೆ ಬಂದಿದೆ.

ರಾಜಕಾರಣಿಗಳು ಮತ್ತು ನ್ಯಾಯಾಂಗದ ನಡುವಿನ ಜಟಾಪಟಿ ಇಂದು ನಿನ್ನೆಯದಲ್ಲ. ಇಂದಿರಾ ಗಾಂಧಿ ವರ್ಸಸ್ ರಾಜ್‌ನಾರಾಯಣ್ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟು ಇಂದಿರಾ ಗಾಂಧಿಯವರ ಚುನಾವಣೆಯ ಗೆಲುವನ್ನೇ ಅಸಿಂಧು ಎಂಬ ನಿರ್ಣಯ ನೀಡಿತ್ತು. ನಂತರ ಹೇರಲಾದ ತುರ್ತು ಪರಿಸ್ಥಿತಿಯ ಸಮಯದಲ್ಲಿ ಅನೇಕ ಸಂಸದರ ಅನುಪಸ್ಥಿತಿಯಲ್ಲಿ ವಿವಾದಾತ್ಮಕ 39ನೇ ಸಂವಿಧಾನ ತಿದ್ದುಪಡಿಯ ಮೂಲಕ 329-B ವಿಧಿಗೆ 4 ನೇ ಉಪವಿಧಿಯನ್ನು ಸೇರಿಸಲಾಯಿತು. ಅಲಹಾಬಾದ್ ಹೈಕೋರ್ಟ್ ನಿರ್ಣಯವನ್ನು ರದ್ದುಗೊಳಿಸುವ ಉದ್ದೇಶದಿಂದ ಮಾಡಲಾಗಿದ್ದ ಈ ತಿದ್ದುಪಡಿಯನ್ನು ಸುಪ್ರೀಂ ಕೋರ್ಟು ರದ್ದುಗೊಳಿಸಿತಾದರೂ ಪ್ರಧಾನ ಮಂತ್ರಿಯವರ ಆಯ್ಕೆ ಮತ್ತು ಜನತಾ ಪ್ರಾತಿನಿಧ್ಯ ಕಾಯಿದೆಗಳಿಗೆ ತರಲಾದ ತಿದ್ದುಪಡಿಗಳನ್ನು ಎತ್ತಿ ಹಿಡಿಯಿತು. ಶಾಬಾನೋ ಪ್ರಕರಣದಲ್ಲಿ ವಿಚ್ಛೇದಿತ ಮುಸ್ಲಿಂ ಮಹಿಳೆಗೆ ಜೀವನಾಂಶದ ಹಕ್ಕು ನೀಡಿದ ಸುಪ್ರೀಂ ಕೋರ್ಟಿನ ನಿರ್ಣಯವನ್ನು 1986ರ ಮುಸ್ಲಿಮ್ ವಿಚ್ಛೇದಿತ ಮಹಿಳೆಯರ ಹಕ್ಕು ರಕ್ಷಣೆ ಕಾಯಿದೆ ತರುವ ಮೂಲಕ ಪೂರ್ತಿ ದುರ್ಬಲಗೊಳಿಸಲಾಯಿತು. ಕೇಶವಾನಂದ ಭಾರತೀ ವರ್ಸಸ್ ಭಾರತ ಸರಕಾರ (ಸಂವಿಧಾನದ ಮೂಲ ರಚನೆಯ ವಿಷಯ), ಮನೇಕಾ ಗಾಂಧಿ ವರ್ಸಸ್ ಭಾರತ ಸರಕಾರ (ವ್ಯಕ್ತಿ ಸ್ವಾತಂತ್ರ್ಯ), ವಿಶಾಖಾ ವರ್ಸಸ್ ರಾಜಸ್ಥಾನ ಸರಕಾರ (ಮಹಿಳೆಯರಿಗೆ ಲೈಂಗಿಕ ಕಿರುಕುಳ), ಎಸ್.ಆರ್.ಬೊಮ್ಮಾಯಿ ವರ್ಸಸ್ ಭಾರತ ಸರಕಾರ (ರಾಷ್ಟ್ರಪತಿ ಆಡಳಿತ ಮತ್ತು ಬಹುಮತದ ನಿರ್ಣಯ ಕುರಿತು ರಾಜ್ಯಪಾಲರ ಅಧಿಕಾರ) ಮುಂತಾದ ಅನೇಕ ಪ್ರಕರಣಗಳು ನ್ಯಾಯಾಂಗದ ಕ್ರಿಯಾಶೀಲತೆಗೆ (Judicial Activism) ಉದಾಹರಣೆಯಾಗಬಹುದು.

ಈಗ ಎದ್ದಿರುವ ಗದ್ದಲ ''ತಮಿಳುನಾಡು ಸರಕಾರ ವರ್ಸಸ್ ತಮಿಳುನಾಡು ರಾಜ್ಯಪಾಲರು'' ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಕುರಿತಾದ್ದು. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಉಪಕುಲಪತಿಗಳನ್ನು ನೇಮಿಸುವ ಅಧಿಕಾರವನ್ನು ರಾಜ್ಯಪಾಲರ ಬದಲಾಗಿ ಸರಕಾರಕ್ಕೆ ನೀಡುವ ಒಂದು ವಿಧೇಯಕವಲ್ಲದೆ ವಿಶ್ವವಿದ್ಯಾಲಯಗಳ ಆಡಳಿತಾತ್ಮಕ ವಿಷಯಗಳಲ್ಲಿ ಸರಕಾರಕ್ಕೆ ಹೆಚ್ಚಿನ ಅಧಿಕಾರ ನೀಡುವ ಇತರ 11 ವಿಧೇಯಕಗಳನ್ನು ರಾಜ್ಯಪಾಲ ಆರ್.ಎನ್. ರವಿಯವರ ಅಂಕಿತಕ್ಕಾಗಿ ಜನವರಿ 2020ರಿಂದ ಎಪ್ರಿಲ್ 2023ರ ಅವಧಿಯಲ್ಲಿ ಕಳಿಸಲಾಗಿತ್ತು. ಈ ಕುರಿತು ಯಾವುದೇ ನಿರ್ಧಾರ ಕೈಗೊಳ್ಳದೆ ರಾಜ್ಯಪಾಲರು ವಿಧೇಯಕಗಳನ್ನು ಇಟ್ಟುಕೊಂಡಿದ್ದರು. ರಾಜ್ಯಪಾಲರ ನಡೆಯನ್ನು ಪ್ರಶ್ನಿಸಿ ತಮಿಳುನಾಡು ಸರಕಾರ ನವೆಂಬರ್ 2023ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ದಾವೆ ದಾಖಲಿಸಿದ ಕೂಡಲೇ, 2 ವಿಧೇಯಕಗಳನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿ ಇನ್ನುಳಿದ 10ನ್ನು ಯಾವುದೇ ಟಿಪ್ಪಣಿಗಳಿಲ್ಲದೆ ಸರಕಾರಕ್ಕೆ ಹಿಂತಿರುಗಿಸಿದರು. ಆ ಎಲ್ಲ ವಿಧೇಯಕಗಳನ್ನು ಯಥಾವತ್ತಾಗಿ ಶಾಸನಸಭೆಗಳಲ್ಲಿ ಪುನಃ ಪಾಸ್ ಮಾಡಿಸಿ ರಾಜ್ಯಪಾಲರ ಅಂಕಿತಕ್ಕೆ ಮತ್ತೊಮ್ಮೆ ಕಳಿಸಿದಾಗ ಅವುಗಳನ್ನು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಾಯ್ದಿಡಲಾಯಿತು. ರಾಷ್ಟ್ರಪತಿಗಳೂ ಯಾವುದೇ ನಿರ್ಧಾರ ತೆಗೆದುಕೊಳ್ಳಲಿಲ್ಲ.

ಅನೇಕ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿರುವಂತೆ ಸಂಸತ್ತು ಅಥವಾ ರಾಜ್ಯದ ಶಾಸನಸಭೆಗಳು ಅಂಗೀಕರಿಸಿದ ವಿಧೇಯಕಗಳಿಗೆ ರಾಷ್ಟ್ರಪತಿಗಳು ಅಥವಾ ರಾಜ್ಯಪಾಲರ ಅಂಕಿತ ಪಡೆಯುವ ಪದ್ಧತಿ ಇಂಗ್ಲೆಂಡಿನ ರಾಜರು (ಅಥವಾ ರಾಣಿ) ಅಲ್ಲಿನ ಸಂಸತ್ತು ಅಂಗೀಕರಿಸಿದ ವಿಧೇಯಕಗಳಿಗೆ ರಾಜಮುದ್ರೆಯೊತ್ತುವ (Royal Assent) ಪದ್ಧತಿಯ ಅನುಕರಣೆ. ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರು ಶಾಸಕಾಂಗದ ಭಾಗವೇ ಆಗಿರುತ್ತಾರೆ ಎಂಬುದೂ ಇದಕ್ಕೆ ಕಾರಣ. ಇಂಗ್ಲೆಂಡಿನಲ್ಲಿ 1967ರವರೆಗೂ ರಾಜಮುದ್ರೆಯೊತ್ತುವುದಕ್ಕೆ ದೊಡ್ಡ ಸಮಾರಂಭವೇ ನಡೆಯುತ್ತಿತ್ತಂತೆ! ಬ್ರಿಟಿಷ್ ಆಡಳಿತದ ಕಾಲದಲ್ಲಿ ಭಾರತದ ಪ್ರಾಂತೀಯ ಶಾಸನಸಭೆಗಳು ಅಂಗೀಕರಿಸುವ ವಿಧೇಯಕಗಳಿಗೆ ಪ್ರಾಂತೀಯ ಗವರ್ನರ್‌ಗಳ ಅಂಕಿತ ಹಾಗೂ ದೇಶದ ಪ್ರತಿನಿಧಿ ಸಭೆ ಅಂಗೀಕರಿಸುವ ವಿಧೇಯಕಗಳಿಗೆ ಬ್ರಿಟನ್ನಿನ ರಾಣಿಯ/ಗವರ್ನರ್ ಜನರಲ್‌ರ ಅಂಕಿತ ಅಗತ್ಯವಾಗಿತ್ತು ಮತ್ತು ಯಾವುದೇ ವಿಧೇಯಕಗಳ ಮೇಲೆ ಬ್ರಿಟನ್ ರಾಣಿ/ಗವರ್ನರ್ ಜನರಲ್‌ರಿಗೆ VETO POWER ಇರುತ್ತಿತ್ತು. ಆದರೆ ಸ್ವತಂತ್ರ ಭಾರತದ ಸಂವಿಧಾನದ 200 ಮತ್ತು 201ನೇ ವಿಧಿಗಳಡಿಯಲ್ಲಿ ರಾಜ್ಯಪಾಲರಿಗೆ ಅಥವಾ ರಾಷ್ಟ್ರಪತಿಗಳಿಗೆ ಅಂಥ ಅಧಿಕಾರ ಇರುವುದಿಲ್ಲ. ಇದರ ಪರಿಣಾಮವೆಂದರೆ ರಾಷ್ಟ್ರಪತಿಗಳ ಅಥವಾ ರಾಜ್ಯಪಾಲರ ಅಂಕಿತ ಕೆಲವೇ ಸಂದರ್ಭಗಳನ್ನು ಹೊರತುಪಡಿಸಿದರೆ ಕೇವಲ ಸಾಂಕೇತಿಕವೆನಿಸುತ್ತದೆ. ಕಾನೂನಿನ ರಚನೆಯಲ್ಲಿ ಸಂಸತ್ತು ಅಥವಾ ಶಾಸನಸಭೆಗಳೇ ಸರ್ವೋಚ್ಚ.

ಸುಪ್ರೀಂ ಕೋರ್ಟು ಹೇಳಿರುವುದೂ ಇದನ್ನೇ. ರಾಜ್ಯದ ಶಾಸನಸಭೆಗಳು ಅಂಗೀಕರಿಸಿದ ವಿಧೇಯಕಗಳು ರಾಜ್ಯಪಾಲರಿಗೆ ಸಲ್ಲಿಕೆಯಾದಾಗ ಅವರು ಅದನ್ನು ಅಂಗೀಕರಿಸಬೇಕು, ಇಲ್ಲವೇ ತಮ್ಮ ಟಿಪ್ಪಣಿಯೊಂದಿಗೆ ಮರಳಿ ಕಳಿಸಬೇಕು. ಹಾಗೆ ಹಿಂದಿರುಗಿಸಲ್ಪಟ್ಟ ವಿಧೇಯಕಗಳನ್ನು ಶಾಸನಸಭೆಗಳು ಮತ್ತೊಮ್ಮೆ ಅಂಗೀಕರಿಸಿ ರಾಜ್ಯಪಾಲರಿಗೆ ಸಲ್ಲಿಸಿದರೆ ಅವುಗಳನ್ನು ಅವರು ಅಂಗೀಕರಿಸದೆ ಅನ್ಯಮಾರ್ಗವಿಲ್ಲ ಎಂಬುದು 200ನೇ ವಿಧಿಯ ತಾತ್ಪರ್ಯವೆಂದು ''ಪಂಜಾಬ್ ಸರಕಾರ ವರ್ಸಸ್ ಪಂಜಾಬ್ ರಾಜ್ಯಪಾಲರ ಮುಖ್ಯ ಕಾರ್ಯದರ್ಶಿಗಳು'' ಪ್ರಕರಣದಲ್ಲೂ ಹೇಳಲಾಗಿದೆ. ಸಾಂವಿಧಾನಿಕ ಅಂಶಗಳಿರುವ ಸಂದರ್ಭಗಳಲ್ಲಿ ವಿಧೇಯಕಗಳನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದಾಗ, ಅಂಥವುಗಳಿಗೆ ಸಂಸತ್ತಿನ ಕಾಯಿದೆಗಳಿಗೆ ವ್ಯತಿರಿಕ್ತವಾಗುವಂಥ ಕೆಲವು ಸಂದರ್ಭಗಳನ್ನು ಹೊರತುಪಡಿಸಿ, ಅಂಕಿತವನ್ನು ತಡೆಹಿಡಿಯುವಂತಿಲ್ಲ. ಸಾಂವಿಧಾನಿಕ ವಿಷಯಗಳ ಕಾರಣಕ್ಕೆ ಅಂಕಿತವನ್ನು ತಡೆಹಿಡಿಯುವ ಸಂದರ್ಭಗಳಲ್ಲಿ ರಾಷ್ಟ್ರಪತಿಗಳು 143ನೇ ವಿಧಿಯಡಿಯಲ್ಲಿ ಸುಪ್ರೀಂ ಕೋರ್ಟಿನ ಸಲಹೆ ಕೇಳುವುದು ಸೂಕ್ತ ಎಂದು ಕೂಡಾ ಕೋರ್ಟು ನಿರ್ದೇಶಿಸಿದೆ. ಇದಕ್ಕಿಂತ ಮುಖ್ಯವಾಗಿ 3 ವರ್ಷದವರೆಗೆ ಏನೂ ಮಾಡದೆ ವಿಧೇಯಕಗಳನ್ನು ಜೇಬಿನಲ್ಲಿಟ್ಟು ಕೂತಿದ್ದ ರಾಜ್ಯಪಾಲರ ಕ್ರಮವನ್ನು ಖಂಡಿಸಿದ ಸುಪ್ರೀಂ ಕೋರ್ಟು, ತನಗೆ 142ನೇ ವಿಧಿಯಲ್ಲಿ ಪ್ರದತ್ತವಾದ ವಿಶೇಷಾಧಿಕಾರವನ್ನು ಉಪಯೋಗಿಸಿ, ಆ ಎಲ್ಲ ವಿಧೇಯಕಗಳನ್ನು ಕಾನೂನು ಎಂದು ಪರಿಗಣಿಸುವಂತೆ ಆದೇಶಿಸಿದೆ. ಅಲ್ಲದೆ ಇನ್ನು ಮುಂದೆ ರಾಷ್ಟ್ರಪತಿಗಳು ಹಾಗೂ ರಾಜ್ಯಪಾಲರುಗಳು ಈ ವಿಧಿಗಳಡಿಯಲ್ಲಿ ಕೈಗೊಳ್ಳಬೇಕಾದ ನಿರ್ಣಯಗಳಿಗೆ ಕಾಲಮಿತಿಯನ್ನು ನಿಗದಿಪಡಿಸಿದೆ. ರಾಜ್ಯಪಾಲರಿಗೆ ಮತ್ತು ರಾಷ್ಟ್ರಪತಿಗಳಿಗೆ 200 ಮತ್ತು 201ನೇ ವಿಧಿಗಳಡಿ POCKET VETO (ನಿರ್ಣಯ ತೆಗೆದುಕೊಳ್ಳದೆ ಆ ವಿಧೇಯಕಗಳು ಬಿದ್ದು ಹೋಗುವದು) ಅಥವಾ ABSOLUTE VETO (ಪೂರ್ತಿ ತಿರಸ್ಕರಿಸುವ ಅಧಿಕಾರ) ಇರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ತೀರ್ಪಿನ ಕುರಿತು ಮಾಡಲಾದ ಮುಖ್ಯ ಆಕ್ಷೇಪಣೆಯೆಂದರೆ ರಾಷ್ಟ್ರಪತಿಗಳಿಗೇ ಕಾಲಮಿತಿ ನಿರ್ಧರಿಸುವ ಮೂಲಕ ಸುಪ್ರೀಂ ಕೋರ್ಟು ತನ್ನ ಅಧಿಕಾರದ ಎಲ್ಲೆಯನ್ನು ಮೀರಿದೆ ಎಂಬುದು. ಕಾನೂನಿನ ಪ್ರಶ್ನೆಯನ್ನು ಬದಿಗಿರಿಸಿ ವಿಚಾರ ಮಾಡುವುದಾದರೆ, ತಮ್ಮನ್ನು ಆರಿಸಿ ಕಳಿಸಿದ ಜನರ ಆಶೋತ್ತರಗಳನ್ನು ಈಡೇರಿಸುವ ಮತ್ತು ಅವರ ಹಿತ ಕಾಯುವ ನಿಟ್ಟಿನಲ್ಲಿ ಶಾಸನಗಳನ್ನು ಜಾರಿಮಾಡುವ ಹೊಣೆ ಜನಪ್ರತಿನಿಧಿಗಳಿಗೆ ಇರುತ್ತದೆ. ಅದಕ್ಕಾಗಿಯೇ ಸಂಸತ್ತು ಮತ್ತು ಶಾಸನ ಸಭೆಗಳಿಗೆ ಪರಮೋಚ್ಚ ಅಧಿಕಾರ ನೀಡಲಾಗಿದೆ. ಅಂಥ ವಿಧೇಯಕಗಳನ್ನು ಸಕಾರಣವಿಲ್ಲದೆ ರಾಜ್ಯಪಾಲರಾಗಲೀ ರಾಷ್ಟ್ರಪತಿಗಳಾಗಲೀ ಅನಿರ್ದಿಷ್ಟ ಅವಧಿಗೆ ಇಟ್ಟುಕೊಂಡರೆ ಅಂಥ ಶಾಸನಸಭೆಗಳು ಅಂಗೀಕರಿಸಿದ ಮಸೂದೆಗಳ ವಿರುದ್ಧ ರಾಜ್ಯಪಾಲರು VETO ಪ್ರಯೋಗಿಸಿದಂತಾಗುತ್ತದೆ. ಕಾಲಮಿತಿ ನಿಗದಿಪಡಿಸುವುದು 200 ಮತ್ತು 201ನೇ ವಿಧಿಗಳ ಆಶಯಕ್ಕೆ ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗುತ್ತದೆ ಹೊರತು ಸಂವಿಧಾನಕ್ಕೆ ತಿದ್ದುಪಡಿ ಮಾಡಿದಂತಾಗುವುದಿಲ್ಲ. ಈ ಹಿಂದೆ ಕೇಂದ್ರ, ರಾಜ್ಯ ಸಂಬಂಧಗಳ ಕುರಿತು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಕಾಲದಲ್ಲಿ ನೇಮಕವಾಗಿದ್ದ ಸರ್ಕಾರಿಯಾ ಆಯೋಗ ಕೂಡಾ ಇಂಥ ಶಿಫಾರಸು ಮಾಡಿತ್ತು ಎಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಯಾವುದೇ ಮಸೂದೆಯ ರಾಜಕೀಯ ಪರಿಣಾಮವನ್ನು ಲೆಕ್ಕಿಸಿ ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳು ಅಂಥ ವಿಧೇಯಕಗಳು ಕಾನೂನಾಗುವುದರ ವಿರುದ್ಧ ಕೆಲಸಮಾಡುವುದು ಪಕ್ಷಪಾತದ ಮತ್ತು ದುರುದ್ದೇಶದ ಕ್ರಮವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಗಳಲ್ಲಿ ಅಧಿಕಾರದಲ್ಲಿರುವ ರಾಜಕೀಯ ಪಕ್ಷಗಳು ಬೇರೆ ಬೇರೆಯಾ ದಾಗ ಇಂಥ ಮುಸುಕಿನ ಗುದ್ದಾಟ ಮತ್ತು ಅಂತರ್ಯುದ್ಧಗಳು ನಡೆಯುತ್ತವೆ. ಆ ಕಾರಣಕ್ಕೆ ಸ್ಥಳೀಯ ಅವಶ್ಯಕತೆಗಳು ಮತ್ತು ಆಡಳಿತ ವ್ಯವಸ್ಥೆಯ ಮೇಲೆ ಪರಿಣಾಮವಾಗುವಂಥ ಪರಿಸ್ಥಿತಿ ನಿರ್ಮಾಣವಾಗಿ ರಾಜ್ಯ ಸರಕಾರಗಳು ಅಸಹಾಯಕವಾಗ ಬಾರದು. ಇದು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಗೆ ಅಪಾಯಕಾರಿ. ಆದ್ದರಿಂದ ಅಂಥ ಸಂದರ್ಭಗಳಲ್ಲಿ ನ್ಯಾಯಾಂಗದ ಮಧ್ಯಪ್ರವೇಶ ಖಂಡಿತ ಅಪೇಕ್ಷಣೀಯ ಮತ್ತು ಸಂವಿಧಾನದ ಆಶಯ, ಶಾಸನಸಭೆಗಳ ಘನತೆ ಮತ್ತು ಜನಪ್ರತಿನಿಧಿಗಳ ಅಭಿಪ್ರಾಯದ ದೃಷ್ಟಿಯಿಂದ ಅನಿವಾರ್ಯ ಕೂಡಾ. ಸಂವಿಧಾನದ ರಕ್ಷಣೆಯು ರಾಷ್ಟ್ರಪತಿಗಳ ಮತ್ತು ರಾಜ್ಯಪಾಲರ ಪ್ರಾಥಮಿಕ ಹೊಣೆಯಾಗಿದ್ದರೂ ಅವರುಗಳು ಹಾಗೆ ಮಾಡುವಲ್ಲಿ ತಪ್ಪಿದಲ್ಲಿ ನ್ಯಾಯಾಂಗ ಸಕ್ರಿಯವಾಗಬೇಕಾಗುತ್ತದೆ.

ರಾಷ್ಟ್ರಪತಿಗಳು ಸರಕಾರವನ್ನು ಪ್ರತಿನಿಧಿಸುತ್ತಾರೆ. ಅವರು ಸಾಮಾನ್ಯವಾಗಿ ಮಂತ್ರಿಮಂಡಲದ ಸಲಹೆಯ ಮೇರೆಗೆ ಕಾರ್ಯನಿರ್ವಹಿಸುತ್ತಾರೆ. ಹೀಗಾಗಿ ಅವರ ನಿರ್ಣಯಗಳ ಕುರಿತಾಗಿ ನೀಡಲಾಗುವ ಆದೇಶಗಳು ವಾಸ್ತವದಲ್ಲಿ ಸರಕಾರಕ್ಕೆ ನೀಡುವ ಆದೇಶವಾಗುತ್ತದೆಯೇ ಹೊರತು ವೈಯಕ್ತಿಕವಾಗಿ ರಾಷ್ಟ್ರಪತಿಗಳಿಗಲ್ಲ. ನ್ಯಾಯಾಲಯದ ಆದೇಶಗಳನ್ನು ಈ ಹಿನ್ನೆಲೆಯಲ್ಲಿ ಪರಿಗಣಿಸಬೇಕಲ್ಲದೆ ಅದು ಅಧಿಕಾರದ ಎಲ್ಲೆ ಮೀರಿದೆ ಎಂದಲ್ಲ. ನ್ಯಾಯಾಂಗದ ಅತಿ ಕ್ರಿಯಾಶೀಲತೆ ಶಾಸಕಾಂಗ ಮತ್ತು ಕಾರ್ಯಾಂಗಗಳ ಅಧಿಕಾರ ವ್ಯಾಪ್ತಿಯ ಅತಿಕ್ರಮಣವೆಂದೆನಿಸಿದರೂ ಸಂವಿಧಾನದ ಆಶಯ ಮತ್ತು ವಿಧಿಗಳ ಅನುಷ್ಠಾನ ಮತ್ತು ರಕ್ಷಣೆಯ ಹೊಣೆಗಾರಿಕೆಯನ್ನು ಪೂರ್ತಿಯಾಗಿ ಕೇವಲ ರಾಜಕೀಯ ವ್ಯಕ್ತಿಗಳ ಕೈಯಲ್ಲಿ ಬಿಡುವುದು ಸುರಕ್ಷಿತವಲ್ಲ ಎಂಬುದೂ ಅಷ್ಟೇ ಸತ್ಯ. ರಾಜಕಾರಣಿಗಳು ಮತ್ತು ನ್ಯಾಯಾಲಯಗಳ ನಡುವಿನ ತುಲನೆಯಲ್ಲಿ ಭಾರತದ ನ್ಯಾಯಾಂಗದ ಪ್ರಾಮಾಣಿಕತೆ ಹಾಗೂ ವಿಶ್ವಾಸಾರ್ಹತೆ ಮೇಲ್ಮಟ್ಟದ್ದು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನ್ಯಾಯಮೂರ್ತಿ ವರ್ಮಾರವರ ಮನೆಯಲ್ಲಿ ಕಂಡ ಹಣದ ವಿಚಾರ ಕೆಲವು ಅಪವಾದಗಳ ಪೈಕಿ ಒಂದಾಗಿರಬಹುದು. ಆ ವಿಷಯದಲ್ಲಿ ತ್ವರಿತ ವಿಚಾರಣೆಯಾಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಭಾರತದ ಪ್ರಜಾಪ್ರಭುತ್ವದ ರಕ್ಷಣೆ ಮತ್ತು ದೇಶದ ಹಿತಾಸಕ್ತಿಯ ಅನೇಕ ವಿಷಯಗಳಲ್ಲಿ ನ್ಯಾಯಾಂಗ ತೋರಿದ ಬದ್ಧತೆಗೆ ಸುದೀರ್ಘ ಇತಿಹಾಸವೇ ಸಾಕ್ಷಿ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue:109

ಸಮಾಚಾರ ಸಣ್ಣದಲ್ಲ

ಸೋನಿಯಾ, ರಾಹುಲ್‌ಗೆ ನ್ಯಾಯಾಲಯ ನೋಟಿಸ್

ದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಟ್ರಸ್ಟ್‌ನ ಹಗರಣದಲ್ಲಿ 'ಹಣ ಅಕ್ರಮ ವರ್ಗಾವಣೆ'ಗೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ತನಿಖೆ ಆರಂಭಿಸಿದ ಪ್ರಕರಣದಲ್ಲಿ ಪ್ರತಿ ಹೇಳಿಕೆ ಸಲ್ಲಿಸುವಂತೆ ಕಾಂಗ್ರೆಸ್ ವರಿಷ್ಠ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಿಗೆ ದೆಹಲಿ ವಿಶೇಷ ನ್ಯಾಯಾಲಯ ಶುಕ್ರವಾರ

ನೋಟಿಸ್ ನೀಡಿದೆ. ಯಾವುದೇ ಪ್ರಕರಣದಲ್ಲಿ ಪ್ರತಿಯೊಬ್ಬರಿಗೂ ತಮ್ಮನ್ನು ಸಮರ್ಥಿಸಿಕೊಳ್ಳಲು ಅವಕಾಶವಿರಬೇಕು. ಅದರಂತೆ ತನಿಖಾ ಸಂಸ್ಥೆ 'ಇ.ಡಿ' ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದಾಗ ಪ್ರತಿಕ್ರಿಯೆಗೆ ಅವಕಾಶ ನೀಡಲಾಗಿದೆ ಎಂದು ನ್ಯಾಯಾಧೀಶ ವಿಶಾಲ್ ಗೋಗನೆ ಹೇಳಿದ್ದಾರೆ. ಮುಂದಿನ ವಿಚಾರಣೆಯನ್ನು ಮೇ 8ಕ್ಕೆ ನಿಗದಿಪಡಿಸಲಾಗಿದೆ. ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ 2014ರ ಜೂ.26ರಂದು ಖಾಸಗಿ ದೂರು ದಾಖಲಿಸಿದ್ದರು. ಪಟಿಯಾಲ ಹೌಸ್ ನ್ಯಾಯಾಲಯದ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರು ವಿಚಾರಣೆ ಆರಂಭಿಸಿದ ನಂತರ ಇ.ಡಿ 2021ರಲ್ಲಿ ತನಿಖೆ ಪ್ರಾರಂಭಿಸಿತು.

ಹಣ, ನೌಕರಿ ಬೇಡ, ಶುಭಂ 'ಹುತಾತ್ಮ' ಎನ್ನಿ

ಕಾನ್ಪುರ: ಪಹಲ್ಗಾಮ್ ಭಯೋತ್ಪಾದಕ ದಾಳಿ ನಡೆದು 10 ದಿನಗಳಾದರೂ ಸರಕಾರ ಉಗ್ರರ ವಿರುದ್ಧ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಉಗ್ರರ ದಾಳಿಗೆ ಬಲಿಯಾದ ಉತ್ತರ ಪ್ರದೇಶದ 31 ವರ್ಷದ ಶುಭಂ ದ್ವಿವೇದಿ ಅವರ ಪತ್ನಿ ಅಶಾನ್ಯಾ ಬೇಸರ ವ್ಯಕ್ತಪಡಿಸಿದ್ದಾರೆ. ಪತಿಯ ಸಾವಿಗೆ ಪರಿಹಾರವಾಗಿ

ನನಗೆ ನೌಕರಿ ಅಥವಾ ಹಣ ಕೊಡಿ ಎಂದು ಕೇಳುತ್ತಿಲ್ಲ. ನನ್ನ ಪತಿಗೆ ಹುತಾತ್ಮ ಸ್ಥಾನಮಾನ ನೀಡಿ ಎಂದು ಕೋರುತ್ತಿರುವೆ. ಈ ನೋವು ನನ್ನ ಜೀವನದುದ್ದಕ್ಕೂ ನನಗೆ ಇದ್ದೇ ಇರುತ್ತದೆ. ಮತ್ತೆಂದಿಗೂ ಕಾಶ್ಮೀರಕ್ಕೆ ಕಾಲಿಡುವುದಿಲ್ಲ ಎಂದು ಅಶಾನ್ಯಾ ಸುದ್ದಿಸಂಸ್ಥೆಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಪಾಕ್ ಪ್ರಧಾನಿ ಷರೀಫ್ ಯುಟ್ಯೂಬ್ ಸ್ಥಗಿತ

ದೆಹಲಿ/ಇಸ್ಲಾಮಾಬಾದ್: ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರ ಅಧಿಕೃತ ಯುಟ್ಯೂಬ್ ಚಾನೆಲ್ ಪ್ರಸಾರವನ್ನು ಭಾರತದಲ್ಲಿ ನಿಷೇಧಿಸಲಾಗಿದೆ. ಕೇಂದ್ರ ಸರಕಾರದ ಸೂಚನೆ ಮೇರೆಗೆ ತಕ್ಷಣದಿಂದಲೇ ಈ ಕ್ರಮ ಜಾರಿಗೆ ಬಂದಿದೆ ಎಂದು ಶುಕ್ರವಾರ ವರದಿಯಾಗಿದೆ. ಈ ಮಧ್ಯೆ, ಪಾಕ್ ಪ್ರಧಾನಿ ಶಹಬಾಜ್



ಷರೀಫ್ ಶುಕ್ರವಾರ ರಾಷ್ಟ್ರಪತಿ ಪತಿ ಭವನಕ್ಕೆ ದಿಢೀರ್ ಭೇಟಿ ನೀಡಿ ಅಸೀಫ್ ಅಲಿ ಜರ್ಧಾರಿ ಅವರನ್ನು ಸಂದಿಸಿ ಮಾತುಕತೆ ನಡೆಸಿ ದ್ದಾರೆ. ಭಾರತ-ಪಾಕ್ ನಡುವಿನ ಉದ್ವಿಗ್ನತೆ, ಭಾರತ ದಾಳಿ ಮಾಡಬಹುದಾದ ಸಾಧ್ಯತೆ, ಅದಕ್ಕೆ ಪಾಕಿಸ್ತಾನ ಸೇನೆಯ ತಿರುಗೇಟು ಮತ್ತಿತರ ವಿಚಾರಗಳನ್ನು ಇಬ್ಬರೂ ನಾಯಕರು ಚರ್ಚಿಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿರುವುದಾಗಿ ವರದಿಯಾಗಿದೆ.

ಮತಾಂತರಿ ಕ್ರೈಸ್ತರಿಗಿಲ್ಲ 'ಎಸ್‌ಸಿ' ಕಾಯಿದೆ ರಕ್ಷೆ

ವಿಜಯವಾಡ: ಪರಿಶಿಷ್ಟ ಜಾತಿಗೆ(ಎಸ್‌ಸಿ) ಸೇರಿದವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ತಕ್ಷಣ 'ಎಸ್‌ಸಿ' ಸ್ಥಾನಮಾನ ಕಳೆದುಕೊಳ್ಳುತ್ತಾರೆ. ಅದರೊಂದಿಗೇ ಎಸ್‌ಸಿ/ಎಸ್‌ಟಿ(ದೌರ್ಜನ್ಯ ತಡೆ) ಕಾಯಿದೆಯ ರಕ್ಷಣೆಯನ್ನೂ ಕಳೆದುಕೊಳ್ಳುತ್ತಾರೆ ಎಂದು ಆಂಧ್ರಪ್ರದೇಶ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಎಸ್‌ಸಿ/ಎಸ್‌ಟಿ ಕಾಯಿದೆಯಡಿ ದೂರು ದಾಖಲಿಸಿದ್ದ ಗುಂಟೂರು ಜಿಲ್ಲೆಯ ಕೊತ್ತಪಾಲೆಂನ ಪಾದ್ರಿ ಚಿಂತದ ಆನಂದ್ ಪ್ರಕರಣದಲ್ಲಿ ಹೈಕೋರ್ಟ್ ನ್ಯಾ.ಎನ್.ಹರಿನಾಥ್ ಶುಕ್ರವಾರ ಈ ತೀರ್ಪು ನೀಡಿದ್ದಾರೆ. ದಶಕಕ್ಕೂ ಹೆಚ್ಚು ಕಾಲ ಪಾದ್ರಿಯಾಗಿದ್ದ ಆನಂದ್, ಅಕ್ಕಲಾ ರಾಮಿರೆಡ್ಡಿ ಮತ್ತಿತರರು ತನ್ನ ಜಾತಿ ನಿಂದನೆ ಮಾಡಿದ್ದಾರೆ ಎಂದು 2021ರ ಜನವರಿಯಲ್ಲಿ ಚಂದೋಲು ಪೊಲೀಸರಿಗೆ ದೂರು ನೀಡಿದ್ದರು. ಪೊಲೀಸರು ಎಸ್‌ಸಿ/ಎಸ್‌ಟಿ ಕಾಯಿದೆಯಡಿ ಪ್ರಕರಣ ದಾಖಲಿಸಿದ್ದರು. ರಾಮಿರೆಡ್ಡಿ ಮತ್ತಿತರರು ಪ್ರಕರಣ ವಜಾಗೊಳಿಸುವಂತೆ ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆನಂದ್ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. 10 ವರ್ಷಗಳಿಂದ ಪಾದ್ರಿಯಾಗಿದ್ದಾರೆ.

ಹೆದ್ದಾರಿಯಲ್ಲಿ ಐಎಎಫ್ ವಿಮಾನಗಳ ತಾಲೀಮು

ಲಖನೌ: ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳು ಉತ್ತರ ಪ್ರದೇಶದ ಗಂಗಾ ಎಕ್ಸ್‌ಪ್ರೆಸ್ ವೇನಲ್ಲಿ ರಸ್ತೆಯಲ್ಲಿಯೇ ಶುಕ್ರವಾರ ಟೇಕಾಫ್, ಲ್ಯಾಂಡಿಂಗ್ ತಾಲೀಮು ನಡೆಸಿರುವುದು ಗಮನ ಸೆಳೆದಿದೆ. ಉತ್ತರ ಪ್ರದೇಶದ ಷಹಜಹಾನ್‌ಪುರ ವ್ಯಾಪ್ತಿಯಲ್ಲಿನ 'ಗಂಗಾ ಎಕ್ಸ್‌ಪ್ರೆಸ್ ವೇ'ನಲ್ಲಿ ಹೊಸದಾಗಿ ನಿರ್ಮಾಣವಾಗಿರುವ 3.5 ಕಿ.ಮೀ. ಗಳಷ್ಟು ಉದ್ದದ ಏರ್‌ಸ್ಟ್ರಿಪ್‌ನಲ್ಲಿ ಗುರುವಾರ ರಾತ್ರಿ ಮತ್ತು ಶುಕ್ರವಾರ ಬೆಳಗ್ಗೆ ತಾಲೀಮು ನಡೆಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಯುದ್ಧ ವಿಮಾನಗಳನ್ನು ಇಳಿಸುವುದಕ್ಕೆ ಹೆದ್ದಾರಿಯಲ್ಲಿನ ಏರ್‌ಸ್ಟ್ರಿಪ್ ಎಷ್ಟರ ಮಟ್ಟಿಗೆ ಸಮರ್ಥವಾಗಿದೆ ಎಂಬುದನ್ನು ಕಂಡುಕೊಳ್ಳಲು ಈ ತಾಲೀಮು ಅವಕಾಶ ಮಾಡಿಕೊಟ್ಟಿದೆ. ಏರ್‌ಸ್ಟ್ರಿಪ್ ಕಾಮಗಾರಿಯ ಗುಣಮಟ್ಟವನ್ನೂ ಇದೇ ವೇಳೆ ಪರೀಕ್ಷಿಸಲಾಗಿದೆ.

8,867 ಕೋಟಿ ರು. ವೆಚ್ಚದ ಬಂದರು ಉದ್ಘಾಟಿಸಿದ ಪ್ರಧಾನಿ | ತಿರುವನಂತಪುರದ ಕಡಲ ತೀರ ದೇಶದ ಭವಿಷ್ಯದ ಹೆಬ್ಬಾಗಿಲು |
ಕಂಟೇನರ್ ಸಾಗಣೆ ಮೀಸಲಾದ ದೇಶದ ಮೊದಲ ಬಂದರು | 'ಪಿಪಿಪಿ' ಶೈಲಿ ಕೇಂದ್ರ, ರಾಜ್ಯ-ಅದಾನಿ ಸಮೂಹ ಜಂಟಿ ಭಾಗಿ

ವಿಳಿಂಜಂ ಅಂತಾರಾಷ್ಟ್ರೀಯ ಬಂದರು ಲೋಕಾರ್ಪಣೆ

ತಿರುವನಂತಪುರಂ: 'ಭಾರತದ ಭವಿಷ್ಯದ ಹೆಬ್ಬಾಗಿಲು' ಎಂದೇ ಹೇಳಲಾಗುತ್ತಿರುವ 'ವಿಳಿಂಜಂ ಅಂತಾರಾಷ್ಟ್ರೀಯ ಬಂದರು' ಅನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಲೋಕಾರ್ಪಣೆಗೊಳಿಸಿದರು. ಪೂರ್ಣ ಪ್ರಮಾಣದ ಕಂಟೇನರ್ ಸಾಗಣೆ ಸೌಲಭ್ಯದ ಭಾರತದ ಮೊಟ್ಟ ಮೊದಲ ವಾಣಿಜ್ಯ ಬಂದರು ಎನಿಸಿಕೊಂಡಿರುವ ಈ ಬಂದರನ್ನು ಕೇರಳದ ತಿರುವನಂತಪುರದ ಕಡಲ ತೀರದಲ್ಲಿ 8,867 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ.

ತಿರುವನಂತಪುರ ನಗರದಿಂದ ಹೆಲಿಕಾಪ್ಟರ್ ಮೂಲಕ ವಿಳಿಂಜಂ ಬಂದರು ಪ್ರದೇಶಕ್ಕೆ ಶುಕ್ರವಾರ ಬೆಳಗ್ಗೆ 10.15ಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ, ಮೊದಲಿಗೆ 'ಟ್ರಾನ್ಸಿಪ್‌ಮೆಂಟ್ ಹಬ್'ನಲ್ಲಿನ ವ್ಯವಸ್ಥೆ ಗಳನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡರು. ನಂತರ ಕೇರಳ ರಾಜ್ಯಪಾಲ ರಾಜೇಂದ್ರ ಅರ್ಲೇಕರ್, ಮುಖ್ಯ ಮಂತ್ರಿ ಪಿಣರಾಯಿ ವಿಜಯನ್, ಅದಾನಿ ಕಂಪನಿಗಳ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಮತ್ತು ತಿರುವನಂತಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಶಶಿ ತರೂರ್ ಉಪಸ್ಥಿತಿಯಲ್ಲಿ 'ವಿಳಿಂಜಂ ಅಂತಾರಾಷ್ಟ್ರೀಯ ಬಂದರು' ಸೌಲಭ್ಯವನ್ನು ಲೋಕಕ್ಕೆ ಸಮರ್ಪಿ ಸಿದರು. ಬಂದರು ಸೌಲಭ್ಯದ ಮೊದಲ ಹಂತವನ್ನು ಉದ್ಘಾಟಿಸಿದರು.

ದೇಶಕ್ಕೆ ದೊಡ್ಡ ಗುರುತು: ತಿರುವನಂತಪುರ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ಈ ಬೃಹತ್ ಬಂದರು ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟಿಗೆ(ರಫ್ತು-ಆಮದು) ದೊಡ್ಡ ಮಟ್ಟದಲ್ಲಿ ನೆರವಾಗಲಿದೆ. ಸರಕು ಸಾಗಣೆಯಲ್ಲಿ ಭಾರತದ ಪಾತ್ರವನ್ನು ದೊಡ್ಡ ಮಟ್ಟದಲ್ಲಿ ಗುರುತಿಸುವಂತೆ ಮಾಡಲಿದೆ. ಆಳವಾದ ಸಮುದ್ರ ತೀರದ ಈ ಬಂದರನ್ನು ಭಾರತದ ಅತಿದೊಡ್ಡ ಬಂದರು ಅಭಿವೃದ್ಧಿಕಾರ ಮತ್ತು ಅದಾನಿ ಗ್ರೂಪ್ ಭಾಗವಾದ 'ಅದಾನಿ ಬಂದರು ಮತ್ತು ವಿಶೇಷ ಆರ್ಥಿಕ ವಲಯ ಲಿ.' ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದೆ.

ಕಂಟೇನರ್ ಸಾಗಣೆಗೆ ಮೀಸಲು

ವಿಳಿಂಜಂ ಬಂದರನ್ನು ಪ್ರಸ್ತುತ ವಿನ್ಯಾಸ, ನಿರ್ಮಾಣ, ಬಂಡವಾಳ, ಕಾರ್ಯಾಚರಣೆ ಮತ್ತು ವರ್ಗಾವಣೆ ಆಧಾರದಡಿ ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಅದಾನಿ ವಿಳಿಂಜಂ ಪೋರ್ಟ್ ಪ್ರೈ.ಲಿ. 2015ರ ಡಿ.5ರಂದು ಬಂದರು ನಿರ್ಮಾಣ ಕಾಮ ಗಾರಿಗೆ ಶಂಕು ಸ್ಥಾಪನೆ ಮಾಡಿದ್ದು, 2017ರಲ್ಲಿ ಕಾಮಗಾರಿ ಆರಂಭಿಸಿ 2022ರಲ್ಲಿ ಮೊದಲ ಹಂತ ಪೂರ್ಣಗೊಳಿಸಿದೆ. ಕಂಟೇನರ್ ಸಾಗಣೆಗಷ್ಟೇ ಮೀಸಲಾಗಿರುವ ದೇಶದ ಮೊದಲ ಬಂದರು ಎನಿಸಿಕೊಂಡಿರುವ ಈ ಬಂದರಿನಲ್ಲಿ ಸರಕು ಸಾಗಣೆ, ನೌಕೆಗಳ ಪ್ರಾಯೋಗಿಕ ಸಂಚಾರ ಯಶಸ್ವಿಯಾಗಿದೆ. 2024ರ ಡಿ.4 ರಂದು ವಾಣಿಜ್ಯ ಕಾರ್ಯಾರಂಭ ಪ್ರಮಾಣಪತ್ರವನ್ನೂ ಬಂದರು ಪಡೆದುಕೊಂಡಿದೆ. ವಿಳಿಂಜಂ ಬಂದರನ್ನು ಜಾಗತಿಕ ವ್ಯಾಪಾರ ಕ್ಷೇತ್ರದಲ್ಲಿ ಭಾರತದ ಸ್ಥಾನವನ್ನು ಬಲಪಡಿಸಲು, ಲಾಜಿಸ್ಟಿಕ್ಸ್ ದಕ್ಷತೆ ಹೆಚ್ಚಿಸಲು ಮತ್ತು ಸರಕು ಸಾಗಣೆಗಾಗಿ ವಿದೇಶಿ ಬಂದರುಗಳ ಮೇಲಿನ ಅವಲಂಬನೆ ತಗ್ಗಿಸಲು ಕೊಡುಗೆ ನೀಡುವ ಪ್ರಮುಖ ಆದ್ಯತೆಯ ಯೋಜನೆ ಎಂದು ಗುರುತಿಸಲಾಗಿದೆ. ಬಂದರು ತೀರ ನೈಸರ್ಗಿಕವಾಗಿಯೇ 20 ಮೀಟರ್ ಆಳವಾಗಿದೆ. ವಿಶ್ವದ ಅತ್ಯಂತ ದಟ್ಟಣೆಯ ಸಮುದ್ರ ವ್ಯಾಪಾರ ಮಾರ್ಗಗಳಲ್ಲಿ ಒಂದು ಎನಿಸಿಕೊಂಡಿರುವ ಕಡಲಲ್ಲಿ ಇದೆ. ಈ ಸ್ಥಳವು ಜಾಗತಿಕ ವ್ಯಾಪಾರದಲ್ಲಿ ಭಾರತದ ಸ್ಥಾನವನ್ನು ಮತ್ತಷ್ಟು ಬಲಪಡಿಸುತ್ತದೆ ಎಂಬ ನಿರೀಕ್ಷೆ ಇದೆ.

ವಿಳಿಂಜಂ ಬಂದರು ವಿಶೇಷ

- ಕೇರಳದ ತಿರುವನಂತಪುರ ನಗರದ ಕಡಲ ತೀರದಲ್ಲಿದೆ
- 8867 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿದೆ
- 2015ರಲ್ಲಿ ಶಂಕುಸ್ಥಾಪನೆ, 2017 ಜೂನ್‌ನಲ್ಲಿ ಕಾಮಗಾರಿ ಶುರು
- ನೈಸರ್ಗಿಕವಾಗಿಯೇ ಬಂದರು ತೀರ 20 ಮೀಟರ್ ಆಳವಿದೆ
- ಹಾಗಾಗಿ ಅಂತಾರಾಷ್ಟ್ರೀಯ ಬಂದರು ಎನಿಸಿಕೊಳ್ಳಲು ಅರ್ಹ
- ಸೆಮಿ ಆಟೊಮ್ಯಾಟಿಕ್, ಕೃತಕ ಬುದ್ಧಿಮತ್ತೆ ಆಧರಿಸಿ ನೌಕೆಗಳ ಸಂಚಾರ ನಿರ್ವಹಣೆ

ಶಶಿತರೂರ್ ಉಪಸ್ಥಿತಿ ಕೆಲವರ ನಿದ್ರೆಗೆ ಭಂಗ

ತಿರುವನಂತಪುರ: ಕೇರಳದ ತಿರುವನಂತಪುರದಲ್ಲಿ ವಿಳಿಂಜಂ ಅಂತಾರಾಷ್ಟ್ರೀಯ ಬಂದರು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಕಾಂಗ್ರೆಸ್ ಸಂಸದ ಶಶಿ ತರೂರ್ ಹಾಜರಿದ್ದರು. ಈ ಅಂಶವನ್ನು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯಕ್ರಮ ವೇದಿಕೆಯಲ್ಲಿ ನಮ್ಮ ಜತೆಗೆ ಶಶಿ ತರೂರ್ ಉಪಸ್ಥಿತರಿರುವುದು ಕೆಲವರ ನಿದ್ದೆ ಕೆಡಿಸಲಿದೆ ಎಂದು ಕಾಂಗ್ರೆಸ್ ಮುಖಂಡರತ್ತ ಅಣಕವಾಡಿದರು.

ಸಿಎಂ ಪಿಣರಾಯಿ ವಿಜಯನ್ ಅವರು 'ಇಂಡಿ' ಒಕ್ಕೂಟದ ಆಧಾರಸ್ತಂಭಗಳಲ್ಲೊಬ್ಬರು. ಅವರು ಈ ಕಾರ್ಯಕ್ರಮದಲ್ಲಿ ನಮ್ಮೊಡನೆ ಇರುವುದನ್ನು ನೋಡಿ ಇಂಡಿ ಒಕ್ಕೂಟದ ನಾಯಕರ ನಿದ್ರೆಗೆ ಭಂಗ ಬರಲಿದೆ ಎಂದು ಪ್ರಧಾನಿ ಮೋದಿ ಹೇಳಿ ನಕ್ಕರು.

ಅದಲ್ಲದೇ ಶಶಿತರೂರ್ ಅವರು, ಪ್ರಧಾನಿ ಮೋದಿ ಅವರನ್ನು ಬರಮಾಡಿಕೊಳ್ಳಲು ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ಕಾದು ನಿಂತಿದ್ದರು. ಇದೂ ಕೂಡಾ ಮಾಧ್ಯಮಗಳ ಕ್ಯಾಮೆರಾದಲ್ಲಿ ಸೆರೆಯಾಯಿತು. ಸ್ವತಃ ಶಶಿತರೂರ್ ಅವರೇ ಈ ಬಗ್ಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ. 'ಹವಾಮಾನ ವೈಪರೀತ್ಯ ಕಾರಣ ದೆಹಲಿ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟ ವಿಳಂಬವಾದರೂ, ಪ್ರಧಾನಿ ಮೋದಿ ಅವರನ್ನು ನನ್ನ ಕ್ಷೇತ್ರದಲ್ಲಿ ಸ್ವಾಗತಿಸಲು ಸಮಯಕ್ಕೆ ಸರಿಯಾಗಿ ಬಂದಿಳಿದೆ' ಎಂದಿದ್ದಾರೆ.

ಮಹಾರಾಷ್ಟ್ರ ನಂ.1, ಗುಜರಾತ್ ನಂ.3 ಸ್ಥಾನದಲ್ಲಿ | ದೇಶದ ಏಪ್ರಿಲ್ ತಿಂಗಳ ಜಿಎಸ್‌ಟಿ 2.37 ಲಕ್ಷ ಕೋಟಿ ರು. ದಾಖಲೆ

ಜಿಎಸ್‌ಟಿ ಸಂಗ್ರಹ ಕರ್ನಾಟಕ 2ನೇ ರ‍್ಯಾಂಕ್

ದೆಹಲಿ: 2025-26ನೇ ಹಣಕಾಸು ವರ್ಷದ ಮೊದಲ ತಿಂಗಳಲ್ಲಿಯೇ ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ) ಸಂಗ್ರಹದಲ್ಲಿ ದಾಖಲೆ ನಿರ್ಮಾಣವಾಗಿದೆ. ಏಪ್ರಿಲ್ ತಿಂಗಳಿನಲ್ಲಿ 2.37 ಲಕ್ಷ ಕೋಟಿ ರು. ಜಿಎಸ್‌ಟಿ ಸಂಗ್ರಹವಾಗಿದೆ. 2017ರಲ್ಲಿ 'ಜಿಎಸ್‌ಟಿ' ಪದ್ಧತಿ ಜಾರಿಯಾದ ಬಳಿಕ ಇದೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಮೊತ್ತದ ಜಿಎಸ್‌ಟಿ ಸಂಗ್ರಹವಾಗಿರುವುದು. 2024ರ ಏಪ್ರಿಲ್‌ನಲ್ಲಿ 2.10 ಲಕ್ಷ ಕೋಟಿ ರು. ಜಿಎಸ್‌ಟಿ ಸಂಗ್ರಹವಾಗಿದ್ದುದೇ ಈವರೆಗಿನ ಗರಿಷ್ಠ ಮೊತ್ತವಾಗಿತ್ತು.

ಕರ್ನಾಟಕದಲ್ಲಿ ಈ ಬಾರಿ 17,815 ಕೋಟಿ ರು. ಜಿಎಸ್‌ಟಿ ಸಂಗ್ರಹವಾಗಿದ್ದು, ದೇಶದಲ್ಲೇ ತೆರಿಗೆ ಸಂಗ್ರಹದಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ ರಾಜ್ಯ 41645 ಕೋಟಿ ರು. ಜಿಎಸ್‌ಟಿ ಸಂಗ್ರಹಿಸುವುದರೊಂದಿಗೆ ಮೊದಲ ಸ್ಥಾನದಲ್ಲಿದೆ. 14970 ಕೋಟಿ ರು. ಜಿಎಸ್‌ಟಿ ಕಲೆಹಾಕಿರುವ ಗುಜರಾತ್ ರಾಜ್ಯ 3ನೇ ಸ್ಥಾನದಲ್ಲಿದೆ. ಕೇಂದ್ರದ ಹಣಕಾಸು ಸಚಿವಾಲಯ ಪ್ರಕಟಿಸಿರುವ ಜಿಎಸ್‌ಟಿ ಅಂಕಿ ಅಂಶ ಪ್ರಕಾರ ಏಪ್ರಿಲ್ ಮಾಸದ ಜಿಎಸ್‌ಟಿ ಸಂಗ್ರಹದಲ್ಲಿ ವಾರ್ಷಿಕ ಶೇ.12.6ರಷ್ಟು ಹೆಚ್ಚಳ ದಾಖಲಾಗಿದೆ. 2025ರ ಮಾರ್ಚ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ 1.96 ಲಕ್ಷ ಕೋಟಿ ರು.ಗಳಷ್ಟಿತ್ತು. ಜಿಎಸ್‌ಟಿ ಸಂಗ್ರಹದಿಂದ 27,341 ಕೋಟಿ ರು.ಗಳನ್ನು ಮರು ಪಾವತಿ ಮಾಡಿದ ಬಳಿಕ ಸರಕಾರದ ಬೊಕ್ಕಸಕ್ಕೆ 2.09 ಲಕ್ಷ ಕೋಟಿ ರು. ಜಿಎಸ್‌ಟಿ ಉಳಿಯಲಿದೆ. ಒಟ್ಟು ತೆರಿಗೆ ಸಂಗ್ರಹದಲ್ಲಿ ಕೇಂದ್ರದ ಪಾಲು 48,634 ಕೋಟಿ ರು. ಗಳಷ್ಟಿದ್ದರೆ, ರಾಜ್ಯಗಳ ಪಾಲು 59,372 ಕೋಟಿ ರು. ಗಳಾಗಿದೆ. ಸಂಯೋಜಿತ ಜಿಎಸ್‌ಟಿ ಅನ್ವಯ 69,504 ಕೋಟಿ ರು. ಮತ್ತು ಸೆಸ್ ಮೂಲಕ 12,293 ಕೋಟಿ ರು. ಸಂಗ್ರಹವಾಗಿದೆ.

ಮೊದಲ 3 ರಾಜ್ಯಗಳು	
ಮಹಾರಾಷ್ಟ್ರ	41,645 ಕೋಟಿ ರು.
ಕರ್ನಾಟಕ	17,815 ಕೋಟಿ ರು.
ಗುಜರಾತ್	14,970 ಕೋಟಿ ರು.

ಅತ್ಯಧಿಕ ಜಿಎಸ್‌ಟಿ ಮಾಸ
2025ರ ಏಪ್ರಿಲ್ 2.37 ಲಕ್ಷ ಕೋಟಿ ರು.
2024ರ ಏಪ್ರಿಲ್ 2.10 ಲಕ್ಷ ಕೋಟಿ ರು.
2024ರ ಮಾರ್ಚ್ 1.96 ಲಕ್ಷ ಕೋಟಿ ರು.

ಪಹಲ್ಗಾಮ್ ಎನ್‌ಐಎ ವರದಿ ಸಿದ್ಧ | ಕಸ್ಟಡಿಯಲ್ಲಿ 150 ಮಂದಿ

ದಾಳಿಗೆ 1 ವಾರ ಮುನ್ನ ಕಾಶ್ಮೀರ ಪ್ರವೇಶ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಗೂ ವಾರ ಮುಂಚೆ(ಏ.15) ಪಾಕಿಸ್ತಾನದ ಇಬ್ಬರು ಉಗ್ರರು ಕಾಶ್ಮೀರ ಪ್ರವೇಶಿಸಿದ್ದರು. ಅವರಿಗೆ ದಾಳಿಗೆ ಇಬ್ಬರು ಸ್ಥಳೀಯರು ನೇರವಾಗಿ ನೆರವಾದರು. ಉಳಿದಂತೆ 15-20 ಮಂದಿ ಸ್ಥಳೀಯರು ಊಟ-ವಸತಿ-ವಾಹನ, ಶಸ್ತ್ರಾಸ್ತ್ರಗಳ ನೆರವು ಒದಗಿಸಿದ್ದಾರೆ. ಆಶ್ರಯ, ಸಾಗಬೇಕಾದ ಮಾರ್ಗ, ಮುನ್ನೆಚ್ಚರಿಕೆ ಕ್ರಮಗಳು ಸೇರಿದಂತೆ ಎಲ್ಲಾ ರೀತಿಯ ಸಹಕಾರವನ್ನೂ ಕಾಶ್ಮೀರದಲ್ಲಿದ್ದವರು ನೀಡಿದ್ದಾರೆ. ದಾಳಿಗೆ 4 ಸಂಭಾವ್ಯ ತಾಣಗಳನ್ನು ಪರಿಶೀಲಿಸಿದ್ದ ಉಗ್ರರು, ಭದ್ರತಾ ಸಿಬ್ಬಂದಿಯೇ ಇರದ ಕಾರಣ ಬೈಸರನ್ ಹುಲ್ಲುಗಾವಲು ಪ್ರದೇಶ ಆಯ್ಕೆ ಮಾಡಿಕೊಂಡರು ಎಂದು ಎನ್‌ಐಎ ವರದಿಯಲ್ಲಿ ತಿಳಿಸಿದೆ.

ಎನ್‌ಐಎ ತನಿಖಾ ತಂಡ ಬೈಸರನ್ ಹುಲ್ಲುಗಾವಲು ಪ್ರವಾಸಿ ತಾಣದಲ್ಲಿ 40ಕ್ಕೂ ಹೆಚ್ಚು ಗುಂಡಿನ ಕಾಡತೂಸುಗಳನ್ನು ವಶಪಡಿಸಿಕೊಂಡಿದೆ. ಅವನ್ನು ರಾಸಾಯನಿಕ ವಿಶ್ಲೇಷಣೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ. ಬೈಸರನ್ ದಾಳಿ ಸ್ಥಳದ 3ಡಿ ಮ್ಯಾಪಿಂಗ್ ಮಾಡಿಸಿದ ಅಧಿಕಾರಿಗಳು, ಮೊಬೈಲ್ ಟವರ್ ಮಾಹಿತಿ ಪಡೆದು ಬೈಸರನ್ ಸುತ್ತ 3 ಸ್ಯಾಟಲೈಟ್ ಫೋನ್ ಕಾರ್ಯ ನಿರ್ವಹಿಸಿದ್ದನ್ನು ಕಂಡುಕೊಂಡಿದ್ದಾರೆ. ಪಹಲ್ಗಾಮ್‌ನಲ್ಲಿ ಏ.22ರಂದು

26 ಜನರನ್ನು ಕೊಂದ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ಉಗ್ರ ಸಂಘಟನೆ ಲಷ್ಕರ್-ಎ-ತಯ್ಯಬಾ(ಎಲ್‌ಇಟಿ), ಪಾಕ್ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಪಾಕಿಸ್ತಾನ ಸೇನೆಯ ಕೈವಾಡವಿದೆ. ಉಗ್ರರ ಈ ದುಷ್ಕೃತ್ಯಕ್ಕೆ ಕಾಶ್ಮೀರ ಕಣಿವೆಯ 20 ಸ್ಥಳೀಯರೂ ನೆರವಾಗಿದ್ದಾರೆ ಎಂದು 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್‌ಐಎ) ಪ್ರಾಥಮಿಕ ತನಿಖೆ ದೃಢಪಡಿಸಿದೆ. ಹಶ್ಮಿ ಮೂಸಾ (ಸುಲೇಮಾನ್) ಮತ್ತು ಅಲಿ ಭಾಯಿ(ತಲ್ಹಾ ಭಾಯ್) ಪ್ರಮುಖ ಶಂಕಿತರು ಪಾಕಿಸ್ತಾನಿ ಪ್ರಜೆಗಳು ಎಂಬುದು ದೃಢಪಟ್ಟಿದೆ. ಇಬ್ಬರೂ ಪಾಕ್ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ದಾಳಿ ಸಮಯ ಮತ್ತು ಕಾರ್ಯವೈಖರಿ ಬಗ್ಗೆ ಸೂಚನೆ ಪಡೆದುಕೊಳ್ಳುತ್ತಿದ್ದರು ಎಂಬ ಅಂಶ ಸದ್ಯ ಪಹಲ್ಗಾಮ್ ದಾಳಿ ಹಿನ್ನೆಲೆ ಬಂಧಿತ ಸ್ಥಳೀಯ ಕಾರ್ಯಕರ್ತರ ವಿಚಾರಣೆ ವೇಳೆ ತಿಳಿದುಬಂದಿದೆ ಎಂಬ ಅಂಶ ಎನ್‌ಐಎ ವರದಿಯಲ್ಲಿದೆ.

ಸ್ಥಳೀಯರ ವಿಚಾರಣೆ

ಪಹಲ್ಗಾಮ್ ದಾಳಿಕೋರ ಉಗ್ರರಿಗೆ ನೆರವು ನೀಡಿದ ಸ್ಥಳೀಯರ ಪತ್ತೆಗಾಗಿ 2,800 ಸ್ಥಳೀಯರನ್ನು ಎನ್‌ಐಎ ತನಿಖಾಧಿಕಾರಿಗಳು ಈವರೆಗೆ ವಿಚಾರಣೆಗೊಳಪಡಿಸಿದ್ದರು. 150ಕ್ಕೂ ಹೆಚ್ಚು ಶಂಕಿತರು ಈಗಲೂ ಎನ್‌ಐಎ ಕಸ್ಟಡಿಯಲ್ಲಿದ್ದು, ವಿಚಾರಣೆ ಮುಂದುವರಿದಿದೆ. ಇವರಲ್ಲಿ ಜಮಾತ್-ಎ-ಇಸ್ಲಾಮಿ , ಹುರಿಯತ್ ಮತ್ತಿತರ ನಿಷೇಧಿತ ಉಗ್ರ ಸಂಘಟನೆಗಳ ಶಂಕಿತ ವ್ಯಕ್ತಿಗಳೂ ಸೇರಿದ್ದಾರೆ. ಸ್ಥಳೀಯ ಉಗ್ರ ಸಹಚರರಲ್ಲಿ ಪ್ರಮುಖರಾದ ನಿಸಾರ್ ಅಹ್ಮದ್ ಅಲಿಯಾಸ್ ಹಾಜಿ ಮತ್ತು ಮುಷ್ತಾಕ್ ಹುಸೇನ್ ಸದ್ಯ ಜಮ್ಮುವಿನ ಕೋಟ್ ಭಲ್ವಾಲ್ ಜೈಲಲ್ಲಿದ್ದಾರೆ. ಇಬ್ಬರಿಗೂ ಎಲ್‌ಇಟಿ ನಂಟಿದೆ. 2023ರಲ್ಲಿ ಭಟ ಧುರಿಯನ್ ಮತ್ತು ತೋಟಗಲಿ ಪ್ರದೇಶಗಳಲ್ಲಿ ಸೇನಾ ಬೆಂಗಾವಲು ಪಡೆಗಳ ಮೇಲೆ ಭಯೋತ್ಪಾದಕ ದಾಳಿ ನಡೆಸಿದ ಉಗ್ರರಿಗೆ ನೆರವಾಗಿದ್ದರು. ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸುವುದಕ್ಕೆ ಎನ್‌ಐಎ ಅಧಿಕಾರಿಗಳು ತಯಾರಿ ನಡೆಸಿದ್ದಾರೆ.

108 ಕ್ವಿಂಟಲ್ ಪುಷ್ಪಾಲಂಕಾರ

ಬಾಗಿಲು ತೆರೆಯಿತು ಕೇದಾರನಾಥ ಮಂದಿರ

ಕೇದರನಾಥ: ಪವಿತ್ರ ಕೇದರನಾಥ ಧಾಮದ ದ್ವಾರಗಳು ಶುಕ್ರವಾರ ಬೆಳಗ್ಗೆ 7ರ ಶುಭ ಮುಹೂರ್ತದಲ್ಲಿ ಭಕ್ತರಿಗಾಗಿ ಕೇದಾರನಾಥ ದೇವಸ್ಥಾನದ ಬಾಗಿಲು ತೆರೆಯಲಾಗಿದೆ. ವಿಶೇಷ ಪೂಜೆ, ಸಂಪ್ರದಾಯದ ವಿಧಿವಿಧಾನಗಳ ಮೂಲಕ ಮಂದಿರದ ಬಾಗಿಲು ತೆರೆಯಲಾಗಿದೆ.

ಗಂಗೋತ್ರಿ, ಯುಮುನೋತ್ರಿ ಚಾರ್‌ಧಾಮ್ ಯಾತ್ರೆ ಏ.30ರಿಂದ ಆರಂಭಗೊಂಡಿದೆ. ಇದೀಗ ಕೇದಾರನಾಥ ಭಕ್ತರಿಗೆ ಮುಕ್ತವಾಗಿದ್ದು, 6 ತಿಂಗಳು ದೇಗುಲ ಬಾಗಿಲು ತೆರೆದಿರಲಿದ್ದು, ಭಕ್ತರು ದರ್ಶನ ಪಡೆಯಬಹುದು. ಉತ್ತರಾಖಂಡ ರಾಜ್ಯದ ಮುಖ್ಯಮಂತ್ರಿ ಪುಷ್ಕರಸಿಂಗ್ ಧಾಮಿ ಮತ್ತು ಕುಟುಂಬ ಮಂದಿರದ ಬಾಗಿಲು ತೆರೆಯುವ ವೇಳೆ ಹಾಜರಿದ್ದು, ಪೂಜಾ ವಿಧಿಗಳಲ್ಲಿ ಭಾಗಿಯಾಯಿತು. ಕೇದಾರೇಶ್ವರನ ದರ್ಶನಕ್ಕಾಗಿ ಬಂದ 15 ಸಾವಿರಕ್ಕೂ ಅಧಿಕ ಭಕ್ತರನ್ನು ಬರಮಾಡಿಕೊಂಡಿತು. ಸಮುದ್ರ ಮಟ್ಟದಿಂದ 11 ಸಾವಿರ ಅಡಿ ಎತ್ತರದಲ್ಲಿರುವ, ರುದ್ರ ಪ್ರಯಾಗ್ ಜಿಲ್ಲೆಯಲ್ಲಿನ ಹತ್ತಾರು ಶತಮಾನ ಹಳೆಯ ಕೇದಾರನಾಥ ದೇವಸ್ಥಾನವನ್ನು 108 ಕ್ವಿಂಟಲ್ ಹೂವುಗಳಿಂದ ಅಲಂಕರಿಸಿದ್ದರಿಂದ ಮಂದಿರದ ನೋಟ ಚಿತ್ತಾಕರ್ಷಕವಾಗಿ ಬದಲಾಗಿತ್ತು. 150 ಸ್ವಯಂಸೇವಕರು ದೇವಸ್ಥಾನದ ಅಲಂಕಾರಕ್ಕೆ ಶ್ರಮಿಸಿದರು. ನೇಪಾಳ, ಥಾಯ್ಲೆಂಡ್ ಮತ್ತು ಶ್ರೀಲಂಕಾದಿಂದ ಹಾಗೂ ದೆಹಲಿ, ಕಾಶ್ಮೀರ, ಪುಣೆ, ಕೋಲ್ಕತ್ತ, ಪಟನಾದಿಂದ ತರಿಸಿದ್ದ ಗುಲಾಬಿ, ಚೆಂಡು ಹೂ ಸೇರಿದಂತೆ 56 ಬಗೆಯ ಹೂವುಗಳನ್ನು ಮಂದಿರದ ಅಲಂಕಾರಕ್ಕೆ ಬಳಸಲಾಗಿದೆ.

ಮುಸ್ಲಿಂ ಕುಟುಂಬದ ಎಂಟು ಮಂದಿ ಸನಾತನ ಧರ್ಮಕ್ಕೆ

ಮಥುರಾ: ಉತ್ತರ ಪ್ರದೇಶ ರಾಜ್ಯದ ಮಥುರಾ ನಗರದಲ್ಲಿನ ಮುಸ್ಲಿಂ ಕುಟುಂಬ ವೊಂದರ ಎಂಟು ಸದಸ್ಯರು ಸನಾತನ ಧರ್ಮಕ್ಕೆ ಸೇರ್ಪಡೆಯಾದರು. ಈ ಬದಲಾವಣೆಯನ್ನು ಅವರು 'ಘರ್ ವಾಪ್ಸಿ'(ಮರಳಿ ಮನೆಗೆ) ಎಂದು ಹೇಳಿಕೊಂಡಿದ್ದಾರೆ.

ನಮ್ಮ ವಂಶಜರು ಮೂಲತಃ ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದರು. ಮೊಘಲರ ಆಡಳಿತ ಕಾಲದಲ್ಲಿ ನಮ್ಮ ಪೂರ್ವಜರನ್ನು ಹೆದರಿಸಿ ಇಸ್ಲಾಂ ಧರ್ಮಕ್ಕೆ ಬದಲಿಸಲಾಗಿತ್ತು. ಆದರೆ ನಾನು ಕಾಳಿ ದೇವಿಯ ಆರಾಧಕನಾಗಿದ್ದೆ. ನನ್ನ ಮನಸ್ಸು, ಕೆಲಸಗಳಲ್ಲಿ ಸದಾ ದೇವಿಯನ್ನೇ ಆರಾದಿಸುತ್ತಿದ್ದೆ. ಹಾಗಾಗಿಯೇ ಗ್ರಾಮಸ್ಥರು ನನ್ನನ್ನು 'ಭಗತ್ ಜೀ' ಎಂದೇ ಕರೆಯುತ್ತಾರೆ ಎಂದು ಕುಟುಂಬದ ಮುಖ್ಯಸ್ಥ 50 ವರ್ಷದ ಜಾಕೀರ್ ಹೇಳಿದ್ದಾರೆ. ಮೂಲತಃ ಗುಜ್ಜರ್ ಸಮುದಾಯಕ್ಕೆ ಸೇರಿದ ಕುಟುಂಬವು 3 ವರ್ಷಗಳಿಂದ ಸನಾತನ ಧರ್ಮಕ್ಕೆ ಮರಳುವ ಬಗ್ಗೆ ಯೋಚಿಸುತ್ತಿತ್ತು. ಯಾವ ಒತ್ತಡ, ಪ್ರಲೋಭನೆ ಇಲ್ಲದೇ ಸನಾತನ ಧರ್ಮಕ್ಕೆ ಮರಳಿದ್ದೇವೆ. ಹಿಂದೂ ಧರ್ಮದಲ್ಲಿ ಪೂರ್ಣ ನಂಬಿಕೆ ಇಟ್ಟಿದ್ದೇವೆ. ನಮ್ಮ ಹೆಸರುಗಳನ್ನೂ ಬದಲಿಸಿಕೊಂಡಿದ್ದೇವೆ. ಜಾಕೀರ್ ಹೆಸರು ಜಗದೀಶ್ ಎಂದಾಗಿದೆ. ವೃಂದಾವನದ ಜೆ ವಾಟಿಕಾ ಕಾಲೋನಿಯ ಭಗವತ್ ಧಾಮ ಆಶ್ರಮದಲ್ಲಿ ಹಿಂದೂ ಯುವವಾಹಿನಿ ಸಂಘಟನೆ ಈ ಧರ್ಮಾಂತರದ ವಿಧಿವಿಧಾನಕ್ಕೆ ವ್ಯವಸ್ಥೆ ಮಾಡಿತ್ತು. ಒಂದು ಗಂಟೆ ಕಾಲ ಹವನ-ಯಜ್ಞ ನಡೆಯಿತು. ಜಾಕೀರ್ ಅಲಿ ಯಾನೆ ಜಗದೀಶ್, ಅವರ ಪತ್ನಿ, ಪುತ್ರರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಕುಟುಂಬದ 8 ಸದಸ್ಯರು ಸನಾತನ ಧರ್ಮಕ್ಕೆ ಮರಳಿದರು.



ದೆಹಲಿ ಬಿರುಗಾಳಿ ಮಳೆ: 4 ಬಲಿ

ದೆಹಲಿ: ದೇಶದ ರಾಜಧಾನಿ ದೆಹಲಿಯಲ್ಲಿ ಗುರುವಾರ ರಾತ್ರಿಯಿಂದ ಶುಕ್ರವಾರ ಮುಂಜಾನೆವರೆಗೂ ಧಾರಾಕಾರ ಮಳೆಯಾಗಿದೆ. ಬಿರುಗಾಳಿ ಸಹಿತ ಆರ್ಭಟಿಸಿದ ಮಳೆಗೆ ನಜಾಫ್‌ಗಢದ ಖಾರ್ಕರಿ ನಹರ್ ಗ್ರಾಮದಲ್ಲಿ ಹಳೆಯ ಮನೆಯೊಂದು ಕುಸಿದು ತಾಯಿ ಮತ್ತು ಮೂವರು ಮಕ್ಕಳು ಸಾವಿಗೀಡಾಗಿದ್ದಾರೆ.

ಕುಸಿದ ಮನೆಯ ಅವಶೇಷಗಳಡಿ ಸಿಲುಕಿದ್ದ ನಾಲ್ವರನ್ನು ತುರ್ತು ರಕ್ಷಣಾ ತಂಡಗಳು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದರು. ಅದಾಗಲೇ ನಾಲ್ವರೂ ಮೃತಪಟ್ಟಿದ್ದಾರೆ ಎಂದು ವೈದ್ಯರು ಹೇಳಿದರು. ಶುಕ್ರವಾರ ಬೆಳಗ್ಗೆ ಗುಡುಗು-ಬಿರುಗಾಳಿ ಸಹಿತ ಮಳೆ ಸುರಿದಿದ್ದು, ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಕಾರ್ಯಾಚರಣೆಗಳು ಪೂರ್ಣ ಸ್ಥಗಿತಗೊಂಡಿತ್ತು. 'ಫ್ಲೈಟ್ ರಾಡಾರ್-24'ರ ಮಾಹಿತಿ ಪ್ರಕಾರ, ಪ್ರತಿಕೂಲ ಹವಾಮಾನದ ಕಾರಣ ದೆಹಲಿಯಲ್ಲಿ ಇಳಿಯಬೇಕಿದ್ದ 3 ವಿಮಾನಗಳನ್ನು ಜೈಪುರಕ್ಕೆ ಮತ್ತು ಒಂದು ವಿಮಾನವನ್ನು ಅಹಮದಾಬಾದ್‌ಗೆ ತಿರುಗಿಸಲಾಯಿತು. ಧಾರಾಕಾರ ಮಳೆ-ಬಿರುಗಾಳಿ ಕಾರಣ ಏರ್ ಟ್ರಾಫಿಕ್ ಕಂಟ್ರೋಲ್ ಸರಿಯಾಗಿ ಕಾರ್ಯನಿರ್ವಹಿಸುವುದೇ ಕಷ್ಟವಾಯಿತು. ಪರಿಣಾಮ 100ಕ್ಕೂ ಹೆಚ್ಚು ವಿಮಾನಗಳ ಹಾರಾಟ ವಿಳಂಬವಾಯಿತು. ಧಾರಾಕಾರ ಮಳೆಯ ಕಾರಣ ದೆಹಲಿ ನಗರದ ಹಲವು ಪ್ರದೇಶಗಳು ಜಲಾವೃತವಾಗಿವೆ. ದ್ವಾರಕ, ಖಾನ್ಪುರ, ಸೌತ್ ಎಕ್ಸ್‌ಟೆನ್ಷನ್, ಮಿಂಟೋ ರಸ್ತೆ, ಲಜಪತ್ ನಗರ ಮತ್ತು ಮೋತಿ ಬಾಗ್ ಪ್ರದೇಶಗಳಲ್ಲಿ ಬಹಳಷ್ಟು ಕಡೆ ನೀರು ನಿಂತು ಕೊಳಗಳಂತಾಗಿವೆ. ಗಂಟೆಗೆ 70-80 ಕಿ.ಮೀ ವೇಗದಲ್ಲಿ ಗಾಳಿ ಬೀಸಿದೆ. ಬಿರುಗಾಳಿಗೆ ಮರಗಳು ಬುಡಮೇಲಾಗಿವೆ.

ಭಾರತದ ಮೇಲೆ 10 ಲಕ್ಷ ಸೈಬರ್ ದಾಳಿ ಪ್ರಯತ್ನ

ದೆಹಲಿ: ಪಹಲ್ಗಾಮ್‌ನಲ್ಲಿ ಏ.2ರಂದು ನಡೆದ ಭಯೋತ್ಪಾದಕ ದಾಳಿ ಬಳಿಕ ಈ ಭಾರತದ ಮೇಲೆ ಸೈಬರ್ ದಾಳಿ ಪ್ರಯತ್ನಗಳು ನಡೆಯುತ್ತಿವೆ. ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳ ಹ್ಯಾಕಿಂಗ್ ಗುಂಪುಗಳು ಭಾರತದ ಸೈಬರ್ ವ್ಯವಸ್ಥೆಗಳ ಮೇಲೆ 10ಲಕ್ಷಕ್ಕೂ ಹೆಚ್ಚು ಬಾರಿ ದಾಳಿಗಳನ್ನು ನಡೆಸಲು ಯತ್ನಿಸಿರುವುದು ದಾಖಲಾಗಿದೆ. ಬೈಸರನ್ ವ್ಯಾಲಿ ಭಯೋತ್ಪಾದಕ ದಾಳಿ ನಂತರದಲ್ಲೇ ಈ ಡಿಜಿಟಲ್ ದಾಳಿ ಪ್ರಯತ್ನಗಳು ಹೆಚ್ಚುತ್ತಿವೆ ಎಂದು ಸೈಬರ್ ಅಪರಾಧ ಪತ್ತೆ ವಿಭಾಗವಾದ 'ಮಹಾರಾಷ್ಟ್ರ ಪೊಲೀಸ್ ಸೈಬರ್' ಗಮನಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಶುಕ್ರವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಏ.22ರ ನಂತರದ ದಿನಗಳಲ್ಲಿ ಭಾರತದ ಮೇಲೆ 10 ಲಕ್ಷಕ್ಕೂ ಹೆಚ್ಚು ಸೈಬರ್ ದಾಳಿ ಪ್ರಯತ್ನಗಳು ನಡೆದಿವೆ. ಭಾರತೀಯ ವೆಬ್‌ಸೈಟ್‌ಗಳು ಮತ್ತು ಪೋರ್ಟಲ್‌ಗಳನ್ನು ಗುರಿಯಾಗಿಸಿಕೊಂಡು ಈ ದಾಳಿಗಳು ಪಾಕಿಸ್ತಾನ, ಮಧ್ಯಪ್ರಾಚ್ಯ, ಇಂಡೋನೇಷ್ಯಾ ಮತ್ತು ಮೊರಾಕೊದಿಂದ ನಡೆದಿವೆ. ಹ್ಯಾಕಿಂಗ್ ಪ್ರಯತ್ನದಲ್ಲಿರುವ ಗುಂಪುಗಳು ಇಸ್ಲಾಮಿಕ್ ಎಂದು ಹೇಳಿಕೊಂಡಿವೆ. ಇದು ಸೈಬರ್ ಯುದ್ಧವೂ ಆಗಿರಬಹುದು. ಮಹಾರಾಷ್ಟ್ರ ಸೈಬರ್ ಈ ದಾಳಿಗಳನ್ನು ವಿಫಲಗೊಳಿಸಿದೆ ಎಂದು ಮಹಾರಾಷ್ಟ್ರ ಸೈಬರ್ ಇಲಾಖೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಯಶಸ್ವಿ ಯಾದವ್ ಹೇಳಿದ್ದಾರೆ.

ಹಲವೆಡೆ ಹಿಂಸಾಚಾರ, ಬಸ್‌ಗಳಿಗೆ ಕಲ್ಲು ತೂರಾಟ | ಹಿಂದೂ ಕಾರ್ಯಕರ್ತರ ಆಕ್ರೋಶ | ಆರೋಪಿಗಳ ಸುಳಿವು ಪತ್ತೆ

ದ.ಕ. ಜಿಲ್ಲೆ ಬಹುತೇಕ ಬಂದ್, ಪ್ರಯಾಣಿಕರ ಪರದಾಟ

ಮಂಗಳೂರು: ಕೊಲೆಗೀಡಾದ ಸುಹಾಸ್ ಶೆಟ್ಟಿಗೆ ಅಂತಿಮ ನಮನ ಸಲ್ಲಿಸಲು ಬಂಟ್ವಾಳದ ಬಿ.ಸಿ.ರೋಡ್‌ನಲ್ಲಿ ಸಾವಿರಾರು ಜನರು ಸೇರಿದ್ದರು. ಸುಹಾಸ್ ಶೆಟ್ಟಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಸಾವಿರಾರು ಕಾರ್ಯಕರ್ತರು ಸೇರಿದ್ದರು. ಮಂಗಳೂರಿನ ಖಾಸಗಿ ಆಸ್ಪತ್ರೆ ಆವರಣದಿಂದ ಹೊರಟ ಸುಹಾಸ್ ಅಂತಿಮ ಯಾತ್ರೆ ಬಿ.ಸಿ. ರೋಡ್ ಮಾರ್ಗವಾಗಿ ಕಾರಿಂಜದ ಅವರ ನಿವಾಸಕ್ಕೆ ತೆರಳಿತು. ದಾರಿಯುದ್ದಕ್ಕೂ ಹಿಂದು ಕಾರ್ಯಕರ್ತರು, ನಾಗರಿಕರು ಸುಹಾಸ್‌ನ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು. ದಾರಿಯುದ್ದಕ್ಕೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸಲಾಗಿತ್ತು.

ಬಿ.ಸಿ. ರೋಡ್ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿತ್ತು, ಅಲ್ಲಿ ಜನಸಂದಣಿ ಗಣನೀಯ ಸಂಖ್ಯೆಯಲ್ಲಿ ಸೇರಿತ್ತು. ಅಂಗಡಿಗಳು ಮುಚ್ಚಲ್ಪಟ್ಟಿದ್ದವು ಮತ್ತು ಕೆಲವೇ ಖಾಸಗಿ ವಾಹನಗಳು ರಸ್ತೆಗಳಲ್ಲಿ ಕಂಡುಬಂದವು. ಈ ಪ್ರದೇಶದಲ್ಲಿ ಯಾವುದೇ ಬಸ್ ಸೇವೆಗಳು ಕಾರ್ಯನಿರ್ವಹಿಸದ ಕಾರಣ, ಸಂಸ್ಥೆಯ ಸ್ವಯಂಸೇವಕರು ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರಿಗೆ ಖಾಸಗಿ ವಾಹನಗಳನ್ನು ಬಳಸಿಕೊಂಡು ಸಾರಿಗೆ ಸೌಲಭ್ಯವನ್ನು ಒದಗಿಸಿದರು.

ಬಂಟ್ವಾಳ ಶಾಸಕ ರಾಜೇಶ್ ನಾಯಕ್, ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ, ಆರ್ ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಮತ್ತು ಇತರ ಹಲವಾರು ನಾಯಕರು ಸ್ಥಳದಲ್ಲಿ ಉಪಸ್ಥಿತರಿದ್ದರು. ಐಜಿ ಅಮಿತ್ ಸಿಂಗ್, ಎಸ್‌ಪಿ ಯತೀಶ್ ಎನ್, ಪಟ್ಟಣ ಪೊಲೀಸ್ ಇನ್ಸ್‌ಪೆಕ್ಟರ್ ಅನಂತಪದ್ಮನಾಭ ಮತ್ತು ಎಸ್‌ಐ ರಾಮಕೃಷ್ಣ ಅವರು ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಬಂಟ್ವಾಳದಲ್ಲಿ ಬೀಡು ಬಿಟ್ಟಿದ್ದಾರೆ.

ಸುಹಾಸ್ ಶೆಟ್ಟಿ ಅವರ ಅಂತ್ಯಕ್ರಿಯೆಯ ಮೆರವಣಿಗೆ ಅವರ ಪಾರ್ಥಿವ ಶರೀರವನ್ನು ಇರಿಸಲಾಗಿದ್ದ ಖಾಸಗಿ ಆಸ್ಪತ್ರೆಯಿಂದ ಪ್ರಾರಂಭವಾಗಿ ಅವರ ಹುಟ್ಟೂರು ಬಂಟ್ವಾಳಕ್ಕೆ ತೆರಳಿತು. ಮೆರವಣಿಗೆಯಲ್ಲಿ ದೊಡ್ಡ ಜನ ಸಮೂಹ ಭಾಗವಹಿಸಿತ್ತು, ಸುರಕ್ಷತೆ ಮತ್ತು ಸುವ್ಯವಸ್ಥೆ ಕಾಪಾಡಲು ಮಾರ್ಗದುದ್ದಕ್ಕೂ ಪ್ರಮುಖ ಜಂಕ್ಷನ್‌ಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.ಮತ್ತು ವೈದ್ಯಕೀಯ ಕಾಲೇಜುಗಳಿಗೆ ಪ್ರಯಾಣಿಸುವ ಪ್ರಯಾಣಿಕರು ಬಸ್ ಕಾರ್ಯಾಚರಣೆ ಸ್ಥಗಿತಗೊಂಡ ಕಾರಣ ಆಟೋರಿಕ್ಷಾಗಳನ್ನು ಅವಲಂಬಿಸಬೇಕಾಯಿತು.

ಬಿಗಿ ಬಂದೋಬಸ್ತ್: ಪ್ರಕರಣದ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿದೆ. 22 ಕೆಎಸ್ ಆರ್‌ಪಿ ತುಕಡಿಗಳು, 1,000 ಪೊಲೀಸ್ ಅಧಿಕಾರಿಗಳು ಮತ್ತು ಐದು ಎಸ್‌ಪಿ ಶ್ರೇಣಿಯ ಅಧಿಕಾರಿಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ. ಎಲ್ಲೂ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ವ್ಯಾಪಕ ಎಚ್ಚರಿಕೆ ತೆಗೆದುಕೊಂಡಿದೆ.

ಬಸ್ ನಿಲ್ದಾಣ ಸ್ತಬ್ಧ: ಮಂಗಳೂರು ನಗರದಲ್ಲಿ ಕೆಎಸ್‌ಆರ್‌ಟಿಸಿ ಸೇರಿದಂತೆ ನಗರದ ಖಾಸಗಿ ಬಸ್ಸು ನಿಲ್ದಾಣ, ರೈಲು ನಿಲ್ದಾಣಗಳಲ್ಲೂ ವಿವಿಧ ಕಡೆಗೆ ಸಂಚರಿಸುವ ಪ್ರಯಾಣಿಕರು, ವಿದ್ಯಾರ್ಥಿಗಳು ಬೆಳಗ್ಗಿನ ಜಾವ ಬಸ್ ಸಂಚಾರ ಸ್ಥಗಿತಗೊಳಿಸಿದ್ದರಿಂದ ಖಾಸಗಿ ವಾಹನಗಳಲ್ಲಿ ವಾಪಸ್ ಮನೆಗೆ ತೆರಳಿದರು. ಕಾರು, ಆಟೋ, ದ್ವಿಚಕ್ರ ವಾಹನಗಳು ನಗರದಲ್ಲಿ ಸಂಚರಿಸಿದರೂ ನಗರದ ಕಂಕನಾಡಿ, ಪಂಪ್‌ವೆಲ್, ಲಾಲ್‌ಬಾಗ್, ಹಂಪನಕಟ್ಟೆ, ಸ್ಟೇಟ್ ಬ್ಯಾಂಕ್ ಮೀನು ಮಾರುಕಟ್ಟೆ, ಸೆಂಟ್ರಲ್ ಮಾರುಕಟ್ಟೆ ಎಲ್ಲಾ ಕಡೆಗಳಲ್ಲಿ ಸಾರ್ವಜನಿಕ ಸಂಚಾರ ವಿರಳವಾಗಿತ್ತು.

ಪುತ್ತೂರಿನಲ್ಲಿ ಪ್ರತಿಭಟನೆ, ಆಕ್ರೋಶ: ಪುತ್ತೂರು ಬಸ್ ನಿಲ್ದಾಣ ಬಳಿ ಸೇರಿದ ಹಿಂದು ಮುಖಂಡರು, ಕಾರ್ಯಕರ್ತರು ಸಭೆ ಸೇರಿ ಘಟನೆಯನ್ನು ತೀವ್ರವಾಗಿ ಖಂಡಿಸಿದರು. ಹಿಂದೂ ಸಂಘಟನೆಯ ಮುಖಂಡರಾದ ಮುರಳೀಕೃಷ್ಣ ಹಸಂತ್ತಡ್ಕ ಮತ್ತು ಅರುಣ್ ಕುಮಾರ್ ಪುತ್ತಿಲ ಅವರು ಬಸ್ ನಿಲ್ದಾಣದ ಬಳಿಕ ಅಂಗಡಿ- ಮುಂಗಟ್ಟುಗಳನ್ನು ಬಂದ್ ಮಾಡಿಸಲು ಹೊರಟಾಗ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಬಳಿಕ ಪೊಲೀಸರ ಸೂಚನೆ ಮೇರೆಗೆ ಬಸ್ ನಿಲ್ದಾಣ ಕಟ್ಟಡದ ಬಹುತೇಕ ಅಂಗಡಿಗಳನ್ನು ಬಂದ್ ಮಾಡಲಾಯಿತು. ತಾಲೂಕಿನ ಬಹುತೇಕ ಪ್ರದೇಶಗಳಲ್ಲಿ ಅಂಗಡಿ ಮುಂಗಟುಗಳು ಮುಚ್ಚಿ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದವು.

ವಿಟ್ಲದಲ್ಲಿಯೂ ಬಂದ್ ಯಶಸ್ವಿ: ವಿಟ್ಲದಲ್ಲಿ ಬೆಳಗ್ಗೆ ಕೇರಳ ರಾಜ್ಯದ ಮತ್ತು ಕರ್ನಾಟಕದ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಮಾಡಿತ್ತು. ಬಳಿಕ ಸಂಚಾರ ಸಂಚಾರ ಸ್ಥಗಿತ ಗೊಳಿಸಲಾಯಿತು. ಖಾಸಗಿ ಬಸ್‌ಗಳು ಬೆಳಗ್ಗೆನಿಂದಲೇ ರಸ್ತೆಗೆ ಇಳಿಯಲಿಲ್ಲ. ತುರ್ತು ಸೇವೆಗಳಾದ ಆಸ್ಪತ್ರೆ, ಮೆಡಿಕಲ್, ಹಾಲಿನ ಅಂಗಡಿ ಹೊರತುಪಡಿಸಿ ಉಳಿದೆಲ್ಲ ಅಂಗಡಿ ಮುಂಗಟ್ಟು ಬಂದ್ ಆಗಿತ್ತು.

ಮಂಗಳೂರಿನಿಂದ ಸುಹಾಸ್ ಶೆಟ್ಟಿ ಮೃತದೇಹವನ್ನು ಮೆರವಣಿಗೆ ಮೂಲಕ ಬಂಟ್ವಾಳದ ಪುಲಿಮಜಲಿಗೆ ತರಲಾಯಿತು. ಸಾವಿರಾರು ಹಿಂದೂ ಪರ ಸಂಘಟನೆ ಕಾರ್ಯಕರ್ತರು ಭಾಗವಹಿಸಿದ್ದರು.

ಜಿಲ್ಲೆಯಾದ್ಯಂತ ಬಸ್ ಸಂಚಾರ ಸ್ಥಗಿತ

ಕೆಎಸ್‌ಆರ್‌ಟಿಸಿ ಬಸ್ಸುಗಳ ಮೇಲೂ ಕಲ್ಲು ತೂರಾಟ ನಡೆದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಬೆಳಗ್ಗೆ 7:30ರ ಬಳಿಕ ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಯಿತು. ಈ ಮಧ್ಯೆ ಆರು ಬಸ್ ಗಳಿಗೆ ಕಲ್ಲು ತೂರಾಟ ನಡೆಸಿ ಹಾನಿ ಮಾಡಲಾಗಿದೆ. ಮೈಸೂರು, ಪುತ್ತೂರುಗಳಿಗೆ ಸಂಚರಿಸುವ ಆರು ಬಸ್ ಗಳಿಗೆ ಕಲ್ಲು ತೂರಾಟ ಮಾಡಿ ಗಾಜುಗಳನ್ನು ಒಡೆಯಲಾಗಿದೆ. ಈ ಕಾರಣದಿಂದ ತಾತ್ಕಾಲಿಕವಾಗಿ ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಯಿತು. ನಗರ ಸಾರಿಗೆ ಬಸ್‌ಗಳು ಬೆಳಗಿನ ಜಾವ ಕಾರ್ಯಾಚರಣೆ ನಡೆಸಿದರೂ, ಪಂಪ್‌ವೆಲ್ ಬಳಿ ಮತ್ತು ಇನೋಳಿ ಪ್ರದೇಶದಿಂದ ಉರ್ವ ಸ್ಟೋರ್ ಕಡೆಗೆ ಬಂದ ಬಸ್‌ಗಳ ಮೇಲೆ ಕಲ್ಲು ತೂರಾಟದ ಘಟನೆಗಳು ವರದಿಯಾಗಿವೆ. ಬಳಿಕ ತಲಪಾಡಿ, ಕೊಣಾಜೆ, ಮುಡಿಪು ಮತ್ತು ಬಿ ಸಿ ರೋಡ್ ಮಾರ್ಗಗಳಲ್ಲಿನ ಎಲ್ಲಾ ಬಸ್ ಸೇವೆಗಳನ್ನು ಸ್ಥಗಿತಗೊಳಿಸಲಾಯಿತು.

ರಸ್ತೆ ಮಧ್ಯೆ ಬೆಂಕಿ ಹಚ್ಚಿ ಆಕ್ರೋಶ.

ಕಡಬದಲ್ಲಿ ಹೆದ್ದಾರಿ ಬಂದ್: ಕಡಬದಲ್ಲಿ ಸಂಘ ಪರಿವಾರದ ಕಾರ್ಯಕರ್ತರು ರಾಜ್ಯ ಹೆದ್ದಾರಿ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಕಡಬ ಶ್ರೀದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವಠಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಬಳಿಕ ಸುಬ್ರಹ್ಮಣ್ಯ-ಉಪ್ಪಿನಂಗಡಿ ರಾಜ್ಯ ಹೆದ್ದಾರಿ ತಡೆ ನಡೆಸಿದರು. ರಸ್ತೆಯಲ್ಲಿ ಟಯರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿತ್ತು.

ಉಳ್ಳಾಲ ಬಂದ್: ಉಳ್ಳಾಲ ತಾಲೂಕಿನ ವಿವಿಧ ಭಾಗಗಳಲ್ಲಿ ಬಂದ್‌ಗೆ ಬೆಂಬಲ ವ್ಯಕ್ತವಾಯಿತು, ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳನ್ನು ಪ್ರತಿಭಟನೆಯ ಹಿನ್ನೆಲೆಯಲ್ಲಿ ಮುಚ್ಚಲಾಗಿತ್ತು. ತಲಪಾಡಿ, ಕೋಟೆಕಾರ್, ಬೀರಿ, ತೊಕ್ಕೊಟ್ಟು ಜಂಕ್ಷನ್, ಅಸೈಗೋಳಿ, ಕೊಣಾಜೆ, ಮುಡಿಪು ಸೇರಿದಂತೆ ಪ್ರದೇಶಗಳು ಪೂರ್ಣ ಪ್ರಮಾಣದಲ್ಲಿ ಭಾಗವಹಿಸಿದ್ದವು. ದಿನವಿಡೀ ಬಾಗಿಲು ಮುಚ್ಚಲಾಗಿತ್ತು.

ದುಷ್ಕರ್ಮಿಗಳ ವಿರುದ್ಧ ಕ್ರಮ

ಸುಹಾಸ್ ಶೆಟ್ಟಿ ಕೊಲೆ ಕೃತ್ಯ ಅತ್ಯಂತ ಆಘಾತಕಾರಿ. ಈ ಘಟನೆಯಿಂದ ವೈಯಕ್ತಿಕವಾಗಿ ನಾನು ವಿಚಲಿತನಾಗಿದ್ದೇನೆ. ಮೇಲ್ನೋಟಕ್ಕೆ ಈ ಕೃತ್ಯ ಹಳೆ ದ್ವೇಷಕ್ಕೆ ನಡೆದಂತೆ ಕಂಡು ಬಂದರೂ ಇದರ ಹಿಂದಿನ ಉದ್ದೇಶ ಕರಾವಳಿಯಲ್ಲಿ ಶಾಂತಿ ಭಂಗ ಮಾಡುವಂತಿದೆ. ಹಾಗಾಗಿ ಈ ಕೃತ್ಯ ಎಸಗಿದ ದುಷ್ಕರ್ಮಿಗಳ ವಿರುದ್ಧ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲಿದೆ ಎಂದು ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಸುಹಾಸ್ ಶೆಟ್ಟಿ ಹತ್ಯೆಯಲ್ಲಿ ಭಾಗಿಯಾದ ದುಷ್ಕರ್ಮಿಗಳನ್ನು ಯಾವುದೇ ಕಾರಣಕ್ಕೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಇಲ್ಲಿ ಯಾರ ಓಲೈಕೆಯೂ ಇಲ್ಲ. ಈ ಕೃತ್ಯದ ಕುರಿತು ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಹತ್ಯೆ ನಡೆಸಿದ ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಪೊಲೀಸರಿಗೆ ಸೂಚಿಸಿದ್ದೇನೆ ಎಂದು ಹೇಳಿದರು.

ಆರೋಪಿಗಳ ಪತ್ತೆಗೆ ತಂಡ ರಚನೆ

ಮಂಗಳೂರು: ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಮಾಹಿತಿ ನಮಗೆ ಲಭ್ಯವಾಗಿದೆ ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್ ಹಿತೇಂದ್ರ ಮಾಹಿತಿ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜನತೆ ಯಾವುದೇ ವದಂತಿಗಳಿಗೆ ಕಿವಿಗೊಡದೆ ಶಾಂತರೀತಿಯಿಂದ ವರ್ತಿಸಬೇಕು ಎಂದು ಮನವಿ ಮಾಡಿದ್ದಾರೆ. ಸುಹಾಸ್ ಶೆಟ್ಟಿ ಹತ್ಯೆ ಆರೋಪಿಗಳ ಗುರುತು ಸಿಕ್ಕಿದ್ದು ಅವರನ್ನು ವಶಕ್ಕೆ ಪಡೆಯಲು ನಮ್ಮ ಪೊಲೀಸ್ ತಂಡ ಕೆಲಸ ಮಾಡುತ್ತಿದೆ ಎಂದು ಹಿತೇಂದ್ರ ಹೇಳಿದರು.

ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳ ಮೇಲೆ ಕಲ್ಲು ತೂರಾಟ.

ಮೇ6ರ ತನಕ ನಿಷೇಧಾಜ್ಞೆ

ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟನಲ್ಲಿ ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಲಾಗಿದೆ. ಕಲಂ 163 ಅಡಿಯಲ್ಲಿ ಮೇ 2 ರ ಮುಂಜಾನೆ 6 ಗಂಟೆಯಿಂದ ಮೇ 6 ರ ಮುಂಜಾನೆ 6 ಗಂಟೆ ವರೆಗೆ ನಿಷೇಧಾಜ್ಞೆ ಜಾರಿಯಲ್ಲಿರಲಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಆದೇಶದಲ್ಲಿ ತಿಳಿಸಿದ್ದಾರೆ. ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2025-26/ಐ.ಎಫ್.ಟಿ. ನಂ.15/541 ದಿನಾಂಕ: 02-05-2025

ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಮುದ್ದೇನಹಳ್ಳಿ ಆವರಣದಲ್ಲಿರುವ ವಿದ್ಯಾರ್ಥಿ ಹಾಸ್ಟೇಲ್-1 ಮತ್ತು ಹಾಸ್ಟೇಲ್-2 ಗಳ ನವೀಕರಣ ಕಾರ್ಯಗಳನ್ನು ನಿರ್ವಹಿಸುವ ಕಾಮಗಾರಿ ಮೊತ್ತ ರೂ. 67,27,141/- (ತೆರಿಗೆ ರಹಿತ)** ಈ ಕಾಮಗಾರಿಗೆ ಇದೇ ತರನಾದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 05-05-2025 ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/166/ಅಡ್ವರ್ಟೋರ್/2025-26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ,
ಹೊಸನಗರ ಉಪ-ವಿಭಾಗ, ಹೊಸನಗರ
ಜಿಲ್ಲೆ: ಶಿವಮೊಗ್ಗ. ಇ.ಮೇಲ್ ಸಂದೇಶ ಐಡಿನಂ.acfhnr@gmail.com
No:ACF/HNR/OutSource/TENDER/CR- 01/2025-26
ದಿನಾಂಕ: 29.04.2025

ಇ-ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ)

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ ರವರ ಕಛೇರಿ ಹಾಗೂ ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಈ ಕೆಳಕಂಡ ವಿವಿಧ ವೃಂದದ (ಡಾಟಾ ಎಂಟ್ರಿ ಆಪರೇಟರ್-10, ವಾಹನ ಚಾಲಕರು -10 ಹಾಗೂ ಡಿ ದರ್ಜೆ ನೌಕರರು-08 & ಕ್ಯಾಂಪ್ ವಾಚರ್ -20 ಒಟ್ಟು 48 ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಪೂರೈಸಲು, ಆಸಕ್ತ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಅಧಿಸೂಚನೆ ಹೊರಡಿಸಲಾಗಿರುತ್ತದೆ. ದಿನಾಂಕ: 06-05-2025ರ ಸಂಜೆ 5-10 ಗಂಟೆಯೊಳಗೆ ನಿಗದಿ ಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/02/05/158

ಪುರಸಭೆ ಕಾರ್ಯಾಲಯ, ಚಂದಾಪುರ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ- 560081
Email: itstaff_ulb_chandapura@yahoo.com Phone No: 080-27832411
ಚಂ.ಪು/ಟೆ.ಪ್ರ/ಸಿ.ಆರ್/02/2025-26 ದಿನಾಂಕ: 28.04.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಮುಖ್ಯಾಧಿಕಾರಿ, ಪುರಸಭೆ, ಚಂದಾಪುರರವರಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000ರ ಪ್ರಕಾರ 2024-25 15ನೇ ಹಣಕಾಸು ಅನುದಾನದಡಿಯಲ್ಲಿ ಈ ಕೆಳಕಂಡ ವಿವರಗಳಂತೆ ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು/ಸರಬರಾಜುದಾರರು ಕೆಪಿಪಿಪಿ ಪೋರ್ಟಲ್‌ನ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಪುರಸಭಾ ಕಛೇರಿಯಿಂದ ಮತ್ತು ಕಛೇರಿ ವೆಬ್‌ಸೈಟ್ **http://www.chandapuratown.mrc.gov.in/** ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	Supplying of Mini Excavator for Town Municipal Council CHANDAPURA	ರೂ. 33,01,000/-	ರೂ. 66,020/-

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 05.05.2025ರ 16:30 ಘಂಟೆವರೆಗೆ.
2. ಕೆಪಿಪಿಪಿ ಪೋರ್ಟಲ್‌ನಲ್ಲಿ ಬಿಡ್ ತೆರೆಯುವ ದಿನಾಂಕ: 07.05.2025ರ 16:30 ಘಂಟೆಗೆ.

ಸಹಿ/- ಅಧ್ಯಕ್ಷರು ಪುರಸಭೆ, ಚಂದಾಪುರ
ಸಹಿ/- ಉಪಾಧ್ಯಕ್ಷರು ಪುರಸಭೆ, ಚಂದಾಪುರ
ಸಹಿ/- ಮುಖ್ಯಾಧಿಕಾರಿಗಳು ಪುರಸಭೆ, ಚಂದಾಪುರ
ವಾಸಾಸಂಇ/ವಾ.ಪ್ರ/446/ಎಸ್‌ಎಸ್‌ಸಿ/2025-26

ಮಂಗಳೂರು ಪ್ರಕ್ಷುಬ್ಧ

← ಮೊದಲಪುಟದಿಂದ

ಜಿಲ್ಲಾದ್ಯಂತ ಬಂದ್, ಕಲ್ಲು ತೂರಾಟ

ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ವಿಎಚ್‌ಪಿ ನೀಡಿದ ಬಂದ್ ಕರೆ ಮತ್ತು ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಶುಕ್ರವಾರ ಬಂದ್ ವಾತಾವರಣವಿತ್ತು. ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕೆಲವು ಸಾರ್ವಜನಿಕ ಸಾರಿಗೆ ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆದಿದೆ. ಹೀಗಾಗಿ ಬೆಳಿಗ್ಗೆ ಸಂಚಾರ ಆರಂಭಗೊಂಡ ಬೆನ್ನಿಗೇ ಬಸ್‌ಗಳ ಓಡಾಟವನ್ನು ಸ್ಥಗಿತಗೊಳಿಸಲಾಯಿತು. ಇದರಿಂದ ಈ ಮಾರ್ಗದ ಮೂಲಕ ಪ್ರಯಾಣಿಸಬೇಕಿದ್ದ ದೂರದ ಪ್ರಯಾಣಿ ಕರು ಪರದಾಡಬೇಕಾಯಿತು. ನಗರ ಸಾರಿಗೆ ಬಸ್‌ಗಳು ಬೆಳಗಿನ ಜಾವ ಕಾರ್ಯಾಚರಣೆ ನಡೆಸಿದರೂ, ಕಲ್ಲು ತೂರಾಟದ ಹಿನ್ನೆಲೆಯಲ್ಲಿ ಹಲವು ಮಾರ್ಗಗಳಲ್ಲಿ ಎಲ್ಲಾ ಬಸ್ ಸೇವೆಗಳನ್ನು ಸ್ಥಗಿತಗೊಳಿಸಲಾಯಿತು.

₹ 25 ಲಕ್ಷ ಪರಿಹಾರ: ಬಿ.ವೈ.ವಿಜಯೇಂದ್ರ

ದುಷ್ಕರ್ಮಿಗಳಿಂದ ಬರ್ಬರ ಹತ್ಯೆಯಾದ ಸುಹಾಸ್ ಶೆಟ್ಟಿ ಕುಟುಂಬಕ್ಕೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ 25 ಲಕ್ಷ ಪರಿಹಾರ ಘೋಷಿಸಿದ್ದಾರೆ. ಪಹಲ್ಗಾಮ್ ಹತ್ಯೆ ಮರೆಯುವ ಮೊದಲೇ ಮಂಗಳೂರಿನಲ್ಲಿ ಇಂತಹ ಘಟನೆ ನಡೆದಿರುವುದು ದುರದೃಷ್ಟಕರ. ಬಿಜೆಪಿ ಈ ಘಟನೆಯನ್ನು ಗಂಭೀರವಾಗಿ ತೆಗೆದುಕೊಂಡಿದೆ. ಕಾಂಗ್ರೆಸ್ ಸರಕಾರದ ಹಿಂದು ಕಾರ್ಯಕರ್ತರಿಗೆ ರಕ್ಷಣೆ ಇಲ್ಲ ಅನ್ನೋದು ಮತ್ತೊಮ್ಮೆ ಸಾಬಿತಾಗಿದೆ. ಬಿಜೆಪಿಯ ಮುಖಂಡರು, ಕಾರ್ಯಕರ್ತರು ಅವರ ಕುಟುಂಬದ ಜೊತೆ ಇದ್ದೇವೆ, ಪಕ್ಷದ ಪರವಾಗಿ 25 ಲಕ್ಷ ಪರಿಹಾರ ನೀಡುವ ತೀರ್ಮಾನ ಮಾಡಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಮೃತಪಟ್ಟ ಸುಹಾಸ್ ಶೆಟ್ಟಿ ಕುಟುಂಬಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್.ಅಶೋಕ ಸಾಂತ್ವನ ಹೇಳಿದರು.

ಶೆಟ್ಟಿ ಸಹ ರೌಡಿಶೀಟರ್, ಸಮಗ್ರ ತನಿಖೆಗೆ ಸೂಚನೆ : ಸಿಎಂ | ಯಾರನ್ನು ರಕ್ಷಿಸುವ ಅನಿವಾರ್ಯತೆ ಸರಕಾರಕ್ಕಿಲ್ಲ: ಪರಂ

ಹತ್ಯೆ ಪ್ರಕರಣ: ಕಠಿಣ ಕ್ರಮದ ಭರವಸೆ ನೀಡಿದ ಕೈ ಪಡೆ

ಬೆಂಗಳೂರು: ಸುಹಾಸ್ ಶೆಟ್ಟಿ ಹತ್ಯೆಯ ಬೆನ್ನಲ್ಲೇ ದಕ್ಷಿಣ ಕನ್ನಡ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಇಡೀ ಪ್ರಕರಣದ ಸಮಗ್ರ ತನಿಖೆಯ ಭರವಸೆಯನ್ನು ಕಾಂಗ್ರೆಸ್ ನಾಯಕರು ನೀಡಿದ್ದಾರೆ. ಇನ್ನು ಧರ್ಮದ ಆಧಾರದಲ್ಲಿ ಈ ಕೊಲೆ ನಡೆದಿದೆ ಎನ್ನುವ ಬಿಜೆಪಿ ನಾಯಕರ ಆರೋಪವನ್ನು ಖಂಡಿಸಿರುವ ಕಾಂಗ್ರೆಸಿಗರು, ಬಿಜೆಪಿ ವಿರುದ್ಧ ಮುಗಿಬಿದಿದ್ದಾರೆ.

ಮಂಡ್ಯದಲ್ಲಿ ಈ ಸಂಬಂಧ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೊಲೆ ಯಾದ ಸುಹಾಸ್ ಶೆಟ್ಟಿ ರೌಡಿಶೀಟರ್ ಆಗಿದ್ದ ಎಂದು ಪೊಲೀಸರು ತಿಳಿಸಿದ್ದು, ಈ ಬಗ್ಗೆ ಎಡಿಜಿಪಿ ಅವರೊಂದಿಗೆ ಮಾತನಾಡಿ ಅವರನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ನಡೆಸಲು ಸೂಚಿಸಿದೆ. ಮನುಷ್ಯನ ಪ್ರಾಣ ಬಹಳ ಮುಖ್ಯ. ಕೂಡಲೇ ಅಪರಾಧಿಗಳು ಯಾರೇ ಆಗಿದ್ದರೂ ಪತ್ತೆ ಹಚ್ಚಿ ದಸ್ತಗಿರಿ ಮಾಡಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದರು.

ರೌಡಿಶೀಟರ್ ಸುಹಾಸ್ ಶೆಟ್ಟಿ ಕೊಲೆಯಾದ ಸ್ಥಳಕ್ಕೆ ಬಿಜೆಪಿಯವರು ಭೇಟಿ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಬಿಜೆಪಿಯವರು ಯಾವಾಗಲೂ ರಾಜಕೀಯವಾಗಿ ಇಂಥ ಪ್ರಕರಣಗಳನ್ನೇ ಹುಡುಕುತ್ತಾರೆ. ಒಂದು ವಾರದಿಂದ ಪಹಲ್ಗಾಮ್ ಪ್ರಕರಣದ ಬಗ್ಗೆ ಏನು ಹೇಳುತ್ತಾರೆ. ಉಗ್ರರ ದಾಳಿಗೆ 26 ಜನ ಸಾವನ್ನಪ್ಪಿದ್ದಾರೆ. ಪ್ರಧಾನಿಗಳು ಅಲ್ಲಿಗೆ ಭೇಟಿ ನೀಡಿದ್ದಾರೆಯೇ? ಬಿಜೆಪಿಯವರಿಗೆ ಪ್ರಧಾನಿ ಮೋದಿಯವರಿಗೆ ಇದು ಮುಖ್ಯ ಅನ್ನಿಸುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಯಾರನ್ನು ರಕ್ಷಿಸುವ ಪ್ರಶ್ನೆಯಿಲ್ಲ: ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಮಾತನಾಡಿ, ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ಆರೋಪಿಗಳ ಪತ್ತೆಗೆ ಈಗಾಗಲೇ ನಾಲ್ಕು ತಂಡಗಳನ್ನು ರಚಿಸಲಾಗಿದ್ದು, ಅವರ ಶೋಧಕ್ಕೆ ಮುಂದಾಗಲಾಗಿದೆ. ಆರೋಪಿಗಳು ಯಾರೇ ಆಗಿದ್ದರೂ ಅವರನ್ನು ಬಿಡುವುದಿಲ್ಲ. ಶಾಂತಿ ಕಾಪಾಡಲು ಎಲ್ಲ ರೀತಿಯ ಪ್ರಯತ್ನವನ್ನು ನಾವು ಮಾಡುತ್ತೇವೆ. ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ. ಯಾವುದೇ ಅಹಿತಕರ ಘಟನೆ ಜರುಗಬಾರದು ಎಂಬ ನಿಟ್ಟಿನಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನರು ಕೂಡ ಶಾಂತಿ ಕಾಪಾಡಬೇಕು ಎಂದು ಮನವಿ ಮಾಡುತ್ತೇನೆ. ಸರಕಾರ ಮತ್ತು ಪೊಲೀಸ್ ಇಲಾಖೆ ನಿಮ್ಮ ಜತೆಯಲ್ಲಿದೆ. ಘಟನೆಯ ಕುರಿತು ಸಂಪೂರ್ಣ ವರದಿ ಕೇಳಿದ್ದೇನೆ. ತನಿಖೆ ಆರಂಭಿಸಲಾಗಿದ್ದು ಆರೋಪಿಗಳನ್ನು ಬಿಡುವುದಿಲ್ಲ. ಯಾವುದೇ ಪಕ್ಷ, ಸಂಘಟನೆಯವರು ಅಥವಾ ಬೇರೆ ಯಾರೇ ಆಗಿದ್ದರೂ ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಶೆಟ್ಟಿ ಸಾವು, ಧರ್ಮದ ಹಿನ್ನೆಲೆಯ ಸಾವಲ್ಲ: ಖಾದರ್



ಮಂಗಳೂರಿನಲ್ಲಿ ನಡೆದ ಸುಹಾಸ್ ಶೆಟ್ಟಿ ಕೊಲೆಯನ್ನು ತೀವ್ರವಾಗಿ ಖಂಡಿಸುವುದಾಗಿ ಹೇಳಿರುವ ಸ್ಪೀಕರ್ ಯು.ಟಿ ಖಾದರ್, ಹತ್ಯೆಯ ದುಷ್ಕರ್ಮಿಗಳು ಯಾರೇ ಇದ್ದರೂ ಕಠಿಣ ಕ್ರಮ ಕೈಗೊಳ್ಳಬೇಕು. ಶಾಂತಿ, ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಈ ಹತ್ಯೆಯ ಹಿಂದೆ ವೈಯಕ್ತಿಕ ದ್ವೇಷದ ಹಿನ್ನಲೆಯಿರಬಹುದು. ಹತ್ಯೆಯಾದ ಸುಹಾಸ್ ಶೆಟ್ಟಿ ಈ ಹಿಂದೆ ಕೀರ್ತಿ ಎಂಬುವರ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದರು. ತನಿಖೆ ನಂತರ ಸತ್ಯಾಂಶ ಗೊತ್ತಾಗಲಿದೆ. ವೈಯಕ್ತಿಕ ಗುಂಪುಗಳ ನಡುವಿನ ಘರ್ಷಣೆಯಾಗಿದೆಯೇ ಹೊರತು ಧರ್ಮ-ಧರ್ಮದ ನಡುವಿನ ದ್ವೇಷದಿಂದಲ್ಲ. ಕರಾವಳಿಗೆ ಅದರದೇ ಆದ ಪರಂಪರೆ ಇದೆ ಎಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯನ್ನು ಮುಂದೆಕ್ಕೆ ತೆಗೆದುಕೊಂಡು ಹೋಗಲು ಎಲ್ಲರ ಸಹಕಾರ ಬೇಕು. ಯಾವುದೇ ಸಮಾಜ, ಧರ್ಮ ಮಂಗಳೂರನ್ನು ಹಿಂದಕ್ಕೆ ಕೊಂಡಯ್ಯಬಾರದು. ಈ ಕೃತ್ಯಗಳು ನಡೆದಾಗ ದ್ವೇಷದ ಭಾವನೆ ಉಂಟಾಗುವುದು ಸಹಜ. ಇದನ್ನು ನಿಯಂತ್ರಿಸುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಬೇಕು. ಫಾಜಿಲ್ ಹತ್ಯೆಗೆ ಪ್ರತೀಕಾರ ಎಂಬ ಭಾವ ಜನರಲ್ಲಿತ್ತು. ಆದರೆ ಫಾಜಿಲ್ ಅವರ ತಂದೆಯೇ ದೂರವಾಣಿ ಕರೆ ಮಾಡಿ ಇಂತಹ ಪ್ರತಿಕಾರ ನಮ್ಮದಲ್ಲ. ಘಟನೆಗೂ ನಮಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ ಎಂದು ಹೇಳಿದರು. ರಾಜಕೀಯವಾಗಿ ಉತ್ತರ ಕೊಡಲು ಹೋಗುವುದಿಲ್ಲ. ರಾಜಕೀಯವಾಗಿ ಯಾರೂ ಈ ಘಟನೆಯನ್ನು ಬಳಸಿಕೊಳ್ಳಬೇಡಿ. ಆರೋಪ ಮಾಡುತ್ತಿರುವವರು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಅವರು ಹೇಳಿದರು.

ಸುಹಾಸ್ ಶೆಟ್ಟಿ ಹತ್ಯೆಯನ್ನು ಬಿಜೆಪಿಯವರು ರಾಜಕೀಯಕ್ಕೆ ಬಳಸಿಕೊಳ್ಳಬಾರದು. ಕರ್ನಾಟಕ ರಾಜ್ಯ ಶಾಂತಿಯಿಂದಿದೆ. ಶಾಂತಿಯಿಂದ ಇರುವುದಕ್ಕೆ ಬಿಜೆಪಿಯವರು ಸಹಕಾರ ನೀಡಬೇಕು. ಹತ್ಯೆಯಲ್ಲಿ ಭಾಗಿಯಾಗಿರುವ ತಪ್ಪಿತಸ್ಥರ ವಿರುದ್ಧ ಪೊಲೀಸರು ಕಾನೂನು ಕ್ರಮ ತೆಗೆದುಕೊಳ್ಳುತ್ತಾರೆ. ಈ ವಿಚಾರದಲ್ಲಿ ನಾವು ತಲೆಹಾಕಲು ಹೋಗುವುದಿಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎನ್ನುವ ಬಿಜೆಪಿ ಆರೋಪಕ್ಕೆ ನಾನು ಪ್ರತಿಕ್ರಿಯೆ ನೀಡಲು ಹೋಗುವುದಿಲ್ಲ.

–**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಎಕ್ಸ್‌ಪ್ರೆಸ್‌ವೇಯಲ್ಲಿ ರಫೇಲ್, ಜಾಗ್ವಾರ್ ಸಿಂಹ ಗರ್ಜನೆ

← ಮೊದಲಪುಟದಿಂದ

ಪಾಕ್ ಏಜೆಂಟ್ ಸೆರೆ: ಪಾಕಿಸ್ತಾನದ ಐಎಸ್‌ಐಗಾಗಿ ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ರಾಜಸ್ಥಾನದ ಗುಪ್ತಚರ ಇಲಾಖೆ ಜೈಸಲ್ಮೇರ್ ನಿವಾಸಿ ಪಠಾಣ್ ಖಾನ್ ಎಂಬಾತನನ್ನು ಬಂಧಿಸಿದೆ. ಆರೋಪಿ ಪಠಾಣ್ ಖಾನ್ 2013 ರಲ್ಲಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದ. ಬಳಿಕ ಬೇಹುಗಾರಿಕೆಗಾಗಿ ತರಬೇತಿ ಪಡೆದು ಪಾಕಿಸ್ತಾನದ ಗುಪ್ತಚರ ಏಜೆನ್ಸಿ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

10 ಲಕ್ಷ ಸೈಬರ್ ಅಟ್ಯಾಕ್: ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳ ಹ್ಯಾಕಿಂಗ್ ಗುಂಪುಗಳು ಭಾರತೀಯ ವ್ಯವಸ್ಥೆಗಳ ಮೇಲೆ 10 ಲಕ್ಷಕ್ಕೂ ಹೆಚ್ಚು ಸೈಬರ್ ದಾಳಿಗಳನ್ನು ಮಾಡಿವೆ. ಭಾರತೀಯ ವೆಬ್‌ಸೈಟ್‌ಗಳು ಮತ್ತು ಪೋರ್ಟಲ್‌ಗಳನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ, ಮಧ್ಯಪ್ರಾಚ್ಯ, ಇಂಡೋನೇಷ್ಯಾ ಮತ್ತು ಮೊರಾಕೊದಿಂದ ದಾಳಿ ನಡೆದಿವೆ ಎಂದು ಮಹಾರಾಷ್ಟ್ರ ಸೈಬರ್ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.

ಮೂವರ ಮೇಲೆ ಹಲ್ಲೆಗೆ ಯತ್ನ

ಮಂಗಳೂರು: ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆಗೆ ಪ್ರತಿಕಾರವಾಗಿ ಮೀನು ವ್ಯಾಪಾರಿಯನ್ನು ಅಟ್ಟಾಡಿಸಿ ಕೊಲೆಗೆ ಯತ್ನಿಸಿದ ಘಟನೆ ಕುಂಟಿಕಾನ ಬಳಿ ನಡೆದಿದೆ.

ಉಳ್ಳಾಲ ನಿವಾಸಿ ಲುಕ್ಮಾನ್ ಹಲ್ಲೆಗೊಳಗಾದ ಮೀನು ವ್ಯಾಪಾರಿ ಎಂದು ತಿಳಿದು ಬಂದಿದೆ. ಲುಕ್ಮಾನ್, ವ್ಯಕ್ತಿಯೊಬ್ಬರಿಗೆ ಮೀನು ನೀಡಲು ರಸ್ತೆಯಲ್ಲಿ ಕಾಯುತ್ತಿದ್ದರು. ಈ ವೇಳೆ ಇನ್ನೋವಾ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಯುವಕನನ್ನು ಅಟ್ಟಾಡಿಸಿ, ಕಲ್ಲು ಎತ್ತಿ ಹಾಕಿ ಕೊಲೆಗೆ ಯತ್ನಿಸಿದ್ದಾರೆ. ಈ ವೇಳೆ ಹಿಂದೂ ಮಹಿಳೆ ಯೊಬ್ಬಳು ನೋಡಿ ಭಯದಿಂದ ಬೊಬ್ಬೆ ಹಾಕಿದ್ದು, ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಮಹಿಳೆಯ ಸಮಯಪ್ರಜ್ಞೆಯಿಂದ ಯುವಕ ಸಾವಿನಿಂದ ಬಚಾವ್ ಆಗಿದ್ದಾನೆ. ಗಾಯಾಳು ಲುಕ್ಮಾನ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಮತ್ತೊಂದೆಡೆ ತೊಕ್ಕೊಟ್ಟು ಒಳಪೇಟೆ ಬಳಿ ಯುವಕನ ಮೇಲೆ ತಂಡವೊಂದು ಚೂರಿಯಿಂದ ದಾಳಿ ಯತ್ನ ನಡೆಸಿದ ಪರಿಣಾಮ ಗಾಯಗೊಂಡ ಘಟನೆ ನಡೆದಿದೆ. ಅವರು ಕಲ್ಲಾಪು ಮಾರುಕಟ್ಟೆಗೆ ಬರುತ್ತಿದ್ದ ವೇಳೆ ಒಳಪೇಟೆ ಬಳಿ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಹಾಗೆಯೇ ನಗರ ಹೊರವಲಯದ ಅಡ್ಯಾರು ಕಣ್ಣೂರಿನಲ್ಲಿಯೂ ಮತ್ತೋರ್ವನಿಗೆ ಹಲ್ಲೆಗೆ ಯತ್ನಿಸಿರುವ ಘಟನೆ ವರದಿಯಾಗಿದೆ.

ಸಮಾಚಾರ ಸಣ್ಣದಲ್ಲ

ಯುವಕನ ಹತ್ಯೆ ಪ್ರಕರಣ: ಬಂಧನ

ಮಂಗಳೂರು: ಕುಡುಪು ಬಳಿ ನಡೆದ ವಲಸೆ ಕಾರ್ಮಿಕನ ಗುಂಪು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆಯ ಬಳಿಕ ತಲೆಮರೆಸಿಕೊಂಡಿದ್ದ ಅನಿಲ್ ಎಂಬಾತನನ್ನು ಗೋಕಾಕದಿಂದ ವಶಕ್ಕೆ ಪಡೆಯಲಾಗಿದೆ. ಇದರೊಂದಿಗೆ ಬಂಧಿತ ಆರೋಪಿಗಳ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಹಲ್ಲೆ ನಡೆಸಿದ ಬಳಿಕ ತಲೆ ಮರೆಸಿಕೊಂಡವರಿಗಾಗಿ ಪೊಲೀಸರ ತಂಡ ಹುಡುಕಾಟ ನಡೆಸುತ್ತಿದೆ. ಆ ದಿನ ಸ್ಥಳದಲ್ಲಿದ್ದ ಸುಮಾರು 15 ಮಂದಿಗೆ ನೋಟಿಸ್ ನೀಡಿ ವಿಚಾರಣೆಗೆ ಬರಲು ತಿಳಿಸಲಾಗಿತ್ತು. ಈಗಾಗಲೇ ಕೆಲವರ ವಿಚಾರಣೆ ನಡೆಸಲಾಗುತ್ತಿದೆ. ಕುಡುಪು ವ್ಯಾಪ್ತಿಯಲ್ಲಿರುವ ಸಿಸಿ ಕೆಮರಾ ಪರಿಶೀಲಿಸಲಾಗುತ್ತಿದ್ದು, ಪ್ರತ್ಯಕ್ಷದರ್ಶಿಗಳ ಸಹಕಾರವನ್ನೂ ಪಡೆಯಲಾಗುತ್ತದೆ. ಘಟನೆ ನಡೆಯಲು ನಿರ್ದಿಷ್ಟವಾಗಿ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಘೋಷಣೆ ಬಗ್ಗೆ ದೃಢ ಪಡಿಸುವ ನಿರ್ದಿಷ್ಟವಾಗಿ ಸಾಕ್ಷಿಗಳು ಇನ್ನೂ ಸಿಕ್ಕಿಲ್ಲ ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಕಸಾಪ ಬೈಲಾ ಬದಲಾವಣೆ

ಉಡುಪಿ: ನಾನೇನು ಹೇಡಿಯಲ್ಲ, ಓಡಿ ಹೋಗುವುದಿಲ್ಲ, ನಾನು ಚುನಾವಣೆಯ ಪ್ರಣಾಳಿಕೆಯಲ್ಲಿ ಕಸಾಪ ಬೈಲಾಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡುವುದಾಗಿ ಹೇಳಿದ್ದೇನೆ, ಅದರಂತೆ ನಡೆದುಕೊಂಡಿದ್ದೇನೆ, ಬೈಲಾದಲ್ಲಿ ಸ್ಪಷ್ಟತೆ ತರುವುದು ಅಧ್ಯಕ್ಷನ ಕರ್ತವ್ಯ, ನಾನು ಕರ್ತವ್ಯಭ್ರಷ್ಟ ಅಗಲಾರೆ ಎಂದವರು ಪರಿಷತ್ ನ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಪ್ರಶ್ನಿಸಿದರು. ಅವರು ಬುಧವಾರ ಉಡುಪಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ದೇಶದ ಸಂವಿಧಾನಕ್ಕೆ 106 ಬಾರಿ ತಿದ್ದುಪಡಿ ಮಾಡಲಾಗಿದೆ, ಹಾಗಿರುವಾಗ ಕಸಾಪದ ಬೈಲಾಕ್ಕೆ ತಿದ್ದುಪಡಿ ಮಾಡಲಿಕ್ಕೂ ಕಾನೂನಿನಲ್ಲಿ ಅವಕಾಶ ಇದೆ, ಅಲ್ಲದೆ ಕಸಾಪ ಬೈಲಾ ಇದೇ ಮೊದಲ ಬಾರಿಗೆ ತಿದ್ದುಪಡಿ ಮಾಡಲಾಗುತ್ತಿಲ್ಲ, ಈ ಹಿಂದೆಯೂ ಮಾಡಲಾಗಿದೆ. ಹಾಗಿರುವಾಗ ತಾವು ಅಗತ್ಯ ತಿದ್ದುಪಡಿ ಮಾಡಿದರೆ ಕಾನೂನು ಬಾಹಿರ ಹೇಗಾಗುತ್ತದೆ ಎಂದರು. ಈಗಿರುವ ಬೈಲಾದಲ್ಲಿ ನಾಮನಿರ್ದೇಶಿತ ಸದಸ್ಯರ ಅವಧಿ, ಕಾರ್ಯಕಾರಿ ಸದಸ್ಯರು ಸತತ 3 ಬಾರಿ ಸಭೆಗೆ ಗೈರು ಹಾಜರಾದರೆ ಕ್ರಮ, ಮಹಿಳೆಯರು ಅಧ್ಯಕ್ಷರಾಗುವುದಕ್ಕೆ ಅವಕಾಶ, ಅಧ್ಯಕ್ಷರ ಅಕಾಲಿಕ ಮರಣದ ಸಂದರ್ಭದಲ್ಲಿ ಏನು ಮಾಡಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ಸ್ಪಷ್ಟತೆ ಇಲ್ಲ, ಸ್ಪಷ್ಟತೆ ತರುವುದಕ್ಕಾಗಿ ತಿದ್ದುಪಡಿ ಮಾಡಲಾಗುತ್ತಿದೆ ಎಂದವರು ಸ್ಪಷ್ಟಪಡಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಕಸಾಪ ಅಧ್ಯಕ್ಷ ಶ್ರೀನಾಥ್ ರಾವ್ ಉಪಸ್ಥಿತರಿದ್ದರು.

ಎಸ್ಪಿ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಆಗ್ರಹ

ಉಡುಪಿ: ಜನಪ್ರತಿನಿಧಿಗಳೊಂದಿಗೆ ಅನುಚಿತವಾಗಿ ವರ್ತಿಸುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯಿಸುವಂತೆ ಶಾಸಕ ಯಶ್ ಪಾಲ್ ಸುವರ್ಣ ಸಹಿತ ಸದಸ್ಯರೆಲ್ಲರು ಆಗ್ರಹಿಸಿದರು. ನಗರಸಭೆಯ ಸತ್ಯಮೂರ್ತಿ ಸಭಾಂಗಣದಲ್ಲಿ ಸೋಮವಾರ ಅಧ್ಯಕ್ಷ ಪ್ರಭಾಕರ ಪೂಜಾರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು. ಸದಸ್ಯೆ ಕಲ್ಪನಾ ಸುಧಾಮ ಮಾತನಾಡಿ, ನಗರಸಭೆಯ ವಿರುದ್ಧವಾಗಿ ಮಣ್ಣಪಳ್ಳದ ಅಭಿವೃದ್ಧಿಯನ್ನು ಖಾಸಗಿ ವ್ಯಕ್ತಿಗಳಿಗೆ ನೀಡಬಾರದು. ಕೊಳಚೆ ನೀರು ಸಹಿತ ಸಾಕಷ್ಟು ಸಮಸ್ಯೆಗಳು ಆ ಭಾಗದಲ್ಲಿದ್ದರೂ ಅದಕ್ಕೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇತ್ತೀಚೆಗೆ ಜಿಲ್ಲಾಧಿಕಾರಿಗಳು ಆ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿಗಳು ನಗರಸಭೆ ಸದಸ್ಯೆ ಎಂದು ನೋಡದೆ ದುರ್ವರ್ತನೆ ತೋರಿದ್ದಾರೆ. ಇಂತಹ ಘಟನೆ ಮರುಕಳಿಸಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸ್ ವರಿಷ್ಠಾಧಿಕಾರಿಗಳು ಕಾನೂನು ಸುವ್ಯವಸ್ಥೆಗೆ ಗಮನಹರಿಸುವುದು ಬಿಟ್ಟು ಅಭಿವೃದ್ಧಿ ಕಾರ್ಯಗಳ ಬಗ್ಗೆ ನಮ್ಮಿಂದ ವಿವರಣೆ ಕೇಳುವುದು ತರವಲ್ಲ. ಸಾಧ್ಯವಿದ್ದರೆ ಮಣ್ಣಪಳ್ಳ ಸಹಿತ ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸಲಿ ಎಂದು ಸವಾಲು ಹಾಕಿದರು.

ಬನ್ನಂಜೆ ರಾಜ ಪೆರೋಲ್ ಬಿಡುಗಡೆ

ಉಡುಪಿ: ಉದ್ಯಮಿಯೊಬ್ಬರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಭೂಗತ ಪಾತಕಿ ಬನ್ನಂಜೆ ರಾಜನಿಗೆ ಅವರ ತಂದೆ ಉಡುಪಿಯ ಸುಂದರ ಶೆಟ್ಟಿಗಾರ್ ನಿಧನರಾದ ಹಿನ್ನೆಲೆಯಲ್ಲಿ ಅಂತ್ಯಕ್ರಿಯೆ ಮತ್ತು ಆನಂತರದ ವಿಧಿವಿಧಾನದಲ್ಲಿ ಪಾಲ್ಗೊಳ್ಳಲು ಕರ್ನಾಟಕ ಹೈಕೋರ್ಟ್ ಮಂಗಳವಾರ ಕಠಿಣ ಷರತ್ತುಗಳನ್ನು ವಿಧಿಸಿ 15 ದಿನಗಳ ಪೆರೋಲ್ ಮಂಜೂರು ಮಾಡಿದೆ. ಬನ್ನಂಜೆ ರಾಜನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಕೋರಿದ್ದ ಅವರ ತಂದೆ 86 ವರ್ಷದ ಮಲ್ಪೆಯ ಬಾಪುತೋಟದ ಸುಂದರ ಶೆಟ್ಟಿಗಾರ್ ಅವರು ನಿಧನರಾದ ಹಿನ್ನೆಲೆಯಲ್ಲಿ ಅರ್ಜಿದಾರರ ಕೋರಿಕೆಯಂತೆ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಅರ್ಜಿ ವಿಚಾರಣೆ ನಡೆಸಿತು.

{ ಲಕ್ಷ್ಮೀ ಹೆಬ್ಬಾಳಕರ್ } ಸಚಿವೆ

ಭಾರತದಲ್ಲಿ ದೇವರೆಂದರೆ ಭಯ, ಭಕ್ತಿ ಜಾಸ್ತಿ. ಈ ಕಾರಣದಿಂದಲೇ ನಮ್ಮ ದೇಶ ಸುಭದ್ರವಾಗಿದೆ. ನನಗೂ ಕೂಡ ದೇವರೆಂದರೆ ಅಪಾರ ಭಕ್ತಿ. ಎಂದಿಗೂ ಜಾತಿ ರಾಜಕಾರಣ ಮಾಡಿಲ್ಲ. ಎಲ್ಲಾ ಜಾತಿ ಧರ್ಮದವರನ್ನು ಸಮಾನವಾಗಿ ನೋಡುತ್ತಾ ಧರ್ಮದಿಂದ ರಾಜಕಾರಣ ಮಾಡುತ್ತಿದ್ದೇನೆ.

ಮಾನ್ಯಗೆ 622, ಕ್ಷೀರಜಾ, ಹರೀಶ್, ಪವನ್, ರಿಯಾಗೆ ತಲಾ 621 ಅಂಕ, ಡಾ.ಎಂ.ಮೋಹನ್ ಆಳ್ವ

600ಕ್ಕೂ ಹೆಚ್ಚು ಅಂಕ ಪಡೆದ ಆಳ್ವಾಸ್‌ನ 81 ವಿದ್ಯಾರ್ಥಿಗಳು

ಪ್ರಥಮ ಭಾಷೆ ಕನ್ನಡದಲ್ಲಿ 14, ದ್ವಿತೀಯ ಭಾಷೆ ಕನ್ನಡದಲ್ಲಿ 15, ತೃತೀಯ ಭಾಷೆ ಕನ್ನಡದಲ್ಲಿ 07, ಪ್ರಥಮ ಭಾಷೆ ಇಂಗ್ಲೀಷ್‌ನಲ್ಲಿ 2, ದ್ವಿತೀಯ ಭಾಷೆ ಇಂಗ್ಲೀಷ್ 4, ಪ್ರಥಮ ಭಾಷೆ ಸಂಸ್ಕೃತ 08, ತೃತೀಯ ಭಾಷೆ ಹಿಂದಿಯಲ್ಲಿ 42, ತೃತೀಯ ಭಾಷೆ ಸಂಸ್ಕೃತದಲ್ಲಿ 10, ಗಣಿತದಲ್ಲಿ 15, ಸಾಮಾನ್ಯ ವಿಜ್ಞಾನದಲ್ಲಿ 19, ಸಮಾಜ ವಿಜ್ಞಾನದಲ್ಲಿ 40 ವಿದ್ಯಾರ್ಥಿಗಳು ಶೇ 100 ಅಂಕ ಪಡೆದಿದ್ದಾರೆ.

ಡಾ.ಎಂ.ಮೋಹನ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

ವಿದ್ಯಾಗಿರಿ: ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಿಸಿದ್ದು, ಆಳ್ವಾಸ್ ಶಾಲೆಯ 81 ವಿದ್ಯಾರ್ಥಿಗಳು 625ರಲ್ಲಿ 600ಕ್ಕೂ ಹೆಚ್ಚು ಅಂಕ ಪಡೆಯುವ ಮೂಲಕ ವಿಶಿಷ್ಟ ಸಾಧನೆ ಮೆರೆದಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಮಾನ್ಯ (622), ಕ್ಷೀರಜಾ (621), ಹರೀಶ್ ಬಡಿಗೇರ್ (621), ಪವನ್ ಶರಣಬಸಪ್ಪ ಮೇಗೂರ್ (621), ರಿಯಾ ವಿದ್ಯಾಧರ ಕಮಟೆ(621), ಪ್ರಜ್ಞಾ ಶೀತಲ್ ಪಾಟೀಲ್ (620), ಸಮೀಕ್ಷಾ ಸಂದೀಪ್ ಸಮಾಜನ್ನವರ್ (620), ಸಿಂಧೂ ಶೀತಲ್ ಚೌಗಲೆ(620), ಸುಪ್ರೀತಾ ಲಕ್ಷ್ಮಣ್ ನಾಯ್ಕ್ (620), ಆದಿತ್ಯ(620), ಚಿನ್ಮಯ್(620)ಅಂಕಗಳನ್ನು ಪಡೆಯುವುದರ ಮೂಲಕ ವಿಶಿಷ್ಟ ಸಾಧನೆ ಮಾಡಿದ್ದಾರೆ.

91 ವಿದ್ಯಾರ್ಥಿಗಳು ಶೇ95ಕ್ಕೂ ಅಧಿಕ, 161 ವಿದ್ಯಾರ್ಥಿಗಳು ಶೇ90ಕ್ಕೂ ಅಧಿಕ, 211 ವಿದ್ಯಾರ್ಥಿಗಳು ಶೇ 85ಕ್ಕೂ ಅಧಿಕ ಅಂಕ ಪಡೆದಿದ್ದಾರೆ ಎಂದರು. ಇಬ್ಬರು ವಿದ್ಯಾರ್ಥಿಗಳು ಐದು ವಿಷಯಗಳಲ್ಲಿ, ನಾಲ್ಕು ವಿಷಯಗಳಲ್ಲಿ 6 ವಿದ್ಯಾರ್ಥಿಗಳು, ಮೂರು ವಿಷಯಗಳಲ್ಲಿ 12, ಎರಡು ವಿಷಯಗಳಲ್ಲಿ 25, ಹಾಗೂ 1 ವಿಷಯದಲ್ಲಿ 46 ವಿದ್ಯಾರ್ಥಿಗಳು ಶೇ.100 ಅಂಕಗಳನ್ನು ಗಳಿಸಿದ್ದಾರೆ.

ಪ್ರಥಮ ಭಾಷೆ ಕನ್ನಡದಲ್ಲಿ 14, ದ್ವಿತೀಯ ಭಾಷೆ ಕನ್ನಡದಲ್ಲಿ 15, ತೃತೀಯ ಭಾಷೆ ಕನ್ನಡದಲ್ಲಿ 07, ಪ್ರಥಮ ಭಾಷೆ ಇಂಗ್ಲೀಷ್‌ನಲ್ಲಿ 2, ದ್ವಿತೀಯ ಭಾಷೆ ಇಂಗ್ಲೀಷ್ 4, ಪ್ರಥಮ ಭಾಷೆ ಸಂಸ್ಕೃತ 08, ತೃತೀಯ ಭಾಷೆ ಹಿಂದಿಯಲ್ಲಿ 42, ತೃತೀಯ ಭಾಷೆ ಸಂಸ್ಕೃತದಲ್ಲಿ 10, ಗಣಿತದಲ್ಲಿ 15, ಸಾಮಾನ್ಯ ವಿಜ್ಞಾನದಲ್ಲಿ 19, ಸಮಾಜ ವಿಜ್ಞಾನದಲ್ಲಿ 40 ವಿದ್ಯಾರ್ಥಿಗಳು ಶೇ 100 ಅಂಕ ಪಡೆದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಪ್ರಶಾಂತ್ ಬಿ., ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ವಿಜಯಾ ಟಿ. ಮೂರ್ತಿ, ಆಡಳಿತಾಧಿಕಾರಿ ಪ್ರೀತಂ ಕುಂದರ್ ಹಾಗೂ ಸಹಾಯಕ ಆಡಳಿತಾಧಿಕಾರಿ ರಾಜೇಶ್ ಕುಮಾರ್ ಶೆಟ್ಟಿ ಇದ್ದರು.

ಸುಹಾಸ್ ಹತ್ಯೆ: ಆರೋಪಿಗಳ ಬಂಧನಕ್ಕೆ ತಂಡಗಳ ರಚನೆ

ಮಂಗಳೂರು: ಹಿಂದೂ ಸಂಘಟನೆ ಕಾರ್ಯಕರ್ತ ರೌಡಿಶೀಟರ್ ಸುಹಾಸ್ ಶೆಟ್ಟಿ ಯನ್ನು ಮಾರಕಾಸ್ತ್ರಗಳಿಂದ ಕೊಲೆ ಮಾಡಿದ. ಹಂತಕರ ಬಂಧನಕ್ಕೆ ಪೊಲೀಸರು ನಾಲ್ಕು ತಂಡ ಗಳನ್ನು ರಚಿಸಿದ್ದಾರೆ. ಈ ಹತ್ಯೆಯು ಫಾಜಿಲ್ ಹತ್ಯೆಗೆ ಪ್ರತೀಕಾರವಾಗಿರಬಹುದು ಎಂದು ಶಂಕಿಸಲಾಗಿದೆ.

ವಿಶ್ವ ಹಿಂದೂ ಪರಿಷತ್ ಬಂದ್ ಗೆ ಕರೆ ನೀಡಿದ್ದು ಸಂಚಾರ ಸ್ಥಬ್ಧವಾಗಿದೆ. ಮೂರು ಕಡೆ ಅನ್ಯಮತಿಯರ ಮೇಲೆ ಚೂರಿಯಿಂದ ಇರಿದ ಪ್ರಕರಣಗಳು ನಡೆದಿದೆ. ಮಂಗಳೂರು ಪ್ರಕ್ಷುಬ್ಧವಾಗಿದ್ದು ಶಾಂತಿ ಸುವ್ಯವಸ್ಥೆ ಕಾಪಾಡಲು 22 ಪೊಲೀಸ್ ತುಕುಡಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿದೆ. ಸಾವಿರಕ್ಕೂ ಹೆಚ್ಚು ಪೊಲೀಸರು ಗಸ್ತು ಕಾಯುತ್ತಿದ್ದಾರೆ. ಬಸ್ಸುಗಳಿಗೆ ಕಲ್ಲುತೂರಿದ ಪ್ರಕರಣಗಳು ನಡೆದಿದ್ದು ಪರಿಸ್ಥಿತಿ ನಿಯಂತ್ರಣದಲ್ಲಿದೆ.

ಅಂತಿಮ ದರ್ಶನ: ಅಂತ್ಯಕ್ರಿಯೆ ಕಾರಿಂಜದ ಪುಳಿಮಜಲು ಎಂಬಲ್ಲಿರುವ ಸುಹಾಸ್ ಶೆಟ್ಟಿ ಮನೆಯಲ್ಲಿ ಸಾವಿರಾರು ಮಂದಿ ಮೃತದೇಹದ ಅಂತಿಮ ದರ್ಶನ. ಪಡೆದರು. ಮನೆ ಸಮೀಪವೇ . ಹಿಂದೂ ಸಂಪ್ರದಾಯದಂತೆ ಅಂತಿಮ ವಿಧಿವಿಧಾನ ನಡೆಯಿತು.

ಸುಹಾಸ್ ಶೆಟ್ಟಿ ಮನೆಗೆ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಆಗಮಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ. .

ಮಂಗಳೂರು ಬಂದ್: ಇದೇ ವೇಳೆ ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡದಂತೆ ಕಟ್ಟುನಿಟ್ಟಿನ ಬಂದೋಬಸ್ತ್ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮಂಗಳೂರು ಪೊಲೀಸರಿಗೆ ಸೂಚನೆ ನೀಡಿದ್ದಾರೆ. ದಕ್ಷಿಣ ಕನ್ನಡದ ಸಂಪೂರ್ಣ ಬಂದ್ ಆಗಿದೆ. ಹಿಂದೂ ಸಂಘಟನೆಗಳು ಬಂದ್ ಗೆ ಕರೆ ನೀಡಿದ್ದು, ಅಂಗಡಿ ಮುಂಗಟ್ಟುಗಳು ಮುಚ್ಚಿವೆ. .

ಸುಹಾಸ್ ಪಾರ್ಥಿವ ಶರೀರದ ಮೆರವಣಿಗೆ ವೇಳೆ ಪೊಲೀಸರು ಬಂದೋಬಸ್ತ ಕೈಗೊಂಡಿರುವುದು.

ಆರೋಪಿಗಳ ಶೋಧಕ್ಕೆ ನಾಲ್ಕು ತಂಡ:

ಸುಹಾಸ್ ಶೆಟ್ಟಿಯನ್ನು ದುಷ್ಕರ್ಮಿಗಳು ಮಾರಕಾಯುಧಗಳಿಂದ 11 ಬಾರಿ ಇರಿದು ಕೊಲೆ ಮಾಡಿದ್ದು, ಹಂತಕರ ಬಂಧನಕ್ಕೆ ನಾಲ್ಕು ಪೊಲೀಸ್ ತಂಡ ರಚಿಸಲಾಗಿದೆ. , ಸ್ಥಳೀಯ ಸಿಸಿ ಕ್ಯಾಮರಾ ಪರಿಶೀಲನೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ ಅಗರವಾಲ್ ತಿಳಿಸಿದ್ದಾರೆ.

ಗೃಹ ಸಚಿವ ಪರಮೇಶ್ವರ್ ಕೂಡ ಪ್ರತಿಕ್ರಿಯೆ ನೀಡಿ ತನಿಖೆಗೆ 4 ತಂಡ ರಚನೆ ಮಾಡಲಾಗಿದೆ. ಕೊಲೆಗಾರರನ್ನು ಯಾವುದೇ ಕಾರಣಕ್ಕೆ ಬಿಡುವುದಿಲ್ಲ. ತನಿಖೆ ಮುಂದುವರೆದಿದೆ ಯಾರೇ ಆಗಿದ್ದರೂ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

. ಹಥತ್ಯೆಗೆ ಬಳಸಿದ ಮಾರಾಕಾಸ್ತ್ರ ಬಟನ್ ಡ್ರ್ಯಾಗರ್ ಅನ್ನು ಪೊಲೀಸರು ಪತ್ತೆ ಹಚ್ಚಿ ದ್ದಾರೆ. ಕೊಲೆ ಮಾಡಿದ ಬಳಿಕ ಹಂಚಕರು ಈ ಮಾರಕಾಸ್ತ್ರವನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಯಾಗಿದ್ದರು. ಇದು ಪ್ರಕರಣದ ಪ್ರಮುಖ ಸಾಕ್ಷ್ಯದಲ್ಲಿ ಒಂದಾಗಿದೆ. ಹಂತಕರ ಎರಡು ವಾಹನಗಳು ಮತ್ತು ಸುಹಾಸ್ ಶೆಟ್ಟಿ ಕಾರನ್ನು ಕೂಡ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ರವಿ ಪ್ರಚೋದನೆಯಿಂದ ಗುಂಪು ಹತ್ಯೆ



ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಮಾಜಿ ಸಚಿವ ಹರೀಶ್ ಕುಮಾರ್ ಅವರು ಮಾತನಾಡಿದರು.

ಮಂಗಳೂರು: ಬಿಜೆಪಿ ಮಾಜಿ ಕಾರ್ಪೊರೇಟರ್‌ವೊಬ್ಬರ ಪತಿಯಾಗಿರುವ ಪಿಸ್ತೂಲ್ ರವಿಯ ಪ್ರಚೋದನೆಯಿಂದ ಕುಡುಪುವಿನಲ್ಲಿ ಗುಂಪು ಹತ್ಯೆ ನಡೆದಿದೆ. ಎಂದು ದ.ಕ.ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ವಿಧಾನ ಪರಿಷತ್ ಮಾಜಿ ಸಚಿವ ಹರೀಶ್ ಕುಮಾರ್ ಆರೋಪಿಸಿದ್ದಾರೆ.

ಪ್ರೆಸ್‌ಕ್ಲಬ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಘಟನೆ ನಡೆದ ಬಳಿಕ ಪಿಸ್ತೂಲ್ ರವಿ ತಲೆಮರೆಸಿಕೊಂಡಿದ್ದಾನೆ. ಆತನ ಮೂರು ಮೊಬೈಲ್ ಸ್ವಿಚ್‌ಆಫ್ ಆಗಿದೆ. ಬಿಜೆಪಿ ನಾಯಕರು ಪ್ರಚೋದನಕಾರಿ ಭಾಷಣ ಮಾಡಿ ಹಿಂದುಳಿದ ವರ್ಗದ ಯುವಕರನ್ನು ಜೈಲು ಸೇರುವಂತೆ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವ ಕೆಲಸ ಆಗಬೇಕಿದೆ ಎಂದರು.

ಇನ್ಸ್ಪೆಕ್ಟರ್ ವೈಫಲ್ಯ: ಕುಡುಪು ಗುಂಪು ಹತ್ಯೆ ಪ್ರಕರಣದಲ್ಲಿ ಮಂಗಳೂರು ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್‌ರ ವೈಫಲ್ಯ ಎದ್ದು ಕಾಣುತ್ತಿವೆ. ಅವರ ವಿರುದ್ಧ ಕ್ರಮಕ್ಕೆ ಸರಕಾರಕ್ಕೆ ಮನವಿ ಮಾಡಲಾಗಿದೆ. ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆಯ ವೈಫಲ್ಯ ಇದೆ ಎಂದು ಹರೀಶ್ ಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಕೆ.ಕೆ.ಶಾಹುಲ್ ಹಮೀದ್, ಸುಹೈಲ್ ಕಂದಕ್, ನವಾಝ್, ಲಾರೆನ್ಸ್ ಡಿಸೋಜ, ವಿಶ್ವಾಸ್ ಕುಮಾರ್ ದಾಸ್, ಶಬ್ಬೀರ್ ಸಿದ್ದಕಟ್ಟೆ, ಟಿ.ಕೆ.ಸುಧೀರ್, ಪ್ರಕಾಶ್ ಸಾಲ್ಯಾನ್, ಶುಭೋದಯ ಆಳ್ವ, ಹೊನ್ನಯ್ಯ ಉಪಸ್ಥಿತರಿದ್ದರು.

ಸ್ವಸ್ತಿ ಕಾಮತ್ ಅವಿಭಜಿತ ಜಿಲ್ಲೆಗೆ ಪ್ರಥಮ

ಉಡುಪಿ: ಎಸ್ಸೆಲ್ಸಿಸಿ ಫಲಿತಾಂಶದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನಕ್ಕೆ ಪಡೆದು, ಒಟ್ಟು ಶೇ 89.96 ಫಲಿತಾಂಶ ಸಾಧಿಸಿದೆ. ರಾಜ್ಯದಲ್ಲಿ ಶೇ. 100 ರಷ್ಟು ಪೂರ್ಣ ಅಂಕಗಳನ್ನು ಗಳಿಸಿದ 24 ಮಂದಿ ಟಾಪರ್‌ಗಳ ಪೈಕಿ ಕಾರ್ಕಳ ತಾಲೂಕಿನ ಜ್ಞಾನಸುಧಾ ಪಿಯು ಕಾಲೇಜಿನ ಸ್ವಸ್ತಿ ಕಾಮತ್ ಕೂಡ ಒಬ್ಬರಾಗಿ ಜಿಲ್ಲೆಗೆ ಹೆಮ್ಮೆಯ ವಿದ್ಯಾರ್ಥಿನಿಯಾಗಿದ್ದಾರೆ. ಸ್ವಸ್ತಿ ಕಾರ್ಕಳ ತಾಲೂಕು ಕಣಂಜಾರು ಗ್ರಾಮದ ಜನಾರ್ಧನ ಹಾಗೂ ಶಾಂತಿ ಕಾಮತ್ ದಂಪತಿ ಪುತ್ರಿ

ಉಡುಪಿ ಜಿಲ್ಲೆ ಕಳೆದ ಬಾರಿ ಶೇ. 94 ಫಲಿತಾಂಶ ಸಾಧಿಸಿತ್ತು. 2023ರಲ್ಲಿ ಉಡುಪಿ ಜಿಲ್ಲೆ ಅಚ್ಚರಿ ಎಂಬಂತೆ 14ನೇ ಮತ್ತು 2022ರಲ್ಲಿ 13ನೇ ಸ್ಥಾನಕ್ಕೆ ಕುಸಿದಿತ್ತು. 2021ರಲ್ಲಿ ಕೊರೋನಾ ಸಾಂಕ್ರಮಿಕದ ಕಾರಣಕ್ಕೆ ಶೇ. 100 ಫಲಿತಾಂಶ ನೀಡಲಾಗಿತ್ತು. 2020ರಲ್ಲಿ 9ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಅದಕ್ಕೂ ಹಿಂದಿನ 5 ವರ್ಷಗಳಲ್ಲಿ ಉಡುಪಿ ಜಿಲ್ಲೆ ದಕ್ಷಿಣ ಕನ್ನಡದೊಂದಿಗೆ ಪ್ರಥಮ ಅಥವಾ ದ್ವಿತೀಯ ಸ್ಥಾನಗಳನ್ನು ಹಂಚಿಕೊಳ್ಳುತ್ತಿತ್ತು.

ಇದೀಗ ಮತ್ತೆ ಉಡುಪಿ ಜಿಲ್ಲೆ ತನ್ನ ಹಿಂದಿನ ವೈಭವವನ್ನು ಮರಳಿ ಗಳಿಸಿದ್ದಕ್ಕೆ ಜಿಲ್ಲಾಧಿಕಾರಿ ಡಾ. ವಿದ್ಯಾಕುಮಾರಿ, ಕಾರ್ಕಳ ಶಾಸಕ ಸುನಿಲ್ ಕುಮಾರ್, ಶಾಸಕ ಯಶ್‌ಪಾಲ್ ಸುವರ್ಣ ಮುಂತಾದವರು ಸಂತಸ ವ್ಯಕ್ತಪಡಿಸಿದ್ದು, ಈ ಫಲಿತಾಂಶಕ್ಕೆ ವಿದ್ಯಾರ್ಥಿಗಳನ್ನು ಶಿಕ್ಷಕರನ್ನು ಪೋಷಕರನ್ನು ಅಭಿನಂದಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 13,579 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 12,215 (ಶೇ 89.96) ಮಂದಿ ಪಾಸಾಗಿದ್ದಾರೆ. ಅವರಲ್ಲಿ 7019 ಬಾಲಕರಲ್ಲಿ 5989 (ಶೇ 85.32) ಮಂದಿ ಪಾಸಾಗಿದ್ದರೇ, 6560 ಬಾಲಕಿಯರಲ್ಲಿ 6229 (ಶೇ 94.50) ಮಂದಿ ಪಾಸಾಗಿದ್ದಾರೆ.

ಸ್ವಸ್ತಿ ಕಾಮತ್ ಅವರಿಗೆ ಜ್ಞಾನಸುಧಾ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಸುಧಾಕರ್ ಶೆಟ್ಟಿ ಅವರು ಸಿಹಿ ನೀಡಿ ಸಂಭ್ರಮಿಸಿದರು.

ಕನ್ನಡ ಮಾಧ್ಯಮದಲ್ಲಿ ಶೇ 82.78, ಆಂಗ್ಲ ಮಾಧ್ಯಮದಲ್ಲಿ ಶೇ 95.10 ಮಂದಿ ಪಾಸಾಗಿದ್ದಾರೆ. ಗ್ರಾಮೀಣ ಪ್ರದೇಶದ ಶೇ 90.28, ನಗರ ಪ್ರದೇಶದ ಶೇ 85.70 ವಿ ದ್ಯಾ ಣ ಟಿ ಜ ಜ ಜಿ ಟಿ ಜ ಜ ರ್ಥಿ ಗ ಳ'ಂ ಪಾಸಾಗಿದ್ದಾರೆ. ಸರಕಾರಿ ಶಾಲೆಯ ಶೇ 87.20, ಅನುದಾನಿತ ಶಾಲೆಯ ಶೇ 86.86, ಅನುದಾನ ರಹಿತ ಶೇ 95.82 ವಿದ್ಯಾರ್ಥಿಗಳು ಪಾಸಾಗಿದ್ದಾರೆ. 15 ಸರ್ಕಾರಿ, 4 ಅನುದಾನಿತ ಮತ್ತು 32 ಅನುದಾನರಹಿತ ಶಾಲೆಗಳು ಶೇ 100 ಫಲಿತಾಂಶ ದಾಖಲಿಸಿವೆ.

ಸುಹಾಸ್ ಶೆಟ್ಟಿ ಹತ್ಯೆ: ಎನ್‌ಐಎ ತನಿಖೆಗೆ ಆಗ್ರಹ

ಮಂಗಳೂರು: ಬಜ್ಪೆಯಲ್ಲಿ ನಡೆದ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಬರ್ಬರ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರವು ತತಕ್ಷಣವೇ ರಾಷ್ಟ್ರೀಯ ತನಿಖಾ ಸಂಸ್ಥೆಗೆ ವರ್ಗಾಯಿಸಬೇಕೆಂದು ಒತ್ತಾಯಿಸಿ ದಕ್ಷಿಣ ಕನ್ನಡ ಸಂಸದ ಕ್ಯಾ ಬ್ರಿಜೇಶ್ ಚೌಟ ಅವರು ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

ಗೃಹ ಸಚಿವವರಿಗೆ ಬರೆದ ಪತ್ರದಲ್ಲಿ ಸಂಸದರು, ಸುಹಾಸ್ ಶೆಟ್ಟಿ ಬರ್ಬರ ಹತ್ಯೆ ಘಟನೆಯಿಂದ ನಾನು ದಿಗ್ಭ್ರಮೆಗೊಂಡಿದ್ದು, ಭೀಕರ ಕೊಲೆ ಕೃತ್ಯದ ಕುರಿತು ತೀವ್ರ ಆತಂಕ ಮತ್ತು ನೋವಿನಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ಘಟನೆಯು ಕರಾವಳಿ ಕರ್ನಾಟಕ ಪ್ರದೇಶದಲ್ಲಿ ಹೆಚ್ಚುತ್ತಿರುವ ಕಾನೂನುಬಾಹಿರತೆ, ಬಲಗೊಳ್ಳುತ್ತಿರುವ ಇಸ್ಲಾಮಿಕ್ ಮೂಲಭೂತವಾದ ಮತ್ತು ರಾಷ್ಟ್ರ ವಿರೋಧಿ ಶಕ್ತಿಗಳ ಅಟ್ಟಹಾಸಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಸುಹಾಸ್ ಶೆಟ್ಟಿ ಹತ್ಯೆಯು ಕರಾವಳಿ ಮಾತ್ರವಲ್ಲ ಇಡೀ ರಾಜ್ಯದ ಜನರನ್ನೇ ಬೆಚ್ಚಿ ಬೀಳುವಂತೆ ಮಾಡಿದೆ ಎಂದು ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ಹಿಂದೆಯೂ ಇದೇ ರೀತಿಯಲ್ಲಿ ಬಿಜೆಪಿ ಕಾರ್ಯಕರ್ತರಾದ ಸುಳ್ಯದ ಪ್ರವೀಣ್ ನೆಟ್ಟಾರು ಅವರ ಹತ್ಯೆಯನ್ನು ನಿಷೇಧಿತ ಪಿಎಫ್‌ಐ ಸಂಘಟನೆ ಕಾರ್ಯಕರ್ತರು ನಡೆಸಿದ್ದರು. ಈ ಸಂಘಟನೆಯನ್ನು ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಈಗಾಗಲೇ ನಿಷೇಧಿಸಿದೆ. ಇಷ್ಟಾಗಿಯೂ ಈಗ ಪ್ರವೀಣ್ ಮಾದರಿಯಲ್ಲೇ ಮತ್ತೊಬ್ಬ ಹಿಂದೂ ಯುವಕ ತನ್ನ ಕಳೆದುಕೊಂಡಿರುವ ಅತ್ಯಂತ ನೋವಿನ ವಿಚಾರ. ಈ ರೀತಿಯ ಹತ್ಯೆಯು ಈ ಪ್ರದೇಶದಲ್ಲಿ ಪಿಎಫ್‌ಐ ನಂತಹ ಮೂಲಭೂತವಾದಿ ಸಂಘಟನೆಗಳು ಇನ್ನೂ ಸ್ಲೀಪರ್ ಸೆಲ್ನಂತೆ ಜೀವಂತವಾಗಿರುವುದನ್ನು ಸ್ಪಷ್ಟಪಡಿಸುತ್ತದೆ ಎಂದರು.

ಈ ಭೀಕರ ಘಟನೆಯಲ್ಲಿ ನಿಷೇಧಿತ ಪಿಎಫ್‌ಐ ಸಂಘಟನೆಯ ಕಾರ್ಯಕರ್ತರ ಕೈವಾಡದ ಸಾಧ್ಯತೆ ಇರುವುದರಿಂದ ಈ ಕುರಿತು ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗಿರುವುದು ಅತ್ಯಗತ್ಯ. ದಕ್ಷಿಣ ಕನ್ನಡ ಮಾತ್ರವಲ್ಲ ಈ ದೇಶದ ಯಾವುದೇ ಭಾಗದಲ್ಲಿ ಮೂಲಭೂತವಾದಿ, ರಾಷ್ಟ್ರ ವಿರೋಧಿ ಮತ್ತು ಜಿಹಾದಿ ಮಾನಸಿಕತೆಯ ಶಕ್ತಿಗಳು ಬೆಳೆಯಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಈ ಕೊಲೆ ಕೃತ್ಯದ ಹಿಂದಿರುವ ಸಮಾಜ ಘಾತುಕ ಸಂಘಟನೆಗಳು, ಹತ್ಯೆ ಹಿಂದಿನ ಒಳಸಂಚು, ಇದರಲ್ಲಿ ಭಾಗಿಯಾದವರು ಹಾಗೂ ಕುಮ್ಮಕ್ಕು ನೀಡಿರುವ ದುಷ್ಟಶಕ್ತಿಯನ್ನು ಬುಡ ಸಮೇತ ಕಿತ್ತು ಹಾಕಬೇಕು. ಆ ಮೂಲಕ ಕಾನೂನಿನಲ್ಲಿ ಇರುವ ಜನರ ವಿಶ್ವಾಸವನ್ನು ಮರುಸ್ಥಾಪಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸುಹಾಸ್ ಶೆಟ್ಟಿ ಅವರ ಹತ್ಯೆ ವಿಚಾರವಾಗಿ ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು ಮಧ್ಯಪ್ರವೇಶಿಸಿ, ಕೇವಲ ಅಪರಾಧಿಗಳು ಮಾತ್ರವಲ್ಲದೆ ಅವರಿಗೆ ಬೆಂಬಲ ನೀಡಿದ ಮತ್ತು ಹಣಕಾಸು ನೆರವು ನೀಡಿದ ಎಲ್ಲರನ್ನು ತ್ವರಿತವಾಗಿ ನ್ಯಾಯದ ಮುಂದೆ ತರಲು ಕ್ರಮ ಕೈಗೊಳ್ಳಬೇಕೆಂದು ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ವಿನಂತಿಸಿದ್ದಾರೆ.

ತಮ್ಮ ಮಗನನ್ನು ಕಳೆದುಕೊಂಡಿರುವ ಸುಹಾಸ್ ಶೆಟ್ಟಿ ಅವರ ಕುಟುಂಬವು ದಿಗ್ಭ್ರಾಂತಗೊಂಡು ನ್ಯಾಯಕ್ಕಾಗಿ ಕಾಯುತ್ತಿದೆ. ಈ ಭಾಗದ ಚುನಾಯಿತ ಪ್ರತಿನಿಧಿಯಾಗಿ ಮತ್ತು ಇಲ್ಲಿನ ನೋವು ಹಾಗೂ ಹತಾಶೆಯನ್ನು ವೈಯಕ್ತಿಕವಾಗಿ ಕಂಡಿರುವ ವ್ಯಕ್ತಿಯಾಗಿ, ಈ ಪ್ರಕರಣದ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆಯನ್ನು ಈ ಕೂಡಲೇ ಎನ್‌ಐಎಗೆ ಹಸ್ತಾಂತರಿಸಬೇಕೆಂದು ಕ್ಯಾ. ಚೌಟ ಅವರು ತಮ್ಮ ಪತ್ರದಲ್ಲಿ ಒತ್ತಾಯಿಸಿದ್ದಾರೆ.

-ಬ್ರಿಜೇಶ್ ಚೌಟ, ಸಂಸದ

ಸುಹಾಸ್ ಹತ್ಯೆ ಖಂಡಿಸಿ ಬಿಜೆಪಿ ಪ್ರತಿಭಟನೆ

ಸುಹಾಸ್ ಹತ್ಯೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಬಜ್ಪೆಯ ಬಳಿ ಪ್ರತಿಭಟನೆ ನಡೆಸಿದರು.

ಉಡುಪಿ: ದ. ಕ. ಜಿಲ್ಲೆಯ ಬಜ್ಪೆಯ ಬಳಿ ನಡೆದ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿಯ ಭೀಕರ ಹತ್ಯೆಯನ್ನು ಖಂಡಿಸಿ ಜಿಲ್ಲಾ ಬಿಜೆಪಿ ಕಚೇರಿಯ ಮುಂಭಾಗ ಶುಕ್ರವಾರ ಪ್ರತಿಭಟನೆ ನಡೆಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಕಿಶೋರ್ ಕುಮಾರ್ ಕುಂದಾಪುರ ಮಾತನಾಡಿ, ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಅನಂತರ ನಿರಂತರವಾಗಿ, ಬಿಜೆಪಿ ಕಾರ್ಯಕರ್ತರು ಬೀದಿಗೆ ಇಳಿದು ಪ್ರತಿಭಟನೆ ಮಾಡುವ ಪರಿಸ್ಥಿತಿ ಬಂದೊದಗಿದೆ. ಸುಹಾಸ್ ಶೆಟ್ಟಿಯ ಹತ್ಯೆಯಿಂದ ಬಹಳ ನೋವಾಗಿದೆ. ಹಿಂದೂ ಕಾರ್ಯಕರ್ತರಿಗೆ ಸರಿಗೆ ಮೇಲಿನ ನಡಿಗೆ ಉಂಟಾಗಿದೆ. ಮತಬ್ಯಾಂಕ್ ರಾಜಕಾರಣ, ಮುಸ್ಲಿಂ ಒಲೈಕೆಯಿಂದಾಗಿ ಈ ಸರಕಾರದಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲ ಎಂದರು. ಹಣಕಾಸಿನ ವ್ಯವಹಾರ ಇಲ್ಲ, ಹಿಂದೂ ಕಾರ್ಯಕರ್ತನಾಗಿದ್ದ ಎಂಬ ಕಾರಣಕ್ಕೆ ಹತ್ಯೆ ಮಾಡಲಾಗಿದೆ. ಜನನಿಬಿಡ ಪ್ರದೇಶದಲ್ಲಿ ಯಾರ ಭಯವು ಇಲ್ಲದೇ ಕೊಲೆ ಮಾಡಿದ್ದಾರೆ.

ಪೊಲೀಸ್ ಇಲಾಖೆ ನೈಜ ಆರೋಪಿಗಳನ್ನು ಶೀಘ್ರ ಬಂಧಿಸಬೇಕು ಎಂದು ಆಗ್ರಹಿಸಿದರು. ಕುಂದಾಪುರ ಶಾಸಕ ಕಿರಣ್ ಕೊಡ್ಗಿ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಂಗಳೂರು ವಿಭಾಗ ಪ್ರಭಾರಿ ಕಿದಿಯೂರು ಉದಯ್ ಕುಮಾರ್ ಶೆಟ್ಟಿ, ಜಿಲ್ಲಾ ಮಾಧ್ಯಮ ಪ್ರಮುಖ್ ಶ್ರೀನಿಧಿ ಹೆಗ್ಡೆ, ಕಾಪು ಮಂಡಲ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಉದ್ಯಾವರ, ಜಿ.ಪ್ರ. ಕಾರ್ಯದರ್ಶಿ ರೇಶ್ಮಾ ಶೆಟ್ಟಿ, ರಾಜ್ಯ ಮಹಿಳಾ ಮೋರ್ಚಾ ಪ್ರ. ಕಾರ್ಯದರ್ಶಿ ಶಿಲ್ಪಾ ಸುವರ್ಣ, ಯುವ ಮೋರ್ಚಾ ಅಧ್ಯಕ್ಷ ಪೃಥ್ವಿ, ಪ್ರ. ಕಾರ್ಯದರ್ಶಿ ಶಶಾಂಕ್ ಶಿವತ್ತಾಯ, ಅಭಿರಾಜ್ ಸುವರ್ಣ ಉಪಸ್ಥಿತರಿದ್ದರು.

ಡಾ.ರಾಜ್ ರತ್ನ ಪ್ರಶಸ್ತಿ ಪ್ರದಾನ ಮೇ 4ರಂದು

ತುಮಕೂರು: ದಿಬ್ಬೂರು ಅಮರ ಜ್ಯೋತಿ ಸಾಂಸ್ಕೃತಿಕ ಟ್ರಸ್ಟ್ – ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಕನ್ನಡದ ಮೇರು ನಟ ಡಾ.ರಾಜ್‌ಕುಮಾರ್ ಪುಣ್ಯಸ್ಮರಣೆಯ ದಿನವಾದ ಮೇ 4 ರಂದು ಸಂಜೆ ನಾಲ್ಕು ಗಂಟೆಗೆ ಕನ್ನಡ ಭವನದಲ್ಲಿ 'ಡಾ.ರಾಜ್ ರತ್ನ ಪ್ರಶಸ್ತಿ 'ಪ್ರದಾನ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡುವರು. ತುಮಕೂರು ವಿವಿ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು, ನಿರ್ದೇಶಕ ಚಿಂದೋಡಿ ಬಂಗಾರೇಶ್, ಕಲಾವಿದ ಡಾ.ಲಕ್ಷ್ಮಣದಾಸ್, ಕಸಾಪ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ ಉಪಸ್ಥಿತರಿರುವರು. ಹಿರಿಯ ಪತ್ರಕರ್ತರಾದ ಗಂಗಾಧರ್ ಮೊದಲಿಯಾರ್, ಹಿರಿಯ ಸಂಗೀತ ನಿರ್ದೇಶಕರಾದ ಐ.ಎಲ್.ರಂಗಸ್ವಾಮಯ್ಯ ಅವರಿಗೆ ಡಾ.ರಾಜ್ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಸಾಪ ನಿಕಟಪೂರ್ವ ಅಧ್ಯಕ್ಷ ಬಾ.ಹ.ರಮಾಕುಮಾರಿ, ಹಾರ್ಮೋನಿಯಂ ವಾದಕರಾದ ಬಿ.ಎಸ್.ಶ್ರೀನಿವಾಸಮೂರ್ತಿ, ತಬಲ ವಾದಕರಾದ ಎಂ.ಪಿ.ಪುಟ್ಟಶಾಮಯ್ಯ, ನಾಗಾರ್ಜುನ ಕಲಾ ಸಂಘದ ಸಂಸ್ಥಾಪಕರಾದ ಕೆ.ಸಿ.ನರಸಿಂಹಮೂರ್ತಿ,ಹಿರಿಯ ಗಾಯಕರಾದ ಎ.ಎನ್.ನಾರಾಯಣಪ್ರಸಾದ್, ಸಂಗೀತ ನಿರ್ದೇಶಕ ಸಂಗೀತ್ ಶ್ರೀನಿವಾಸ್, ಈಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ಎಂ.ಆರ್. ರಂಗಮ್ಮ ಇವರಿಗೆ ಸನ್ಮಾನಿಸಲಾಗುವುದು. ನಂತರ ಡಾ.ರಾಜ್ ಗಾಯನ ನಡೆಯಲಿದೆ.

ಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆಗೆ ಶೇ.100 ಫಲಿತಾಂಶದ ಸಾಧನೆ ಸಂಭ್ರಮ

ಧರ್ಮಸ್ಥಳ: ಪ್ರಸಕ್ತ 2024–25 ನೇ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶ ಪ್ರಕಟವಾಗಿದ್ದು ಶ್ರೀ.ಧ.ಮಂ.ಆಂಗ್ಲಮಾಧ್ಯಮ ಶಾಲೆ, ಧರ್ಮಸ್ಥಳದಿಂದ ಒಟ್ಟು 52 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 52 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಸದ್ರಿ ಶಾಲೆಗೆ ಶೇ.100 ಫಲಿತಾಂಶ ಬಂದಿರುತ್ತದೆ. 25 ವಿದ್ಯಾರ್ಥಿಗಳು ಎ+ ಶ್ರೇಣಿಯಲ್ಲಿ, ಉಳಿದಂತೆ 16 ವಿದ್ಯಾರ್ಥಿಗಳು ಎ, 5 ವಿದ್ಯಾರ್ಥಿಗಳು ಬಿ+, 4 ವಿದ್ಯಾರ್ಥಿಗಳು ಬಿ ಹಾಗು 2 ವಿದ್ಯಾರ್ಥಿಗಳು ಸಿ+ ಶ್ರೇಣಿ ಪಡೆದು ಉತ್ತೀರ್ಣರಾಗಿದ್ದಾರೆ. ಎಂದು ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಪರಿಮಳಾ ಎಂ. ವಿ. ತಿಳಿಸಿರುತ್ತಾರೆ.

ಉನ್ನತ ಶ್ರೇಣಿಯಲ್ಲಿ ಪಾಸಾದವರ ಫಲಿತಾಂಶ ವಿವರ: ಚಿನ್ಮಯಿ ರೈ –620–99.2ಶೇ., ಸುಧಾಮ ಎಸ್ –620 –99.2ಶೇ., ವರ್ಷ ಆರ್ –620 –99.2ಶೇ., ಅಮೃತಾ ಜೆ ಗೌಡ –618 –98.8 ಶೇ., ಶ್ರಾವ್ಯ ಬಿ ಜೆ –611 –97.7ಶೇ., ಅದಿತಿ ಕೆ –610 –97.6ಶೇ., ಮೌಲ್ಯ ಪಿ ವಿ –608 –97.2ಶೇ., ರುಕ್ಷಾಲಿ –606 –96.9ಶೇ., ಜೆನಿ –603 –96.4ಶೇ., ಅನ್ಮಿಯಾ ಕುಂಜುಮೋನ್ –600 –96ಶೇ., ಎಸ್ ಆರ್ ಚರುಷಾ 600 –96ಶೇ., ಸುಪ್ರಿಯಾ –595–95.2ಶೇ., ತನವ್ ಅರಿಗ–595–95.2 ಶೇ., ಸಮೀಕ್ಷಾ ಬಿ ಎ–593–94.88ಶೇ., ಸುವಿತ್ ಪಿ ರಾವ್ –593–94.88ಶೇ., ಚೇತನ –586–93.76ಶೇ., ಎ ಪಿ ಮಂಜುನಾಥ್ –578 –92.48ಶೇ., ಸ್ಮೃತಿ –577 –92.32ಶೇ., ಅಭಯ್ ಕೆ –576 –92.16ಶೇ., ಅಂಜನಾ ಗುಲಾಬಿ– 570 –91.2ಶೇ., ದಿಲ್ನಾ ಕೆ ಆರ್ –570 91.2ಶೇ., ಎಚ್ ಪ್ರತೀಕ್ಷಾ ಪ್ರಭು 570 –91.2ಶೇ., ವಿಧೀಶ್ ಕೆ –570 –91.2ಶೇ., ಮೊಹಮ್ಮದ್ ಶಫಿನ್ –568 90.88ಶೇ., ಸ್ಪಂದನ್ – 568 – 90.88ಶೇ ಅಂಕಗಳನ್ನು ಪಡೆದಿದ್ದಾರೆ.



ಸುಹಾಸ್ ಶೆಟ್ಟಿ ಹತ್ಯೆ: ವಾಹನಕ್ಕೆ ಕಲ್ಲೆಸೆತ

ಉಡುಪಿ: ಕಾರ್ಕಳ – ಪಡುಬಿದ್ರಿ ರಾಜ್ಯ ಹೆದ್ದಾರಿಯಲ್ಲಿ ನವೀನ್ ಎಂಬ ಹೆಸರಿನ ಖಾಸಗಿ ಬಸ್‌ಗೆ ಕಿಡಿಗೇಡಿಗಳು ಕಲ್ಲೆಸೆದ ಘಟನೆ ಮೇ 2ರ ಮಧ್ಯಾಹ್ನ 2 ಗಂಟೆ ಸುಮಾರಿಗೆ ನಡೆದಿದೆ. ಕಾರ್ಕಳ ಕಡೆಯಿಂದ ಬೆಳ್ಮಣ್ ಕಡೆಗೆ ಸಾಗುತ್ತಿದ್ದ ಬಸ್‌ಗೆ ನಿಟ್ಟೆ ಕಡೆಯಿಂದ ಕಾರ್ಕಳದತ್ತ ಬರುತ್ತಿದ್ದ ಬೈಕ್‌ನ ಸಹ ಸವಾರ ಬಸ್ಸಿನ ಗ್ಲಾಸ್‌ಗೆ ಕಲ್ಲು ಎಸೆದಿರುತ್ತಾನೆ. ಈ ವೇಳೆ ಬಸ್ ಚಾಲಕನ ಹತೋಟಿ ತಪ್ಪಿ ಅಪಘಾತಕ್ಕೀಡಾಗಿದ್ದು, ಸುಮಾರು 45 ಸಾವಿರ ರೂ. ನಷ್ಟ ಸಂಭವಿಸಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಈ ಬಗ್ಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅತ್ತೂರು ಚರ್ಚ್ ಬಳಿ ಮೀನು ಸಾಗಾಟದ ವಾಹನಕ್ಕೆ ಕಲ್ಲೆಸೆದ ಘಟನೆ ಮೇ 2ರಂದು ಮಧ್ಯಾಹ್ನ 12:25 ವೇಳೆಗೆ ಸಂಭವಿಸಿದೆ. ತಮಿಳುನಾಡಿನ ಎಂ. ಮಣಿಕಂಡನ್ (34) ಮಲ್ಪೆ ಬಂದರಿನಲ್ಲಿ ಮೀನು ಲೋಡ್ ಮಾಡಿಕೊಂಡು ತಮಿಳುನಾಡಿಗೆ ಹೊರಟಿರುವಾಗ ಕಾರ್ಕಳ ತಾಲೂಕಿನ ಸಾಣೂರು ಗ್ರಾಮದ ಕೇಮಾರು ಪರ್ಪಲೆಗೆ ತಲುಪುತ್ತಿದ್ದಂತೆ ಎರಡು ಬೈಕ್‌ನಲ್ಲಿ ಬಂದ ಮೂವರು ಮುಸುಕುಧಾರಿಗಳು ಕಲ್ಲು ಹೊಡೆದಿರುತ್ತಾರೆ. ಪರಿಣಾಮ ಲಾರಿ ಚಾಲಕನ ಹತೋಟಿ ತಪ್ಪಿ ಮೀನಿನ ವಾಹನ ಅಪಘಾತಕ್ಕೀಡಾಗಿದೆ. ಮೀನಿನ ವಾಹನದ ಎದುರುಗಡೆ ಗ್ಲಾಸ್ ಒಡೆದು ಹೋಗಿದ್ದು ಸುಮಾರು 15 ಸಾವಿರ ರೂ. ನಷ್ಟವುಂಟಾಗಿದೆ. ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
03-05-2025
ಶನಿವಾರ

ಚಿತ್ತವಿಹಾರ

ಇರುವ ಭಾಗ್ಯವೇ ಸಿರಿ!

● ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)

ಮನಃಶಾಸ್ತ್ರಜ್ಞ ಡಾ.ಅಬ್ರಹಾಂ ಮಾಸ್ಲೊರವರ ಪ್ರಕಾರ ಮಾನವನು ಒಂದು ಸದಾ ಬೇಡುವ ಪ್ರಾಣಿ. ಮನುಷ್ಯನ ಆಸೆಗಳು ಈಡೇರಿದಂತೆ, ಮತ್ತೊಂದು ಮಗದೊಂದು ಆಸೆಗಳು ಮನದಲ್ಲಿ ಹುಟ್ಟಿಕೊಳ್ಳುತ್ತವೆ. ಆಸೆಗಳಿಗೆ ಮಿತಿಯೇ ಇಲ್ಲ ಕೊನೆಯೂ ಇಲ್ಲ ಎಂದು ಅವರು ಹೇಳಿದ್ದಾರೆ. ಪ್ರತಿಯೊಬ್ಬರೂ ಅತಿ ಆಸೆ ಪಡುತ್ತಲೇ ಮಿತಿ ಆಸೆಯ ಬಗ್ಗೆ ಮಾತನಾಡುತ್ತಾರೆ. ಆದರೆ ಎಲ್ಲರಿಗೂ ಮಿತಿಯನ್ನು ಮೀರಿದ ಆಸೆಗಳತ್ತಲೇ ಹೆಚ್ಚಿನ ಗಮನವಿರುತ್ತದೆ. ಅವುಗಳನ್ನು ಪಡೆಯಲು ಅಸಾಧ್ಯವಾದಾಗ ಮಾತ್ರ ತನ್ನ ಆಸೆಗಳನ್ನೆಲ್ಲ ಮನಸ್ಸಿನಲ್ಲಿಯೇ ಇಟ್ಟುಕೊಂಡು ಅವುಗಳಿಗೆ ಮಿತಿಯನ್ನು ಹೇರಿಕೊಂಡಂತೆ ನಡೆದುಕೊಳ್ಳುತ್ತಾನೆ.

ಆಸೆ ರಹಿತವಾದ ಜೀವನವನ್ನು ಇಂದಿನ ಕಲಿಯುಗದಲ್ಲಿ ನಡೆಸಲು ಸಾಧ್ಯವೇ? ಎಂಬ ಯಕ್ಷ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಖಂಡಿತ ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಆಸೆಗಳು ಇರಲೇಬೇಕು. ಆದರೆ ಅತಿಯಾಸೆ ಇರಬಾರದು. ಸಿಗಲಾರದ ವಸ್ತುವಿಗಾಗಿ ಅಥವಾ ಈಡೇರದ ಅಸೆಗಾಗಿ ಅದೇಷ್ಟೋ ಜನರು ದುಃಖಿತರಾಗಿ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾರೆ. ವಿಲಾಸಿ ಜೀವನದ ದಾಸನಾಗಿ, ಕ್ಷಣಿಕ ಸುಖಿ ಜೀವನದ ತೃಪ್ತಿಗಾಗಿ ಮಾಡುವ ದುಷ್ಕೃತ್ಯಗಳಿಂದ ಜೀವನದಲ್ಲಿ ಅನೇಕ ಸಂಕಷ್ಟ, ನೋವು, ಟೀಕೆ, ಹೀಯಾಳಿಕೆ ಎದುರಿಸಿ, ಜೀವನವನ್ನು ದುಃಖದಿಂದ ಕೂಡಿದಂತೆ ಮಾಡಿಕೊಳ್ಳುತ್ತಾರೆ.

ನರಿಯ ಉದಾಹರಣೆ ಇಲ್ಲಿ ಉಪಯುಕ್ತ. ತಾನು ತಿನ್ನಲು ಬಯಸಿದ ದ್ರಾಕ್ಷಿಯ ಹಣ್ಣು ಹರ ಸಾಹಸ ಮಾಡಿದರೂ ದೊರೆಯುವುದಿಲ್ಲವೆಂದು ನರಿಗೆ ತಿಳಿದಾಗ ಆ ಹಣ್ಣು ಹುಳಿಯಾಗಿದೆ ಎಂದು ಸಮಾಧಾನಪಟ್ಟುಕೊಂಡು, ಅದನ್ನು ಮರೆಯಿತಂತೆ. ಇದೇ ರೀತಿ, ನಮ್ಮ ಜೀವನದಲ್ಲಿ ಈಗ ಏನು ಇದೆಯೋ ಅದು ನನ್ನ ಪಾಲಿನ ಮಹಾಪ್ರಸಾದವೆಂದು ಸ್ವೀಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು; ಸಿಗದೇ ಇರುವುದನ್ನು ಕೆಟ್ಟದ್ದು ಎಂದೋ, ಚೆನ್ನಾಗಿಲ್ಲ ಎಂದೋ ಅಥವಾ ನಮ್ಮ ವಿಧಿಯಲ್ಲಿ ಇಲ್ಲವೆಂದೋ ತಿಳಿಯಬೇಕು. ಆಗ ಮಾತ್ರ ಈ ಬದುಕು ಸುಖೀ ಜೀವನವಾಗುತ್ತದೆ ಮತ್ತು ನೆಮ್ಮದಿ ಸಿಗುತ್ತದೆ.

ನನಗೆ ಅದಿಲ್ಲ, ಇದಿಲ್ಲ, ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಸಮಸ್ಯೆಗಳಿವೆ, ಆಸ್ತಿಯಿಲ್ಲ, ಹಣವಿಲ್ಲ ಎಂದುಕೊಂಡು, ಮತ್ತಷ್ಟು ಬೇಕೆನ್ನುತ್ತಲೇ ಅದಕ್ಕೆ ಜೀವನಪೂರ್ತಿ ಹೋರಾಡುತ್ತಾರೆ. ದೊರಕಿರುವುದನ್ನು ಮರೆತು, ಸಿಗದಿರುವವದರ ಬಗ್ಗೆ ಸದಾ ಚಿಂತಿತರಾಗಿರುತ್ತಾರೆ. ಇದರಿಂದ ಮನ, ಮನೆ ಮತ್ತು ಕುಟುಂಬದಲ್ಲಿ ಶಾಂತಿ-ನೆಮ್ಮದಿ ದೂರವಾಗುತ್ತದೆ. ನಮ್ಮಗಿಂತಲೂ ಕಷ್ಟ ಅಥವಾ ತೊಂದರೆಯಲ್ಲಿದ್ದವರನ್ನು ನೋಡಿ ಬದುಕಬೇಕು ಅಂದಾಗ ಮಾತ್ರ ನಾವು ಸುಖೀ ಸಂಸಾರವನ್ನು ನಡೆಸಬಹುದು. ಇಲ್ಲದಿದ್ದರೆ ಈಡೇರದ ಆಸೆಗಳೇ ಮುಂದೆ ದುಃಖ, ಅಸಂತೋಷಕ್ಕೆ ಕಾರಣವಾಗುತ್ತದೆ ಎಂಬ ಅರಿವು ನಮ್ಮಲ್ಲಿರಬೇಕು. ಡಿ.ವಿ.ಜಿ. ಅವರ 'ಇರುವ ಭಾಗ್ಯವ ನೆನೆದು ಬಾರನೆಂಬುದನ್ನು ಬಿಡು, ಹರುಷಕ್ಕಿದೇ ದಾರಿ' ಎಂಬ ಅನುಭವದ ಸಾರದಂತೆ, ಇಲ್ಲದಿರುವುದನ್ನು ನೆನೆದು ದುಃಖಿಸುವ ಬದಲು, ದೊರಕಿರುವ ಭಾಗವನ್ನು ನೆನೆದು ಸಂತಸದಿಂದ ಬದುಕನ್ನು ನಡೆಸಬೇಕು.

ಪ್ಲಾಸ್ಟಿಕ್ ಬಳಕೆಯ ಒಂದು ಕೆಟ್ಟ ಅನುಭವ

● ಸಂತೋಷ್ ರಾವ್ ಪೆರ್ಮುಡ

ನನ್ನ ಆತ್ಮೀಯ ಸ್ನೇಹಿತರೊಬ್ಬರಿಗೆ ಸುಮಾರು 38ರ ಹರೆಯವಾಗಿತ್ತು. ನಿರಂತರವಾಗಿ ಅನಾರೋಗ್ಯ ಸಮಸ್ಯೆ ಕಾಡುತ್ತಲಿದ್ದಾಗ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸಮಗ್ರ ಪರೀಕ್ಷೆಯನ್ನು ನಡೆಸ ಲಾಗಿ ಅವರಿಗೆ ಕ್ಯಾನ್ಸರ್ ರೋಗ ಇರುವುದು ಪತ್ತೆಯಾಯಿತು. ಅವರು ನನ್ನ ಜತೆಗೇ ಬೆಳೆದವರು;ನನಗೆ ಅವರ ಜೀವನ ಮತ್ತು ಜೀವನ ಶೈಲಿಯ ಬಗ್ಗೆ ಸಮಗ ತಿಳುವಳಿಕೆ ಇತ್ತು. ಅವರು ಎಂದಿಗೂ ಬೀಡಿ-ಸಿಗರೇಟು, ಗುಟ್ಕಾ, ಪಾನ್, ತಂಬಾಕು ಮತ್ತು ಮದ್ಯಪಾನವನ್ನು ಸೇವಿಸಿದವರಲ್ಲ. ವೃತ್ತಿ ಬದುಕಿನಲ್ಲೂ ಸಮಯಕ್ಕೆ ಸರಿಯಾಗಿ ಕೆಲಸದ ಸ್ಥಳಕ್ಕೆ ಹೋಗುತ್ತಿದ್ದು, ಯಾವುದೇ ಕೆಟ್ಟ

ಬಿಸಿ ಪಾನೀಯಗಳನ್ನು, ಅಡುಗೆಯನ್ನು ಪ್ಲಾಸ್ಟಿಕ್ ಲೋಟ ಅಥವಾ ಪಾತ್ರೆಗಳಲ್ಲಿ ಸಂಗ್ರಹಿಸಿದರೆ, ಅದರಿಂದ ಆರೋಗ್ಯಕ್ಕೆ ಅಪಾಯ ಎಂದು ವಿಜ್ಞಾನ ಎಚ್ಚರಿಸಿದೆ. ಅದನ್ನು ಬಳಸಿದಾಗ ನಡೆದ ಒಂದು ಕೆಟ್ಟ ಅನುಭವ ಇಲ್ಲಿದೆ.

ಚಟಗಳಿರಲಿಲ್ಲ.

ಮಧ್ಯಾಹ್ನದ ಊಟದ ನಂತರ ಹೊಟ್ಟೆಯೊಳಗೆ ಅಸಹನೀಯ ನೋವು ಪ್ರಾರಂಭವಾದಾಗ ಗ್ಯಾಸ್ಟ್ರಿಕ್ ಕಾರಣಕ್ಕೆ ಹೊಟ್ಟೆ ನೋವು ಇರಬಹುದು ಎಂದು ಸುಮ್ಮನಿದ್ದರು. 2-3 ದಿನಗಳು ಕಳೆದರೂ ನೋವು ಕಡಿಮೆ ಆಗದೇ ಇದ್ದಾಗ ಕೊನೆಗೆ ನನ್ನ ಸಲಹೆಯಂತೆ ಪಟ್ಟಣದ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆಯನ್ನು ಪ್ರಾರಂಭಿಸಿದರು. ಅದರಿಂದ ಯಾವುದೇ ಪ್ರಯೋಜನ ಆಗಲಿಲ್ಲ. ಅವರ ತಂದೆಯು ನಗರದ ಖ್ಯಾತ ಹಿರಿಯ ವೈದ್ಯರನ್ನು ಭೇಟಿ ಮಾಡಿಸಿ ಅವರನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರೀಕ್ಷೆಗೆ ಒಳಪಡಿಸಿ, ಈ ಹಿಂದಿನ ಎಲ್ಲಾ ವರದಿಗಳನ್ನು ಅವರಿಗೆ ತೋರಿಸಿದರು. ವರದಿಗಳ ಪರೀಕ್ಷೆಯ ನಂತರ ಅವರಿಗೆ ಹೊಟ್ಟೆಯಲ್ಲಿ ಕ್ಯಾನ್ಸರ್ ಇರುವ ವಿಚಾರ ತಿಳಿಯಿತು.

ದೇಹ ದಾನ ಮಾಡಿದರು

ಕ್ಯಾನ್ಸರ್ ಚಿಕಿತ್ಸೆಗಾಗಿ ಮನೆಯನ್ನೇ ಅಡಮಾನವಿಟ್ಟು ಚಿಕಿತ್ಸೆಯನ್ನು ಪಡೆಯಲು ಪ್ರಾರಂಭಿಸಿದರು. ಕುಟುಂಬದ ಮತ್ತು ಹೆಂಡತಿ ಮಕ್ಕಳ ಆಭರಣಗಳನ್ನು ಮಾರಾಟ ಮಾಡಿದರು. ಅತ್ಯಾಧುನಿಕ ಕಿಮೋತೆರಫಿ ಕೊಡಿಸಿದರೂ ದಿನದಿಂದ ದಿನಕ್ಕೆ ಅವರು ಕೃಶರಾಗುತ್ತಲೇ ಹೋದರು; ಕೊನೆಗೆ ಅಸ್ಪತ್ರೆಯಲ್ಲಿ ನಿದ್ರಿಸಿದ ಸ್ಥಿತಿಯಲ್ಲೇ ಇಹಲೋಕವನ್ನು ತ್ಯಜಿಸಿದರು. ಅವರ ದೇಹವನ್ನು ಮನುಷ್ಯನ ದೇಹದ ಕುರಿತಾಗಿ ಸಂಶೋಧನೆ ನಡೆಸುವ ಸಂಶೋಧನಾ ಆಸ್ಪತ್ರೆಗೆ ದಾನವಾಗಿ ನೀಡುವಂತೆ ಕುಟುಂಬದ ಹಿರಿಯರಿಗೆ ಆ ತಜ್ಞ ವೈದ್ಯರು ಸಲಹೆಯನ್ನು ನೀಡಿದರು. ಅದರಂತೆ ಅವರ ದೇಹವನ್ನು ಸಂಶೋಧನಾ ಆಸ್ಪತ್ರೆಗೆ ಕುಟುಂಬದವರು ದಾನ ಮಾಡಿದರು.

ಕಾರಣ ಹುಡುಕಿದ ತಜ್ಞರು

ಅವರ ದೇಹದ ಕುರಿತಾದ ಸಂಶೋಧನೆಯನ್ನು ಸಂಶೋಧನಾರ್ಥಿಗಳು, ಹಿರಿಯ ವೈದ್ಯರು ಮತ್ತು ಸಂಶೋಧಕರು ಮಾಡಿದರು; ಮೃತಪಟ್ಟ ವ್ಯಕ್ತಿಯು ಪ್ಲಾಸ್ಟಿಕ್ ಬಾಟಲಿಯಲ್ಲಿ ತುಂಬಿಸಿಟ್ಟ ಮತ್ತು ಸಂಗ್ರಹಿಸಿದ ನೀರನ್ನು ನಿರಂತರವಾಗಿ

ದೀರ್ಘಕಾಲ ಕುಡಿದ ಪರಿಣಾಮ ಅದರಿಂದ ಬಿಡುಗಡೆಯಾದ ಹಾನಿಕಾರಕವಾದ ರಾಸಾಯನಿಕಗಳಿಂದ ಅವರಿಗೆ ಕ್ಯಾನ್ಸರ್ ಕಾಯಿಲೆ ಬಂದಿದೆ ಎನ್ನುವ ನಿರ್ಧಾರಕ್ಕೆ ತಜ್ಞರು ಬಂದರು. ಇದಾದ ನಂತರ ಸಂಶೋಧನಾ ವೈದ್ಯರ ತಂಡವು ಮೃತಪಟ್ಟ ರೋಗಿಯ ಕುಟುಂಬದ ಸದಸ್ಯರು ಮತ್ತು ಅವರ ನಿಕಟವರ್ತಿಗಳನ್ನು ಸಂಪರ್ಕಿಸಿ ಅವರ ಆಹಾರ ಪದ್ಧತಿ ಮತ್ತು ಜೀವನ ಶೈಲಿಯ ಬಗ್ಗೆ ವಿಚಾರಿಸಿ, ವಿಚಾರಗಳನ್ನು ದಾಖಲಿಸಿಕೊಂಡರು. ಆ ವ್ಯಕ್ತಿಯು ದಿನದ ಕೆಲಸದ ಮತ್ತು ಓಡಾಟದ ಅವಧಿಯಲ್ಲಿ ಸರಾಸರಿ ಏಳರಿಂದ ಎಂಟು ಬಾರಿ ಪ್ಲಾಸ್ಟಿಕ್‌ನಿಂದ ತಯಾರಿಸಿದ ಬಳಸಿ ಬಿಸಾಡುವ ಕಪ್‌ಗಳಲ್ಲಿ ಚಹಾ ಕುಡಿಯುತ್ತಿರುವ ವಿಚಾರವನ್ನೂ ವಿಶೇಷವಾಗಿ ಪರಿಗಣಿಸಿದರು.

ಊಟ ತಿಂಡಿಯನ್ನು ಹೋಟೆಲ್‌ಗಳಿಂದ ಬಹುತೇಕ ಪಾರ್ಸಲ್ ರೂಪದಲ್ಲಿ ತಂದೇ ಬಳಸುತ್ತಿದ್ದರು. ಅವರು ಹೋಟೆಲ್‌ಗಳಿಂದ ತರಿಸುತ್ತಿದ್ದ ಚಹಾ ಹೆಚ್ಚಾಗಿ ಪ್ಲಾಸ್ಟಿಕ್ ಲಕೋಟೆಗಳಲ್ಲಿ ಬರುತ್ತಿತ್ತು ಮತ್ತು ಅದನ್ನು ಬಳಸಿ ಬಿಸಾಡುವ ಪ್ಲಾಸ್ಟಿಕ್ ಕಪ್‌ಗಳಲ್ಲಿ ಕುಡಿಯುತ್ತಿದ್ದರು ಎನ್ನುವುದು ವೈದ್ಯರ ತಂಡಕ್ಕೆ ತಿಳಿಯಿತು.

ಇಂದಿನ ಜನರಿಗೆ ಇದು ಸಾಮಾನ್ಯ!

ಇಂದು ಬಹುತೇಕ ಜನರು ಪ್ಲಾಸ್ಟಿಕ್ ಕಪ್ ಮತ್ತು ಚೀಲಗಳಲ್ಲಿ ಬಿಸಿಯಾದ ಚಹಾ-ಕಾಫಿ, ತಿಡಿ-ತಿನಸುಗಳು, ತರಕಾರಿಗಳು, ಸಿಹಿತಿಂಡಿಗಳು, ಹಾಲು ಮತ್ತು ಹಣ್ಣು ಇತ್ಯಾದಿಗಳನ್ನು ಖರೀದಿಸಿ ತರುತ್ತಾರೆ ಮತ್ತು ಅದನ್ನೇ ನಿತ್ಯವೂ ತಿನ್ನುತ್ತಾರೆ. ಈ ರೀತಿ ಜನಸಾಮಾನ್ಯರು ಆಧುನಿಕ ಜೀವನ ಶೈಲಿಯ ನೆಪದಲ್ಲಿ ನಿರಂತರವಾಗಿ ಪ್ಲಾಸ್ಟಿಕ್‌ನಲ್ಲಿ ಆಹಾರ ಪದಾರ್ಥಗಳನ್ನು ತಂದು ತಿನ್ನುವಾಗ ನಿಧಾನವಾಗಿ ಅವರ ದೇಹದೊಳಕ್ಕೆ ಕ್ಯಾನ್ಸರ್ ರೋಗ ತರಿಸುವ ರಾಸಾಯನಿಕಗಳು (ಕಾರ್ಸಿನೋಜೆನಿಕ್) ಸೇರಲು ಮುಕ್ತ ಅವಕಾಶ ಮಾಡಿಕೊಡುತ್ತಾರೆ ಎನ್ನುವುದನ್ನು ವೈದ್ಯರು ಪತ್ತೆಹಚ್ಚಿದರು.

ಸಹೋದ್ಯೋಗಿಗಳ ರಕ್ಷಣೆ

ನಂತರದಲ್ಲಿ ಅದೇ ಸಂಶೋಧನಾ ವೈದ್ಯರ ತಂಡವು ಅವರ ಸಹೋದ್ಯೋಗಿಗಳನ್ನು ಪ್ರತ್ಯೇಕವಾಗಿ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿದಾಗ ಅವರೂ ಸಹ ಕ್ಯಾನ್ಸರ್ ರೋಗದ ಪ್ರಾರಂಭಿಕ ಹಂತದಿಂದ ಬಳಲುತ್ತಿದ್ದಾರೆ ಎನ್ನುವುದನ್ನು ಕಂಡುಹಿಡಿದರು. ನಂತರ ಅವರಿಗೂ ವೈದ್ಯರು ಅಗತ್ಯ ಚಿಕಿತ್ಸೆಯನ್ನು ಪಡೆಯುವಂತೆ ಸಲಹೆ ನೀಡಿ, ಅವರೆಲ್ಲ ಗುಣಮುಖರಾಗಿದ್ದಾರೆ.

ಪ್ಲಾಸ್ಟಿಕ್ ಲಕೋಟೆಗಳು ಮತ್ತು ಪ್ಲಾಸ್ಟಿಕ್ ಪರಿಕರಗಳ ಬಳಕೆ ಪರಿಸರಕ್ಕೆ ಹಾನಿಕರ ಜತೆಗೆ ಮನುಷ್ಯನ ಜೀವಕ್ಕೆ ಹಾನಿಕರವೂ ಹೌದು. ಪ್ಲಾಸ್ಟಿಕ್ ಲಕೋಟೆಗಳು, ಪ್ಲಾಸ್ಟಿಕ್ ಪಾತ್ರೆಗಳಲ್ಲಿ ಬಿಸಿಯಾದ ಆಹಾರವನ್ನು ಎಂದಿಗೂ ತಪ್ಪಿಯೂ ಸೇವಿಸಲೇ ಬೇಡಿ. ಈ ರೀತಿ ಮಾಡಿದೆವೆಂದರೆ ನಮ್ಮನ್ನು ಮತ್ತು ನಮ್ಮ ಆಪ್ತರನ್ನು ಕುಟುಂಬಸ್ಥರನ್ನು ಕ್ಯಾನ್ಸರ್ ರೋಗ ಬರುವ ಸಾಧ್ಯತೆಯತ್ತ ತಳ್ಳುತ್ತಿದ್ದೇವೆ ಎಂದೇ ಅರ್ಥ. ಪ್ಲಾಸ್ಟಿಕ್ ಲಕೋಟೆಯಲ್ಲಿ ತುಂಬಿಸಿ ತಂದ ಬಿಸಿ ಚಹಾ-ಕಾಫಿ ಇತರ ಪಾನೀಯಗಳನ್ನಂತೂ ಕುಡಿಯಲೇಬೇಡಿ. ಬಿಸಿ ಪಾನೀಯಗಳನ್ನು ಕುಡಿಯುವಾಗ ಅಪ್ಪಿತಪ್ಪಿಯೂ ಪ್ಲಾಸ್ಟಿಕ್ ಅಥವಾ ಪೇಪರ್ ಲೋಟಗಳನ್ನು ಬಳಸಲೇಬೇಡಿ. ಪಿಂಗಾಣಿ, ಗಾಜಿನ ಅಥವಾ ಸ್ಟೀಲ್ ಲೋಟಗಳನ್ನೇ ಬಳಸುವ ಪ್ರತಿಜ್ಞೆಯನ್ನು ಮಾಡಿರಿ ಮತ್ತು ಅದನ್ನು ಅನುಸರಿಸಿ ಮತ್ತು ಇತರರಿಗೂ ಈ ಬಗ್ಗೆ ತಿಳಿಹೇಳಿರಿ.

ಸದಾ ಬೇಯುವ ನಮ್ಮ ಬದುಕು!

ತೋಯಿಸುತ ಬೇಯಿಸುತ ಹೆಚ್ಚುತ್ತ ಕೊಚ್ಚುತ್ತ
ಕಾಯಿಸುತ ಕರಿಯುತ್ತ ಹುರಿಯುತ್ತ ಸುಡುತ
ಈಯವನಿಯೊಲೆಯೊಳೆಮ್ಮಯ ಬಾಳನಟ್ಟು ವಿಧಿ
ಬಾಯ ಚಪ್ಪರಿಸುವನು - ಮಂಕುತಿಮ್ಮ ॥

ಕಾಣದ ಕಾಲ ಹಾಗೂ ಭವಿಷ್ಯ ಎಂಬ ವಿಧಿಯು ನಮ್ಮ ಬದುಕು ಎಂಬುದನ್ನು ತರಕಾರಿಯ ರೀತಿಯಲ್ಲಿ ಈ ಭೂಮಿಯನ್ನೇ ಒಲೆಯನ್ನಾಗಿಸಿಕೊಂಡು, ನೆನೆಸುತ್ತಾ, ಹೆಚ್ಚುತ್ತಾ, ಕೊಚ್ಚುತ್ತಾ, ಬೇಯಿಸುತಾ, ಕರಿಯುತ್ತಾ, ಹುರಿಯುತ್ತಾ, ಸುಡುತ್ತಾ, ಕಾಯಿಸುತ್ತಾ, ಅವಣಾನತಿಯಂತೆ ಆಡಿಸುತ್ತಾ ತನಗೆ ರುಚಿಯಾಗುವಂತೆ ಅಡುಗೆಯನ್ನು ತಯಾರಿಸಿಕೊಂಡು, ಆತನು ತನ್ನ ವಿನೋದಕ್ಕಾಗಿ ಬಾಯಿ ಚಪ್ಪರಿಸುತಿರುವವನು ಎಂದು ಈ ಮುಕ್ತಕದಲ್ಲಿ ಹೇಳಿದ್ದಾರೆ.

ಮನುಷ್ಯನ ಬದುಕು ಹಾಗೂ ಭವಿಷ್ಯ ಎರಡೂ ಅನಿಶ್ಚಿತ. ಯಾವಾಗ ಏನೂ ಬೇಕಾದರೂ ಸಂಭವಿಸಬಹುದು. ಹಲವು ತಿರುವುಗಳನ್ನು, ಹಲವು ಮಜಲುಗಳನ್ನು ಬದುಕಿನ ಪಯಣದಲ್ಲಿ ಅನುಭವಿಸುತ್ತಲೇ ಇರುತ್ತಾನೆ. ಜೀವನದಲ್ಲಿ ಅಂದುಕೊಳ್ಳುವುದೇ ಒಂದು ಆಗುವುದೇ ಮತ್ತೊಂದು. ಾಡುವ ಕೆಲಸವೇ ಒಂದು ಬರುವ ಫಲಿತಾಂಶವೇ ಮತ್ತೊಂದು. ಎಷ್ಟೇ ಜಾಣತನವನ್ನುಪಯೋಗಿಸಿದರೂ ಸಮಯ ಹಾಗೂ ಸಂಧರ್ಭ ಎನ್ನುವ ವಿಧಿಯ ಮುಂದೆ ಮಂಡಿಯೂರಲೇಬೇಕು. ಕಾರಣ ಹಲವು ತಿರುವುಗಳಿಂದ ಕೂಡಿದ ಪಯಣವೇ ನಮ್ಮ ಬದುಕು. ನಮ್ಮ ಕೈಗೂ ಸಿಗದಂತೆ, ಕಣ್ಣಿಗೂ ಕಾಣದಂತೆ ವಿಧಿಯು ಯಾವುದೋ ಒಂದು ಗೂಢ ಕರ್ಮಶಾಲೆಯಲ್ಲಿ ಕುಳಿತು ಆತನ ವಿನೋದಕ್ಕಾಗಿಯೋ ನಮ್ಮನ್ನು ಆಡಿಸುತ್ತಾ ಇರುತ್ತಾನೆ. ಈ ಮುಕ್ತಕದಲ್ಲಿ ಮನುಜರನ್ನು ತರಕಾರಿಗೆ ಹೋಲಿಕೆ ಮಾಡಿದ್ದು, ಅದನ್ನು ನೀರಿನಲ್ಲಿ ನೆನೆಸಿ ತೋಯಿಸುತ್ತಾ, ಬೇಯಿಸುತ್ತಾ, ಒಣಗಿಸುತ್ತಾ, ಅದನ್ನು ಹೆಚ್ಚುತ್ತಾ, ಕೊಚ್ಚುತ್ತಾ, ಉಪ್ಪು, ಖಾರ ಹಾಕಿ ರುಚಿ ಕರಗೊಳಿಸುತ್ತಾ ಉಷ್ಣತೆಯಲ್ಲಿ ಬೇಯಿಸುತ್ತಾ, ಕಾಯಿಸುತ್ತಾ, ಕರಿಯುತ್ತಾ, ಹುರಿಯುತ್ತಾ, ಸುಡುತ್ತಾ ಬೇರೆ ಬೇರೆ ವಿಧಾನಗಳಲ್ಲಿ, ಹಲವು ಪರೀಕ್ಷೆಗಳಿಂದಲೇ ಈ ಮಾನವ ಜೀವಿಯ ಜೀವನವನ್ನು ವಿಧಿಯು ಪರೀಕ್ಷೆಗಳಿಗೊಡ್ಡಿದ ನಂತರ ತಯಾರಾದ ಆಹಾರವನ್ನು ಆತ ಬಾಯಚಪ್ಪರಿಸುತ್ತಾ, ಆಸ್ವಾದಿಸುತ್ತಾ ನಮ್ಮ ಬದುಕನ್ನು ತಿಂದು ಮುಗಿಸುತ್ತಾನೆ. ನಮ್ಮ ಜೀವನವೂ ಇದೇ ರೀತಿಯ ಪರೀಕ್ಷೆಗಳ, ಕಠಿಣ ಪ್ರಯತ್ನಗಳ, ದುಃಖದ, ದಹನದ, ಅನುಭವದ ಪ್ರಕ್ರಿಯೆಗಳ ಮೂಲಕ ರೂಪುಗೊಳ್ಳುತ್ತದೆ. ಆದರೆ ಬಹಳಷ್ಟು ಮಂದಿ ಅವರು ಕಂಡ ಯಶಸ್ಸನ್ನು ಮಾತ್ರ ಮೆಚ್ಚುತ್ತಾರೆ. ಅವರು ನಡೆಸಿದ ತ್ಯಾಗ, ಶ್ರಮ ಮತ್ತು ಅನುಭವವನ್ನು ಅರಿಯದೆ ಹೋಗುತ್ತಾರೆ. ಆ ಪರಮ ಚೇತನವು ವಿಧಿಯ ವೇಷಧರಿಸಿ, ನಮ್ಮನ್ನು ಈ ಭೂಮಿಗೆ ನಮ್ಮನ್ನು ತಂದು ಶಿಶುವಾಗಿಸಿ, ನಂತರ ಬಾಲ್ಯ, ಯೌವ್ವನ, ವಯಸ್ಕ, ಪ್ರೌಢ ಮತ್ತು ವೃದ್ಧಾಪ್ಯದ ಮಜಲುಗಳಲ್ಲಿ ಅಡ್ಡಾಡಿಸಿ, ಹೊರಳಾಡಿಸಿ, ಪರದಾಡಿಸಿ, ತಿಣುಕಾಡಿಸಿ, ನಗಿಸಿ, ಅಳಿಸಿ, ರಾಜನಂತೆ, ಬಿಕಾರಿಯಂತೆ, ಸುಂದರವಾಗಿಸಿ, ಕುರೂಪಿಯನ್ನಾಗಿಸಿ ಇನ್ನೂ ಏನೇನೋ ಅನೇಕ ಅವಸ್ಥೆಗಳಲ್ಲಿ ನಮ್ಮ ಜೀವನದ ಬಂಡಿಯನ್ನು ಆತ ಎಳೆದು ಆತನ ಸಂತೋಷಕ್ಕಾಗಿ, ಆತನ ತೃಪ್ತಗಾಗಿ ನಮ್ಮನ್ನು ಆಡಿಸುತ್ತಿದ್ದಾನೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಹನಿ ಮಳೆ



ಇರಬೇಕು

ಅವಳ ಮೇಲೆಯೇ
ಇರಬೇಕು
ಪ್ರೀತಿ ವಾತ್ಸಲ್ಯ
ಪ್ರತಿ ಕ್ಷಣ
ಇದು ಒಳ್ಳೆಯ
ಪತಿಯ ಲಕ್ಷಣ

● ಮಹಾಂತೇಶ ಮಾಗನೂರ

ಲಾಭವಿಲ್ಲದೆ ಯಾರು ಅನಗತ್ಯವಾಗಿ ಸಹಾಯ ಮಾಡುವುದಿಲ್ಲ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಒಂದು ಬೆಟ್ಟದ ತಪ್ಪಲಿನಲ್ಲಿ ಮಹಾ ಪರಾಕ್ರಮಿಯಾದ ಸಿಂಹವೊಂದು ವಾಸಿಸುತ್ತಿತ್ತು.ಗುಹೆಯಲ್ಲಿ ಅದು ಗಾಢವಾಗಿ ನಿದ್ದಿಸುತ್ತಿದ್ದಾಗ ಅದರ ಕೇಸರಗಳನ್ನು ಇಲಿಯೊಂದು ಬಂದು ತುಂಡರಿಸಿ ಹಾಕುತ್ತಿತ್ತು. ಸಿಂಹ ನಿದ್ರೆಯಿಂದ ಎಚ್ಚೆತ್ತು ,ತುಂಡಾದ ತನ್ನ ಕೇಸರಗಳನ್ನುನೋಡಿದಾಗ, ಅದಕ್ಕೆ ವಿಪರೀತವಾಗಿ ಸಿಟ್ಟು ಬರುತ್ತಿತ್ತು . ಇದೆಲ್ಲಾ ಇಲಿಯದೇ ಕೆಲಸವೆಂದು ಅದಕ್ಕೆ ಗೊತ್ತಾಗಿ, ಇಲಿ ಇರುವ ಬಿಲದ ಬಳಿ ಹೋಗಿ ನೋಡಿದಾಗ ಎಲ್ಲೂ ಇಲಿಯ ಸುಳಿವೇ ಸಿಗುತ್ತಿರಲಿಲ್ಲ. ಇದೊಂದು ಮಹಾ ಕಿಲಾಡಿ ಇಲಿಯೆಂದು ಸಿಂಹಕ್ಕೆ ಗೊತ್ತಾಯಿತು. ಇದನ್ನು ಹೇಗಾದರೂ ಹಿಡಿಯಲೇ ಬೇಕೆಂದು ಬಹಳವಾಗಿ ಯೋಚಿಸಿತು.

ಆಗ ಅದಕ್ಕೆ ಒಂದು ಉಪಾಯ ಹೊಳೆಯಿತು. ಈ ಇಲಿಯನ್ನು ಹಿಡಿಯಲು ಬೆಕ್ಕೇ ಸರಿ ಎಂದುಕೊಂಡು, ಬೆಟ್ಟದ ಪಕ್ಕದಲ್ಲಿರುವ ಒಂದು ಹಳ್ಳಿಗೆ ಹೋಗಿ, ಅಲ್ಲಿ ಒಂದು ಬೆಕ್ಕನ್ನು ಭೇಟಿ ಮಾಡಿ, ಅದಕ್ಕೆ ಮಾಂಸದ ಆಸೆ ಹುಟ್ಟಿಸಿ, ಅದನ್ನು ತನ್ನ ಗವಿಯ ಬಳಿಗೆ ಕರೆದು ತಂದಿತು. ಅದಕ್ಕೆ ತನ್ನ ಗುಹೆಯ ಬಳಿಯಲ್ಲಿ ಇರಲು ಅವಕಾಶ ಮಾಡಿಕೊಟ್ಟು, ಅದಕ್ಕೆ ತಿನ್ನಲು ಬೇಕಾದಷ್ಟು ಆಹಾರವನ್ನು ಒದಗಿಸಿಕೊಟ್ಟಿತು.

ಬೆಕ್ಕು ಬಂದ ನಂತರ ,ಇಲಿ ಸಿಂಹದ ಗುಹೆಯ ಕಡೆ ತಲೆ ಹಾಕಲೇ ಇಲ್ಲ. ಸಿಂಹ ಆರಾಮಾಗಿ ನಿದ್ರೆ ಮಾಡುತ್ತಿತ್ತು. ಅದರ ಕೇಸರಗಳೆಲ್ಲಾ ಪುನಃ ಪುಷ್ಕಳವಾಗಿ ಬೆಳೆಯಿತು. ಈಗ ಸಿಂಹ ಬಹಳ ನಿಶ್ಚಿಂತೆಯಿಂದ ನಿದ್ರಿಸುತ್ತಿತ್ತು. ಅಕಸ್ಮಾತಾಗಿ ಎಲ್ಲಾದರೂ ಇಲಿಯ ಕಿಚಿಕಿಚಿ ಶಬ್ದ ಕೇಳಿದ ತಕ್ಷಣ, ಬೆಕ್ಕಿಗೆ, ಅದನ್ನು ಹಿಡಿದು ಸಾಯಿಸು, ಎಂದು ಹೇಳಿ, ಅದಕ್ಕೆ ಇನ್ನಷ್ಟು ಒಳ್ಳೆಯ ಆಹಾರವನ್ನು ಕೊಟ್ಟು ಉಪಚರಿಸುತ್ತಿತ್ತು. ಹಾಗಾಗಿ ಬೆಕ್ಕು ದಷ್ಟಪುಷ್ಟವಾಗಿ ಬೆಳೆಯತೊಡಗಿತು.

ಬೆಕ್ಕಿನ ಹೆದರಿಕೆಯಿಂದ ಇಲಿ ಬಿಲಬಿಟ್ಟು ಹೊರಗೆ ಬರುವುದನ್ನೇ ಕಡಿಮೆ ಮಾಡಿತು. ಬಿಲದಲ್ಲೇ ಕುಳಿತು,ಹಸಿವೆಯಿಂದ ಬಹಳವಾಗಿ ಒದ್ದಾಡ ತೊಡಗಿತು. ಹಸಿವಿನಿಂದ ಬಳಲಿ,ಉಸಿರು ನಿಂತು ಹೋಗುವಂತೆ ಅದಕ್ಕೆ ಭಾಸವಾಗತೊಡಗಿತು. ಹೊಟ್ಟೆಯ ಹಸಿವು ತಡೆಯಲಾರದೆ, ಹೇಗಾದರೂ ಆಗಲಿ ಎಂದುಕೊಂಡು ಧೈರ್ಯದಿಂದ ಹೊರಗೆ ಬಂದಾಗ, ಬೆಕ್ಕು ಗಬಕ್ಕನೆ ಅದನ್ನು ಹಿಡಿದು ತಿಂದು ಬಿಟ್ಟಿತು.

ಬೆಕ್ಕು ಇಲಿಯನ್ನು ಹಿಡಿದು ತಿಂದಿದ್ದನ್ನು ನೋಡಿ, ಸಿಂಹಕ್ಕೆ ಈಗ ಬಹಳ ನಿರಾಳವಾಯಿತು.ಹೇಗೂ ಇಲಿ ಸತ್ತು ಹೋಯಿತು, ಇನ್ನು ತಾನು ಚಿಂತೆ ಇಲ್ಲದೆ,ಆರಾಮಾಗಿ ನಿದ್ರಿಸಬಹುದು, ತನಗೆ ಇನ್ನು ಬೆಕ್ಕಿನ ಅವಶ್ಯಕತೆ ಇಲ್ಲ ಎಂದುಕೊಂಡು, ಬೆಕ್ಕಿಗೆ ಆಹಾರ ಕೊಡುವುದನ್ನು ನಿಲ್ಲಿಸಿ,ಬೆಕ್ಕಿನ ಕಡೆ ತಿರುಗಿಯೂ ನೋಡದೆ , ಅದನ್ನು ನಿರ್ಲಕ್ಷಿಸತೊಡಗಿತು .ಬೆಕ್ಕು ಹೊಟ್ಟೆ ಹಸಿವಿನಿಂದ ಬಹಳವಾಗಿ ಸೊರಗಿ ಹೋಯಿತು.

ಇನ್ನು ಸಿಂಹಕ್ಕೆ ತನ್ನ ಅವಶ್ಯಕತೆ ಇಲ್ಲ ಎನ್ನುವುದು ಅದಕ್ಕೆ ಅರಿವಾಯಿತು.ಬೇರೆ ದಾರಿ ಕಾಣದೆ, ಮುಖ ಸಪ್ಪಗೆ ಮಾಡಿಕೊಂಡು ಅಲ್ಲಿಂದ ಕಾಲುಕಿತ್ತಿತು.

ಈ ಕಥೆ ನಮ್ಮ ಅನೇಕರಿಗೆ ಜೀವನದಲ್ಲಿ ಅನುಭವಕ್ಕೆ ಕೂಡ ಬಂದಿರುತ್ತದೆ. ಕೆಲವೊಮ್ಮೆ ಕೆಲವರು ನಮಗೆ ಅನಗತ್ಯವಾಗಿ ಸಹಾಯ ಮಾಡುತ್ತಿರುತ್ತಾರೆ, ನಮ್ಮನ್ನು ಬಹಳ ಮೇಲ್ರಿಸಿ ಮುತುವರ್ಜಿಯಿಂದ ನೋಡಿಕೊಳ್ಳುತ್ತಿರುತ್ತಾರೆ.

ಆಗೆಲ್ಲಾ ನಾವು ಇದು ನಮ್ಮದೇ ವರ್ಚಸ್ಸು ಎಂದು ಮೈಮರೆಯುತ್ತೇವೆ. ಆದರೆ ಸ್ವಲ್ಪ ಜಾಣ್ಮೆಯಿಂದ ಗಮನಿಸಿ ನೋಡಿದಾಗ ಅದರ ಹಿಂದೆ ಕಾರಣಗಳು ಬೇರೆಯೇ ಇರುತ್ತದೆ. ಅವರ ಅನುಕೂಲಕ್ಕಾಗಿ ನಮ್ಮಿಂದ ಮತ್ತಾವುದೋ ಕೆಲಸವನ್ನು ಮಾಡಿಸಿಕೊಳ್ಳಲು ಅವರು ನಮಗೆ ಮನೆ ಹಾಕುತ್ತಿರುತ್ತಾರೆ. ಇದು ಬಹಳ ಕಾಲ ನಡೆಯುವುದಿಲ್ಲ. ಅವರ ಕೆಲಸ ಮುಗಿದ ಕೂಡಲೇ ಅವರ ಧೋರಣೆಗಳು ಕೂಡ ಬದಲಾಗುತ್ತದೆ. ಯಾರೂ ಹೆಚ್ಚು ಕಾಲ ನಾಟಕ ಮಾಡಲು ಸಾಧ್ಯವಿಲ್ಲ. ಜೀವನದಲ್ಲಿ ಶಾರ್ಟ್ ಕಟ್ ಗಳಿರುವುದಿಲ್ಲ. ಹಾಗಾಗಿ ಚಿಕ್ಕ ಸಮಯದಲ್ಲಿ ಯಾರಾದರೂ ಬಹಳ ಆತ್ಮೀಯರಾದರೆ ನಮಗೆ ಬಹಳ ಸಹಾಯ ಮಾಡುತ್ತಿದ್ದರೆ, ನಮಗೆ ಲಾಭ ಮಾಡಿ ಕೊಡುವ ಬಗ್ಗೆ ಮಾತನಾಡುತ್ತಿದ್ದರೆ, ಎಚ್ಚರದಿಂದಿರಿ. ಇಲ್ಲದಿದ್ದರೆ ನಮ್ಮನ್ನು ಟಿಶ್ಯೂ ಪೇಪರ್ ನಂತೆ ಬಳಸಿ ಬಿಸಾಕುತ್ತಾರೆ.

ದೇವರು ಪಗಡೆಯಾಡುತ್ತಾನೆ

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ವಿಶ್ವದ ಸೃಷ್ಟಿಯ ಕಾಲದಲ್ಲಿ ಅದು ಕೇವಲ ಶುದ್ಧ ಶಕ್ತಿಯಾಗಿತ್ತು. ನಂತರ ಜಡ ದ್ರವ್ಯ ರೂಪಗೊಂಡಿತು. ಬಹಳ ಮುಂಚಿನ ವಿಶ್ವದಲ್ಲಿ ಉಷ್ಣತೆ, ಸಾಂದ್ರತೆ, ವಸ್ತು - ವಸ್ತುವಲ್ಲದ್ದರ ನಡುವಿನ ಪರಿಮಾಣಕ್ಕೆ ಸಂಬಂಧಪಟ್ಟಂತೆ ಪ್ರಮಾಣಯುಕ್ತ ಏರುಪೇರುಗಳಾಗಿದ್ದವು ಎಂಬುದನ್ನು ವೈಜ್ಞಾನಿಕವಾಗಿ ಒಪ್ಪಲಾಗಿದೆ. ಆದರೆ ಈ ಏರುಪೇರುಗಳಿಗೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ. ಈ ಏರುಪೇರುಗಳು ಜಡ ದ್ರವ್ಯದ ಸೃಷ್ಟಿಗೆ ಕಾರಣವಾಗಿವೆ. ಮತ್ತು ನಾವು ಇಂದು ನೋಡುವ ವೈವಿಧ್ಯತೆ ಸೃಷ್ಟಿಗೆ ಭಗವಂತನು ಪಗಡೆಯಾಟ ಆಡುತ್ತಾನೆ ಎಂದು ವಿಜ್ಞಾನ ಒಪ್ಪುತ್ತದೆ.

ಈ ಸಂದರ್ಭದಲ್ಲಿ ಕೃಷ್ಣ ತನ್ನ ಕೆಳಮಟ್ಟದ ಸ್ವಭಾವ (ಪ್ರಕೃತಿ) ಎಂಟು ಪದರುಗಳಲ್ಲಿದೆ ಎಂದು ಹೇಳುತ್ತಾನೆ. ಅಗ್ನಿ, ಭೂಮಿ, ನೀರು, ವಾಯು ಮತ್ತು ಆಕಾಶ ಇವು ಭೌತಿಕ ಜಗತ್ತಿಗಾಗಿ ಇವೆ. ಮತ್ತು ಮನಸ್ಸು, ಬುದ್ಧಿ ಮತ್ತು ಅಹಂಕಾರ ಇವು ಜೀವಿಗಳಿಗಾಗಿ ಇವೆ. (7.4) ಅಗ್ನಿಯು ಶಕ್ತಿಯಾಗಿದ್ದು ಇದು ಆದಿಯಿಂದಲೂ ಇದೆ. ಶಕ್ತಿಯು ಜಡ ದ್ರವ್ಯವಾಗಿ ಪರಿವರ್ತಿತವಾಯಿತು. ಅದಕ್ಕೆ ಘನ ರೂಪ (ಭೂಮಿ) ದ್ರವರೂಪ (ನೀರು) ಹಾಗೂ ಅನಿಲರೂಪ (ವಾಯು) ಇವು ಇವೆ. ಇವೆಲ್ಲವನ್ನೂ ಹಿಡಿದಿಡಲು ಆಕಾಶದ ಅಗತ್ಯ ಇದೆ.

ಜೀವಂತವಾದದ್ದವುಗಳ ವಿಷಯದಲ್ಲಿ ಹೇಳುವುದಾದರೆ ತಾರ್ಕಿಕ ದ್ವಾರಗಳು ಅಸ್ತಿತ್ವಕ್ಕಾಗಿ ಅವಶ್ಯ ಇವೆ. ಮನಸ್ಸು ವಿಚಾರದ ಮೂಲ ತಳಹದಿಯಾಗಿದೆ. (ವ್ಯವಸ್ಥೆ - 1 - ಕ್ಷಿಪ್ರ ಹಾಗೂ ಅಂತರದೃಷ್ಟಿ) ಬುದ್ಧಿಯು ವಿಚಾರದ ಮೇಲಿನ ಹಂತ (ವ್ಯವಸ್ಥೆ - 2 - ನಿಧಾನ ಹಾಗು ಮನನಾತ್ಮಕ) ಪರಮಾತ್ಮನ ಉನ್ನತ ಸ್ವಭಾವವನ್ನು ಪಡೆಯಲು ಅಹಂಕಾರವು ಅಂತಿಮ ತೊಡಕಾಗಿದೆ. ತನ್ನ ಉನ್ನತ ಸ್ವಭಾವ ವಿಶ್ವವನ್ನು ಸಮರ್ಥಿಸುವ ಜೀವನಾಂಶವಾಗಿದೆ ಎಂದು ಕೃಷ್ಣ ಹೇಳುತ್ತಾನೆ. (7.5) ಇದು ಮಣಿಗಳನ್ನು ಹಿಡಿದಿಟ್ಟ ಕಾಣದ ದಾರದಂತಿದೆ. (7.7)

ಕೃಷ್ಣ ಹೇಳುತ್ತಾನೆ : ಸಾವಿರಾರು ಜನರಲ್ಲಿ ಕೆಲವೇ ಕೆಲವರು ನನ್ನನ್ನು ತಲುಪುವ ಪ್ರಯತ್ನ ಮಾಡುತ್ತಾರೆ. ಅಂಥ ಜನರಲ್ಲಿ ಅತಿ ಕಡಿಮೆ ಜನರು ನನ್ನ ಮೂಲ ತತ್ವವನ್ನು ತಿಳಿಯುತ್ತಾರೆ. (7.3) ಅಹಂಕಾರದ ಗಡಿಯನ್ನು ದಾಟುವುದು ಭಗೀರಥ ಪ್ರಯತ್ನ ಇದ್ದ ಹಾಗೆ. ಅದನ್ನೇ ಇಲ್ಲಿ ತಿಳಿಸಲಾಗಿದೆ. ಇದನ್ನು ನೋಡುವ ಇನ್ನೊಂದು ಮಾರ್ಗವಿದೆ.1.38 ಬಿಲಿಯನ್ ವರ್ಷಗಳಲ್ಲಿಯ ವಿಕಾಸವಾದದ ನಮ್ಮ ಪ್ರಯಾಣದಲ್ಲಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ನಾವು ಬಹಳಷ್ಟು ಧೂಳನ್ನು ಅಂಟಿಸಿಕೊಂಡಿರುತ್ತೇವೆ. ಮೊದಲನೇ ಹೆಜ್ಜೆಯೆಂದರೆ ಅಹಂಕಾರವೆಂದು ವ್ಯಕ್ತವಾಗುವ ಈ ಧೂಳಿನ ಬಗ್ಗೆ ಜಾಗೃತರಾಗಿರುವುದು, ಎರಡನೇ ಹೆಜ್ಜೆಯೆಂದರೆ ಅದನ್ನು ತೊಡೆದು ಹಾಕುವುದು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮನದಲಿ ಮೂಡಿದ ಹಂಬಲ (2)
5. ಆಗಾಗ ಇದನ್ನು ಹಳಿಯುತ್ತಾರೆ (2)
6. ಒಟ್ಟು ಎಷ್ಟಿದೆಯೆಂದು ಎಣಿಸುವಿಕೆ (3)
7. ಮಗನಿಗಿದು ಸರಾಗ (3)
9. ಮನದೊಳಗೇ ಮನ್ಮಥನಿದ್ದಾನೆ (3)
13. ನಮ್ರತೆಯಿಂದ ಕೂಡಿದ್ದು (4)
14. ಮತ್ತೇರಿದ ಆನೆ (4)
15. ದಾನ ಕೊಡುವಾಗ ಬಂದ ರಾಕ್ಷಸ (3)
17. ಪುಸ್ತಕ, ಪತ್ರಿಕೆಗಳನ್ನು ಮುದ್ರಿಸುವವನು (3)
19. ಮದುಮಗನೊಂದಿಗೆ ಬಂದಿರುವ ಹೊಳೆವ ಲೋಹ (3)
20. ತಲೆಕೂದಲೇ ಇದಕ್ಕೆ ಹುಲ್ಲುಗಾವಲು! (2)
21. ಉರುಳುವ ಗಾಲಿ (2)

ಮೇಲಿಂದ ಕೆಳಕ್ಕೆ

2. ಹೊರಡು ಅಥವಾ ಸ್ಪರ್ಧಿಸು (3)
3. ಮೂರಕ್ಷರದ ಮತ್ತೊಂದು ಹುಟ್ಟು (3)
4. ಆರಂಭದ್ದಲ್ಲ, ಕೊನೆಯದ್ದು (3)
5. ರೀತಿ ಅಥವಾ ವ್ಯವಸ್ಥೆ (3)
8. ಆಗಸದಲ್ಲಿ ಮಾಡುವ ಪ್ರಯಾಣ (5)
10. ಕಡುಬಡವ (5)
11. ಜಿಲ್ಲಾಕೇಂದ್ರದಲ್ಲಿ ಸದಾ ನಗು (3)
12. ಶತ್ರುವಿನೊಂದಿಗೆ ಬಂದಿರುವ ಬಿನ್ನಹ (3)
15. ಅನುಮಾನ ಬೇಡ, ಇದು ಸಂಗ್ರಹ (3)
16. ವನದ ಮಧ್ಯೆ ಇದೆ ಜಹಗೀರು (3)
17. ಮರಳಿ ಬರುವಾಗ ಕಂಡಿದ್ದು ಕೊಳಲು (3)
18. ಉಕ್ಕಿನ ಅಂಗಿ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಆಸೆ 5. ವಿಧಿ 6. ಗಣತಿ 7. ಸುಗಮ 9. ಮದನ 13. ಸವಿನಯ 14. ಮದಕರಿ 15. ದಾನವ 17. ಮುದ್ರಕ 19. ತವರ 20. ಹೇನು 21. ಚಕ್ರ

ಮೇಲಿಂದ ಕೆಳಕ್ಕೆ
2. ಸೆಣಸು 3. ಉಗಮ 4. ಅಂತಿಮ 5. ವಿಧಾನ 8. ಗಗನಯಾನ 10. ದಟ್ಟದರಿದ್ರ 11. ಹಾಸನ 12. ಅರಿಕೆ 15. ದಾಸ್ತಾನು 16. ವತನ 17. ಮುರಳಿ 18. ಕವಚ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಮುಂಬೈ	11	07	04	14
ಬೆಂಗಳೂರು	10	07	03	14
ಪಂಜಾಬ್	10	06	03	13
ಗುಜರಾತ್	09	06	03	12
ಡೆಲ್ಲಿ	10	06	04	12
ಲಖನೌ	10	05	05	10
ಕೋಲ್ಕತ್ತಾ	10	04	05	09
ರಾಜಸ್ಥಾನ್	11	03	08	06
ಹೈದರಾಬಾದ್	09	03	06	06
ಚೆನ್ನೈ	10	02	08	04

ಇಂದಿನ ಪಂದ್ಯ

7.30 PM

ಆರ್‌ಸಿಬಿ vs ಚೆನ್ನೈ ಸೂಪರ್ ಕಿಂಗ್ಸ್

ಚಿನ್ನಸ್ವಾಮಿ ಕ್ರೀಡಾಂಗಣ ಬೆಂಗಳೂರು

IPL ರಂಗು 2025

ನಾನು ಸಾಯಿ ಸುದರ್ಶನ್ ಅವರನ್ನು ಐಪಿಎಲ್ ಸಹಿತ ಎಲ್ಲಾ ಸ್ವರೂಪದ ಕ್ರಿಕೆಟ್‌ನಲ್ಲಿ ನೋಡಿದ್ದೇನೆ. ಅವರು ಅಗ್ರ ದರ್ಜೆಯ ಕ್ಲಾಸ್ ಬ್ಯಾಟ್ಸ್‌ಮನ್ ರೀತಿ ಕಾಣುತ್ತಾರೆ ಹಾಗೂ ನನ್ನ ಕಣ್ಣು ಯಾವಾಗಲೂ ಅವರ ಆಟದ ಮೇಲಿರುತ್ತದೆ. ಎಡಗೈ ಬ್ಯಾಟ್ಸ್‌ಮನ್ ಆಗಿ, ಇಂಗ್ಲೆಂಡ್‌ನ ಕಂಡೀಷನ್ಸ್‌ಗೆ ಅವರು ಸೂಕ್ತವಾಗಿ ಹೊಂದುವುದರಿಂದ ಇಂಗ್ಲೆಂಡ್ ಟೆಸ್ಟ್ ತಂಡದ ವಿರುದ್ಧದ ಸರಣಿಗೆ ಅವರನ್ನು ಆಯ್ಕೆ ಮಾಡುವುದು ಸೂಕ್ತ. ಹಾಗೆಯೇ ಅವರನ್ನು ಆಯ್ಕೆ ಮಾಡಿದರೆ ಆರನೇ ಬೌಲರ್ ಆಗಿಯೂ ಬಳಸಲು ಸಾಧ್ಯ. ಈ ಎಲ್ಲಾ ಕಾರಣಗಳಿಂದ ಜೂನ್‌ನಿಂದ ಆರಂಭವಾಗುವ ಟೆಸ್ಟ್ ಸರಣಿಯಲ್ಲಿ ಸಾಯಿ ಸುದರ್ಶನ್ ಅವರನ್ನು ಆಯ್ಕೆ ಮಾಡಲೇ ಬೇಕೆಂಬುದೇ ನನ್ನ ಅಭಿಪ್ರಾಯ, ಅವರೊಬ್ಬ ಪರ್ಫೆಕ್ಟ್ ಕ್ರಿಕೆಟರ್..!

ರವಿ ಶಾಸ್ತ್ರಿ, ಮಾಜಿ ಕ್ರಿಕೆಟಿಗ

ಬಟ್ಲರ್, ಗಿಲ್ ಸ್ಫೋಟಕ ಅರ್ಧಶತಕ | ಜೈದೇವ್ ಉನಾದ್ಕತ್‌ಗೆ ಮೂರು ವಿಕೆಟ್

ಹೈದರಾಬಾದ್‌ಗೆ 225 ರನ್‌ಗಳ ಗುರಿ

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವು ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ತೋರಿಸಿದೆ. ಸನ್‌ರೈಸರ್ಸ್ ಹೈದರಾಬಾದ್ ಬೌಲರ್‌ಗಳನ್ನು ದಂಡಿಸಿದ ಗುಜರಾತ್ ಬ್ಯಾಟರ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 224 ರನ್ ಗಳಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ತಂಡವು ಉತ್ತಮ ಆರಂಭವನ್ನು ಪಡೆದುಕೊಂಡಿತು. ಪವರ್ ಪ್ಲೇನಲ್ಲಿ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್ ಮೊದಲ ವಿಕೆಟ್ ಜತೆಯಾಟದಲ್ಲಿ 82 ರನ್ ಗಳಿಸಿದರು. ಸುದರ್ಶನ್ 23 ಎಸೆತಗಳಲ್ಲಿ 9 ಬೌಂಡರಿಗಳ ಸಹಿತ 48 ರನ್ ಗಳಿಸಿ ಔಟಾದರು. ಆಗ ಗುಜರಾತ್ ತಂಡದ ಮೊತ್ತ 87 ರನ್ ಆಗಿತ್ತು. ಗಿಲ್ ಮತ್ತು ಸುದರ್ಶನ್ 87 ರನ್‌ಗಳ ಜತೆಯಾಟ ನಡೆಸಿದರು. ನಾಯಕ ಶುಭಮನ್ ಗಿಲ್ 38 ಎಸೆತಗಳಲ್ಲಿ 10 ಬೌಂಡರಿ, 2 ಸಿಕ್ಸರ್ ಸಹಿತ 76 ರನ್ ಗಳಿಸಿ, ರನೌಟ್ ಆದರು.

ಜೋಸ್ ಬಟ್ಲರ್ 37 ಎಸೆತಗಳಲ್ಲಿ 3 ಬೌಂಡರಿ ಹಾಗೂ 4 ಸಿಕ್ಸರ್ ಗಳ ಸಹಿತ 64 ರನ್ ಗಳಿಸಿ ಪ್ಯಾಟ್ ಕಮಿನ್ಸ್ ಬೌಲಿಂಗ್‌ನಲ್ಲಿ ಅಭಿಷೇಕ್ ಶರ್ಮಾಗೆ ಕ್ಯಾಚ್ ನೀಡಿ ಔಟ್ ಆದರು. ಆಗ ಗುಜರಾತ್ ತಂಡದ ಮೊತ್ತ 206 ರನ್‌ಗಳಾಗಿತ್ತು. ವಾಷಿಂಗ್ಟನ್ ಸುಂದರ್ 16 ಎಸೆತಗಳಲ್ಲಿ 21 ರನ್ ಗಳಿಸಿದರು. ಅವರು ಉನಾದ್ಕಟ್ ಬೌಲಿಂಗ್‌ನಲ್ಲಿ ನಿತೇಶ್ ಕುಮಾರ್‌ಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ತೆರಳಿದರು. ಆ ಬಳಿಕ ಶಾರುಖ್ ಖಾನ್ ಮತ್ತು ತೆವಾಟಿಯಾ ಜತೆಯಾದರು. ರಾಹುಲ್ ತೆವಾಟಿಯಾ 3 ಬಾಲ್‌ಗಳನ್ನು ಎದುರಿಸಿ 6 ರನ್ ಗಳಿಸಿ ಔಟ್ ಆದರು. ಆ ಬಳಿಕ ಬಂದ ರಶೀದ್ ಖಾನ್ ಅವರು ಶಾರುಖ್ ಖಾನ್ ಜೊತೆ ಸ್ವಲ್ಪ ಹೊತ್ತು ಆಟ ಮುಂದುವರಿಸಿದರು. ಶಾರೂಕ್ ಖಾನ್ ಅಜೇಯ 6 ರನ್, ರಾಹುಲ್ ತೆವಾಟಿಯಾ ಅಜೇಯ 6ರನ್ ಗಳಿಸಿದರು. ಗುಜರಾತ್ ತಂಡವು ನಿಗದಿತ 20 ಓವರ್‌ಗಳಲ್ಲಿ ಆರು ವಿಕೆಟ್ ನಷ್ಟಕ್ಕೆ 224 ರನ್ ಗಳಿಸಿತು.

ಹೈದರಾಬಾದ್ ತಂಡದ ಪರವಾಗಿ ಉನಾದ್ಕತ್ 35 ರನ್‌ಗಳನ್ನು ಕೊಟ್ಟು ಗುಜರಾತ್‌ನ 3 ವಿಕೆಟ್ ಪಡೆದರು. ಕಮಿನ್ಸ್ ಹಾಗೂ ಜೀಶನ್ ಅನ್ಸಾರಿ ತಲಾ ಒಂದು ವಿಕೆಟ್ ಪಡೆದರು.



ಸಾಯಿ ಸುದರ್ಶನ್‌ಗೆ ಆರೆಂಜ್ ಕ್ಯಾಪ್

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಗುಜರಾತ್ ಟೈಟಾನ್ಸ್ ತಂಡದ ಯುವ ಆಟಗಾರ ಸಾಯಿ ಸುದರ್ಶನ್, ಮುಂಬೈ ಇಂಡಿ ಯನ್ಸ್ ತಂಡ ಸೂರ್ಯಕುಮಾರ್ ಯಾದವ್ ಅವರನ್ನು ಹಿಂದಿಕ್ಕಿ ಮತ್ತೆ ಆರೆಂಜ್ ಕ್ಯಾಪ್ ತಮ್ಮದಾಗಿಸಿಕೊಂಡಿದ್ದಾರೆ.

ಗುರುವಾರ ನಡೆದಿದ್ದ ರಾಜಸ್ಥಾನ್ ವಿರುದ್ಧದ ಪಂದ್ಯದಲ್ಲಿ ಸೂರ್ಯಕುಮಾರ್ (475 ರನ್) ಆರೆಂಜ್ ಕ್ಯಾಪ್ ಪಡೆದಿದ್ದರು. ಹೈದರಾಬಾದ್ ವಿರುದ್ಧ 23 ಎಸೆತಗಳಿಂದ 48 ರನ್ ಬಾರಿಸಿದ ಸಾಯಿ ಸುದರ್ಶನ್ ಒಟ್ಟಾರೆ 504 ರನ್ ಗಳಿಸುವ ಮೂಲಕ ಹಾಲಿ ಆವೃತ್ತಿಯಲ್ಲಿ ಅತ್ಯಧಿಕ ರನ್ ಗಳಿಸಿದ ಆಟಗಾರ ಎನಿಸಿಕೊಂಡರು. 443 ರನ್ ಗಳಿಸಿರುವ ಆರ್‌ಸಿಬಿಯ ವಿರಾಟ್ ಕೊಹ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ಶನಿವಾರ ನಡೆಯುವ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಕೊಹ್ಲಿ 62 ರನ್ ಬಾರಿಸಿದರೆ ಅಗ್ರಸ್ಥಾನಕ್ಕೇರಿ ಆರೆಂಜ್ ಕ್ಯಾಪ್ ತಮ್ಮದಾಗಿಸಿಕೊಳ್ಳುವ ಅವಕಾಶವಿದೆ.

ಮುಂದೆ ರಾಜಸ್ಥಾನದ ಕೆಲವರಿಗೆ ಗೇಟ್‌ಪಾಸ್

ಜೈಪುರ: ಈ ಐಪಿಎಲ್ ಆವೃತ್ತಿಯಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ ಅನಿರೀಕ್ಷಿತ ಹಿನ್ನಡೆ ಕಂಡು, ಐಪಿಎಲ್‌ನ ಪ್ಲೇ ಆಫ್ ಸ್ಪರ್ಧೆಯಿಂದ ಹೊರ ಇದ್ದಿದೆ. ಮುಂದಿನ ಆವೃತ್ತಿಗೂ ಮೊದಲು ಈ ಬಾರಿ ವಿಫಲರಾದ ಕೆಲವು ಆಟಗಾರರಿಗೆ ತಂಡದಿಂದ ಹೊರ ಬರಬೇಕಾದ ಪರಿಸ್ಥಿತಿ ಎದುರಾಗಬಹುದು. ವೆಸ್ಟ್ ಇಂಡೀಸ್‌ನ ಮೂಲದ ಶಿಮ್ರಾನ್ ಹೆಟ್ಮೆಯರ್ ತೀವ್ರ ವೈಫಲ್ಯ ಕಂಡುಕೊಂಡಿದ್ದಾರೆ. ರಾಜಸ್ಥಾನ ತಂಡವು ಶಿಮ್ರಾನ್ ಹೆಟ್ಮೆಯರ್ ಅವರನ್ನು 11 ಕೋಟಿ ರು.ಗೆ ಉಳಿಸಿಕೊಂಡಿತು. ಅವರು ಆಡಿದ 11 ಪಂದ್ಯಗಳ 10 ಇನ್ನಿಂಗ್ಸ್‌ಗಳಲ್ಲಿ 20.78 ಸರಾಸರಿಯಲ್ಲಿ ಕೇವಲ 187 ರನ್‌ಗಳನ್ನು ಮಾತ್ರ ಗಳಿಸಿದ್ದಾರೆ.

ಕೀಪರ್-ಬ್ಯಾಟ್ಸ್‌ಮನ್ ಧ್ರುವ್ ಜುರೆಲ್ ಅವರನ್ನು ರಾಜಸ್ಥಾನ್ ರಾಯಲ್ಸ್ ತಂಡವು 14 ಕೋಟಿ ರು.ಗೆ ಉಳಿಸಿಕೊಂಡಿತು. ಆದರೆ ಮೊದಲ 3 ಪಂದ್ಯಗಳಲ್ಲಿ 151.42 ಸ್ಟ್ರೈಕ್ ರೇಟ್‌ನಲ್ಲಿ 106 ರನ್ ಗಳಿಸಿದ್ದ ಜುರೇಲ್ ಮುಂದಿನ 7 ಇನ್ನಿಂಗ್ಸ್‌ಗಳಲ್ಲಿ ಕೇವಲ 143 ರನ್‌ಗಳನ್ನು ಮಾತ್ರ ಗಳಿಸಿದರು. ಜೋಫ್ರಾ ಆರ್ಚರ್ ಅವರನ್ನು ರಾಜಸ್ಥಾನ ರಾಯಲ್ಸ್ ತಂಡವು ಮೆಗಾ ಹರಾಜಿನಲ್ಲಿ 12.50 ಕೋಟಿ ರು.ಗೆ ಖರೀದಿಸಿತು. ಆದರೆ ಆರ್ಚರ್ ಇದುವರೆಗೆ 11 ಪಂದ್ಯಗಳಲ್ಲಿ 40.10 ರ ಕಳಪೆ ಸರಾಸರಿಯಲ್ಲಿ ಕೇವಲ 11 ವಿಕೆಟ್‌ಗಳನ್ನು ಮಾತ್ರ ಪಡೆದಿದ್ದಾರೆ. ಹರಾಜಿನಲ್ಲಿ ತುಷಾರ್ ದೇಶಪಾಂಡೆ ಅವರನ್ನು ಖರೀದಿಸಲು ರಾಜಸ್ಥಾನ ರಾಯಲ್ಸ್ 6.50 ಕೋಟಿ ರು.ಗೆ ಬಿಡ್ ಮಾಡಬೇಕಾಯಿತು. ಆದರೆ ತುಷಾರ್ ದೇಶಪಾಂಡೆ ಆಡಿದ 8 ಪಂದ್ಯಗಳಲ್ಲಿ 11.25ರ ಎಕಾನಮಿ ದರದಲ್ಲಿ ರನ್ ಬಿಟ್ಟುಕೊಟ್ಟು 45.00 ಸರಾಸರಿಯಲ್ಲಿ ಕೇವಲ 6 ವಿಕೆಟ್‌ಗಳನ್ನು ಪಡೆದಿದ್ದಾರೆ. ಅಫ್ಘಾನಿಸ್ತಾನದ ವೇಗದ ಬೌಲರ್ ಫಜಲ್ಹಕ್ ಫಾರೂಕಿ ಅವರನ್ನು 2 ಕೋಟಿ ರು.ಗೆ ಖರೀದಿಸಿದ್ದು, ಇದುವರೆಗೆ ಅವರು 4 ಪಂದ್ಯಗಳನ್ನು ಆಡಿದ್ದು, ರಾಜಸ್ಥಾನಕ್ಕಾಗಿ ಒಂದೇ ಒಂದು ವಿಕೆಟ್ ಪಡೆಯಲು ಸಾಧ್ಯವಾಗಿಲ್ಲ.

ಧೋನಿ ಬದಲಿಗೆ ಉರ್ವಿಲ್?

ಚೆನ್ನೈ: ಮಹೇಂದ್ರ ಸಿಂಗ್ ಧೋನಿ ಮುಂದಿನ ಐಪಿಎಲ್‌ನಲ್ಲಿ ಆಡುವುದು ಬಹುತೇಕ ಅನುಮಾನವಾಗಿದ್ದು, ಸಿಎಸ್‌ಕೆ ತನ್ನ ಭವಿಷ್ಯದ ಯೋಜನೆಗಳತ್ತ ಗಮನ ಹರಿಸುತ್ತಿದ್ದು, ಧೋನಿಯ ಸ್ಥಾನಕ್ಕೆ ಬದಲಿ ಆಟಗಾರನ ಹುಡುಕಾಟದಲ್ಲಿದೆ. ಮಾಜಿ ಕ್ರಿಕೆಟಿಗ ವಾಸಿಮ್ ಜಾಫರ್ ಪ್ರಕಾರ, ಬರೋಡಾದ ಯುವ ಆಟಗಾರ ಉರ್ವಿಲ್ ಪಟೇಲ್ ಅವರನ್ನು ಸಿಎಸ್‌ಕೆ ಟ್ರಯಲ್ಸ್‌ಗೆ ಆಹ್ವಾನಿಸಿದೆ ಎಂಬ ಸುದ್ದಿ ಹೊರಬಂದಿದೆ. ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಕೇವಲ 28 ಎಸೆತಗಳಲ್ಲಿ ಶತಕ ಗಳಿಸಿದ ಉರ್ವಿಲ್, ವಿಕೆಟ್‌ಕೀಪರ್-ಬ್ಯಾಟ್ಸ್‌ಮನ್ ಆಗಿ ಗಮನ ಸೆಳೆದಿದ್ದಾರೆ. ಗುಜರಾತ್ ಟೈಟಾನ್ಸ್‌ಗೆ 2024ರಲ್ಲಿ ಆಯ್ಕೆಯಾಗಿದ್ದರೂ, ಅವರಿಗೆ ಆಡುವ ಅವಕಾಶ ಸಿಗಲಿಲ್ಲ. 2025ರ ಮೆಗಾ ಹರಾಜಿನಲ್ಲಿ ಅನ್‌ಸೋಲ್ಡ್ ಆಗಿದ್ದರು. ಹಾಗಾಗಿ ಸಿಎಸ್‌ಕೆಯ ಆಸಕ್ತಿಯು ಧೋನಿಯ ನಿರ್ಗಮನದ ನಂತರ ವಿಕೆಟ್‌ಕೀಪಿಂಗ್ ಸ್ಥಾನವನ್ನು ತುಂಬುವ ಯೋಜನೆ ಇದೆ. ತಂಡದಲ್ಲಿ ಡೆವೊನ್ ಕಾನ್ವೇ ಮತ್ತು ವಂಶ್ ಬೇಡಿಯಂತಹ ಬ್ಯಾಕಪ್ ವಿಕೆಟ್‌ಕೀಪರ್‌ಗಳಿದ್ದರೂ, ಉರ್ವಿಲ್‌ನ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯು ಸಿಎಸ್‌ಕೆಗೆ ಸೂಕ್ತ ಎನಿಸಲಿದೆ ಎಂದು ಜಾಫರ್ ಹೇಳಿದ್ದಾರೆ.

ಡೇವಿಡ್ ಬೂನ್ ನಿವೃತ್ತಿ

ದುಬೈ: ಆಸ್ಟ್ರೇಲಿಯಾದ ಡೇವಿಡ್ ಬೂನ್ ಅವರು ಬಾಂಗ್ಲಾದೇಶ ಮತ್ತು ಜಿಂಬಾಬ್ವೆ ವಿರುದ್ಧದ ದ್ವಿತೀಯ ಟೆಸ್ಟ್ ಪಂದ್ಯದ ಬಳಿಕ ಅಂತಾರಾಷ್ಟ್ರೀಯ ಮ್ಯಾಚ್ ರೆಫರಿ ಹುದ್ದೆಗೆ ನಿವೃತ್ತಿ ಘೋಷಿಸಿದರು, ಆ ಮೂಲಕ 14 ವರ್ಷದ ಮ್ಯಾಚ್ ರೆಫರಿ ಕರ್ತವ್ಯಕ್ಕೆ ತೆರೆ ಎಳೆದರು. 64 ವರ್ಷದ ಬೂನ್ 389 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಆಸ್ಟ್ರೇಲಿಯಾ ಮಾಜಿ ಆರಂಭಿಕ ಆಟಗಾರ ಡೇವಿಡ್ ಬೂನ್ ಆಸೀಸ್ ಪರ 12 ವರ್ಷಗಳ ಕಾಲ ಕ್ರಿಕೆಟ್ ಆಡಿದ್ದರು. ಈ ಅವಧಿಯಲ್ಲಿ ಅವರು 26 ಶತಕಗಳು ಸೇರಿದಂತೆ 13,386 ರನ್ ಗಳಿಸಿದ್ದಾರೆ. 1989ರಲ್ಲಿ ಪರ್ತ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ದ್ವಿಶತಕ ಮತ್ತು ಬ್ಲಾಕ್‌ಕ್ಯಾಪ್ಸ್ ವಿರುದ್ಧದ ಪಂದ್ಯಗಳಲ್ಲಿ 3 ಶತಕಗಳು ಅವರ ವೃತ್ತಿಜೀವನದ ಪ್ರಮುಖ ಅಂಶಗಳಾಗಿವೆ. ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಮತ್ತು ಫೈನಲ್ ಪಂದ್ಯದಲ್ಲಿ ಶತಕ ಬಾರಿಸಿದ ಆಟಗಾರ ಎಂಬ ಹೆಗ್ಗಳಿಕೆಯೂ ಅವರ ಪಾಲಿಗಿದೆ. 11 ವರ್ಷಗಳ ಕಾಲ ರಾಷ್ಟ್ರೀಯ ಆಯ್ಕೆದಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಶ್ರೀಶಾಂತ್ 3 ವರ್ಷ ಅಮಾನತು

ತಿರುವನಂತಪುರಂ: ಸುಳ್ಳು ಮತ್ತು ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ ಆರೋಪದ ಮೇಲೆ ಭಾರತ ಕ್ರಿಕೆಟ್ ತಂಡದ ಮಾಜಿ ವೇಗಿ ಎಸ್. ಶ್ರೀಶಾಂತ್ ಅವರನು ಕೇರಳ ಕ್ರಿಕೆಟ್ ಸಂಸ್ಥೆ (ಕೆಸಿಎ) ಮೂರು ವರ್ಷಗಳ ಕಾಲ ಅಮಾನತುಗೊಳಿಸಿದೆ.

ಚಾಂಪಿಯನ್ಸ್ ಟ್ರೋಫಿ ವೇಳೆ ಭಾರತೀಯ ತಂಡದಿಂದ ಸಂಜು ಸ್ಯಾಮ್ಸನ್ ಅವರನ್ನು ಕೈಬಿಟ್ಟ ವಿವಾದಕ್ಕೆ ಸಂಬಂಧಿಸಿದಂತೆ ಈ ಕ್ರಮ ಕೈಗೊಳ್ಳಲಾಗಿದೆ. ಕೊಚ್ಚಿಯಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕೆಸಿಎ ಹೇಳಿಕೆಯಲ್ಲಿ ತಿಳಿಸಿದೆ. ಶ್ರೀಶಾಂತ್ ಪ್ರಸ್ತುತ ಕೇರಳ ಕ್ರಿಕೆಟ್ ಲೀಗ್‌ನ ಫ್ರಾಂಚೈಸಿ ತಂಡವಾದ ಕೊಲ್ಲಂ ಏರೀಸ್‌ನ ಸಹ-ಮಾಲೀಕರಾಗಿದ್ದಾರೆ. ಶೀಶಾಂತ್ ಅವರು ಕೇರಳದ ಸ್ಥಳೀಯ ಮಾಧ್ಯಮ ನಡೆಸಿದ್ದ ಸಂದರ್ಶನವೊಂದರಲ್ಲಿ ಮಾತನಾಡುವ ವೇಳೆ, ಸಂಜು ಸ್ಯಾಮ್ಸನ್ ಅವರು ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಆಯ್ಕೆಯಾಗದಿರಲು ಕೆಸಿಎ ನೇರ ಕಾರಣ ಎಂದಿದ್ದರು. ವಿಜಯ್ ಹಜಾರೆ ಟ್ರೋಫಿಗೆ ಕೇರಳ ತಂಡದಿಂದ ಸ್ಯಾಮ್ಸನ್ ಅವರನ್ನು ಕೈಬಿಟ್ಟ ಕಾರಣದಿಂದ ಸಂಜುಗೆ ಚಾಂಪಿಯನ್ಸ್ ಟ್ರೋಫಿ ಆಡುವ ಅವಕಾಶ ಸಿಗಲಿಲ್ಲ. ಕೇರಳ ಕ್ರಿಕೆಟ್ ಸಂಸ್ಥೆ ಸ್ಥಳೀಯ ಕ್ರಿಕೆಟಿಗರಿಗೆ ಯಾವುದೇ ಬೆಂಬಲ ನೀಡುವುದಿಲ್ಲ ಎಂದು ಶ್ರೀಶಾಂತ್ ಹೇಳಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕೆಸಿಎ ಇದೀಗ ಶ್ರೀಶಾಂತ್ ಅವರನ್ನು ಮೂರು ವರ್ಷಗಳ ಕಾಲ ಅಮಾನತುಗೊಳಿಸಿದೆ. ವಿವಾದಾತ್ಮಕ ಹೇಳಿಕೆಗಳಿಗೆ ಸಂಬಂಧಿಸಿದಂತೆ, ಶ್ರೀಶಾಂತ್ ಜತೆಗೆ ಫ್ರಾಂಚೈಸ್ ತಂಡಗಳಾದ ಕೊಲ್ಲಂ ಏರೀಸ್, ಆಲಪ್ಪುಳ ಟೀಮ್ ಲೀಡ್ ಮತ್ತು ಆಲಪ್ಪುಳ ರಿಪ್ಪಲ್ಸ್‌ಗೆ ಶೋ-ಕಾಸ್ ನೋಟಿಸ್ ನೀಡಲಾಗಿತ್ತು. ಫ್ರಾಂಚೈಸ್ ತಂಡಗಳು ನೋಟಿಸ್‌ಗಳಿಗೆ ತೃಪ್ತಿದಾಯಕ ಪ್ರತಿಕ್ರಿಯೆಗಳನ್ನು ನೀಡಿರುವುದರಿಂದ, ಅವರ ವಿರುದ್ಧ ಯಾವುದೇ ಮುಂದಿನ ಕ್ರಮ ಕೈಗೊಳ್ಳಲಾಗುವುದಿಲ್ಲ. ತಂಡದ ನಿರ್ವಹಣೆಗೆ ಸದಸ್ಯರನ್ನು ನೇಮಿಸುವಾಗ ಹೆಚ್ಚಿನ ಎಚ್ಚರಿಕೆ ವಹಿಸಲು ಸಲಹೆ ನೀಡಲು ಸಭೆ ನಿರ್ಧರಿಸಿದೆ ಎಂದು ಹೇಳಿಕೆ ತಿಳಿಸಿದೆ.

ಇನ್‌ಸ್ಟಾಗ್ರಾಮ್ ಖಾತೆಗಳಿಗೆ ನಿರ್ಬಂಧ

ದೆಹಲಿ: ಪಹಲ್ಗಾಮ್ ದಾಳಿಗೆ ಸಂಬಂಧಿಸಿದಂತೆ ಉಗ್ರರ ವಿರುದ್ಧ ಭಾರತ ಪ್ರತೀಕಾರ ತೀರಿಸಿಕೊಳ್ಳಲೇಬೇಕು ಎಂಬ ಕೂಗು ದೇಶಾದ್ಯಂತ ಹೆಚ್ಚಾಗಿರುವಂತೆಯೇ ಭಾರತದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಬಾಬರ್ ಅಜಮ್, ಶಾಹೀನ್ ಶಾ ಅಫ್ರಿದಿ, ಮೊಹಮ್ಮದ್ ರಿಜ್ವಾನ್ ಸೇರಿ ಎಲ್ಲ ಕ್ರಿಕೆಟಿಗರ ಇನ್‌ಸ್ಟಾಗ್ರಾಮ್ ಖಾತೆಗಳನ್ನು ನಿರ್ಬಂಧಿಸಲಾಗಿದೆ. ಇದಕ್ಕೂ ಮೊದಲು, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಅರ್ಷದ್ ನದೀಮ್ ಅವರ ಇನ್‌ಸ್ಟಾಗ್ರಾಮ್ ಖಾತೆಯನ್ನು ಸಹ ನಿರ್ಬಂಧಿಸಲಾಗಿತ್ತು. ಬಾಬರ್, ಶಾಹೀನ್ ಮತ್ತು ರಿಜ್ವಾನ್ ಪ್ರಸ್ತುತ ಪಾಕಿಸ್ತಾನ ಸೂಪರ್ ಲೀಗ್-2025ರಲ್ಲಿ ಆಡುತ್ತಿದ್ದಾರೆ. 2023ರಲ್ಲಿ ಪಾಕಿಸ್ತಾನ ಕ್ರಿಕೆಟಿಗರು ಏಕದಿನ ವಿಶ್ವಕಪ್‌ಗಾಗಿ ಭಾರತಕ್ಕೆ ಬಂದಿದ್ದರು. ಶೋಯೆಬ್ ಅಖ್ತರ್, ಬಸಿತ್ ಅಲಿ ಮತ್ತು ಶಾಹಿದ್ ಅಫ್ರಿದಿ ಸೇರಿದಂತೆ ಪಾಕಿಸ್ತಾನದ ಜನಪ್ರಿಯ ಕ್ರಿಕೆಟಿಗರ ಯೂಟ್ಯೂಬ್ ಚಾನೆಲ್‌ಗಳನ್ನು ಭಾರತದಲ್ಲಿ ಪ್ರಚೋದನಕಾರಿ ಮತ್ತು ಕೋಮು ಸೂಕ್ಷ್ಮ ವಿಷಯ, ಸುಳ್ಳು ಮತ್ತು ದಾರಿತಪ್ಪಿಸುವ ಮಾಹಿತಿ ಮತ್ತು ಭಾರತ ಹಾಗೂ ಸೇನೆಯ ವಿರುದ್ಧ ತಪ್ಪು ಮಾಹಿತಿ ಪ್ರಸಾರ ಮಾಡಿದ್ದಕ್ಕಾಗಿ ನಿರ್ಬಂಧಿಸಲಾಗಿದೆ. ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಯೂಟ್ಯೂಬ್ ಚಾಲನ್ ಸೇರಿದಂತೆ ಕೇಂದ್ರ ಸರಕಾರವು ಒಟ್ಟಾರೆಯಾಗಿ 63 ಮಿಲಿಯನ್‌ಗಿಂತಲೂ ಹೆಚ್ಚು ಚಂದಾದಾರರನ್ನು ಹೊಂದಿರುವ 16 ಪಾಕಿಸ್ತಾನಿ ಯೂಟ್ಯೂಬ್ ಚಾನೆಲ್‌ಗಳನ್ನು ನಿರ್ಬಂಧಿಸಿದೆ. ಇವುಗಳಲ್ಲಿ ಡಾನ್, ಜಿಯೋ ನ್ಯೂಸ್, ಬೋಲ್ ನ್ಯೂಸ್ ಮತ್ತು ಸಮಾ ಟಿವಿಯಂತಹ ಮಾಧ್ಯಮಗಳು, ಪತ್ರಕರ್ತೆ ಅಸ್ಮಾ ಶಿರಾಜಿ ಮತ್ತು ಡಿಜಿಟಲ್ ಶೋ ದಿ ಪಾಕಿಸ್ತಾನ್ ಎಕ್ಸ್‌ಪೀರಿಯೆನ್ಸ್‌ನಂತಹ ಜನಪ್ರಿಯ ಚಾನೆಲ್‌ಗಳೂ ಸೇರಿವೆ.

ಕೊಹ್ಲಿಗೆ ಇರಿಸು ಮುರಿಸು

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿಯ ವಿಡಿಯೋವೊಂದು ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದ್ದು, ಕೊಹ್ಲಿಗೆ ತಂಡದ ಸಹ ಆಟಗಾರನಿಂದಲೇ ಕಸಿವಿಸಿಯಾಗುತ್ತಿರುವುದು ಈ ವಿಡಿಯೋ ಮೂಲಕ ಸ್ಪಷ್ಟವಾಗಿದೆ. ಕೊಹ್ಲಿ ಹಿರಿಯರು, ಕಿರಿಯರು ಎನ್ನದೆ ಎಲ್ಲಾ ಆಟಗಾರರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಹಾಗಾಗಿ ಪಂದ್ಯದ ಸಮಯದಲ್ಲಾಗಲಿ ಅಥವಾ ಡ್ರೆಸಿಂಗ್ ರೂಮ್‌ನಲ್ಲಾಗಲಿ, ಯುವ ಆಟ ಗಾರರಿರಲಿ, ಅನುಭವಿ ಆಟಗಾರರೂ ಕೂಡ ಕೊಹ್ಲಿ ಹಿಂದೆ ಮುಂದೆ ಸದಾ ಇರುತ್ತಾರೆ. ವಿಡಿಯೋದಲ್ಲಿರುವಂತೆ ಕೊಹ್ಲಿಗೆ ಕೆಲವು ಪ್ರಶ್ನೆಗಳನ್ನು ಕೇಳಲಾಗಿದೆ. ಅದರಲ್ಲಿ ಒಂದು ಪ್ರಶ್ನೆ, 'ನೀವು ಯಾರೊಂದಿಗಾದರೂ ನಿಮ್ಮ ಕೊಠಡಿ ಹಂಚಿಕೊಳ್ಳಲು ಬಯಸುತ್ತೀರಾ?' ಎಂಬುದಾಗಿದೆ. ಇದಕ್ಕೆ ನಗುತ್ತಾ ಉತ್ತರಿಸಿದ ಕೊಹ್ಲಿ, 'ಸ್ವಸ್ತಿಕ್ ಚಿಕಾರ ಜೊತೆ ಕೊಠಡಿ ಹಂಚಿ ಕೊಳ್ಳಲು ಇಷ್ಟಪಡುವುದಿಲ್ಲ, ಏಕೆಂದರೆ ಅವನು ಎಂದಿಗೂ ನನ್ನನ್ನು ಒಂಟಿಯಾಗಿ ಬಿಡುವುದಿಲ್ಲ. ಈಗ ಅವನು ಇಡೀ ದಿನ ನನ್ನ ಜೊತೆ ಇರುತ್ತಾನೆ, ಇದರಿಂದಾಗಿ ಕೆಲವೊಮ್ಮೆ ನನಗೆ ಬೇಸರವಾಗುತ್ತದೆ.. ಹಾಗೆಯೇ ಯಾರೊಂದಿಗೆ ಕೊಠಡಿ ಹಂಚಿಕೊಳ್ಳಲು ಇಷ್ಟಪಡುತ್ತೇನೆ' ಎಂದು ಅವರು ಹೇಳಿದರು.

ಮೇ 20ನೇ ತಾರೀಕಿನಿಂದ ಪ್ಲೇ ಆಫ್ ಆರಂಭ | ತಂಡಗಳ ಮಧ್ಯೆ ನಡೆಯಲಿದೆ ರೋಚಕ ಲೆಕ್ಕಾಚಾರ

ಖಚಿತವಾಗಿದೆ ಆರ್‌ಸಿಬಿ-ಮುಂಬೈ ಪ್ಲೇ ಆಫ್ ಪ್ರವೇಶ

ಬೆಂಗಳರು: ಈ ಆವೃತ್ತಿಯ ಪ್ಲೇ-ಆಫ್ ಪ್ರವೇಶ ಹಲವು ತಿರುವುಗಳೊಂದಿಗೆ ಆರಂಭವಾಗಿದೆ. ಇಲ್ಲಿಯವರೆಗೆ ಯಾವುದೇ ತಂಡವು ಅಧಿಕೃತವಾಗಿ ಪ್ಲೇಆಫ್‌ಗೆ ಅರ್ಹತೆ ಪಡೆದಿಲ್ಲವಾದರೂ ಎರಡೂ ತಂಡಗಳಾದ ರಾಜಸ್ಥಾನ ರಾಯಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಪ್ಲೇ-ಆಫ್ ರೇಸ್‌ನಿಂದ ಹೊರಬಿದ್ದಿವೆ, ಉಳಿದ 8 ತಂಡಗಳು ಸದ್ಯ ಪ್ಲೇ-ಆಫ್ ರೇಸ್‌ನಲ್ಲಿವೆ.

ಮುಂಬೈ ಇಂಡಿಯನ್ಸ್ ಮತ್ತು ಆರ್‌ಸಿಬಿ ಈ ಐಪಿಎಲ್ ಆವೃತ್ತಿಯ ಪ್ಲೇಆಫ್‌ಗೆ ಅರ್ಹತೆ ಪಡೆಯುವುದು ಬಹುತೇಕ ಖಚಿತ, ಏಕೆಂದರೆ ಆ ತಂಡಗಳು ತಮ್ಮ ಉಳಿದಿರುವ ಪಂದ್ಯಗಳಲ್ಲಿ ಕೇವಲ ಒಂದು ಪಂದ್ಯವನ್ನ ಮಾತ್ರ ಗೆದ್ದರೆ ಸಾಕಾಗುತ್ತದೆ. ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಪ್ಲೇಆಫ್ ತಲುಪುವ ಅವಕಾಶಗಳು ತುಂಬಾ ಕಷ್ಟಕರವಾಗಿದ್ದು, ಅದು ಪ್ರಸ್ತುತ 9 ಪಂದ್ಯಗಳಲ್ಲಿ 3 ಜಯಗಳಿಂದ 6 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದೆ. ಪ್ಲೇ-ಆಫ್ ರೇಸ್‌ನಲ್ಲಿ ಉಳಿಯ ಬೇಕಾದರೆ ಹೈದರಾಬಾದ್ ತಂಡವು ಉಳಿದಿರುವ ಎಲ್ಲಾ ಐದು ಪಂದ್ಯಗಳನ್ನು ಗೆಲ್ಲಬೇಕು. ಒಂದು ವೇಳೆ ಗೆದ್ದರೂ ಪ್ಲೇಆಫ್ ತಲುಪುತ್ತದೆಯೇ ಎಂದು ಹೇಳಲು ಸಾಧ್ಯವಿಲ್ಲ. ಅದಕ್ಕೆ ಹಲವು ಕಾರಣಗಳಿವೆ.

ಪ್ರಸ್ತುತ ಮುಂಬೈ ಮತ್ತು ಆರ್‌ಸಿಬಿ ತಲಾ 14 ಅಂಕಗಳನ್ನು ಗಳಿಸಿವೆ. ಮುಂಬೈ ಮತ್ತು ಆರ್‌ಸಿಬಿ ತಂಡಗಳ ಪ್ರಸ್ತುತ ಫಾರ್ಮ್ ನೋಡಿದರೆ,

ಉಳಿದಿರುವ ಎರಡು ಪಂದ್ಯಗಳನ್ನು ಸುಲಭವಾಗಿ ಗೆಲ್ಲುವ ಸಾಧ್ಯತೆಯಿದೆ. ಈ ಲೆಕ್ಕಾಚಾರದ ಆಧಾರದ ಮೇಲೆ, ಎರಡೂ ತಂಡಗಳು 18 ಅಂಕಗಳೊಂದಿಗೆ ಅಗ್ರ 2 ರಲ್ಲಿ ಸ್ಥಾನ ಪಡೆಯುವ ಅವಕಾಶವನ್ನು ಹೊಂದಿವೆ. ಪಂಜಾಬ್ ಕಿಂಗ್ಸ್ 13 ಅಂಕ, ಲಖನೌ 10 ಅಂಕಗಳನ್ನು ಗಳಿಸಿದರೆ, ಕೆಕೆಆರ್ 9 ಅಂಕಗಳನ್ನು ಗಳಿಸಿದೆ.

ಪಂಜಾಬ್ ಕಿಂಗ್ಸ್ ತಂಡಕ್ಕೆ ಇನ್ನೂ 4 ಪಂದ್ಯಗಳು ಬಾಕಿ ಇವೆ. ಅವರು ಲಖನೌ, ದೆಹಲಿ, ಮುಂಬೈ ಮತ್ತು ರಾಜಸ್ಥಾನ ವಿರುದ್ಧ ಆಡಲಿದ್ದಾರೆ. ಪಂಜಾಬ್‌ನ ಪ್ರಸ್ತುತ ಫಾರ್ಮ್ ನೋಡಿದರೆ, ಮುಂಬೈ ವಿರುದ್ಧ ಸೋತರೂ ಲಖನೌ ಮತ್ತು ರಾಜಸ್ಥಾನ ವಿರುದ್ಧ ಗೆಲ್ಲುವ ಅವಕಾಶವಿದೆ. ಹಾಗೊಂದು ವೇಳೆ ಅವಕಾಶ ಎದುರಾದರೆ ಪಂಜಾಬ್ 17 ಅಂಕಗಳನ್ನು ಗಳಿಸಿ ಪ್ಲೇಆಫ್ ತಲುಪುವುದು ಖಚಿತ.

ಗುಜರಾತ್ ತಂಡವು ಇನ್ನು ಸನ್‌ರೈಸರ್ಸ್, ಮುಂಬೈ, ದೆಹಲಿ, ಲಖನೌ ಮತ್ತು ಚೆನ್ನೈ ವಿರುದ್ಧ ಆಡಬೇಕಾಗುತ್ತದೆ. ಗುಜರಾತ್‌ನ ಈಗಿನ ಫಾರ್ಮ್ ನೋಡಿದರೆ, ಲಖನೌ ಮತ್ತು ಚೆನ್ನೈ ತಂಡಗಳನ್ನು ಸೋಲಿಸುವುದು ಅಷ್ಟು ಕಷ್ಟವಲ್ಲ ಮಾತ್ರವಲ್ಲ ದೆಹಲಿ ವಿರುದ್ಧ ಗೆದ್ದರೂ ಕೂಡ ಆಶ್ಚರ್ಯವೇನಿಲ್ಲ. ಹಾಗಾದರೆ ಅದು 16ರಿಂದ 18 ಅಂಕಗಳಲ್ಲಿ ನಿಲ್ಲುತ್ತದೆ.

ದೆಹಲಿ ತಂಡಕ ಸರಣಿ ಸೋಲುಗಳನ್ನು ಕಂಡಿದ್ದರೂ, ಅದು ಗುಜರಾತ್, ಪಂಜಾಬ್, ಸನ್‌ರೈಸರ್ಸ್ ಮತ್ತು ಮುಂಬೈ ವಿರುದ್ಧ ಆಡಬೇಕಿದೆ. ದೆಹಲಿಯ ಪ್ರಸ್ತುತ ಫಾರ್ಮ್ ನೋಡಿದರೆ, ಅದು ಈ ನಾಲ್ಕೂ ಪಂದ್ಯಗಳಲ್ಲೂ ಸಾಕಷ್ಟು ಸವಾಲನ್ನು ಎದುರಿಸ ಬೇಕಾದುದು ಅನಿವಾರ್ಯ. ಒಂದು ವೇಳೆ 2 ಪಂದ್ಯಗಳಲ್ಲಿ ಗೆದ್ದರೆ, ದೆಹಲಿ ಕೂಡ ಅಂಕ ಪಟ್ಟಿಯಲ್ಲಿ 16 ಅಂಕಗಳನ್ನು ಪಡೆದಂತಾಗುತ್ತದೆ.

ಲಖನೌ ತಂಡವು ಪಂಜಾಬ್, ಆರ್‌ಸಿಬಿ, ಗುಜರಾತ್ ಮತ್ತು ಸನ್‌ರೈಸರ್ಸ್ ವಿರುದ್ಧ ಆಡಬೇಕಾಗುತ್ತದೆಯಾದರೂ ಗೆಲ್ಲುವ ಸಾಧ್ಯತೆಗಳು ತುಂಬಾ ಕಡಿಮೆಯಿದೆ. ಕೆಕೆಆರ್ ತಂಡವು ರಾಜಸ್ಥಾನ, ಚೆನ್ನೈ, ಸನ್‌ರೈಸರ್ಸ್ ಮತ್ತು ಆರ್‌ಸಿಬಿ ವಿರುದ್ಧ ಆಡಬೇಕಾಗಿದೆ. 4 ಪಂದ್ಯಗಳಲ್ಲಿ ಒಂದು ಪಂದ್ಯ ಸೋತರೂ ಕೆಕೆಆರ್ ಪ್ಲೇ ಆಫ್ ಕನಸು ಭಗ್ನವಾಗಲಿದೆ.

ಟೇಬಲ್ ಟಾಪರ್ ನಿರೀಕ್ಷೆಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು | ಚೆನ್ನೈ ಪಾಲಿಗಿಂದು ಔಪಚಾರಿಕ ಪಂದ್ಯ

ಆರ್‌ಸಿಬಿಗೆ ಪ್ಲೇ ಆಫ್ ತಲುಪುವ ತವಕ

ಬೆಂಗಳೂರು: ಐಪಿಎಲ್ ಟೂರ್ನಿಯಲ್ಲಿ ಶನಿವಾರ ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಪಂದ್ಯದಲ್ಲಿ 'ಈ ಸಲ ಕಪ್ ನಮ್ದೇ' ಎಂಬ ನಿರೀಕ್ಷೆಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರು ನೆಲದಲ್ಲಿ ಚೆನ್ನೈಯನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಆರ್‌ಸಿಬಿ ಗೆದ್ದರೆ ಪ್ಲೇ ಆಫ್ ಅವಕಾಶ ಖಾತರಿಯಾಗಲಿದ್ದು, ಚೆನ್ನೈ ಪಾಲಿಗೆ ಇದೊಂದು ಔಪಚಾರಿಕ ಪಂದ್ಯವೆನಿಸಲಿದೆ.

ಆರ್‌ಸಿಬಿ ಈ ವರೆಗೆ 10 ಪಂದ್ಯಗಳನ್ನು ಆಡಿದ್ದು, 7 ಪಂದ್ಯಗಳಲ್ಲಿ ಗೆದ್ದು 3 ಪಂದ್ಯಗಳಲ್ಲಿ ಸೋತಿದ್ದು, ಆ ಮೂರೂ ಪಂದ್ಯಗಳು ತವರಿನಾಚೆ ನಡೆದ ಪಂದ್ಯಗಳಾಗಿವೆ. ಈ ಬಾರಿಯ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿಯು ಕೋಲ್ಕತ್ತಾ ವಿರುದ್ಧ ಜಯ ಗಳಿಸಿ, ತನ್ನ ಗೆಲುವಿನ ಅಭಿಯಾನವನ್ನು ಪ್ರಾರಂಭಿಸಿತ್ತು.

ಆ ಬಳಿಕ ಚೆನ್ನೈಯಲ್ಲಿ ನಡೆದ ಪಂದ್ಯದಲ್ಲಿ ಅತಿಥೇಯರನ್ನು ಆರ್‌ಸಿಬಿ 50 ರನ್‌ಗಳ ಭಾರೀ ಅಂತರದಲ್ಲಿ ಸೋಲಿಸಿತ್ತು. ಆದರೆ ಮೂರನೇ ಪಂದ್ಯ ನಡೆದ ಗುಜರಾತ್ ತಂಡವು ಆರ್‌ಸಿಬಿಯನ್ನು ಸೋಲಿಸಿ ಮುಖಭಂಗಕ್ಕೊಳಪಡಿಸಿತು. ಏಪ್ರಿಲ್-7ರಂದು ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಮುಂಬೈಯನ್ನು 12 ರನ್‌ಗಳ ಅಂತರದಲ್ಲಿ, ಏಪ್ರಿಲ್-10ರಂದು ಡೆಲ್ಲಿಯು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿಯನ್ನು 6 ವಿಕೆಟ್‌ಗಳಿಂದ ಸೋಲಿಸಿ ಗೆಲುವಿನ ನಗೆ ಬೀರಿತ್ತು.

ಏಪ್ರಿಲ್-13ರಂದು ಜೈಪುರದಲ್ಲಿ ಆಯೋಜಿಸಿದ್ದ ಪಂದ್ಯದಲ್ಲಿ ಆರ್‌ಸಿಬಿ 9 ವಿಕೆಟ್‌ಗಳ ಭರ್ಜರಿ ಜಯ ಕಂಡಿತ್ತು. ಆ ಬಳಿಕ ಏಪ್ರಿಲ್-18ರಂದು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಪಂಜಾಬ್ ವಿರುದ್ಧ ಮಂಡಿಯೂರಿತ್ತು. ಆ ನಂತರ ಆರ್‌ಸಿಬಿ ತಂಡಕ್ಕೆ ಹ್ಯಾಟ್ರಿಕ್ ಗೆಲುವಿನ ಸವಿರುಚಿ ದೊರೆಯಿತು. ಏಪ್ರಿಲ್-20ರಂದು ಪಂಜಾಬ್ ವಿರುದ್ಧ, 24ರಂದು ರಾಜಸ್ಥಾನ ವಿರುದ್ಧ ಹಾಗೂ ಏಪ್ರಿಲ್-27ರಂದು ಡೆಲ್ಲಿ ವಿರುದ್ಧ ಜಯ ಸಾಧಿಸಿ ಪ್ಲೇ ಆಫ್ ತಲುಪಲು ಶನಿವಾರದ ಚೆನ್ನೈ ವಿರುದ್ಧದ ಗೆಲುವಿಗಾಗಿ ಇದಿರು ನೋಡುತ್ತಿದೆ.

ಈಗಾಗಲೇ ಟೂರ್ನಿಯಿಂದ ಹೊರ ಬಿದ್ದಿರುವ ಚೆನ್ನೈ ತಂಡವು ತನ್ನ ಮೊದಲ ಪಂದ್ಯದಲ್ಲಿ ಮುಂಬೈ ವಿರುದ್ಧ ಗೆದ್ದು ಕೊಂಡಿದ್ದರೂ, ಆ ಬಳಿಕ 5 ಪಂದ್ಯಗಳನ್ನು ಸತತವಾಗಿ ಸೋತು ಮುಖಭಂಗಕ್ಕೊಳಗಾಯಿತು. ಮಾರ್ಚ್- 28ರಂದು ಆರ್‌ಸಿಬಿ ವಿರುದ್ಧ, ಮಾರ್ಚ್- 30ರಂದು ರಾಜಸ್ಥಾನದ ವಿರುದ್ಧ, ಏಪ್ರಿಲ್-5 ರಂದು ಡೆಲ್ಲಿ ವಿರುದ್ಧ, ಏಪ್ರಿಲ್-8ರಂದು ಪಂಜಾಬ್ ತಂಡದ ವಿರುದ್ಧ ಹಾಗೂ ಏಪ್ರಿಲ್-11ರಂದು ಕೋಲ್ಕತ್ತಾ ವಿರುದ್ಧ ಹೀನಾಯವಾಗಿ ಸೋತಿತ್ತು. ಏಪ್ರಿಲ್-14ರಂದು ಲಖನೌವನ್ನು 5 ವಿಕೆಟ್‌ಗಳ ಅಂತರದಲ್ಲಿ ಸೋಲಿಸಿದ ಚೆನ್ನೈ ತಂಡವು ಮತ್ತೆ ಟೂರ್ನಿಯಲ್ಲಿ ಪುಟಿದೇಳುವ ಲಕ್ಷಣ ಪ್ರದರ್ಶಿಸಿತಾದರೂ, ಏಪ್ರಿಲ್-20ರಂದು ಮುಂಬೈ ವಿರುದ್ಧ, ಏಪ್ರಿಲ್-25ರಂದು ಹೈದರಾ ಬಾದ್ ವಿರುದ್ಧ ಮತ್ತು ಏಪ್ರಿಲ್-30ರಂದು ಪಂಜಾಬ್ ವಿರುದ್ಧ ಸೋಲುವ ಮೂಲಕ ಈ ಬಾರಿಯ ಐಪಿಎಲ್ ಟೂರ್ನಿಯಿಂದಲೇ ಹೊರ ಬಿದ್ದಿತು. ಎಂಎಸ್ ಧೋನಿ ನಾಯಕತ್ವದ ಚೆನ್ನೈ ಆಡಿರುವ 10 ಪಂದ್ಯಗಳ ಪೈಕಿ 8 ಪಂದ್ಯವನ್ನು ಸೋಲುವ ಮೂಲಕ ತನ್ನ ದೌರ್ಬಲ್ಯವನ್ನು ಪ್ರದರ್ಶಿಸಿದಂತಾಯಿತು. ಆರ್‌ಸಿಬಿ ಪಾಲಿಗೆ ಶನಿವಾರದ ಪಂದ್ಯವೂ ಸೇರಿದಂತೆ ಇನ್ನೂ ನಾಲ್ಕು ಪಂದ್ಯಗಳು ಉಳಿದಿರುವ ಕಾರಣ ಒಂದೇ ಒಂದು ಪಂದ್ಯದಲ್ಲಿ ಗೆದ್ದರೂ, ಪ್ಲೇ ಆಫ್ ಸ್ಥಾನ ಖಚಿತವಾಗಲಿರುವ ಕಾರಣ, ತನ್ನ ಅಭಿಮಾನಿಗಳ ಎದುರು ಉತ್ತಮ ಪ್ರದರ್ಶನ ನೀಡುವ ಸಾಧ್ಯತೆಯೇ ಹೆಚ್ಚು.

ಪಂದ್ಯಕ್ಕೆ ಮಳೆ ಭೀತಿ

ಬೆಂಗಳೂರಿನಲ್ಲಿ ಗುರುವಾರ, ಶುಕ್ರವಾರ ಭಾರೀ ಮಳೆ ಆಗಿದ್ದು, ಮುಂದಿನ ಇನ್ನೆರಡು ದಿನಗಳೂ ಮಳೆ ಬರುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಹೀಗಾಗಿ ಶನಿವಾರದ ಕ್ರಿಕೆಟ್ ಪಂದ್ಯಕ್ಕೆ ಮಳೆ ಕಾಟ ತಪ್ಪಿದ್ದಲ್ಲ. ಹವಾಮಾನ ವರದಿ ಪ್ರಕಾರ, ಸಂಜೆ ವೇಳೆ ಶೇ.60 ಹಾಗೂ ರಾತ್ರಿ 8ರಿಂದ 11ರ ವರೆಗೆ ಶೇ.75 ರಷ್ಟು ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಒಂದೊಮ್ಮೆ ಮಳೆಯಿಂದ ಪಂದ್ಯ ರದ್ದಾದರೆ ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಗುತ್ತದೆ.

ಆರ್‌ಸಿಬಿ

- ಫಿಲಿಪ್ ಸಾಲ್ಟ್
- ವಿರಾಟ್ ಕೊಹ್ಲಿ
- ದೇವದತ್ ಪಡಿಕ್ಕಲ್
- ಪಾಟಿದಾರ್ ▸▸ ನಾಯಕ
- ಲಿವಿಂಗ್‌ಸ್ಟೋನ್
- ಜೇಕಬ್ ಬೆಥೆಲ್
- ಜಿತೇಶ್ ಶರ್ಮಾ
- ಕೃನಾಲ್ ಪಾಂಡ್ಯ
- ಟಿಮ್ ಡೇವಿಡ್
- ಭುವನೇಶ್ವರ್ ಕುಮಾರ್
- ಜೋಶ್ ಹ್ಯಾಜಲ್‌ವುಡ್
- ಯಶ್ ದಯಾಲ್
- ಸ್ವಸ್ತಿಕ್ ಚಿಕ್ಕಾರಾ
- ಮನೋಜ್ ಭಾಂಡಗೆ

ಚೆನ್ನೈ

- ಮಥೀಶ ಪತಿರಾನ
- ಶಿವಂ ದುಬೆ
- ರವೀಂದ್ರ ಜಡೇಜಾ
- ಧೋನಿ ▸▸ ನಾಯಕ
- ಡೆವೊನ್ ಕಾನ್ವೆ
- ರಾಹುಲ್ ತ್ರಿಪಾಠಿ
- ರಚಿನ್ ರವೀಂದ್ರ
- ರವಿಚಂದ್ರನ್ ಅಶ್ವಿನ್
- ನೂರ್ ಅಹ್ಮದ್
- ಶೇಕ್ ರಶೀದ್
- ನಾಥನ್ ಎಲ್ಲಿಸ್
- ಕೆ. ನಾಗರಕೋಟಿ
- ಶ್ರೇಯಸ್ ಗೋಪಾಲ್
- ವಿಜಯ್ ಶಂಕರ್